

ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು

ಸಂಪಾದಕರು
ಪ್ರೊ. ಟಿ.ಎನ್. ಪ್ರಕಾಶ್ ಕಮ್ಮರಡಿ



ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭

BVP-1223-1/3/17
1336-27/38.

ದೇಶೀಯ ಕೃಷಿ ಹತೋಟಿ

ಮತ್ತು

ಸಂರಕ್ಷಣಾ ಕ್ರಮಗಳು

(ಹಿತ್ತಲಗಿಡ ಚಾತುರ್ಮಾಸದಿಂದ ಆಯ್ದಿರುವುದು)

ಸಂಪಾದಕರು

ಪ್ರೊ. ಟಿ.ಎನ್. ಪ್ರಕಾಶ್ ಕಮ್ಮರಡಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ – ೫೮೧ ೧೯೭

ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

DESHEEYA KRUSHI HATHOTI MATTU SAMRAKSHANA KRAMAGALU

Edited by
Prof. T.N. Prakash Kammaradi
Professor & HOD. of Agricultural Economics
University of Agricultural Sciences, GKVK
Bengaluru - 560 065
☎: 080 - 23620025 (0), 28560267

Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi - 581 197
Shiggavi Taluk, Haveri Dist, Karnataka

Pages: xiv + 102 Price: ₹ **100/-**

ISBN 978-93-83149-01-8

www.janapadauni.in

First Impression: 2014

ಬೆಲೆ: ₹ ೧೦೦/-

ಮುಖಪುಟ: **ಕೆ.ಕೆ. ಮಕಾಳಿ**

ಅಕ್ಷರ ಸಂಯೋಜನೆ
ಸವಿತ ಗ್ರಾಫಿಕ್ಸ್, ಕಮಲಾಪುರ
Cell No.: 94802 57392

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಬೆಂಗಳೂರು ಕಚೇರಿ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಕಟ್ಟಡ
ನಂ. ೨/೧೦೬, ೩ನೇ ಮಹಡಿ, ೧೭ನೇ ಅಡ್ಡರಸ್ತೆ
ಮಾಗಡಿ ಕಾರ್ಡ್ ರಸ್ತೆ, ವಿಜಯನಗರ
ಬೆಂಗಳೂರು-೫೬೦ ೦೪೦

ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು

ದೇಶ ಸುತ್ತು ಕೋಶ ಓದು

ಕನ್ನಡ ನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ, ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ, ಹಳೆಯದನ್ನು ಸಂಗ್ರಹಿಸುವುದು, ಮುಂದಿನ

ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು-ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ, ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದುಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ-ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಅವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ. ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ

ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂತಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ನಮ್ಮದು ಕೃಷಿಕರ ನಾಡು. ಜಾಗತೀಕರಣದ ಪ್ರಭಾವದಿಂದಾಗಿ ಕೃಷಿ ಕ್ಷೇತ್ರದಲ್ಲಿ ಅನೇಕ ಸ್ಥಿತ್ಯಂತರಗಳು ಘಟಿಸಿವೆ. ನಿರಂತರವಾಗಿ ಆಗುತ್ತಿರುವ ಬದಲಾವಣೆಗಳು ಕೃಷಿ ಕ್ಷೇತ್ರವನ್ನೂ ಬಿಟ್ಟಿಲ್ಲ. ಆದರೆ ಸಾಂಪ್ರದಾಯಿಕ ಕೃಷಿ ಪದ್ಧತಿ ಅನುಸರಿಸುವುದು ಹೋಗಲಿ ಅದರ ಬಗ್ಗೆ ಮಾತನಾಡಲು ಕೂಡ ಪುರುಸೊತ್ತಿಲ್ಲದ ಈ ಸಂದಿಗ್ಧತೆಯಲ್ಲಿ ದೇಶೀಯ ಕೃಷಿ ಬಗ್ಗೆ ಆಲೋಚಿಸುವಂತೆ ಪ್ರೇರೇಪಿಸುವ ಸಂಗತಿಗಳು ಸಹ ನಮ್ಮ ನಡುವೆಯೇ ಜರುಗುತ್ತಿವೆ. ಕಾರಣ ದೇಶೀ ಕೃಷಿ ಯಾವತ್ತೂ ಪ್ರಯೋಜನಕಾರಿ ಮತ್ತು ಉಪಯುಕ್ತ ಎಂಬ ಭಾವನೆ ಎಲ್ಲೋ ಒಂದು ಕಡೆ ನಮ್ಮ ಮನಸ್ಸಿನಲ್ಲಿ ಬೇರೂರಿದೆ. ಅದು ನೂರಕ್ಕೆ ನೂರರಷ್ಟು ಸತ್ಯ. ಕೃಷಿ ಕ್ಷೇತ್ರದಲ್ಲಿ ಆಗುತ್ತಿರುವ ಎಲ್ಲ ಬದಲಾವಣೆಗಳನ್ನು ಎಚ್ಚರದ ಕಣ್ಣಿನಿಂದ ನೋಡುವಂತೆ ಪ್ರೇರೇಪಿಸುವ ಕೆಲಸಗಳು ಜೊತೆಗೇ ಸಾಗಿವೆ. ಇಂದಿನ ಕಾರ್ಪೊರೇಟ್ ಜಗತ್ತು ಸೃಷ್ಟಿಸಿದ ಎಲ್ಲ ಬಗೆಯ ತೊಡಕುಗಳನ್ನು ನಿವಾರಿಸಿಕೊಳ್ಳುವಂತೆ ಕೃಷಿ ಕ್ಷೇತ್ರವನ್ನು ಕಸಿಗೊಳಿಸಬೇಕಾದ ಅಗತ್ಯತೆ ಇದೆ. ಅದರ ಒಂದು ಭಾಗವಾಗಿ ಕೃಷಿ ವಿಜ್ಞಾನಿ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಅವರು ಸಂಪಾದಿಸಿದ 'ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು' ಒಂದು ಸ್ವಾಗತಾರ್ಹ ಕೃತಿ.

ಭತ್ತ ಹತೋಟಿ, ದ್ವಿದಳ ಧಾನ್ಯಗಳ ಹತೋಟಿ, ಬೀಜ ಸಂರಕ್ಷಣೆ, ಹಣ್ಣುಗಳ ಹತೋಟಿ, ಹತ್ತಿಯ ಹತೋಟಿ ಸೇರಿದಂತೆ ವಿವಿಧ ಬೆಳೆಗಳ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳ ಕುರಿತು ಈ ಕೃತಿ ಬೆಳಕು ಚೆಲ್ಲುತ್ತದೆ. ಪ್ರಕೃತಿಯಲ್ಲಿ ಬೆಳೆಯುವ ಪ್ರತಿ ಬೆಳೆಯ ಸಮಸ್ಯೆಗೂ ಪ್ರಕೃತಿಯಿಂದಲೇ ಪರಿಹಾರ ಸಾಧ್ಯವೆಂಬುದನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ

ಇಲ್ಲಿ ಸಾಧಿತವಾಗಿದೆ. ದೇಶೀ ಕ್ಷೇತ್ರದಲ್ಲಿ ತೊಡಗಿಸಿಕೊಂಡ ದೇಶದ ನಾನಾ ಭಾಗದ ರೈತರ ಅನುಭವದ ನುಡಿಗಳು ಯಥಾವತ್ತಾಗಿ ಇಲ್ಲಿ ಪ್ರಕಟವಾಗಿರುವುದರಿಂದ ಅಧಿಕೃತತೆ ಪಡೆದುಕೊಂಡಿದೆ. ಇದೊಂದು ದೇಶೀ ಕೃಷಿ ಕೈಗೊಳ್ಳುವ ರೈತರ ಪಾಲಿಗೆ ಕೈಪಿಡಿಯಾಗಿದೆ. ಇಂತಹ ಮೌಲಿಕ ಕೃತಿಯನ್ನು ಸಂಪಾದಿಸಿಕೊಟ್ಟ ಪ್ರೊ. ಟಿ.ಎನ್. ಪ್ರಕಾಶ್ ಕಮ್ಮರಡಿಯವರಿಗೆ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಭಿನಂದನೆಗಳು.

ಪ್ರೊ. ಅಂಬಳಿಕೆ ಹಿರಿಯಣ್ಣ

ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂಥ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನವನವೋನ್ಮೇಷಶಾಲಿನಿಯಾದ ಜಾನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ನೂತನ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲ ಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಈವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು, ಕಳೆಗುಂದುತ್ತಿರುವ ಜಾನಪದ ಸಂಸ್ಕೃತಿ ಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆ ಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ. ಅದರಲ್ಲೂ ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಆದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನದಲ್ಲಿ ವಿಸ್ತರಣೆ ಕೇಂದ್ರ ನಿರತವಾಗಿದೆ. ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಕಾರ್ಯಕ್ಕೆ ಜೊತೆಗೆ ವಿಶ್ವವಿದ್ಯಾಲಯದ ಆಶಯಕ್ಕೆ ಒತ್ತಾಸೆಯಾಗಿ ನಿಂತಿದೆ.

ಪುಸ್ತಕ ಎಂದರೆ ಕೇವಲ ಅಕ್ಷರಗಳು ಮುದ್ರಣಗೊಂಡ ಭೌತಿಕ ಸ್ವರೂಪದ ಸಾಧನವಲ್ಲ. ಅರಿವಿನ ಹಾದಿಗಳನ್ನು ಭಾಷೆಯ ಮೂರ್ತರೂಪದಲ್ಲಿ ಹಿಡಿದಿಟ್ಟು, ಅಗಾಧತೆಯನ್ನು ತೆರೆದು ತೋರಬಲ್ಲ ತೋರುಬೆಳಕು. ಜನಪದರ ಅನುಭವಜನ್ಯ ಲೋಕವೊಂದರ ಅನಾವರಣ. ಸಂಸ್ಕೃತಿ ಚಿಂತನೆಯ ಭಾಗವಾಗಿ ರೂಪಗೊಳ್ಳುವ, ಜ್ಞಾನವಾಹಕವಾಗಬಲ್ಲ ಸಾಧನ. ಓದಿನ ಅಭಿರುಚಿಯ ಬೀಜ ಮೊಳಕೆಯೊಡೆಯಲು ಪೂರಕವಾಗಬಲ್ಲ ಪುಸ್ತಕಗಳು, ಮಾನವನ ತಿಳಿವಳಿಕೆಯ ತಾಣಗಳು. ಈ ಜಗತ್ತಿನಲ್ಲಿ ಹುಟ್ಟಿಕೊಳ್ಳಲಿಕ್ಕೆಂದೇ ಇರುವ ಏಕೈಕ ವಸ್ತು

ಎಂದರೆ ಅದು ಜ್ಞಾನ. ಅಂತಹ ಜ್ಞಾನದ ಗಣಿಯನ್ನು ಹೆಕ್ಕಲು ಪುಸ್ತಕ ಲೋಕವನ್ನು ತಡಕಾಡುವುದು, ಹುಡುಕಾಡುವುದು ನಿರಂತರವಾದ ಒಂದು ಪ್ರಕ್ರಿಯೆ ಆಗಬೇಕಾದ ಅಗತ್ಯತೆ ಇದೆ. ಅದನ್ನು ಸಾಧ್ಯವಾಗಿಸುವ ಉದ್ದೇಶದಿಂದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಸಂಪೂರ್ಣ ತನ್ನನ್ನು ತಾನು ತೊಡಗಿಸಿಕೊಂಡಿದೆ. ವಿಶ್ವವಿದ್ಯಾಲಯವು ಪ್ರಕಟಿಸುವ ವೈವಿಧ್ಯ ಪೂರ್ಣ ಹಾಗೂ ಮೌಲ್ಯಯುತ ಕೃತಿಗಳು ಓದುಗ ವಲಯಕ್ಕೆ ತಲುಪಿ ಜ್ಞಾನದ ಪುನರ್ ಉತ್ಪಾದನೆಗೆ ಕಾರಣವಾದರೆ ಶ್ರಮ ಸಾರ್ಥಕವಾಗುತ್ತದೆ.

ದೇಶೀ ಕೃಷಿ ಪದ್ಧತಿಯನ್ನು ಅನುಸರಿಸಲು ಹಿಂಜರಿಯುತ್ತಿರುವ ಈವೊತ್ತಿನ ಕಾಲದಲ್ಲಿ ಆ ಬಗ್ಗೆ ತಿಳಿವಳಿಕೆ ನೀಡುವ ಪ್ರಯತ್ನಗಳು ಅಲ್ಲಲ್ಲಿ ನಡೆಯುತ್ತಿರುವುದನ್ನು ಅಲ್ಲಗಳೆಯಲಾಗದು. ಅಕಾಡೆಮಿಕ್ ವಲಯದಿಂದ ಅದು ಸಾಧ್ಯವೇ ಎಂಬ ಸಂದೇಹದ ನಡುವೆಯೇ ದೇಶೀ ಕೃಷಿ ಮತ್ತು ಸಂರಕ್ಷಣಾ ಕ್ರಮಗಳ ಕುರಿತು ಕೆಲವೊಂದು ಮಹತ್ವದ ಕೃತಿಗಳು ಪ್ರಕಟಗೊಳ್ಳುತ್ತಿರುವುದು ಸ್ತುತ್ಯಾರ್ಹ ಹಾಗೂ ಸ್ವಾಗತಾರ್ಹ. ಬೇಸಾಯದಲ್ಲಿ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳನ್ನು ಅನುಸರಿಸಬೇಕಾದ ಕೆಲವೊಂದು ದೇಶೀ ಕ್ರಮಗಳು ಅತ್ಯಂತ ಉಪಯುಕ್ತವಾಗಿರುತ್ತವೆ ಎಂಬ ಅಂಶಗಳ ಮೇಲೆ ಬೆಳಕು ಬೀರುವ ಪ್ರಸ್ತುತ ಕೃತಿ ಕೃಷಿಕರ ಅನುಭವದ ನುಡಿಗಳಿಂದಲೇ ತುಂಬಿಕೊಂಡಿದೆ. ಅದು ಕೃತಿಯ ಹೆಚ್ಚುಗಾರಿಕೆಯಾಗಿದೆ. ಸಮೃದ್ಧ ಮಾಹಿತಿ ಒದಗಿಸುವ ಈ ಕೃತಿಯು ರೈತರ ಪಾಲಿಗೆ ಕೈದೀವಿಗೆಯಾಗಿದೆ. ಈ ಮಹತ್ವದ ಕೃತಿಯನ್ನು ನೀಡಿದ ಪ್ರೊ. ಟಿ.ಎನ್. ಪ್ರಕಾಶ್ ಕಮ್ಮರಡಿ ಅವರಿಗೆ ವಿಶ್ವವಿದ್ಯಾಲಯದ ಪರವಾಗಿ ಕೃತಜ್ಞತೆಗಳು. ಕೃತಿಯ ಕರಡು ತಿದ್ದಿ ಸಹಕರಿಸಿದ ಡಾ. ಎಸ್. ಮೋಹನ್,ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ ಮತ್ತು ಅಂದವಾಗಿ ಅಕ್ಷರ ಸಂಯೋಜನೆಗೊಳಿಸಿ, ಪುಟವಿನ್ಯಾಸ ಮಾಡಿದ ಸವಿತ ಗ್ರಾಫಿಕ್ಸ್‌ನ ಶ್ರೀ ಜೆ. ಬಸವರಾಜ ಅವರಿಗೆ ವಂದನೆಗಳು.

ಪ್ರೊ. ಸ.ಚಿ. ರಮೇಶ

ನಿರ್ದೇಶಕ

ಸಂಪಾದಕರ ಮಾತು

'ಹಿತ್ತಲ ಗಿಡ ಮದ್ದಲ್ಲ' ಎಲ್ಲರೂ ಬಲ್ಲ ಕನ್ನಡದ ಒಂದು ಗಾದೆ. ತನ್ನ ಕಾಲ ಬಳಿಯೇ ಇರುವ ಸಿರಿವಂತಿಕೆ, ಜ್ಞಾನವನ್ನು ಕಣ್ಣೆತ್ತಿ ನೋಡದೆ ಸ್ಥಳೀಯ ಸಾಧ್ಯತೆಗಳನ್ನು ನಿರಾಕರಿಸಿ ದೂರದ ಬೆಟ್ಟ ನೋಡುತ್ತಾ, ಕನಸುತ್ತಾ ನಿಲ್ಲುವ ಜನಸಾಮಾನ್ಯನ ತಲೆಗೆ ಮೊಟಕುವ ಕಟು ಗಾದೆಮಾತು. ಮನುಷ್ಯ ತನ್ನ ಕಾಲ ಬಳಿಯಿಂದ, ಕಣ್ಣು ಆವರಿಸುವ ಕ್ಷಿತಿಜದ ತನಕ ಬದುಕಿರುವ ಎಲ್ಲ ಜೀವಜಲ ಸಂಪನ್ಮೂಲಗಳನ್ನು ಕಾಪಾಡಿಕೊಂಡು, ತನ್ನ ಮುಂದಿನ ತಲೆಮಾರುಗಳ ಕನಸನ್ನೂ ಅರಿಯಬೇಕಾದ ಅನಿವಾರ್ಯ ಸ್ಥಿತಿಯಲ್ಲಿದ್ದಾನೆ. ಇಂತಹ ಸಂದರ್ಭದಲ್ಲಿ ನಮ್ಮ ಪೂರ್ವಿಕರ ಶತಮಾನಗಳ ಜೀವನಾನುಭವದ ಗಾದೆ ಮಾತುಗಳು ನಮ್ಮನ್ನು ಭ್ರಮೆಯಿಂದ ಹೊರತರಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇವೆ.

ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನಗಳ ಮೂಲಕವೇ ಮನುಷ್ಯ ಕುಲ ತನ್ನನ್ನು ರಕ್ಷಣೆ ಮಾಡಿಕೊಳ್ಳಬಲ್ಲದು ಎಂಬ ಭ್ರಮೆ ಕರಗುತ್ತಿದೆ. ಸುಸ್ಥಿರ ಕೃಷಿ ಅಭಿವೃದ್ಧಿಯ ಸಾಧನೆಯ ಸಾಧ್ಯತೆಗಳನ್ನು ಚಿಂತಿಸಿದಾಗ ನಮ್ಮ ಆಲೋಚನಾ ಕ್ರಮ ಮತ್ತು ಜೀವನ ಶೈಲಿಯನ್ನೇ ಮೂಲಭೂತವಾಗಿ ಬದಲಾಯಿಸಿಕೊಳ್ಳಬೇಕಾಗಿರುವ ಅಗತ್ಯ ಎದ್ದು ಕಾಣುತ್ತಿದೆ. ಸುಸ್ಥಿರ ಕೃಷಿ ಅಭಿವೃದ್ಧಿಯ ಸಾಧನೆಗೆ ನಮ್ಮ ವಿಜ್ಞಾನಿಗಳು ಸ್ಥಳೀಯ ಸಂಪನ್ಮೂಲಗಳು, ದೇಶೀಯ ಜ್ಞಾನ ಮತ್ತು ತಂತ್ರಜ್ಞಾನಗಳು, ಜೀವ ವೈವಿಧ್ಯತೆ, ದೇಶೀಯ ಸಂಸ್ಥೆಗಳು ಮತ್ತು ರೈತ ಮೂಲದ ಅನುಶೋಧನೆಯತ್ತ ನೋಡಬೇಕಾಗಿದೆ.

ಗ್ಯಾಟ್ ಒಪ್ಪಂದ ಹುಟ್ಟುಹಾಕಿದ ಉದಾರೀಕರಣ, ಖಾಸಗೀಕರಣ, ಬಹುರಾಷ್ಟ್ರೀಕರಣ ಮತ್ತು ಮುಕ್ತ ವ್ಯಾಪಾರಿಗಳ ಹೆಸರಿನಲ್ಲಿ, ಬೌದ್ಧಿಕ ಸನ್ನದಿನ ಹಕ್ಕಿನಡಿಯಲ್ಲಿ, ನಮ್ಮ ಸ್ಥಳೀಯ ಜೀವ ವೈವಿಧ್ಯ ಮತ್ತು ಸಂಪನ್ಮೂಲಗಳು ವಿದೇಶೀ ಕಂಪನಿಗಳ ಪಾಲಾಗಬಹುದು. ನಮ್ಮ ಬೇವಿನಮರ, ಮದರಂಗಿಗಿಡ, ಅಳಲೆಕಾಯಿ, ದಾಸವಾಳಗಳು ಸ್ಥಳೀಯ ಜನರಿಗೇ ದೊರಕದಂತಾಗಬಹುದು. ಗ್ಯಾಟ್‌ನಂತಹ ವ್ಯವಸ್ಥೆಯ ಅಡಿಯಲ್ಲಿ ಕೆಲಸ ಮಾಡುತ್ತಿರುವ ಬಂಡವಾಳವಾದಿ ಸಿದ್ಧಾಂತ ಮನುಷ್ಯ 'ಸ್ವಾರ್ಥ ಪರ ಹಾಗೂ ಅನುಭೋಗಪ್ರಿಯ' ಎಂಬ ಸರಳ ತತ್ವದ ಮೇಲೆ ಅವಲಂಬಿತವಾಗಿದೆ. ಹಾಗಾಗಿ ವ್ಯಾಪಾರ, ಲಾಭಗಳು ಇಂದು ನಮ್ಮನ್ನು ಆಳುತ್ತಿರುವ ಮೌಲ್ಯಗಳಾಗಿವೆ. ತಂತ್ರಜ್ಞಾನವೇ ಅರ್ಥವ್ಯವಸ್ಥೆಯ ಕೇಂದ್ರ ಅಂಗವಾಗಿದೆ. ಖಾಸಗೀ ಒಡೆತನದಂತಹ ಸಂಕುಚಿತ ದಾರಿಗಳಿಂದಲೇ ಮನುಷ್ಯನ ನಿರಂತರ

ಅನುಭೋಗ ಪ್ರಿಯತೆಯನ್ನು ಸಾಕಬಹುದು ಎಂಬ ಭ್ರಮೆ ರಾಷ್ಟ್ರ, ಸರ್ಕಾರ, ಮಾರುಕಟ್ಟೆಗಳಿಗಿದೆ.

ಮನುಷ್ಯನನ್ನು ಈ 'ಅನುಭೋಗ ಪ್ರಿಯ' ಎನ್ನುವ ತಪ್ಪು ಕಲ್ಪನೆಯಿಂದ ಹೊರಗೆಳೆದು ಅವನನ್ನು ಜೀವಸಂಕುಲಗಳ ಸಹ ಜೀವಿಯನ್ನಾಗಿ ಮಾಡಬೇಕಾದ ಸಾಧ್ಯತೆಯು ಸುಸ್ಥಿರ ಅಭಿವೃದ್ಧಿಯ ಸತ್ವಪರೀಕ್ಷೆ ಕೂಡಾ. ಇದಕ್ಕೆ ಉತ್ತರ ಕೂಡ ದೇಶೀಯ ತಂತ್ರಜ್ಞಾನ, ಅನುಶೋಧನೆಗಳ ಹಾದಿಯಲ್ಲಿಯೇ ಇದೆ. ಈ ನಾಟಿ ಪದ್ಧತಿ, ಆಚಾರ, ನಂಬಿಕೆ ಜ್ಞಾನವೆಲ್ಲವೂ ಸಹಸ್ರಾರು ವರ್ಷಗಳ ನಿರಂತರ ಪರಿಶ್ರಮ ಹಾಗೂ ಅನುಭವದಿಂದ ಬಂದಿವೆ. ಅವುಗಳ ಉಪಯೋಗ ವ್ಯಕ್ತಿಕೇಂದ್ರಿತ ಅಲ್ಲ. ಸಮಾಜಕೇಂದ್ರಿತವಾದದ್ದು. ಅವು ನಿಸ್ವಾರ್ಥದ ಸೆಲೆಯಿಂದ ಹುಟ್ಟಿರುವಂತಹವು. ಅಂದಮೇಲೆ ನಾವಿಂದು ಪ್ರಾಧಾನ್ಯತೆ ನೀಡಬೇಕಾಗಿರುವುದು ಸುಸ್ಥಿರ ಅಭಿವೃದ್ಧಿಗೆ, ಸುಸ್ಥಿರ ಕೃಷಿಗೆ ಅಗತ್ಯವಾಗಿರುವ ಈ ದೃಷ್ಟಿಕೋನವನ್ನೂ ಕೂಡ.

ನಾವಿಂದು ಹುಡುಕಬೇಕಾಗಿರುವುದು ಕೇವಲ ನಾಟೀ ಮೂಲದ ಜ್ಞಾನ, ತಂತ್ರಜ್ಞಾನ, ರೈತರ ಅನುಶೋಧನೆ ಮಾತ್ರವಲ್ಲ. ಸುಸ್ಥಿರ ಕೃಷಿ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಸಂರಕ್ಷಿಸಿಕೊಂಡು ಬಂದಿರುವ ಈ ಜನಗಳ ಅಪಾರ ಸೇವೆಯ ಋಣವನ್ನು ಹಿಂತಿರುಗಿಸುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರವನ್ನು ಕೂಡಾ.

ಇಂದು ನಮ್ಮಲ್ಲಿ ವ್ಯವಸ್ಥಿತ ಜ್ಞಾನ, ವಿಜ್ಞಾನಗಳಿಗೆ ಪರ್ಯಾಯವಾಗಿ ವಿಸ್ತೃವಾಗಿರುವ, ಜೀವಂತವಾಗಿರುವ ಹಾಗೇ ಜನಪ್ರಿಯವಾಗಿರುವ ಈ ಪಾರಂಪರಿಕ ದೇಸೀಯ ಜ್ಞಾನ, ತಂತ್ರಜ್ಞಾನ ಮತ್ತು ತಳಮಟ್ಟದ ಅನುಶೋಧನೆ ವ್ಯವಸ್ಥೆಯತ್ತ ನಾವು ಅವಶ್ಯಕವಾಗಿ, ಕಣ್ತೆರೆದು ನೋಡಬೇಕಾಗಿದೆ. ಒಂದು ದೇಶೀಯ ಜ್ಞಾನ ಅಥವಾ ತಂತ್ರಜ್ಞಾನವನ್ನು ಕಾಲದ ಪರಿಮಾಣದಲ್ಲಿ ಅಳೆಯುವುದಾದಲ್ಲಿ ಬಹಳಷ್ಟು ವರ್ಷಗಳಿಂದಲೂ ಅಥವಾ ಪ್ರಾದೇಶಿಕ ಪರಿಮಾಣದಿಂದ ಅಳೆದರೆ ಬಹಳಷ್ಟು ಜನಸಾಮಾನ್ಯರ ಬಳಿಯೂ ಜೀವಂತವೂ, ಜನಪ್ರಿಯವೂ ಆಗಿದ್ದು, ಇವೇ ದೇಶೀಯ ಜ್ಞಾನ ಒಂದನ್ನು ಗುರುತಿಸುವ ಲಕ್ಷಣವಾಗಿರುತ್ತವೆ ಎನ್ನಬಹುದು. ದೇಸೀಯ ಜ್ಞಾನ ವ್ಯವಸ್ಥೆ ಒಂದರ ಜನಪ್ರಿಯತೆ ಮತ್ತು ಜೀವಂತಿಕೆಗಳ ಮೂಲ ಸೆಲೆ ಹೊರಟಿರುವುದು ಅದರ 'ಜನಪರತೆ'ಯಿಂದ ಎಂಬುದು ಇಲ್ಲಿ ಅತ್ಯಂತ ಮುಖ್ಯ ವಿಚಾರವಾಗಿದೆ. ಹಾಗೇ ಈ ಜನಪರತೆಯ ಕೊರತೆಯಿಂದಲೇ ಆಧುನಿಕ ವಿಜ್ಞಾನ ಜೀವಂತಿಕೆ ಮತ್ತು ಜನಪ್ರಿಯತೆಗಳೆರಡರ ಅಭಾವವನ್ನು ಎದುರಿಸುತ್ತಿದೆ ಎಂಬುದು. ವ್ಯವಸ್ಥಿತಗೊಳ್ಳುವ, ನಿಖರಗೊಳ್ಳುವ ಆ ಮೂಲಕ ಪರಿಣಾಮಕಾರಿಯಾಗುವ ತರಾತುರಿಯಲ್ಲಿ ಆಧುನಿಕ ವಿಜ್ಞಾನ, ತಂತ್ರಜ್ಞಾನಗಳು 'ಜನಪರತೆ'ಯನ್ನು ಕಡೆಗಣಿಸುವಂತಾದಲ್ಲಿ, ಸುವ್ಯವಸ್ಥೆ ಮತ್ತು ನಿಖರತೆಗಳ ಕೊರತೆಯಿಂದ ನಮ್ಮ ಈ ದೇಶೀ ಜ್ಞಾನ ವ್ಯವಸ್ಥೆ ಬಡವಾಗುತ್ತಾ ಬಂದಿದೆ. ಇಲ್ಲೇ ಈ ಎರಡು ಜ್ಞಾನ ವ್ಯವಸ್ಥೆಗಳು ಪರಸ್ಪರ ಅರಿತು, ಕೊಟ್ಟುಕೊಳ್ಳುವ ವಿಚಾರವಿರುವುದು ಗಮನಾರ್ಹ.

ಇದರ ಜೊತೆಗೆ, ನಿಸರ್ಗದ ನೀತಿ ನಿಯಮಗಳನ್ನು ಅರಿತು, ಅವಕ್ಕೆ ತಲೆಬಾಗಿ, ಪ್ರಾಣಿ, ಪಕ್ಷಿ, ಜೀವಜಂತುಗಳೊಡನೆ ಸಹಜೀವನ ನಡೆಸುವ ದೇಶೀಯ ಜ್ಞಾನ ವ್ಯವಸ್ಥೆಯ

'ಪರಿಸರ ಪ್ರಿಯತೆ'ಯನ್ನೂ, ವ್ಯವಸ್ಥಿತ ವಿಜ್ಞಾನ, ತಂತ್ರಜ್ಞಾನಗಳನ್ನು ಅರಿತು, ಅಳವಡಿಸಿ ಕೊಳ್ಳಬೇಕಾಗಿದೆ. ಇವುಗಳ ಮೂಲಕ ಹೊಸದೊಂದು ಅಭಿವೃದ್ಧಿ ಪಥದ ಹುಡುಕಾಟದ ಪ್ರಯತ್ನವನ್ನೂ ಈ ದೇಶಿ ಜ್ಞಾನ ವ್ಯವಸ್ಥೆಯನ್ನು ಅರಿಯುವ ಮೂಲಕ ಗಟ್ಟಿ ಮಾಡಬಹುದೆ ನ್ನುವುದು ಮುಖ್ಯವಾಗಿರುತ್ತದೆ.

ಈ ಅಭಿವೃದ್ಧಿ ಮಾದರಿಯಲ್ಲಿ ವ್ಯಕ್ತಿಗಳನ್ನು ಬದಿತಳ್ಳಿ, ತಂತ್ರಜ್ಞಾನಕ್ಕೆ ಕೇಂದ್ರ ಸ್ಥಾನ ನೀಡುವ ಪ್ರವೃತ್ತಿ ಇಲ್ಲ. ಬದಲಿಗೆ, ಇಲ್ಲಿ ದೇಶೀಯ ಜ್ಞಾನ ವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿರುವ ಮಳೆ ಆಶ್ರಯದ ಬಡರೈತರು, ಬುಡಕಟ್ಟು, ಆದಿವಾಸಿ ಜನ, ಗ್ರಾಮೀಣ ಮಹಿಳೆ ಮತ್ತು ಕೃಷಿ ಕಾರ್ಮಿಕರಿಗೆ ಸಹಜವಾಗಿ ಆದ್ಯತೆ ದೊರಕುವಂತಾಗುತ್ತದೆ. ಅದೇ ರೀತಿ ಈ ದೇಶೀಯ ಅಥವಾ ಪಾರಂಪಾರಿಕ ಜ್ಞಾನದ ಚೌಕಟ್ಟಿನೊಳಗೆ ಪ್ರಯೋಗ ಮಾಡಿ ಹೊಸ ಹೊಸ ದೇಶೀ ತಂತ್ರಜ್ಞಾನಗಳನ್ನು ಹೊರಗೆಡಹುತ್ತಿರುವ ತಳಮಟ್ಟದ ಅನುಶೋಧಕರ ಪಾತ್ರ ಕೂಡ ಪ್ರಮುಖವಾಗುವುದರಿಂದ, ಇದು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರ ನೈಜ ಕಾಣಿಕೆಯ ಆ ಮೂಲಕ ಜನತಂತ್ರವನ್ನೇ ಎತ್ತಿಹಿಡಿಯುವ ಕಾರ್ಯವೂ ಆಗಿರುತ್ತದೆ ಎನ್ನಬಹುದು.

ಇವೆಲ್ಲಕ್ಕಿಂತ ಮುಖ್ಯವಾಗಿ ಇಲ್ಲಿ ಜನಪದ ಸಂಸ್ಕೃತಿಯನ್ನು ಗಟ್ಟಿ ಮಾಡುವ ಪ್ರಯತ್ನವೂ ಇರುವುದನ್ನು ನಾವು ಗಮನಿಸಬೇಕಾಗಿದೆ. ಸುಸ್ಥಿರ ಅಭಿವೃದ್ಧಿ ಪ್ರಕ್ರಿಯೆಗೆ ಅತ್ಯವಶ್ಯಕ ವಾಗಿರುವ ದೇಶೀಯ ಜ್ಞಾನ ವ್ಯವಸ್ಥೆಯಾಗಲೀ, ನಾಟಿ ತಂತ್ರಜ್ಞಾನವಾಗಲೀ, ಜೀವ ವೈವಿಧ್ಯತೆಯಾಗಲೀ ಅಥವಾ ಆ ನಿಟ್ಟಿನ ಆಚಾರ, ವಿಚಾರ, ನಂಬಿಕೆ, ಕತೆಗಳ ಸಾಂಸ್ಥಿರ ರಚನೆಗಳಾಗಲೀ ತುಂಬಿ ತುಳುಕುತ್ತಿರುವುದಾದರೂ ಬುಡಕಟ್ಟು, ಆದಿವಾಸಿ, ದಲಿತ, ಶೂದ್ರ ಜನಾಂಗಗಳನ್ನೊಳಗೊಂಡಿರುವ 'ಜನಪದ ಸಂಸ್ಕೃತಿಗಳೊಳಗೆ' ಎನ್ನಬಹುದು. ಈ ಸಂಸ್ಕೃತಿ ಗಳೊಳಗೆ ಗ್ರಾಮೀಣ ಬಹುಸಂಖ್ಯಾತ ಬಡಜನತೆ ಸೇರಿದ್ದು ಇಂದು ಈ ಗ್ಯಾಟ್ ಒಪ್ಪಂದ ಮೂಲಕ ಎದ್ದಿರುವ ವ್ಯಾಪಾರದ ಬಿರುಗಾಳಿಗೆ ಹಾಗೇ ಈ ಹಿನ್ನೆಲೆಯಲ್ಲಿ ಅತಿಕ್ರಮ ನಡೆಸಲು ಸಿದ್ಧವಾಗಿರುವ ಆ 'ಬಿಳಿ ಸಂಸ್ಕೃತಿ'ಯ ಹಾವಳಿಗೆ ಇವು ಕೊಚ್ಚಿ ಹೋಗುವ ಸಾಧ್ಯತೆ ಬಹಳವಾಗಿರುತ್ತದೆ. ಅಂದಮೇಲೆ, ಇಲ್ಲಿ ದೇಶೀಯ ಜ್ಞಾನವ್ಯವಸ್ಥೆ, ನಾಟಿ ಮೂಲದ ಸಂಸ್ಥೆಗಳು ಮತ್ತು ಜೀವ ವಿವಿಧತೆಗಳನ್ನು ಉಳಿಸಿ, ಬೆಳೆಸಿ, ಬಳಸುವ ಪ್ರಯತ್ನವೆಂದರೆ, ಈ ಜನಪದ ಸಂಸ್ಕೃತಿಗಳನ್ನು ಉಳಿಸಿ, ಬೆಳೆಸಿ, ಗಟ್ಟಿ ಮಾಡುವ ಪ್ರಯತ್ನವೂ ಆಗಲಿದೆ.

ಈ ಎಲ್ಲಾ ಧ್ಯೇಯೋದ್ದೇಶಗಳನ್ನಿಟ್ಟುಕೊಂಡು ರಾಜ್ಯದ ರೈತಾಪಿ ವರ್ಗ, ಗ್ರಾಮೀಣ ಮಹಿಳೆಯರು, ಬುಡಕಟ್ಟು, ಆದಿವಾಸಿ ರೈತರುಗಳು ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ಅವರ ತಳಮಟ್ಟದ ಅನುಶೋಧನೆಗಳು ಅವರು ಬಳಸುವ ಸ್ಥಳೀಯ ಸಂಪನ್ಮೂಲ ಮತ್ತು ಜೀವ ವೈವಿಧ್ಯ ಇತ್ಯಾದಿ 'ತೃತೀಯ ಜಗತ್ತಿನ ನಿಧಿ'ಗಳನ್ನು ಹುಡುಕಿ, ದಾಖಲಿಸಿ, ಗಟ್ಟಿ ಮಾಡಿ ಆ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿಯ ಹೊಸತೊಂದು ಮಾರ್ಗದ ಹುಡುಕಾಟದ ಪ್ರಯತ್ನವಾಗಿ 'ಹಿತ್ತಲಗಿಡ' ಎಂಬ ಚಾತುರ್ಮಾಸಿಕ, ಬೆಂಗಳೂರು

ಕೃಷಿ ವಿಶ್ವವಿದ್ಯಾಲಯದಲ್ಲಿ ೧೯೯೫ರಲ್ಲಿ ಜನ್ಮ ತಾಳಿತು. ಈ ನಿಟ್ಟಿನಲ್ಲಿ ಅಹ್ಮದಾಬಾದಿನ ಭಾರತೀಯ ನಿರ್ವಹಣಾ ಸಂಸ್ಥೆ (Indian Institute of Management)ನ ಪ್ರಾಧ್ಯಾಪಕರಾದ ಪ್ರೊ. ಅನಿಲ್‌ಗುಪ್ತಾರ ನೇತೃತ್ವದಲ್ಲಿ 'ಹನಿಬಿ' ಎಂಬ ಆಂಗ್ಲ ಪತ್ರಿಕೆ ಅದಾಗಲೇ ಪ್ರಾರಂಭಗೊಂಡಿದ್ದು, ಹಿತ್ತಲಗಿಡಕ್ಕೆ ಮಾರ್ಗದರ್ಶಕವಾಗಿದೆ. ಹಾಗೇ ಪ್ರೊ. ಗುಪ್ತಾರವರ ನೇತೃತ್ವದಲ್ಲಿ ಪ್ರಾರಂಭಗೊಂಡ 'ಸೃಷ್ಟಿ' (SRISTI) ಮತ್ತು "ರಾಷ್ಟ್ರೀಯ ಅನುಶೋಧನ ಪ್ರತಿಷ್ಠಾನ" (National Innovation Foundation) ಸಂಸ್ಥೆಗಳು ಹಿತ್ತಲಗಿಡದ ಪೋಷಣೆಗೆ ನಿರಂತರ ಸಹಾಯ ನೀಡುತ್ತಾ ಬಂದಿವೆ. ಹಿತ್ತಲಗಿಡದ ಮೂಲಕ ಗ್ರಾಮೀಣ ಜನರನ್ನು ಕೇಳುವ ಈ ಪ್ರಯತ್ನಕ್ಕೆ ಹಲವಾರು ಉತ್ಸಾಹಿ ಕೃಷಿ ವಿದ್ಯಾರ್ಥಿಗಳು, ನಾಡಿನಾದ್ಯಂತ ನಾರಾಯಣರೆಡ್ಡಿ, ಭರಮಗೌಡರು, ಬಸವರಾಜ ಸಂತೇಶಿವರರಂತಹ ಹತ್ತಾರು ಪ್ರಗತಿಪರ ಸಾವಯವ ರೈತರು ನೆರವು ನೀಡುತ್ತಾ ಬಂದಿರುವರು. ಹಾಗೇ ಪತ್ರಿಕೆಯ ಪ್ರಕಟಣೆಯಲ್ಲಿ ಪತ್ನಿ ಡಾ. ತೇಜಸ್ವಿನಿ ಕೈ ಜೋಡಿಸಿ ಕೆಲಸ ಮಾಡಿರುವರು. ಹೀಗೆ ಹಿತ್ತಲಗಿಡದ ಪೋಷಣೆಗೆ ಹಲವು ಮೂಲಗಳಿದ ನಿರಂತರ ಸಹಾಯ ದೊರಕುತ್ತಿದೆ.

ಹಿತ್ತಲಗಿಡದಲ್ಲಿ ಕಳೆದ ೧೮ ವರ್ಷ ದಾಖಲಿಸಿರುವ ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳನ್ನು ಒಂದೆಡೆ ಕಲೆಹಾಕಿ ಮುದ್ರಿಸುವ ಪ್ರಯತ್ನ ಇದಾಗಿದೆ. ಈ ಪುಸ್ತಕ ನಾಡಿನ ರೈತಾಪಿ ಜನರಿಗೆ, ಕೃಷಿ ವಿಜ್ಞಾನಿಗಳಿಗೆ ಮತ್ತು ಸಾವಯವ ಸುಸ್ಥಿರ ಕೃಷಿ ಅಭಿವೃದ್ಧಿಯಲ್ಲಿ ನಿರತರಾಗಿರುವ ಎಲ್ಲರಿಗೂ ಉಪಯೋಗವಾಗಲಿದೆ. ಈ ಪುಸ್ತಕದ ಮುದ್ರಣಕ್ಕೆ ಮುಂದೆ ಬಂದಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿ ಡಾ. ಅಂಬಳಿಕೆ ಹಿರಿಯಣ್ಣ, ಮಿತ್ರರು ಮತ್ತು ಕುಲಸಚಿವರು(ಮೌಲ್ಯಮಾಪನ) ಆದ ಡಾ. ಸ.ಚಿ. ರಮೇಶ ಅವರಿಗೆ ಅನಂತ ವಂದನೆಗಳು.

ಪ್ರೊ. ಟಿ.ಎನ್. ಪ್ರಕಾಶ್ ಕಮ್ಮರಡಿ

ಪರಿವಿಡಿ

ಅಧ್ಯಾಯ : ಒಂದು

ಭತ್ತ ಮತ್ತು ಇತರ ಧಾನ್ಯಗಳ ಹತೋಟಿ ಕ್ರಮಗಳು

ಭತ್ತದ ಕೀಟಕ್ಕೆ ಕತ್ತಾಳೆ ರಸ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣದ ಲಿಂಗಮಾದಯ್ಯ ಅಪ್ಪಟ ಸಾವಯವ ಕೃಷಿಕರು. ಇವರು ಮೈಸೂರು ಮಲ್ಲಿಗೆ ಭತ್ತದ ತಳಿ ಅಭಿವೃದ್ಧಿಪಡಿಸಿದ ತಳಮಟ್ಟದ ವಿಜ್ಞಾನಿ. ಇವರು ಭತ್ತದ ಗದ್ದೆಯಲ್ಲಿ ಕತ್ತಾಳೆಯಿಂದ ಸಾವಯವ ಗೊಬ್ಬರ ಹಾಗೂ ಔಷಧಿಯಾಗುವಂತಹ ಉಪಯೋಗವನ್ನು ಕಂಡುಕೊಂಡಿದ್ದಾರೆ. ಭತ್ತ ನಾಟಿ ಮಾಡಿದ ನಂತರ ಕತ್ತಾಳೆಯನ್ನು ಗೇಣುದ್ದ ಕತ್ತರಿಕೊಂಡಿದ್ದು, ಪ್ರತಿ ಸಾಲಿನ ಮಧ್ಯ ಕೆಸರಿನಲ್ಲಿ ಮಾರಿಗೊಂದರಂತೆ ಹಾಕಿರುತ್ತಾರೆ. ಕೆಸರಿನಲ್ಲಿ ಕರಗಿದ ಕತ್ತಾಳೆ ರಸದ ವಾಸನೆಗೆ ಕೀಟ ಬಾಧೆ ಕಂಡುಬರುವುದಿಲ್ಲವಂತೆ. ಹಾಗೆ ಕತ್ತಾಳೆ ರಸ ನೀರಿನಲ್ಲಿ ಬೆರೆತರೆ ಬೆಳೆಗೆ ತಗಲುವ ಶಿಲೀಂಧ್ರ ರೋಗ ಬರುವುದಿಲ್ಲವೆನ್ನುತ್ತಾರೆ. ಹಾಗೆ ಇದರಿಂದ ಬೆಳೆಗೆ ಹಲವು ಪೌಷ್ಟಿಕಾಂಶಗಳೂ ಲಭ್ಯವಾಗಿ ಹಚ್ಚಹಸುರಾಗಿ ಬೆಳೆಯುತ್ತದೆ ಎನ್ನುವರು ಅನುಭವಿ ಲಿಂಗಮಾದಯ್ಯನವರು.

ಭತ್ತದ ತೆನೆ ತಿಗಣೆ (Earhead bug) ನಿಯಂತ್ರಣ

೪-೫ ಕೆ.ಜಿ. ಭತ್ತದ ಹೊಟ್ಟನ್ನು ಒಂದು ಲೀಟರ್‌ನಷ್ಟು ಸೀಮೆಎಣ್ಣೆಯಲ್ಲಿ ಬೆರೆಸಿ ಮುಂಜಾನೆಯ ಹೊತ್ತಿನಲ್ಲಿ ಭತ್ತದ ಗದ್ದೆಯಲ್ಲಿ ಸಿಂಪಡಿಸಬೇಕು. ಈ ಕ್ರಮ ಭತ್ತದ ತೆನೆಗಳನ್ನು ಕಾಡುವ ತೆನೆ ತಿಗಣೆಯನ್ನು ನಿಯಂತ್ರಿಸುತ್ತದಂತೆ. ಈ ಮಾಹಿತಿ ಪಿ. ಗಣೇಶನ್ ಪೂರ್ನಾಕು, ದೇವಸ್ಥಾನದ ರಸ್ತೆ, ಎತ್ತುಕಡಿ, ಪಾಂಡಿಚೇರಿ ಇವರಿಂದ ಪಡೆಯಲಾಗಿದೆ.

ಭತ್ತದ ಕೀಟ ನಿಯಂತ್ರಣ

ಗುಜರಾತಿನ ಬನಸ್ಕಾಂತ ಜಿಲ್ಲೆಯವರಾದ ಜಮಲ್‌ಭಾಯಿ ನುರಾಭಾಯಿ ಮೋದಿ ಯವರು ಭತ್ತದಲ್ಲಿನ ಕೀಟಗಳ ಹತೋಟಿಗೆ ಲಾಂಟಾನಾ (Lantana camara L.), ತಂಬಾಕು ಮತ್ತು ಕಕ್ಕೆ (Cassia fistula L.) ಗಿಡದ ಹಣ್ಣುಗಳನ್ನು ಉಪಯೋಗಿಸುತ್ತಾರೆ. ಎರಡು

ಲೀಟರ್‌ಗಳಷ್ಟು ಕಷಾಯವನ್ನು ತಯಾರಿಸಿಕೊಳ್ಳಲು ೨೦೦ ಗ್ರಾಂ ಲಾಂಟಾನಾ ಗಿಡದ ಹೂಬಿಡುವ ಭಾಗ, ೨೦೦ ಗ್ರಾಂ ತಂಬಾಕು ಗಿಡದ ಬೇರುಗಳು ಮತ್ತು ೨೦೦ ಗ್ರಾಂ ಕಕ್ಕೆಗಿಡದ ಹಣ್ಣುಗಳು ಇವುಗಳ ಮಿಶ್ರಣ ಮಾಡಿ ಮೂರು ಲೀಟರ್ ನೀರಿನಲ್ಲಿ ಕುದಿಸಿಕೊಳ್ಳುತ್ತಾರೆ. ಚೆನ್ನಾಗಿ ಕುದಿಸಿದ ನಂತರ ನೀರಿನಲ್ಲಿ ಮಿಶ್ರಣ ಮಾಡಿ ಬೆಳೆಗಳಿಗೆ ಸಿಂಪಡಿಸುತ್ತಾರೆ.

ಕಾಸರ್ಕದ ಗೊಬ್ಬರ

ತಮಿಳುನಾಡಿನ ತಿರುಚ್ಚಿ ಜಿಲ್ಲೆಯ ಆರ್. ಶೇಖರ್ ಮತ್ತು ರಾಮರ್‌ರವರು ಭತ್ತದ ಹೆಚ್ಚಿನ ಇಳುವರಿಗೆ ಕಾಸರ್ಕ ಮರದ (Strychnos nux vomical L.) ಉದುರಿದ ಎಲೆಗಳನ್ನು ಉಪಯೋಗಿಸಿಕೊಂಡು ಗೊಬ್ಬರವನ್ನು ತಯಾರಿಸುತ್ತಾರೆ. ಇದಕ್ಕಾಗಿ ಆರು ಅಡಿ ಆಳವಿರುವ ಗುಂಡಿ ತೋಡಿ ಅದರಲ್ಲಿ ಕಾಸರ್ಕ, ಲಾಂಟಾನಾ (Lantana camara L.) ಹಾಗೂ ಹೊಂಗೆ (Pongamia pinnata (L.) pierre) ಗಿಡಗಳ ಎಲೆಗಳನ್ನು ತುಂಬಿಸಿ ಪದರ ಪದರವಾಗಿ ಸಗಣಿಯ ರಾಡಿಯನ್ನು ಹಾಕುತ್ತಾರೆ. ಆರು ಅಥವಾ ಹತ್ತು ತಿಂಗಳಾದ ಮೇಲೆ ತಯಾರಾಗುವ ಉತ್ಕೃಷ್ಟವಾದ ಗೊಬ್ಬರವನ್ನು ಮಳೆಯಾಶ್ರಿತವಾಗಿ ಬೆಳೆಯುವ ಭತ್ತ ಅಥವಾ ರಾಗಿ ಬೆಳೆಗಳಿಗೆ ಉಪಯೋಗಿಸುತ್ತಾರೆ. ಗೊಬ್ಬರದಲ್ಲಿ ಕಾಸರ್ಕದ ಎಲೆಗಳನ್ನು ಬಳಸುವುದರಿಂದ ಭತ್ತದ ಸುವಾಸನೆಯು ಹೆಚ್ಚಾಗುತ್ತದೆಂದು ನಂಬಲಾಗಿದೆ. ಕಹಿಗುಣವಿರುವ ಕಾಸರ್ಕವನ್ನು ಸಾವಯವ ಗೊಬ್ಬರ ತಯಾರಿಸಲು ಉಪಯೋಗಿಸುವುದರಿಂದ ಇಲಿಗಳ ಹಾಗೂ ಗೆದ್ದಲು ಹುಳುಗಳ ಉಪಟಳ ಕಡಿಮೆಯಾಗುತ್ತದೆ.

ಶಿವನಂಜಯ್ಯನವರ ಶಿಫಾರಸ್ಸು

ಸಸಿಮಡಿಯಲ್ಲಿ ಕೀಟರೋಗ ನಿಯಂತ್ರಣಕ್ಕೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಜೆ.ಸಿ. ಪುರದ ಜಿ. ಶಿವನಂಜಯ್ಯ ಬಾಳೆಕಾಯಿ ಅವರು ೧೦ ಕೆ.ಜಿ. ಹಸಿ ಸಗಣಿ, ಒಂದು ಕೆ.ಜಿ. ಬೇವಿನ ಹಿಂಡಿ, ಒಂದು ಕೆ.ಜಿ. ಕಡಲೇಹಿಂಡಿ, ೧ ಕೆ.ಜಿ. ಬೆಲ್ಲ, ೧೦೦ ಗ್ರಾಂ ಅರಿಶಿಣ ಪುಡಿ, ಇವುಗಳನ್ನು ೫೦ ಲೀಟರ್ ನೀರಿನಲ್ಲಿ ೪೮ ಗಂಟೆಗಳ ಕಾಲ ನೆನೆಸಿ ನಂತರ ೧:೧೦ರ ಪ್ರಮಾಣದಲ್ಲಿ ದ್ರಾವಣವನ್ನು ಎಲ್ಲಾ ರೀತಿಯ ಸಸಿ ಮಡಿಗಳಿಗೆ ೩-೪ ಬಾರಿ ಸಿಂಪಡಿಸು ತ್ತಾರಂತೆ. ಇದರಿಂದ ಯಾವುದೇ ಕೀಟ, ರೋಗಗಳ ಬಾಧೆಯಿಲ್ಲದ ಉತ್ತಮ ದರ್ಜೆಯ ಸಸಿಗಳನ್ನು ಪಡೆಯಬಹುದೆಂದು ತಮ್ಮ ಅನುಭವದಿಂದ ತಿಳಿಸಿದ್ದಾರೆ.

ಜತ್ರೊಪಾದಿಂದ ಬೆಳೆ ರಕ್ಷಣೆ

ಗುಜರಾತ್ ರಾಜ್ಯದ ರಜನಿಕಾಂತ್ ಉಷಾಬಾಯಿ ಪಟೇಲ್ ಅವರು ಮೂರು ಕೆ.ಜಿ. ಜತ್ರೊಪಾ ಬೀಜದಿಂದ ಕಷಾಯವನ್ನು ತಯಾರಿಸಿ ಭತ್ತದಲ್ಲಿ ಕಂಡುಬರುವ ರಸ ಹೀರುವ ಕೀಟಗಳ ನಿಯಂತ್ರಣಕ್ಕೆ ಬಳಸುತ್ತಿದ್ದಾರೆ. ಇವರ ಪ್ರಕಾರ ಈ ಮಿಶ್ರಣವನ್ನು ೫ ಲೀಟರ್ ನೀರಿನಲ್ಲಿ ಹಾಕಿ ಬಿಸಿ ಮಾಡಬೇಕು. ನಂತರ ಸುಮಾರು ೨೦೦ ಮಿಲಿ ಲೀಟರ್ ದ್ರಾವಣವನ್ನು ೧೫ ಲೀಟರ್ ನೀರಿನಲ್ಲಿ ಸೇರಿಸಿ ಸಿಂಪಡಿಸುವುದರಿಂದ ಭತ್ತದ ಬೆಳೆಯಲ್ಲಿ ಕೀಟ

ನಿಯಂತ್ರಿಸಬಹುದಂತೆ. ರಜನಿಕಾಂತ್‌ರವರು ೫ ಲೀಟರ್ ಜತ್ರೊಪಾ ದ್ರಾವಣಕ್ಕೆ ಸುಮಾರು ೫೦ ಗ್ರಾಂ ಸೋಪ್‌ನಟ್ ಪೌಡರ್ ಅಥವಾ ಡಿಟರ್ಜೆಂಟ್ ಪೌಡರನ್ನು ಸೇರಿಸಿ ನಂತರ ೫೦೦ ಮಿಲಿ. ಸೀಮೆಎಣ್ಣೆಯನ್ನು ಸೇರಿಸಿ ಈ ಕಷಾಯವನ್ನು ತಯಾರಿಸುತ್ತಾರೆ.

ತೆನೆ ತಿಗಣೆ ನಿಯಂತ್ರಣ

ಮೇಲೆ ತಿಳಿಸಿದ ಈ ಮಿಶ್ರಣಕ್ಕೆ ೧೦೦ ಲೀಟರ್ ನೀರಿನಲ್ಲಿ ಒಂದು ಕಿ.ಗ್ರಾಂ. ಮುತ್ತನಾರಿಯಾಲಿ (Coleus aromaticus) ಮತ್ತು ಒಂದು ಕಿ.ಗ್ರಾಂ. ತುಳಸಿಯನ್ನು ಸೇರಿಸಿ, ತೆನೆ ತಿಗಣೆ ಕೀಟ ಬಾಧೆಯಿರುವ ಬೆಳೆಗಳಿಗೆ ಸಿಂಪಡಿಸಿ ತೆನೆಗಳಲ್ಲಿನ ಕಾಳುಗಳನ್ನು ರಕ್ಷಿಸಬಹುದೆಂದು ಕೇರಳದ ಅಂತೋನಿಸ್ವಾಮಿ ಹೇಳುತ್ತಾರೆ.

ಕಂದು ಜಿಗಿ ಹುಳುವಿನ ತಡೆಗೆ

ಭತ್ತದ ಗದ್ದೆಯಲ್ಲಿ ಕಾಣಿಸಿಕೊಳ್ಳುವ ಕಂದು ಜಿಗಿ ಹುಳುವನ್ನು ನಿಯಂತ್ರಿಸಲು ಪಶ್ಚಿಮ ಬಂಗಾಳದ ರೈತರಾದ ಕುಡಿರಾಮ್ ವಿಷ್ಣರವರು ಪರಿಹಾರ ಕಂಡುಕೊಂಡಿದ್ದಾರೆ. ಇವರ ಅನುಭವದ ಪ್ರಕಾರ ಕೊಡಸಿಗನ ಮರದ (Cleiptonthus collinup) ಎಲೆಗಳನ್ನು ಗದ್ದೆಯಲ್ಲಿ ನೀರು ನಿಲ್ಲಿಸದೆ (ಎಕರೆಗೆ ೮-೧೨ ಕ್ವಿಂಟಾಲ್) ಹಾಕುವುದರಿಂದ ಕಂದು ಜಿಗಿಹುಳುಗಳನ್ನು ನಿಯಂತ್ರಿಸಬಹುದು. ಎಲೆಗಳನ್ನು ಹಾಕುವ ಮೂರು ದಿನ ಮುಂಚಿನಿಂದ ಗದ್ದೆಗೆ ನೀರು ಬಿಡಬಾರದು. ಕೊಡಸಿಗನ ಮರಗಳಿರುವ ಕಾಡುಗಳ ಪಕ್ಕದಲ್ಲಿರುವ ಗದ್ದೆಗಳಲ್ಲಿ ಕಂದು ಜಿಗಿ ಹುಳದ ಬಾಧೆ ಕಡಿಮೆ ಇರುವುದರಿಂದ ಪಶ್ಚಿಮ ಬಂಗಾಳದ ಬಹಳಷ್ಟು ಜನ ರೈತರು ಈ ಪದ್ಧತಿಯನ್ನು ನಂಬಿ ಅನುಸರಿಸುತ್ತಾರೆ.

ಎಲೆ ಸುರುಳಿ ಹುಳುವಿನ ಹತೋಟಿ

ಮಜ್ಜಿಗೆಯಿಂದ : ಭತ್ತದ ಪೈರಿಗೆ ಎಲೆ ಸುರುಳಿ (Leaf roller) ಹುಳುವಿನ ತೊಂದರೆ ಕಾಣಿಸಿದಾಗ ಮಜ್ಜಿಗೆಯನ್ನು ಗದ್ದೆಗೆ ನೀರು ಹೋಗುವ ಕಾಲುವೆಯಲ್ಲಿ ಪ್ರತಿ ಎಕರೆಗೆ ಒಂದು ಚೊಂಬಿನಂತೆ ಬೆಳಗಿನ ವೇಳೆ ಸಣ್ಣಗೆ ಬಿಡಬೇಕು. ಇದು ಪೈರಿಗೆ ಬೀಳುವ ಎಲ್ಲ ತರದ ಕೀಟಗಳನ್ನು ನಿವಾರಿಸುತ್ತದೆ ಎಂಬ ನಂಬಿಕೆ ಆಂಧ್ರಪ್ರದೇಶದ ರಂಗಾರೆಡ್ಡಿ ಜಿಲ್ಲೆಯ ರೈತರದು. ಭತ್ತದ ತೆನೆ ಬೆಳ್ಳಗಾಗಿ, ಜೊಳ್ಳು ಬಿದ್ದರೂ ಕೂಡ ಇದೇ ವಿಧಾನ ಅನುಸರಿಸ ಬಹುದು

ಕತ್ತಾಳೆ ಔಷಧಿ : ಒಂದು ಕಿಲೋ ಕತ್ತಾಳೆಯನ್ನು ಒಂದು ಹಿತ್ತಾಳೆ ಪಾತ್ರೆಯಲ್ಲಿ ೧೦ ಲೀಟರ್ ನೀರಿನಲ್ಲಿ ಹಾಕಿ ಚೆನ್ನಾಗಿ ಬೇಯಿಸಿ ನಂತರ ಸೋಸಿ. ಈ ದ್ರಾವಣಕ್ಕೆ ೧೦೦ ಗ್ರಾಂ ಬೇವಿನ ಪುಡಿ ಹಾಕಿ ಕಲಸಿ ಭತ್ತಕ್ಕೆ ಸಿಂಪಡಿಸಿದರೆ ಎಲೆ ಸುರುಳಿ ಹುಳುವನ್ನು ಹತೋಟಿ ಯಲ್ಲಿಡಬಹುದು ಎಂಬುದು ದೇವನಹಳ್ಳಿ ತಾಲ್ಲೂಕಿನ, ದೊಡ್ಡಕೋಗಿಲು ಗ್ರಾಮದ ರೈತ ಮಲ್ಲೇಶಪ್ಪನವರ ಅನುಭವ.

ಕುದಿಯುವ ೧೦ ಲೀಟರ್ ನೀರಿಗೆ ಒಂದು ಕೆ.ಜಿ. ಕತ್ತಾಳೆ (Agave sisalana) ಗಿಡದ ಎಲೆಗಳನ್ನು ಹಾಕಿ ಒಂದು ದಿನ ಹಾಗೆ ಬಿಟ್ಟುಬಿಡಿ. ಮರುದಿನ ಸೋಸಿ ಬರುವ ಮೂಲ ದ್ರಾವಣಕ್ಕೆ, ಒಂದು ಲೀಟರ್‌ಗೆ ೧೦ ಲೀಟರ್‌ನಂತೆ ನೀರನ್ನು ಬೆರೆಸಿ ಸಿಂಪಡಿಸಬೇಕೆಂದು ಎನ್ನುತ್ತಿದ್ದರು ತೀರ್ಥಹಳ್ಳಿಯ ದಿವಂಗತ ಶ್ರೀ ಪುರುಷೋತ್ತಮ ರಾವ್ ಅವರು.

ತಾಮ್ರದ ಪಾತ್ರೆಯಲ್ಲಿ ೧೦ ಲೀಟರ್ ನೀರನ್ನು ಹಾಕಿ ಕುದಿಸುತ್ತಾ ಅದಕ್ಕೆ ೯ ಕೆ.ಜಿ. ಕತ್ತಾಳೆ ಗಿಡದ ಎಲೆಗಳನ್ನು ಹಾಕಿ ಒಂದು ದಿನ ಹಾಗೇ ಬಿಟ್ಟು, ಅನಂತರ ಸೋಸಿ ತಿಳಿ ನೀರನ್ನು ಭತ್ತದ ಗಿಡಗಳಿಗೆ ಸಿಂಪಡಿಸುವುದು.

ಮುಕ್ಕಡಕ ದ್ರಾವಣ

ತೀರ್ಥಹಳ್ಳಿ ತಾಲ್ಲೂಕಿನ ಸರು ಗ್ರಾಮದ ಯುವ ಉತ್ಸಾಹಿ ಕೃಷಿಕ ಶ್ರೀ ಬಿ.ಎಸ್. ದಿನೇಶ್ ಭತ್ತದ ಬೇಸಾಯದಲ್ಲಿ ಕೀಟ ಹತೋಟಿಗೆ ಯಾವುದೇ ರಾಸಾಯನಿಕಗಳನ್ನು ಕೊಂಡುಕೊಳ್ಳದೆ ಸಾವಯವ ಕೃಷಿಗೆ ಮೊರೆಹೋಗಿರುವರು. ಇವರು 'ಮುಕ್ಕಡಕ' ಎಂಬ ಗಿಡದ ದ್ರಾವಣ ತಯಾರಿಸಿ ಗದ್ದೆಗೆ ಸಿಂಪಡಿಸಿ ಯಶಸ್ವಿಯಾಗಿದ್ದಾರೆ. ಸಿಂಪಡಣ ದ್ರಾವಣ ತಯಾರಿಸುವ ವಿಧಾನ ಈ ಕೆಳಕಂಡಂತಿದೆ.

೧೦ ಲೀಟರ್ ನೀರಿಗೆ ೧ ಕೆ.ಜಿ. ಮುಕ್ಕಡಕ ಸೊಪ್ಪನ್ನು ಹಾಕಿ ಒಲೆಯ ಮೇಲಿಟ್ಟು ಕುದಿಸಿದ ನಂತರ ಒಂದು ಲೀಟರ್ ಶುಭ್ರವಾದ ದ್ರಾವಣವನ್ನು ೧೦ ಲೀಟರ್ ನೀರಿನಲ್ಲಿ (೧:೧೦) ಬೆರೆಸಿ ಬೆಳೆಗೆ ಸಿಂಪಡಿಸಬೇಕು. ಮುಕ್ಕಡಕ ದ್ರಾವಣವನ್ನು ಭತ್ತದ ಗದ್ದೆಗೆ ಒಟ್ಟು ಎರಡು ಬಾರಿ ಸಿಂಪಡಿಸಬೇಕು.

ಅಗೇಡಿ(Nursery)ಯಲ್ಲಿ ಒಂದು ಬಾರಿ ಸಿಂಪಡಿಸಿದರೆ ಇದರಿಂದ ಅನೇಕ ಕೀಟಗಳು ಪ್ರಾರಂಭ ಹಂತದಲ್ಲೇ ಹತೋಟಿಗೆ ಬರುತ್ತವೆ. ನಾಟಿಯಾದ ಮೇಲೆ ಇದರಿಂದ ಜಿಗಿಹುಳು, ಬಿಳಿ ನೊಣ ಇತ್ಯಾದಿ ಕೀಟಗಳನ್ನು ನಿಯಂತ್ರಿಸಬಹುದು. ಜೊತೆಗೆ ಬೆಳೆಯಲ್ಲಿ ಜಿಗಿಹುಳು, ಕಂದು ಜಿಗಿಹುಳು ಮುಕ್ಕಡಕ ದ್ರಾವಣವನ್ನು ಸಿಂಪಡಿಸಿದಾಗ ಏಡಿಗಳು ಭತ್ತದ ಗಿಡದ ಬಳಿ ಸುಳಿಯುವುದೇ ಇಲ್ಲವಂತೆ. ಹಾಗೆ ಮುಕ್ಕಡಕ ಸೊಪ್ಪನ್ನು ಉತ್ತಮ ಹಸಿರೆಲೆ ಗೊಬ್ಬರವಾಗಿಯೂ ಉಪಯೋಗಿಸಬಹುದು.

ಸೂಚನೆ : ಮುಕ್ಕಡಕ ದ್ರಾವಣವನ್ನು ಸಸ್ಯಕ್ಕೆ ಸಿಂಪಡಿಸಿದ್ದರಿಂದ ಕೆಲವರಿಗೆ ಮುಖ ಊದಿಕೊಳ್ಳುವುದು, ಮೈಕೈ ಕಡಿತ ಬಂದಿರುವ ಬಗ್ಗೆ ಮಾಹಿತಿಯಿದೆ. ಹಾಗಾಗಿ ಸಿಂಪಡಿಸುವ ವೇಳೆಯಲ್ಲಿ ಎಚ್ಚರಿಕೆ ಅತ್ಯಗತ್ಯ.

ಕಂದು ಜಿಗಿ ಹುಳುಗಳ ನಿಯಂತ್ರಣಕ್ಕೆ ಇತರ ವಿಧಾನಗಳು

- ಕಣಗಲೆ (Nerium indicum) ಗಿಡದ ಬೀಜಗಳನ್ನು ಒಂದು ರಾತ್ರಿ ನೀರಿನಲ್ಲಿ ನೆನೆಸಿ, ಮರುದಿನ ಸೋಸಿ ಸಮಪ್ರಮಾಣದಲ್ಲಿ ನೀರನ್ನು ಬೆರೆಸಿ ಸಿಂಪಡಿಸುವುದು.
- ಲೋಳೆಸರ(Aloe vera)ದ ಲೋಳೆಯನ್ನು ದನದ ಗಂಜಲದೊಂದಿಗೆ ಬೆರೆಸಿ ಸಿಂಪಡಿಸುವುದು.

- ತಂಜಾವೂರಿನ ಜಿಲ್ಲೆಯಲ್ಲಿ ಅನೇಕ ರೈತರು ಎಕ್ಕ (Calotropis gigantea)ದ ಎಲೆಯನ್ನು ಭತ್ತದ ಗದ್ದೆಯಲ್ಲಿ ಅಲ್ಲಲ್ಲಿ ಹರಡುವರು. ಇದರಿಂದ ಜಿಗಿ ಹುಳುವಿನ ಹತೋಟಿ ಸಾಧ್ಯ ಎಂಬುದು ಅವರ ಅನುಭವ.
- ೧೦ ಕೆ.ಜಿ. ಭತ್ತದ ತೌಡಿಗೆ ೩ ಲೀ. ಸೀಮೆಎಣ್ಣೆ ಬೆರೆಸಿ ಸಿಂಪಡಿಸಿದರೂ ಕಂದು ಜಿಗಿ ಹುಳು(Brown Plant hopper)ವಿನ ಹತೋಟಿ ಸಾಧ್ಯ.

ಬೆಂಕಿರೋಗ

ಈ ರೋಗ ಶಿಲೀಂಧ್ರದಿಂದ ಆಚೀಚೆ ಹರಡುತ್ತದೆ. ಕೃತಕ ರಾಸಾಯನಿಕ ಗೊಬ್ಬರ ಬಳಸುವವರ ಹೊಲದಲ್ಲಿ ಬೆಂಕಿರೋಗದ ವ್ಯಾಪಕತೆ ಹೆಚ್ಚು. ಇದಕ್ಕೆ ಉತ್ತರ ಕನ್ನಡದ ಹುಲ್ಯ ಬನವಾಸಿಯ ಸಿದ್ಧಿ ಜನಾಂಗಕ್ಕೆ ಸೇರಿದ ಕೃಷಿಕರು ಕವರು (ಕೌಲು) (Careya arborea) ಮರದ ಚಕ್ಕೆ ಔಷಧ ನೀಡುತ್ತಾರೆ. ಸುಮಾರು ಒಂದು ಎಕರೆಗೆ ೨ ಕೆ.ಜಿಯಷ್ಟು ಚಕ್ಕೆಯನ್ನು, ಗದ್ದೆಯ ಹಾಳೆಗೆ ನೀರು ಹೋಗುವ ಜಾಗದಲ್ಲಿ ಹಾಕುತ್ತಾರೆ. ಚಕ್ಕೆಯ ಔಷಧ ಗುಣ ನೀರಿನ ಮೂಲಕ ಗದ್ದೆ ತುಂಬ ವಿಸ್ತರಿಸುವುದರ ಜೊತೆಗೆ ಆ ಮುಗ್ಧ ವನವಾಸಿಗಳ ಕನಸಿಗೂ ಹೊಸ ಹೊಸ ಕವಲುಗಳನ್ನು ಮೂಡಿಸುತ್ತವೆ.

ಭತ್ತಕ್ಕೆ ಸಾಮಾನ್ಯವಾಗಿ ಎಲ್ಲಾ ಹಂತದಲ್ಲೂ ಬೀಳುವ ಬೆಂಕಿರೋಗ/ಕೆಂಪು ಕೊಳೆ (Pyrivlaria oryze) ರೋಗಕ್ಕೆ ಕವಲು ಮರದ ತೊಗಟೆಯನ್ನು ಜಜ್ಜಿ, ಅದರ ರಸವನ್ನು ಭತ್ತದ ಗದ್ದೆಯಲ್ಲಿ ಹರಿಯಬಿಡುವ ಮೂಲಕ ಶಮನ ಮಾಡಬಹುದಂತೆ.

ಕಾಂಡ ಕೊರೆಯುವ ಹುಳುಗಳಿಗೆ

- ಒಂದೆರಡು ದಿನ ಭತ್ತದ ಗದ್ದೆಯಲ್ಲಿ ಸಾಕಷ್ಟು ಚೆನ್ನಾಗಿ ನೀರು ಕಟ್ಟುವುದರಿಂದ ಹುಳುಗಳು ನಿಯಂತ್ರಣಕ್ಕೆ ಬರುತ್ತವೆ.
- ಅಡಿಕೆ ಹಿಕ್ಕೆಗಳನ್ನು ಗದ್ದೆಯ ಸುತ್ತಲೂ ಹರಡಿದಾಗ ಹುಳುವಿನ ಬಾಧೆ ಕಡಿಮೆಯಾಗುತ್ತದೆ.
- ಮಾನಕ (Alocasia indica)ದ ಕೊಂಬೆ ಮತ್ತು ಎಲೆಗಳನ್ನು ಕತ್ತರಿಸಿ ಹಾಕುವುದರಿಂದ ಕೂಡ ಹುಳುಗಳು ಹತೋಟಿಗೆ ಬರುತ್ತವೆ ಎಂಬುದು ಅಸ್ಸಾಂನ ರೈತರ ಅನುಭವ.
- ತ್ರಿಪುರ ಪ್ರದೇಶದಲ್ಲಿ ಸ್ಥಳೀಯವಾಗಿ ಕುಚ್ಚ ಎಂದು ಕರೆಯುವ ಕೊಡಚೆಗಾ/ಕುರ್ಚಿ ಗಿಡ(Adhatoda vasika)ವನ್ನು ಭತ್ತದ ಕಾಂಡ ಕೊರಕ ನಿಯಂತ್ರಣಕ್ಕೆ ಉಪಯೋಗಿಸುತ್ತಾರೆ. ಈ ಗಿಡದ ಗೆಲ್ಲುಗಳನ್ನು ಮುಂಗಾರು ಭತ್ತದ ಗದ್ದೆಗಳಲ್ಲಿ ಎಳೆದಾಡುವುದರಿಂದ ಶೇ. ೭೦ರಷ್ಟು ನಿಯಂತ್ರಣ ಸಾಧ್ಯವಂತೆ. ಸುಮಾರು ೩೦-೪೦ ಗೆಲ್ಲುಗಳನ್ನು ೦.೧೬ ಹೆಕ್ಟೇರ್ ಜಾಗದಲ್ಲಿ ಎಳೆಯುತ್ತಾರೆ.
- ಗೇರು ಟೊಂಗೆಗಳನ್ನು ಭತ್ತದ ಗದ್ದೆಯಲ್ಲಿ ಅಲ್ಲಲ್ಲಿ ಹರಡುವುದರಿಂದ ಕಾಂಡ ಕೊರಕದ ಹತೋಟಿ ಸಾಧ್ಯ. ಸೆಣಬಿನ ಬೀಜವನ್ನು ಒಂದು ರಾತ್ರಿಯಲ್ಲಿ ನೆನೆಸಿ ನೀರಿನೊಂದಿಗೆ ಸಮಪ್ರಮಾಣದಲ್ಲಿ ಬೆರೆಸಿ ಸಿಂಪಡಿಸಬೇಕು.

ಇತರ ಕೀಟ ನಿಯಂತ್ರಣ

ತಮಿಳುನಾಡಿನ ಪೆರಂಬದೂರು ಜಿಲ್ಲೆಯ ರೈತರು ಅನಾದಿ ಕಾಲದಿಂದಲೂ ರೂಢಿಸಿಕೊಂಡಿರುವ ವಿಧಾನವೆಂದರೆ, ಭತ್ತದ ಸಸಿ ನಾಟಿ ಮಾಡುವ ಮುಂಚೆ ನೀರು ನಿಂತ ಒಂದು ಮಡಿಯಲ್ಲಿ ಬೂದಿ ಹಾಗೂ ಬೇವಿನ ಬೀಜದ ಪುಡಿಯನ್ನು ಬೆರೆಸಿಡುತ್ತಾರೆ. ೧೫ ಚದರ ಅಡಿ ಮಡಿಗೆ ಅರ್ಧ ಕೆ.ಜಿ. ಪುಡಿ ಮಾಡಿದ ಬೇವಿನ ಬೀಜ ಹಾಗೂ ೧ ಕೆ.ಜಿ. ಬೂದಿ ಸಾಕಾಗುತ್ತದೆ. ಈ ದ್ರಾವಣದಲ್ಲಿ ೫೦ ಕಟ್ಟು ನಾಟಿ ಸಸಿಗಳನ್ನು ಇಡಬಹುದು. ಅರ್ಧ ಗಂಟೆಯಿಂದ ೧ ಗಂಟೆ ಇಟ್ಟರೆ ಸಾಕು. ಹೀಗೆ ಉಪಚಾರ ಪಡೆದ ಸಸಿಗಳು ಕೀಟ ಹಾಗೂ ರೋಗಗಳಿಂದ ಮುಕ್ತವಾಗಿರುತ್ತದೆ

ರಸ ಹೀರುವ ಹುಳುಗಳ ಹತೋಟಿ

ಹಾಸನದ ಸಾವಯವ ಕೃಷಿಕ ಬಸವರಾಜು ಅವರು ತಮ್ಮ ಭತ್ತದ ಪೈರನ್ನು ಹಾಳು ಮಾಡುತ್ತಿದ್ದ ರಸ ಹೀರುವ ಹುಳುಗಳನ್ನು ನಿಯಂತ್ರಿಸಲು ಕತ್ತೆಗಂಜಲವನ್ನು ಶೇಖರಿಸಿ ತಂದು ಸಿಂಪಡಿಸುತ್ತಾರಂತೆ.

ಎಕ್ಕದ ಕಷಾಯ

ಹತ್ತು ಲೀಟರ್ ನೀರಿನಲ್ಲಿ ಒಂದು ಕಿಲೋ ಎಕ್ಕದ ತಾಜಾ ಎಲೆಗಳನ್ನು ತುಂಡು ತುಂಡಾಗಿ ಮಾಡಿ ನೆನೆ ಹಾಕಿ, ಬಿಸಿ ನೀರಾದರೆ ೨೪ ಗಂಟೆ ನೆನೆಸಿಟ್ಟರೆ ಸಾಕು. ತಣ್ಣೀರಾದರೆ ೬ ರಿಂದ ೮ ದಿನಗಳು ನೆನೆಸಿಡಿ, ನಂತರ ಕುದಿಸಿ ಕಷಾಯವನ್ನು ೧೦ ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಬೆಳೆಗೆ ಸಿಂಪಡಿಸಬೇಕು. ಇದರಿಂದ ಭತ್ತದ ಎಲೆ ಕತ್ತರಿಸುವ, ಕಾಂಡ ಕೊರೆಯುವ ಹುಳುಗಳು ನಿಯಂತ್ರಣವಾಗುತ್ತದೆ. ಹೀಗೆ ತಯಾರಿಸಿದ ಕಷಾಯವನ್ನು ಸಂಜೆ ವೇಳೆ ಗಿಡಗಳ ಬುಡದಲ್ಲಿ ಹಾಕಿದರೆ ಮಣ್ಣಿನಲ್ಲಿ ಅಡಗಿ ಕೂತಿರುವ ಬೇರು ತಿನ್ನುವ ಹುಳು, ಜರಿ ಹುಳು, ಕಾಂಡ ಕೊರೆಯುವ ಹುಳು ನಿಯಂತ್ರಣವಾಗುತ್ತದೆ. ಭತ್ತದ ಮಡಿಯಲ್ಲಿ ಇದರ ಎಲೆ ಹಾಕಿ ನಂತರ ನಾಟಿ ಮಾಡುವ ರೂಢಿ ಈ ಹಿಂದೆ ಇತ್ತು.

ತೆನೆ ತಿಗಣೆ

ಫೈಜಾಬಾದ್ ಜಿಲ್ಲೆಯ ರೈತರು ಭತ್ತದ ಗದ್ದೆಯಲ್ಲಿ ಕಂಡು ಬರುವ 'ತೆನೆ ತಿಗಣೆ' (Gundhi bug) ನಿಯಂತ್ರಣಕ್ಕೆ ಹಳೆಯ ಸೈಕಲ್ ಟಯರ್‌ನ್ನು ಸುಟ್ಟು ಗದ್ದೆಯ ಸುತ್ತ ಹೊಗೆ ಬರುವಂತೆ ಅದನ್ನು ಎಳೆದುಕೊಂಡು ಹೋಗಿ ಗಾಳಿ ಬೀಸುವ ದಿಕ್ಕಿನಲ್ಲಿ ನೇತು ಹಾಕುತ್ತಾರೆ. ಟಯರ್ ಸುಟ್ಟ ವಾಸನೆ ಕೀಟವನ್ನು ಓಡಿಸುತ್ತದೆ ಎನ್ನುವುದು ಅವರ ಅನುಭವ.

- ಗ್ಲಿರಿಸೀಡಿಯ ಗೊಬ್ಬರದ ಗಿಡದ ಟೊಂಗೆಗಳನ್ನು ಭತ್ತದ ಗದ್ದೆಯಲ್ಲಿ ಹರಡುವುದರಿಂದ ತೆನೆ ತಿಗಣೆ ಹತೋಟಿ ಸಾಧ್ಯ.
- ಭತ್ತ ದುಂಡಾಡುವ ಮುನ್ನ ಒಂದು ಕುಂಟೆಗೆ ಒಂದು ಜೇಡರ ಹುಳವನ್ನು ಬಿಡಬೇಕು. ಭತ್ತದ ತೆನೆ ಹೊರೆ ಬರುವ ವೇಳೆಗೆ ಗದ್ದೆ ತುಂಬಾ ಬಲೆ ಹರಡಿ ಇದು ಭತ್ತದ ತೆನೆಗೆ ಬರುವ ತೆನೆ ತಿಗಣೆಯನ್ನು ತಿನ್ನುತ್ತದೆ.

ಬೇವಿನ ಎಲೆಯ ಗೊಬ್ಬರದಿಂದ ನಿರೋಧಕ ಶಕ್ತಿ

ಪಾಂಡಿಚೇರಿಯ ರೈತರು ಭತ್ತದ ಸಸಿ ಮಡಿ ಮಾಡುವ ಎರಡು ವಾರಗಳ ಮೊದಲು ಬೇವಿನ ಎಲೆಯನ್ನು ಮಣ್ಣಿಗೆ ಸೇರಿಸಿ ಚೆನ್ನಾಗಿ ಉಳುಮೆ ಮಾಡಿ ಕೊಳೆಯಲು ಬಿಡುತ್ತಾರೆ. ಹೀಗೆ ಚೆನ್ನಾಗಿ ಕೊಳೆತ ಬೇವು ಮಣ್ಣಿನಲ್ಲಿ ಚೆನ್ನಾಗಿ ಬೆರೆತ ನಂತರ ಸಸಿ ಮಡಿ ಮಾಡಿ, ಭತ್ತದ ಬೀಜ ಬಿತ್ತುತ್ತಾರಂತೆ. ಇಂತಹ ಸಸಿ ಮಡಿಯಲ್ಲಿ ಬೆಳೆಯುವ ಭತ್ತದ ಸಸಿಗಳು ಸದೃಢವಾಗಿದ್ದು ಕೀಟ ಮತ್ತು ರೋಗ ನಿರೋಧಕ ಶಕ್ತಿ ಹೊಂದಿರುತ್ತವೆ ಎನ್ನಲಾಗಿದೆ.

ಸುಳಿಸುತ್ತುವ ರೋಗಕ್ಕೆ ಹೊಂಗೆ ಹೂವಿನ ಬಳಕೆ

ಮಾರ್ಚ್ ತಿಂಗಳಲ್ಲಿ ಭತ್ತದ ಪೈರು ನಾಟಿ ಮಾಡಿ ೧೫ ದಿನ ಕಳೆದ ಮೇಲೆ ಪೈರಿನ ಗರಿಗಳು ಸುರುಳಿಯಾಗಿ ಸುತ್ತತೊಡಗಿತು. ಇದರಿಂದ ಪೈರಿನ ಬೆಳವಣಿಗೆ ಕ್ಷೀಣಿಸುವುದನ್ನು ದೊಡ್ಡ ಹೆಜ್ಜಾಜೆ ಚಿತ್ರಶೇಖರ್ ಗಮನಿಸಿದರು. ಪೈರಿಗೆ ಭೂಮಿಯಲ್ಲಿ ಫಲವತ್ತತೆಯ ಕೊರತೆ ಇರಬಹುದೆಂದು ತಿಳಿದು ಇದಕ್ಕೆ ರಾಸಾಯನಿಕ ಗೊಬ್ಬರ ಕೊಟ್ಟು, ಔಷಧಿಯನ್ನು ಸಿಂಪಡಣೆ ಮಾಡಿದರೆ ಸರಿ ಹೋಗುತ್ತದೆ ಎಂದುಕೊಂಡರು. ಆದರೆ ಹಣದ ತೊಂದರೆ ಯಿಂದಾಗಿ ಇದನ್ನು ಮಾಡುವುದು ತಡವಾಯಿತು. ಅವರ ಗದ್ದೆಗೆ ನೀರು ಹರಿಯುವಂತಹ ಜಾಗದಲ್ಲಿ ಒಂದು ಹೊಂಗೆ ಮರವಿದ್ದು, ಆ ಹೊಂಗೆ ಮರ ಹೂ ಬಿಟ್ಟು, ಹೂವುಗಳು ನೀರಿಗೆ ಉದುರಿ ಕೊಳೆತು ನೀರು ಗದ್ದೆಗೆ ಹರಿಯುತ್ತಿತ್ತು. ಈ ರೀತಿ ಕೊಳೆತ ನೀರು ಹರಿದ ಗದ್ದೆಯು ರೋಗದಿಂದ ಮುಕ್ತವಾಗಿ ಹೊಸದಾಗಿ ತೆಂಡೆ ಒಡೆಯಲು ಪ್ರಾರಂಭಿಸಿತ್ತು. ಇದನ್ನು ನೋಡಿ ರೋಗಪೀಡಿತ ಎಲ್ಲಾ ಗದ್ದೆಗಳಿಗೂ ಸುಮಾರು ೨೦ ಮಂಕರಿಯಷ್ಟು ಹೂವನ್ನು ಗುಡಿಸಿ ಚಿತ್ರಶೇಖರ್ ಎರಚಿದರು. ಸುಮಾರು ೧೨ ದಿನಗಳ ನಂತರ ಗದ್ದೆಗಳು ರೋಗದಿಂದ ಮುಕ್ತವಾಗಿ ಹೊಸದಾಗಿ ತೆಂಡೆ ಒಡೆಯಲು ಪ್ರಾರಂಭಿಸಿದ್ದು ನೋಡಿ ನಂಬದವರಾದರು.

ಬೇವು ಮತ್ತು ಬೂದಿಯಿಂದ ಭತ್ತದ ಪೈರಿಗೆ ಉಪಚಾರ

ತಮಿಳುನಾಡಿನ ಪೆರಂಬದೂರು ಜಿಲ್ಲೆಯ ರೈತರು ಭತ್ತದ ಪೈರುಗಳನ್ನು ನಾಟಿ ಮಾಡುವ ಮೊದಲು, ಬೂದಿ ಮತ್ತು ಬೇವಿನ ಹಿಂಡಿಯ ಮಿಶ್ರಣದ ದ್ರಾವಣದಲ್ಲಿ ಅದ್ದಿ ತೆಗೆದು ನಾಟಿ ಮಾಡುವರಂತೆ. ಹೀಗೆ ಮಾಡುವುದರಿಂದ ಪೈರು ಸಮೃದ್ಧವಾಗಿ ಬೆಳೆಯುವುದಲ್ಲದೆ, ಕೀಟ ಮತ್ತು ರೋಗದ ಬಾಧೆ ಕಡಿಮೆಯಾಗುವುದೆಂದು ಆ ರೈತರ ಅನುಭವ. ಈ ರೀತಿ ಒಂದರಿಂದ ಒಂದೂವರೆ ಗಂಟೆಯಷ್ಟು ಕಾಲ ಪೈರನ್ನು ನೆನೆಸುತ್ತಾರಂತೆ.

ಭತ್ತದ ಗದ್ದೆಯ ಹುಳಗಳಿಗೆ ಹಗ್ಗ ಏಟು!

ನಾಟಿ ಮಾಡಿದ ಭತ್ತ ಬೆಳೆಯುತ್ತಿದ್ದಂತೆಯೇ ಕಾಟ ನೀಡುವ ಕೀಟಗಳು ಹಲವಾರು. ಎಲೆ ತಿನ್ನುವ, ಎಲೆ ಕತ್ತರಿಸುವ, ಸುರುಳಿ ಸುತ್ತುವ ಹುಳಗಳ ಕಾಟ. ಕಾಟ ಕೊಡುವ ಕೀಟಗಳಿಂದ ಭತ್ತದ ಗಿಡಗಳನ್ನು ಪಾರುಮಾಡಲು ಅಸ್ಸಾಂನ ರೈತರು ಕಂಡುಕೊಂಡ ಒಂದು ಸರಳ ಉಪಾಯ ಹೀಗಿದೆ.

ಉದ್ದದ ಗೋಣಿಹಗ್ಗ ಅಥವಾ ಹುರಿಹಗ್ಗಕ್ಕೆ ಸೀಮೆಎಣ್ಣೆಯನ್ನು ಚೆನ್ನಾಗಿ ಸವರಿ, ಹಗ್ಗದ ಎರಡೂ ತುದಿಗಳನ್ನು ಒಬ್ಬೊಬ್ಬರು ಹಿಡಿದುಕೊಂಡು ಗದ್ದೆಯ ಆಚೀಚೆಯ ಬದಿಗಳಲ್ಲಿ ನಿಂತು ಹಗ್ಗವನ್ನು ಗಿಡಗಳ ಮೇಲೆ ಎಳೆಯುತ್ತಾ ಬಂದಂತೆ ಸೀಮೆಎಣ್ಣೆ ಗಿಡಗಳಿಗೆ ಸವರಿಕೊಳ್ಳುತ್ತದೆ. ಹೀಗೆ ತೆಳುವಾಗಿ ಹರಡಿದ ಸೀಮೆಎಣ್ಣೆಯಿಂದ ಹುಳುಗಳು ಉದುರಿ ಕೆಳಗೆ ಬೀಳುತ್ತವೆ. ಒಟ್ಟಿನಲ್ಲಿ ಸುಲಭದಲ್ಲಿ ಹುಳು ಮತ್ತು ಕೀಟ ನಿಯಂತ್ರಣ.


ಈ ಮೇಲಿನ ತತ್ವವನ್ನೇ ಅನುಸರಿಸಿ,

- ಹತ್ತು ಮಿ.ಲಿ.ನಷ್ಟು ಸೀಮೆಎಣ್ಣೆ ೫ರಿಂದ ೬ ಲೀ.ನಷ್ಟು ನೀರಿನೊಂದಿಗೆ ಬೆರೆಸಿ, ಭತ್ತದ ಗಿಡಗಳ ಮೇಲೆ ತೆಳುವಾಗಿ ಸಿಂಪಡಿಸುವುದರಿಂದ ಕೀಟ ಹತೋಟಿ ಸಾಧ್ಯ. ಸೀಮೆಎಣ್ಣೆಯ ಬದಲು ಹೊಗೆಸೊಪ್ಪಿನ ದ್ರಾವಣವನ್ನು ತೆಳುವಾಗಿ ಸಿಂಪಡಿಸುವುದರಿಂದಲೂ ಕೀಟ ಹತೋಟಿ ಮಾಡಬಹುದು.

ಭತ್ತಕ್ಕೊಂದು ಖಡಕ್ ಔಷಧಿ

ತಮಿಳುನಾಡಿನ ಚಿನ್ನಕುರುಸ್ವಾಮಿಯವರು ಭತ್ತದ ಗದ್ದೆಯ ಕೀಟಗಳ ನಾಶಕ್ಕೆ ಅರ್ಧ ಕೆ.ಜಿ.ಯಷ್ಟು ಒಣಗಿದ ಹೊಗೆಸೊಪ್ಪಿನ ಎಲೆಗಳು, ಒಂದು ಕೆ.ಜಿ. ಬೇವಿನ ಬೀಜ, ಜೊತೆಗೆ ಕಣಗಲದ ಬೀಜ ಅರ್ಧ ಕೆ.ಜಿ., ದತ್ತೂರ ಅಥವಾ ಉಮ್ಮತ್ತಿಯ ಎಲೆಗಳು ಅರ್ಧ ಕೆ.ಜಿ. ಎಲ್ಲವನ್ನೂ ಒಟ್ಟು ಮಾಡಿ ಪುಡಿ ಮಾಡಿ ಅರ್ಧ ಕೆ.ಜಿ. ಸುಣ್ಣವನ್ನು ಮಿಶ್ರ ಮಾಡಿ ಕೊಳ್ಳುತ್ತಾರೆ. ಈ ಎಲ್ಲಾ ಒಟ್ಟು ಸೇರಿದ ಮಿಶ್ರಣವನ್ನು ೫೦ ಲೀಟರ್ ನೀರಿನಲ್ಲಿ ಸುಮಾರು ೧೫ ದಿನಗಳ ಕಾಲ ನೆನೆಸಿಡಲಾಗುತ್ತದೆ. ಎರಡು ದಿನಕ್ಕೊಮ್ಮೆ ಈ ಮಿಶ್ರಣವನ್ನು ಕೋಲಿನಿಂದ ಕಲಿಸುತ್ತಿರಬೇಕು. ೧೫ ದಿನಗಳ ನಂತರ ದ್ರಾವಣವನ್ನು ಬಸಿದು, ಒಂದು ಲೀಟರ್ ದ್ರಾವಣಕ್ಕೆ ೧೫ ಲೀಟರ್ ನೀರು ಬೆರೆಸಿ ಭತ್ತದ ಗದ್ದೆಗೆ ಸಿಂಪಡಿಸಬೇಕು ಎನ್ನುತ್ತಾರೆ ಸ್ವಾಮಿಯವರು. ಈ ಮೇಲೆ ಹೇಳಿದ ಮಿಶ್ರಣಗಳ ಪ್ರಮಾಣ ಸುಮಾರು ಆರು ಎಕರೆ ಭತ್ತದ ಗದ್ದೆಗೆ ಸಿಂಪಡಿಸಲು ಸಾಕಾಗುತ್ತದೆ ಎನ್ನಲಾಗಿದೆ.





ದ್ಯಾವಹಳ್ಳಿ ರೈತರ ಪ್ರಯೋಗ

- ಭತ್ತದ ಹೊಲಗಳಿಗೆ ಕೀಟ ಬಾಧೆ ಬಂದಾಗ ಹೊಲದ ಕಡೆ ಗಾಳಿ ಬೀಸುವ ದಿಕ್ಕನ್ನು ಗುರುತಿಸಿಕೊಂಡು, ಹೊಲದ ಅಂಚಿನಲ್ಲಿ ಬೆಂಕಿ ಒಟ್ಟು ಮಾಡಿ, ಬೆಂಕಿಯಲ್ಲಿ ದನ,

ನಾಯಿ ಅಥವಾ ಮನುಷ್ಯರ ಮೂಳೆಗಳನ್ನು ಹಾಕಿ, ಬರುವ ಹೊಗೆಯನ್ನು ಹೊಲದ ಮೇಲೆ ಹಾಯಿಸಿದರೆ ಬಂದಿರುವ ಕೀಟ ಬಾಧೆ ನಿವಾರಣೆಯಾಗುತ್ತದೆ.

- ಭತ್ತ ತೆನೆ ಬರುವ ಕಾಲದಲ್ಲಿ ಕೀಟದ ಹಾವಳಿ ನಿವಾರಣೆಗೆ ಎಕ್ಕ, ಬಂದ್ರೆ, ಬೇವು ಮತ್ತು ಕಳ್ಳಿ ಕೊನೆಗಳನ್ನು ಕತ್ತರಿಸಿಕೊಂಡು ಪೊರಕೆಯ ರೀತಿ ಮಾಡಿ ಭತ್ತದ ಗದ್ದೆಯ ಮೇಲೆ ಎಳೆದಾಡಿದರೆ, ಗರಿಗಳಿಗೆ ಅಂಟಿಕೊಂಡ ಹುಳುಗಳು ನೀರಿಗೆ ಬಿದ್ದು ಸಾಯುತ್ತವೆ ಎನ್ನುವ ಸ್ವಅನುಭವವನ್ನು ಚಿತ್ರದುರ್ಗದ ದ್ಯಾವಹಳ್ಳಿ ಭೂತಲಿಂಗಪ್ಪ ಹಂಚಿಕೊಂಡಿರುತ್ತಾರೆ.

ಭತ್ತಕ್ಕೆ ಮಜ್ಜಿಗೆ !

ಭತ್ತದ ಪೈರಿಗೆ ಗರಿ ಸುತ್ತುವ (Leaf roller), ಹುಳುವಿನ ತೊಂದರೆ ಕಾಣಿಸಿದಾಗ ಮಜ್ಜಿಗೆಯನ್ನು ಗದ್ದೆಗೆ ನೀರು ಹೋಗುವ ಕಾಲುವೆಯಲ್ಲಿ ಬೆಳಗಿನ ವೇಳೆ ಸಣ್ಣಗೆ ಬಿಡಬೇಕು. ಎಕರೆಗೆ ಒಂದು ಚೊಂಬು ಮಜ್ಜಿಗೆ ಸಾಕು. ಇದು ಪೈರಿಗೆ ಬೀಳುವ ಎಲ್ಲ ತರದ ಕೀಟಗಳನ್ನು ನಿವಾರಿಸುತ್ತದೆ ಎಂಬ ನಂಬಿಕೆ ಆಂಧ್ರಪ್ರದೇಶದ ರಂಗಾರೆಡ್ಡಿ ಜಿಲ್ಲೆಯ ರೈತರದು. ಭತ್ತದ ತೆನೆ ಬೆಳ್ಳಗಾಗಿ, ಜೊಳ್ಳು ಬಿದ್ದರೂ ಕೂಡ ಇದೇ ವಿಧಾನ ಅನುಸರಿಸಬಹುದು.

ತೆನೆತಿಗಣೆ ನಿಯಂತ್ರಣಕ್ಕೆ

ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯಲ್ಲಿ ರೈತರು ಮುಂಡಿಗೆ ಚೆಟ್ಟನ್ನು ಕೋಲಿಗೆ ಕಟ್ಟುತ್ತಾರೆ. ನಂತರ ಕೋಲನ್ನು ಭತ್ತದ ಗದ್ದೆಯಲ್ಲಿ ಹುಗಿಯುತ್ತಾರೆ. ಇದರಿಂದ ತೆನೆತಿಗಣೆಗಳು ದೂರ ಹೋಗುವುದಂತೆ.

ಕಂಬಳಿಹುಳು ಹತೋಟಿಗೆ

ಬೂದಿಯನ್ನು ಭತ್ತದ ಗಿಡಗಳ ಮೇಲೆ ಎರಚುವುದರಿಂದ ಹತೋಟಿ ಸಾಧ್ಯ. ಜೊತೆಗೆ ಬೇವಿನ ಎಲೆ, ಸಣ್ಣಸಣ್ಣ ಟೊಂಗೆಗಳನ್ನು ಗದ್ದೆಯಲ್ಲಿ ಅಲ್ಲಲ್ಲಿ ಹರಡುವುದರಿಂದಲೂ ಕಂಬಳಿಹುಳು ನಿಯಂತ್ರಣ ಸಾಧ್ಯವೆಂಬುದು ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯ ಸಂತಾಪುರಂನ ತವಸಿನಾಥನ್‌ರ ಅನುಭವ.

ಗಿಡಹೇನು ಹತೋಟಿಗೆ

ಗಿಡಹೇನು (Aphids) ಹತೋಟಿಗೆ ಇಂಗನ್ನು ಗಂಜಲದಲ್ಲಿ ಬೆರೆಸಿ ಸಿಂಪಡಿಸಬೇಕು. ಬೇರೊಂದು ಮಾರ್ಗೋಪಾಯವೆಂದರೆ ಬೆಳ್ಳುಳ್ಳಿ, ಹಸಿ ಮೆಣಸಿನಕಾಯಿ ಮತ್ತು ಇಂಗನ್ನು ನೀರಿನಲ್ಲಿ ಬೆರೆಸಿ ಭತ್ತದ ಗಿಡಗಳ ಮೇಲೆ ಸಿಂಪಡಿಸಿದರೆ ಹೇನನ್ನು ದೂರವಿಡಬಹುದು.

ಕಂದು ಜಿಗಿ ಹುಳುಗಳನ್ನು ನಿಯಂತ್ರಿಸಲು ಹಾಸನದ ಬಸವರಾಜು ಸಂತೇಶಿವರರ ಕ್ರಮಗಳು

- ಒಂದನೇ ಕ್ರಮ : ಕಡಿಮೆ ಪ್ರದೇಶದಲ್ಲಿ ಬೆಳೆ ಬೆಳೆದ ರೈತರು ರಾತ್ರಿ ವೇಳೆ ಎರಡು ಬ್ಯಾಟರಿಗಳನ್ನು V ಆಕಾರಕ್ಕೆ ಹಿಡಿದು ಗದ್ದೆ ಮಧ್ಯಭಾಗದಲ್ಲಿ ಬೆಳಕು ಚೆಲ್ಲುತ್ತಾ ನಡೆದರೆ

"ಕಂದು ಜಿಗಿಹುಳು" ಮುಂದೆ ಜಿಗಿದು ಹೋಗಲು ಪ್ರಾರಂಭಿಸುತ್ತವೆ. ಇದೇ ರೀತಿ ಕೊನೆಯವರೆಗೆ ಬೆಳಕು ಚೆಲ್ಲುತ್ತಾ ಹೋದಂತೆ ಗದ್ದೆ ಬಿಟ್ಟು ಹೊರ ಹೋಗುತ್ತವೆ. ಮತ್ತೆ ಹಿಂದಿರುಗಿ ಬರುವುದಿಲ್ಲ. ಈ ರೀತಿ ಎರಡು ದಿನ ಮಾಡಿದರೆ ಇವುಗಳ ಹತೋಟಿ ಸಾಧ್ಯ.

• ಎರಡನೇ ಕ್ರಮ : ಮೇಲಿನ ಕ್ರಮ ಕೈಗೊಳ್ಳಲಾರದವರು ಹಗಲಿನಲ್ಲಿ ೬-೮ ಮಾರು ಉದ್ದದ ಜವಣಿಗೆ (ದೋಟಿ)ಯನ್ನು ಮಧ್ಯ ಭಾಗಕ್ಕೆ ಹಿಡಿದು ಗದ್ದೆ ಮಧ್ಯ ಭಾಗದಲ್ಲಿ ನಡೆದರೆ ಜವಣಿಗೆಯ ಎರಡು ಪಾರ್ಶ್ವಗಳೂ ಭತ್ತದ ಗದ್ದೆ ಕೊನೆ ಭಾಗದವರೆಗೂ ಇರಬೇಕು. ಜವಣಿಗೆ ಭತ್ತದ ಬೆಳೆ ಮೇಲೆ ತಾಗುವಂತೆ ಹಿಡಿದು ನಡೆದರೆ ಕಂದು ಹುಳುಗಳು ಮುಂದೆ ಮುಂದೆ ಜಿಗಿದು ಹೋಗಲು ಪ್ರಾರಂಭಿಸುತ್ತವೆ. ಕಂದು ಜಿಗಿ ಹುಳುಗಳನ್ನು ಕೊನೆ ಭಾಗಕ್ಕೆ ಬೆದರಿಸಿಕೊಂಡು ಸಂಗ್ರಹಿಸಿ, ಗದ್ದೆ ಹೊರಭಾಗದಲ್ಲಿ ಬೆಂಕಿ ಹಾಕಿ ಒಮ್ಮೆಲೇ ಓಡಿಸಿದರೆ, ಬೆಂಕಿಗೆ ಬಿದ್ದು ಸಾಯುತ್ತವೆ. ಈ ರೀತಿ ನಾಶಪಡಿಸುವುದರಿಂದ ಔಷಧಿ ಸಿಂಪಡಣೆ ಅವಶ್ಯಕತೆ ಇರುವುದಿಲ್ಲ. ಆಹಾರಕ್ಕೆ ವಿಷ ಸೇರದಂತೆ, ಪರಿಸರವನ್ನು ಕಾಪಾಡಬಹುದು.

• ಮೂರನೇ ಕ್ರಮ : ಗದ್ದೆ ಬಯಲುಗಳಲ್ಲಿ ಮೇಲೆ ತಿಳಿಸಿರುವ ಎರಡನೇ ಕ್ರಮದ ಪ್ರಕಾರ ಜವಣಿಗೆ (ದೋಟಿ) ಸಹಾಯದಿಂದ ಗದ್ದೆ ಬೆಳೆಯ ಮೇಲೆ ತಾಗುವಂತೆ ಹಿಡಿದು ಹುಳುಗಳನ್ನು ಓಡಿಸಿ, ನಂತರ ಗದ್ದೆ ಹೊರಭಾಗದಲ್ಲಿ ಸುತ್ತಲೂ ಒಂದು ಮೀಟರ್ ಔಷಧಿ ಸಿಂಪಡಿಸಿ, ಜಿಗಿ ಹುಳು ಮತ್ತೆ ಹಿಂದಕ್ಕೆ ಬರುವುದಿಲ್ಲ. ಈ ಕ್ರಮದಿಂದ ಔಷಧಿ ಸಿಂಪಡಣೆ ಕಡಿಮೆಯಾಗುವುದಲ್ಲದೆ ಆಹಾರಕ್ಕೆ ವಿಷ ಸೇರುವುದನ್ನು ನಿಯಂತ್ರಿಸಬಹುದು.

ಬೆಂಕಿ ರೋಗಕ್ಕೆ

ನೂರು ಗ್ರಾಂ. ಸುವರ್ಣ ಗೆಡ್ಡೆಯನ್ನು ಸಣ್ಣಗೆ ತುಂಡು ಮಾಡಿ ಒಂದು ಲೀಟರ್ ಕುದಿಯುವ ನೀರಿನಲ್ಲಿ ಹಾಕಿ ಆರರಿಂದ ಎಂಟು ಗಂಟೆಗಳವರೆಗೆ ಹಾಗೆಯೇ ಬಿಡಿ. ನಂತರ ಸೋಸಿರಿ. ತಿಳಿದ್ರಾವಣಕ್ಕೆ ಹತ್ತು ಲೀಟರ್ ನೀರು ಬೆರೆಸಿ ಗದ್ದೆಗೆ ಸಿಂಪಡಿಸಿ ಎನ್ನುತ್ತಿದ್ದರು ನಮ್ಮ ಕೃಷಿಋಷಿ ದಿ. ತೀರ್ಥಹಳ್ಳಿ ಶ್ರೀ ಪುರುಷೋತ್ತಮ ರಾಯರು.

ಕಾಂಡ ಕೊರಕ (Scirphophaga incestulas) ನಿಯಂತ್ರಣಕ್ಕೆ

ಗೇರು ಮರದ ಟೊಂಗೆಗಳನ್ನು ಭತ್ತದ ಗದ್ದೆಯಲ್ಲಿ ಅಲ್ಲಲ್ಲಿ ಹರಡುವುದರಿಂದ ಕಾಂಡ ಕೊರಕದ ಹತೋಟಿ ಸಾಧ್ಯ. ಹಾಗೆಯೇ ಸೆಣಬು (Corchorus capsularis)ನ ಬೀಜವನ್ನು ಒಂದು ರಾತ್ರಿ ನೀರಿನಲ್ಲಿ ನೆನೆಸಿ ನೀರಿನೊಂದಿಗೆ ಸಮಪ್ರಮಾಣದಲ್ಲಿ ಬೆರೆಸಿ ಸಿಂಪಡಿಸಲೂ ಬಹುದು.

ತೆನೆ ತಿಗಣೆ ನಿಯಂತ್ರಣಕ್ಕೆ

ಗ್ಲಿರಿಸೀಡಿಯ ಗೊಬ್ಬರದ ಗಿಡದ ಟೊಂಗೆಗಳನ್ನು ಭತ್ತದ ಗದ್ದೆಯಲ್ಲಿ ಹರಡುವುದರಿಂದ ತೆನೆ ತಿಗಣೆ ಹತೋಟಿ ಸಾಧ್ಯ.

ಸೈನಿಕ ಹುಳು ನಿಯಂತ್ರಣಕ್ಕೆ

ಭತ್ತದ ಗದ್ದೆಯಲ್ಲಿ ಎಕ್ಕದ ಎಲೆಗಳನ್ನು ಹರಡುವುದರಿಂದ ಸೈನಿಕ ಹುಳುವಿನ ಹತೋಟಿ ಸಾಧ್ಯ. ಹಾಗೆಯೇ ರಾಂಚಿ ಜಿಲ್ಲೆಯ ಅನೇಕ ರೈತರು ಬೂದಿಯನ್ನು ಸೀಮೆಎಣ್ಣೆಯಲ್ಲಿ ಮಿಶ್ರಮಾಡಿ ನೀರಿನೊಂದಿಗೆ ಬೆರೆಸುತ್ತಾರೆ. ಇದರಿಂದ ಅನೇಕ ಹುಳುಗಳ ಹತೋಟಿ ಸಾಧ್ಯ ಎಂಬುದವರ ಅಭಿಪ್ರಾಯ.

ಏಡಿ ಕಾಟಕ್ಕೆ

ಮುತ್ತುಗದ ಹೂಗಳನ್ನು ಏಡಿಯ ಬಿಲದ ಬಳಿ ಇರಿಸುವುದರಿಂದ ಉಪದ್ರವ ಕಡಿಮೆ.

ಐದಾರು ಹುಣಿಸೆ ಹಣ್ಣಿನ ಬೀಜಗಳನ್ನು ಒಂದು ರಾತ್ರಿ ನೆನೆಸಿ ಮರುದಿನ ಏಡಿಯ ಬಿಲದ ಬಳಿ ಇರಿಸಿ ನಿಯಂತ್ರಿಸಬಹುದು.

ಬಿಸಿಲು ಕಾಯಿಸುವುದು

ಭತ್ತ ನಾಟಿ ಮಾಡಿದ ೨-೩ ತಿಂಗಳ ನಂತರ ೧೫-೨೦ ದಿನಕ್ಕೊಮ್ಮೆ ನೀರನ್ನು ಸಂಪೂರ್ಣ ವಾಗಿ ಗದ್ದೆಯಿಂದ ಹೊರಹಾಕಿ ೨-೩ ದಿನ ನೇರ ಬಿಸಿಲು ಬಿದ್ದರೆ ಕೀಟ-ರೋಗದ ಬಾಧೆ ಕಡಿಮೆಯಾಗುತ್ತದೆ ಎಂಬುದು ಉತ್ತರ ಕನ್ನಡದ ಮಂಚಿಕೆರೆ ಪ್ರಾಂತ್ಯದ ರೈತರ ಅನುಭವ.

ಭತ್ತದ ಎಲೆ ಸುರುಳಿ ರೋಗಕ್ಕೆ

ತಾಮ್ರದ ಪಾತ್ರೆಯಲ್ಲಿ ಹತ್ತು ಲೀಟರ್ ನೀರನ್ನು ಹಾಕಿ ಕುದಿಸುತ್ತಾ ಅದಕ್ಕೆ ಒಂದು ಕೆ.ಜಿ. ಕತ್ತಾಳೆ ಗಿಡದ ಎಲೆಗಳನ್ನು ಹಾಕಿ ಒಂದು ದಿನ ಹಾಗೇ ಬಿಟ್ಟು ಅನಂತರ ಸೋಸಿ ತಿಳಿನೀರನ್ನು ಭತ್ತದ ಗಿಡಗಳಿಗೆ ಸಿಂಪಡಿಸುವುದು.

ಹಾಲುಗಳ್ಳಿ ಪುಡಿ

ಇದೇ ರೀತಿ ಮಂಡುಗಳ್ಳಿ ಅಥವಾ ಮೂರು ಮುಖದ ಕಳ್ಳಿ ಅಥವಾ ಹಾಲುಗಳ್ಳಿ (Cactus)ಯ ಬೀಜ ಅಥವಾ ಟೊಂಗೆಯನ್ನು ಒಣಗಿಸಿ, ಪುಡಿ ಮಾಡಿ, ಕೆಂಡದ ಮೇಲೆ ಹಾಕಲು ಬರುವ ಹೊಗೆಯನ್ನು ರೋಗ ಬಂದಿರುವ ಭತ್ತದ ಗದ್ದೆ ಅಥವಾ ರಾಗಿ ಹೊಲದ ಮೇಲೆ ಹಾಯಿಸಲು, ಭತ್ತ ಅಥವಾ ರಾಗಿಗೆ ಬರುವ ಹಲವಾರು ರೋಗಗಳನ್ನು ತಡೆಗಟ್ಟ ಬಹುದು. ಇವೆರಡು ಚಳ್ಳಕೆರೆ ತಾಲ್ಲೂಕು ಬೆಳಗೆರೆಯ ಕೃಷ್ಣಶಾಸ್ತ್ರಿಗಳ ಅನುಭವ.

ಭತ್ತದ ಗದ್ದೆಯಲ್ಲಿ ಏಡಿ ನಿಯಂತ್ರಣ

ಕೊಪ್ಪ ತಾಲೂಕಿನ ಶಾಂತಿ ಗ್ರಾಮದ ಹೆಚ್.ವಿ. ಕೃಷ್ಣಯ್ಯನವರು ತಮ್ಮ ಭತ್ತದ ಗದ್ದೆಯಲ್ಲಿ ಏಡಿಗಳ ಹಾವಳಿಯಿಂದ ಕುಳಿಗಳಾಗಿ ನೀರು ಇಂಗಿ ಹೋಗದಂತೆ ಮಾಡಲು ಗದ್ದೆಯಲ್ಲೇ ಬೆಳೆಯುವ ಪಾಚಿಯನ್ನು ತೆಗೆದು ಕುಳಿಗಳನ್ನು ಮುಚ್ಚುವುದರ ಮೂಲಕ ಏಡಿ ಹಾವಳಿಯನ್ನು ನಿಯಂತ್ರಿಸುತ್ತಿದ್ದಾರೆ. ಇವರ ಪ್ರಕಾರ ಪಾಚಿಯ ವಾಸನೆಗೆ ಏಡಿಗಳು ದೂರ ಸರಿಯುತ್ತವೆ ಹಾಗೂ ಒಮ್ಮೆ ಕುಳಿ ಮಾಡಿದ ಏಡಿಯು ಕುಳಿ ಮುಚ್ಚಿ ಹೋದ

ಬಳಿಕ ಹತ್ತಿರದ ಇನ್ನೊಂದು ಕುಳಿಯ ಮುಖೇನ ಹೊರಬರುವುದು. ಆಗ ಹೊರಬಂದ ಕುಳಿಯನ್ನೂ ಕೂಡ ಪಾಚಿಯ ಸಹಾಯದಿಂದ ಮುಚ್ಚುವುದು.

ಭತ್ತದ ಹುಲ್ಲಿನ ರಾಶಿಯ ನಡುವೆ ಸೊಪ್ಪು

ಕೊಯ್ದು ತಂದ ಭತ್ತ ಸಂಗ್ರಹಣೆ ಮಾಡುವಾಗ ಭತ್ತದ ಗಿಡದಿಂದ ಭತ್ತ ತೆಗೆಯುವ ಮೊದಲು ಹುಲ್ಲು-ಕಾಳು ಒಟ್ಟಾಗಿ ಅಂದರೆ ಇಡೀ ಗಿಡವನ್ನೇ ರಾಶಿ ಹಾಕಿ ಪೇರಿಸಿಡುವುದು ವಾಡಿಕೆ. ಹೀಗೆ ರಾಶಿ ಹಾಕುವಾಗ ರಾಶಿಯ ಮಧ್ಯೆ ಬೇವಿನ ಸೊಪ್ಪು, ಲಕ್ಕಿ ಸೊಪ್ಪು, ಎಳೆಯ ಮಾವಿನ ಎಲೆಗಳು ಇವನ್ನು ಹರಡುವುದರಿಂದ ಹುಳುಗಳ ಕಾಟವಿಲ್ಲದೆ ಹುಲ್ಲು, ಕಾಳು ಎರಡೂ ಸುರಕ್ಷಿತವಾಗಿರುತ್ತವೆ ಎನ್ನುವುದು ಅಸ್ಸಾಂನ ಜನರ ಅನುಭವ.

ಭತ್ತಕ್ಕೆ ಹೊಗೆಸೊಪ್ಪಿನ ರಕ್ಷೆ

ಭತ್ತ ಸಂಗ್ರಹಣೆಗೆ ಕಣಜ ಮಾಡುವ ಜಾಗದಲ್ಲಿ ಗೋಣಿಚೀಲ ಹಾಸುತ್ತಾರಂತೆ ಅಸ್ಸಾಂನ ಜನ. ಅದರಲ್ಲೇನು ವಿಶೇಷ ಎನ್ನಬೇಡಿ. ಇದು ಬರಿಯ ಗೋಣಿಚೀಲಗಳಲ್ಲ. ಹೊಗೆಸೊಪ್ಪಿನ ರಸತೆಗೆದು ನೀರಿನಲ್ಲಿ ಬೆರೆಸಿದ ದ್ರಾವಣದಲ್ಲಿ ಗೋಣಿ ಚೀಲಗಳನ್ನು ಹಾಕಿ ಕುದಿಸುತ್ತಾರಂತೆ. ಹೀಗೆ ಚೆನ್ನಾಗಿ ಕುದಿದ ನಂತರ ಗೋಣಿಚೀಲಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸುತ್ತಾರೆ. ಈ ಗೋಣಿಚೀಲಗಳನ್ನು ನೆಲದಲ್ಲಿ ಹಾಸಿ ಅದರ ಮೇಲೆ ಭತ್ತ ಹರಡುತ್ತಾರೆ. ಈ ರೀತಿ ಒಂದು ಪದರ ಭತ್ತದ ರಾಶಿ ಹರಡಿದ ಮೇಲೆ ಪುನಃ ಅದರ ಮೇಲೆ ಗೋಣಿಚೀಲ ಹಾಕುತ್ತಾರಂತೆ. ಹೀಗೆ ಪದರಪದರವಾಗಿ ಭತ್ತದ ಮೇಲೆ ವಿಶೇಷವಾಗಿ ಸಿದ್ಧಗೊಳಿಸಿದ ಗೋಣಿಚೀಲವನ್ನು ಹರಡಿ ಹುಳುಗಳ ಕಾಟವಿಲ್ಲದೆ ಸುರಕ್ಷಿತವಾಗಿ ಭತ್ತ ಸಂಗ್ರಹಿಸ ಬಹುದಂತೆ.

ಭತ್ತಕ್ಕೆ ಪುದೀನ

ಪುದೀನಾ(Mentha satva)ದ ದ್ರಾವಣದಲ್ಲಿ ಭತ್ತದ ಬೀಜಗಳನ್ನು ೨೪ ಗಂಟೆಗಳ ಕಾಲ ನೆನೆಸಿ ಬಿತ್ತನೆ ಮಾಡುವುದರಿಂದ, ಭತ್ತದ ಬೆಳೆಗೆ ಬೀಳುವ ಕೆಂಪು ಚುಕ್ಕೆ ರೋಗ ನಿಯಂತ್ರಣದಲ್ಲಿರುವುದೇ ಅಲ್ಲದೆ, ಗಿಡಗಳು ಕೂಡ ಹೆಚ್ಚು ಸೊಂಪಾಗಿ, ಸತ್ವಯುತವಾಗಿ ಬೆಳೆಯುವುದಂತೆ.

ಬಿತ್ತನೆ ಬೀಜದ ಭತ್ತ-ಬೆತ್ತದ ಬುಟ್ಟಿಯಲ್ಲಿ

ಬೀಜಕ್ಕೆಂದು ಆಯ್ದು ಸಂಗ್ರಹಿಸಿದ ಕಾಳುಗಳನ್ನು ಸಂಗ್ರಹಿಸುವ ವಿಧಾನವೇ ಬೇರೆ. ಬೆತ್ತದ ಬುಟ್ಟಿ (ಅಸ್ಸಾಂನ ಜನರು ಟೂಮ್ ಎಂದು ಕರೆಯುವ ಒಂದು ರೀತಿಯ ಬುಟ್ಟಿ)ಯೊಳಗೆ ಭತ್ತದ ಹುಲ್ಲನ್ನು ಸಮನಾಗಿ ಹರಡಿ, ಅದರ ಮೇಲೆ ಬೀಜಕ್ಕೆಂದು ಸಂಗ್ರಹಿಸಿದ ಭತ್ತದ ಕಾಳುಗಳನ್ನು ಹರಡುತ್ತಾರಂತೆ. ಅನಂತರ ಬೀಜದ ಕಾಳುಗಳ ಮೇಲೆ ಪುನಃ ಭತ್ತದ ಹುಲ್ಲನ್ನು ಸಮನಾಗಿ ಹರಡಿ ಬಿಗಿಯಾಗಿ ಕಟ್ಟುತ್ತಾರೆ. ಹೀಗೆ ಸಿದ್ಧಗೊಳಿಸಿದ

ಬುಟ್ಟಿಯನ್ನು ಕೀಟ, ಇಲಿ-ಹೆಗ್ಗಣಗಳ ಬಾಯಿಗೆ ಸಿಗದಂತೆ ಎಚ್ಚರಿಕೆಯಿಂದ ಮನೆಯ ಮಾಡಿನಲ್ಲಿ ನೇತು ಹಾಕುತ್ತಾರೆ.

ಭತ್ತದ ಹೊಟ್ಟನ್ನು ರಾಶಿ ಮಾಡಿ ಅದರ ಮೇಲೆ ಉರಿಯುತ್ತಿರುವ ಸೆಗಣಿಯ ಬೆರಣಿಯನ್ನಿಡಬೇಕು. ಭತ್ತದ ಹೊಟ್ಟಿನ ರಾಶಿ ಹಾಗೇ ನಿಧಾನವಾಗಿ ಉರಿದು ಭಸ್ಮ ವಾಗುತ್ತದೆ. ಹೀಗೆ ಹೊತ್ತಿ ಉರಿದ ಹೊಟ್ಟಿನ ರಾಶಿ ತಣ್ಣಗಾಗಲು ಬಿಡಬೇಕು. ಅನಂತರ ಮೇಲ್ಭಾಗದ ಕಪ್ಪು ಬೂದಿಯನ್ನು ಬಿಸಾಕಿ, ಮಧ್ಯದ ಬಿಳಿ ಬೂದಿಯನ್ನು ಸೂರ್ಯನ ಬಿಸಿಲಿನಲ್ಲಿ ಒಣಗಿಸಬೇಕು. ಹೀಗೆ ಒಣಗಿದ ಬೂದಿಯನ್ನು ಬೀಜ ಅಥವಾ ಧಾನ್ಯದೊಂದಿಗೆ ಬೆರೆಸಿ ಶೇಖರಿಸಿದರೆ, ಕೀಟಗಳ ಕಾಟ ಕಡಿಮೆಯಾಗುವುದಂತೆ.

ಜೋಳದ ಬೀಜಗಳನ್ನು ಹಿಡಿಯುವ ರೀತಿ

ಜೋಳದ ತೆನೆಗಳನ್ನು ರಾಶಿ ಮಾಡಲು ತೆಗೆದ ತೆನೆಗಳಲ್ಲಿ ಯಾವ ತೆನೆಗಳ ಉಣಚಿಯು ಸಂಪೂರ್ಣವಾಗಿ ಬಿಳುಪಾಗಿರುತ್ತದೆಯೋ ಅಂಥ ತೆನೆಗಳು ರೋಗ ರುಜಿನಗಳಿಂದ ಮುಕ್ತವಾಗಿರುತ್ತವೆ. ಅಂಥ ತೆನೆಗಳಲ್ಲಿ ಸರಿಯಾಗಿ ಬಲಿತು ಮಾಗಿದ ತೆನೆಗಳನ್ನು ಸರಿಯಾಗಿ ಮೂರು ಭಾಗ ಮಾಡಿ ನಡುವಿನ ಭಾಗವನ್ನು ಮಾತ್ರ ಬೀಜ ತೆಗೆಯಲು ಉಪಯೋಗಿಸಬೇಕು. ತೆನೆಯ ತುದಿಯ ಕಡೆಗಿದ್ದ ಭಾಗದಲ್ಲಿಯ ಬೀಜದ ಕಾಳುಗಳಲ್ಲಿ ಬಿಸಿಲಿನ ತಾಪದಿಂದ ಮೊಳಕೆಯೊಡೆಯುವ ಪ್ರಮಾಣವು ಕಡಿಮೆಯಾಗುವ ಸಂಭವವಿರುವುದರಿಂದ ಮತ್ತು ತೆನೆಯ ಹಿಂದಿನ ಭಾಗದಲ್ಲಿಯ ಬೀಜಗಳು ಸಂಪೂರ್ಣ ಬಲಿಯದಿರುವ ಸಂಭವವಿರುತ್ತದೆ.

ಜೋಳದ ಹೊಲದಲ್ಲಿ 'ಬಿಳಿ ಕಸ' (Striga asiatica) ಹತೋಟಿ

ಜೋಳದ ಬೇರಿನೊಂದಿಗೆ ಸಖ್ಯ ಬೆಳೆಸಿ, ಜೋಳ ಹೀರುವ ಆಹಾರವನ್ನೇ ಕದ್ದು ಬದುಕುವ ಪರಾವಲಂಬಿ ಕಳೆ, ಬಿಳಿಕಸ ಬರಬರುತ್ತ ಜೋಳದ ಬೆಳವಣಿಗೆಗೆ ಕುಂಠಿತ ತರುತ್ತದೆ. ಉಪ್ಪು ತಿಂದ ಮನೆಗೆ ದ್ರೋಹ ಬಗೆಯಬಾರದು ಎಂಬುದು ಬಿಳಿಕಸಕ್ಕೆ ಗೊತ್ತಿಲ್ಲವಲ್ಲ!

ಯಳವತ್ತಿಯ ಕೃಷಿಕ ಶ್ರೀ ಭರಮಗೌಡ್ರ ಜೋಳದ ಜೊತೆ ಕೊತ್ತಂಬರಿ ಬೆರೆಸಿ ಬಿತ್ತನೆ ಮಾಡುತ್ತಾರೆ. ಬಿಳಿ ಕಸದ ಕುತ್ತಿಗೆ ಹಿಸುಕುವ ಕೊತ್ತಂಬರಿ, ಮನೆ ಬಳಕೆಗೂ ಉಪಯುಕ್ತ ಸಂಬಾರ. ಸದ್ದಿಲ್ಲದೆ ಬಿಳಿಕಸವನ್ನು ಬೆಳೆಯಗೊಡದ ಕೊತ್ತಂಬರಿ ಈಗ ಜೋಳದ ಆತ್ಮೀಯ.

ಮೂರುವರೆ ಕೆ.ಜಿ. ಜೋಳಕ್ಕೆ ೨೦೦ ಗ್ರಾಂ ಕೊತ್ತಂಬರಿ ಬೀಜ ಬೆರೆಸಿ ಬಿತ್ತನೆ ಮಾಡುವ ಉಪಾಯ ದೊರೆತದ್ದು ಗೌಡರಿಗೆ ಅವರ ತಂದೆಯಿಂದ.

ಜೋಳದಲ್ಲಿ ಕಾಡಿಗೆ ರೋಗದ ನಿಯಂತ್ರಣ

ಕಾಡಿಗೆ ರೋಗ ಉತ್ತರ ಕರ್ನಾಟಕದಲ್ಲಿ ಜೋಳ ಬೆಳೆಯುವ ರೈತರನ್ನು ಕಾಡುವ ಸಮಸ್ಯೆ. ಜೋಳದ ಕಾಳಿಗೆ ಕಾಡಿಗೆ ತಾಗಿದರೆ ಮುಗಿಯಿತು, ರೈತರಿಗೆ ಕೈಗೆ ಬಂದ ತುತ್ತು ಬಾಯಿಗಿಲ್ಲ.

ಶಿಲೀಂಧ್ರ ಸ್ಪೆಸಲೊತೆಕ ಸೋರ್ಗಿ (Sphacelotheca sorghi)ದಿಂದ ಹರಡುವ ಕಾಡಿಗೆ ರೋಗವನ್ನು ಹೊಲದಲ್ಲಿ ಕಾಣಿಸಿಕೊಂಡ ನಂತರ ಹತೋಟಿ ಮಾಡುವುದು ಸುಲಭದ ಮಾತಲ್ಲ. ನವಲಗುಂದದ ರೈತ ಭೀಮರೆಡ್ಡಿ ಶಿಲೀಂಧ್ರದ ಬೇಕು-ಬೇಡಗಳನ್ನು ಅರಿತವರು. ಶಿಲೀಂಧ್ರಕ್ಕೆ ಯಾವುದು ಪೂರಕ ಯಾವುದು ಮಾರಕ ಎಂಬ ಮಾಹಿತಿ ಅವರ ನಾಲಿಗೆಯಲ್ಲೇ ಇದೆ.

'ಎತ್ತಿನ ಉಚ್ಚಿ ಐತಲ್ರಿ, ಅದ್ರಾಗೆ ಬೀಜ ಎರಡು ನಿಮಿಷ ಅದ್ದಿ ತೆಗಿಬೇಕ್ರಿ, ಕೂಡಲೆ ಗಾಳಿಯಲ್ಲಿ ಬೀಜ ಆರುವಂತೆ ಹರಡ್ರಿ. ನಂತರ ಬಿತ್ರಿ ಸರ್ರ. ಅದಕ್ಕೆ ರೋಗ ಬಂದ್ರೆ ಹೇಳ್ರಿ' ಎನ್ನುವ ರೆಡ್ಡಿ ರಾಸಾಯನಿಕ ಔಷಧಗಳನ್ನು ಕಾಡಿಗೆ ರೋಗಕ್ಕೆಂದು ಬಳಸಿಯೇ ಗೊತ್ತಿಲ್ಲ ಅನ್ನುತ್ತಾರೆ.

ತೆನೆ ತಿಗಣೆ ನಿಯಂತ್ರಣ

ಎರಡು ಕಿ.ಗ್ರಾಂ. ಲೋಳೆಸರ (Aloe vera) ಮತ್ತು ಒಂದು ಕಿ.ಗ್ರಾಂ. ಬೆಳ್ಳುಳ್ಳಿಯನ್ನು ಸ್ವಲ್ಪ ನೀರಿನಲ್ಲಿ ಚೆನ್ನಾಗಿ ಅರೆದು ಪೇಸ್ಟ್ ರೀತಿಯಲ್ಲಿ ಮಾಡಿಕೊಂಡು ಮಿಶ್ರಣವನ್ನು ಭತ್ತ ಹಾಗೂ ಜೋಳದ ತೆನೆಗೆ ಬೀಳುವ ತಿಗಣೆಗಳ ನಿಯಂತ್ರಣಕ್ಕೂ ಬಳಸಬಹುದೆಂದು ಅಂತೋನಿಸ್ವಾಮಿ ಹೇಳುತ್ತಾರೆ. ಈ ಮಿಶ್ರಣಕ್ಕೆ, ೧೦೦ ಲೀಟರ್ ನೀರಿನಲ್ಲಿ ಒಂದು ಕಿ.ಗ್ರಾಂ ಮುತ್ತನಾರಿಯಾಲಿ (Coleus aromaticus) ಮತ್ತು ಒಂದು ಕಿ.ಗ್ರಾಂ ತುಳಸಿಯನ್ನು ಸೇರಿಸಿ, ಕೀಟ ಬಾಧೆಯಿರುವ ಬೆಳೆಗಳಿಗೆ ಸಿಂಪಡಿಸಿ ತೆನೆಗಳಲ್ಲಿನ ಕಾಳುಗಳನ್ನು ರಕ್ಷಿಸಬಹು ದೆಂದು ಇವರು ಹೇಳುತ್ತಾರೆ.

ಸುವರ್ಣಗೆಡ್ಡೆ ಕೇವಲ ತರಕಾರಿ ಮಾತ್ರವಲ್ಲ!

ತೀರ್ಥಹಳ್ಳಿಯ ಸಾವಯವ ಕೃಷಿಕ ದಿ. ಪುರುಷೋತ್ತಮ ರಾಯರು ಸ್ವಚಿಂತನೆಯಲ್ಲಿ ಭತ್ತದ ಬೆಂಕಿರೋಗಕ್ಕೆ ಜಾರಿಗೆ ತಂದ ಪ್ರಯೋಗ ಈಗ ಎಲ್ಲರನ್ನೂ ಆಕರ್ಷಿಸಿದೆ. ರಾಯರು ತಯಾರಿಸಿದ ದ್ರಾವಣ ಮತ್ತು ಉಪಯೋಗವನ್ನು ಅವರ ಮಾತಿನಲ್ಲೇ ಓದಿ. "೧೦೦ ಗ್ರಾಂ. ಸುವರ್ಣಗೆಡ್ಡೆಯನ್ನು ಸಣ್ಣತುಂಡು ಮಾಡಿ ಒಂದು ಪಾತ್ರೆಯಲ್ಲಿ ಹಾಕಿ. ಪಾತ್ರೆಗೆ ಒಂದು ಲೀಟರ್ ಕುದಿಯುವ ನೀರನ್ನು ಸುರಿದು ೬-೮ ತಾಸು ಹಾಗೆ ಬಿಡಿ. ಮರುದಿನ ಪಾತ್ರೆಯಲ್ಲಿರುವ ದ್ರಾವಣವನ್ನು ಸೋಸಿ ೧೦ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಿ ಬನ್ನಿ. ಹುಬ್ಬೇರಿಸಬೇಡಿ. ಈ ಪದ್ಧತಿಯಿಂದಾಗುವ ಹತೋಟಿಯ ಶೇಕಡಾ ಪ್ರಮಾಣ ಶತಕ ಬಾರಿಸಲೂಬಹುದು."!

ಆಡಿನ ಕೂದಲಿನಿಂದ ಇಲಿ ನಿಯಂತ್ರಣ

ಜೋಳ, ಭತ್ತ, ಗೋಧಿ ಹಾಗೂ ಇನ್ನಿತರ ನೀರಾವರಿ ಆಧಾರಿತ ಕೃಷಿ ಭೂಮಿಯಲ್ಲಿ ಇಲಿಗಳಿಂದ ಆಗುವ ಹಾನಿಯನ್ನು ನಿಯಂತ್ರಿಸಲು ಗುಜರಾತ್ ರಾಜ್ಯದ ರಾಜ್‌ಕೋಟ್ ಜಿಲ್ಲೆಯ ಉಡಾಳಿ ಎಂಬ ಹಳ್ಳಿಯ ಚಿನ್ನುಭಾಯಿ ಜಿವಾಭಾಯಿವರು ಒಂದು ಪರಿಹಾರ

ಕಂಡುಕೊಂಡಿದ್ದಾರೆ. ಇವರು ಗೋಧಿ ಹಿಟ್ಟಿನ ಜೊತೆ ಬೆಲ್ಲ, ನೀರು ಮತ್ತು ಆಡಿನ ಕೂದಲನ್ನು ಸೇರಿಸಿ ಸಿಹಿ ಉಂಡೆಗಳನ್ನು ಮಾಡುತ್ತಾರೆ. ಈ ಉಂಡೆಗಳನ್ನು ಹೊಲದಲ್ಲಿ ಇಲಿಗಳು ಓಡಾಡುವ ಪ್ರದೇಶದಲ್ಲಿ ಇಡುತ್ತಾರೆ. ಈ ಉಂಡೆಗಳನ್ನು ತಿಂದ ಇಲಿಗಳು ಉಂಡೆಯಲ್ಲಿರುವ ಆಡಿನ ಕೂದಲಿನ ಪರಿಣಾಮದಿಂದ ಉಸಿರುಗಟ್ಟಿ ಸಾಯುತ್ತವೆಯಂತೆ.

ಭತ್ತದ ಕಂದು ಜಿಗಿ ಹುಳುವಿನ ತಡೆಗೆ

ಭತ್ತದ ಗದ್ದೆಯಲ್ಲಿ ಕಾಣಿಸಿಕೊಳ್ಳುವ ಕಂದು ಜಿಗಿ ಹುಳುವನ್ನು ನಿಯಂತ್ರಿಸಲು ಪಶ್ಚಿಮ ಬಂಗಾಳದ ರೈತರಾದ ಕುಡಿರಾಮ್ ವಿಡ್ನರವರು ಪರಿಹಾರ ಕಂಡುಕೊಂಡಿದ್ದಾರೆ. ಇವರ ಅನುಭವದ ಪ್ರಕಾರ ಕೊಡಸಿಗನ ಮರದ (Cleiptonthus collinup) ಎಲೆಗಳನ್ನು ಗದ್ದೆಯಲ್ಲಿ ನೀರು ನಿಲ್ಲಿಸದೆ (ಎಕರೆಗೆ ೯-೧೨ ಕ್ವಿಂಟಾಲ್) ಹಾಕುವುದರಿಂದ ಕಂದು ಜಿಗಿ ಹುಳುಗಳನ್ನು ನಿಯಂತ್ರಿಸಬಹುದು. ಎಲೆಗಳನ್ನು ಹಾಕುವ ಮೂರು ದಿನ ಮುಂಚಿನಿಂದ ಗದ್ದೆಗೆ ನೀರು ಬಿಡಬಾರದು. ಕೊಡಸಿಗನ ಮರದ ಕಾಡುಗಳ ಪಕ್ಕದಲ್ಲಿರುವ ಗದ್ದೆಗಳಲ್ಲಿ ಕಂದು ಜಿಗಿಹುಳದ ಬಾಧೆ ಕಡಿಮೆ ಇರುವುದರಿಂದ ಪಶ್ಚಿಮ ಬಂಗಾಳದ ಬಹಳಷ್ಟು ಜನ ರೈತರು ಈ ಪದ್ಧತಿಯನ್ನು ನಂಬಿ ಅನುಸರಿಸುತ್ತಾರೆ.

ಬಿದಿರು ಕೂಡ ಔಷದಿ !

ಕಳಲೆ ಎಂದು ಕರೆಯಲ್ಪಡುವ ಎಳೆಯ ಬಿದಿರು ಕೂಡ ಭತ್ತಕ್ಕೆ ಬೀಳುವ ಕಂದು ಜಿಗಿ ಹುಳು ನಿಯಂತ್ರಿಸುವ ಔಷಧಿಯಾಗಬಲ್ಲದು ಎನ್ನುತ್ತಾರೆ ಬಿಹಾರ ರಾಜ್ಯದ ರೈತ ಅರ್ಜುನ ಪ್ರಸಾದ್.



ಎಳೆಯ ಬಿದಿರು ಗಿಡಗಳನ್ನು ಕಿತ್ತು ಅದರ ಮೇಲ್ಪದರಗಳನ್ನು ಬಿಡಿಸಿ, ಒಳಗಿನ ನಡುಭಾಗದ ಬಿದಿರನ್ನು ಒಂದೊಂದು ಇಂಚಿನ ತುಂಡುಗಳನ್ನಾಗಿ ಕತ್ತರಿಸಿ ನೀರಿನಲ್ಲಿ ಮುಳುಗಿಸಿಡುತ್ತಾರೆ. ಬಿದಿರಿನ ತುಂಡುಗಳ ಪ್ರಮಾಣದ ಎರಡರಷ್ಟು ನೀರನ್ನು ಹಾಕಿ ಒಂದು ಮಣ್ಣಿನ ಮಡಕೆಯಲ್ಲಿ ಸುಮಾರು ೪-೫ ದಿನಗಳ ಕಾಲ ನೆನೆಸಿಡುತ್ತಾರೆ. ಅನಂತರ ಈ ನೀರನ್ನು ಬಸಿದು ಔಷಧಿಯಂತೆ ಭತ್ತದ ಗಿಡಗಳ ಮೇಲೆ ಸಿಂಪಡಿಸುತ್ತಾರೆ. ೩೦ ಎಕರೆ ಭತ್ತದ ಗದ್ದೆಗೆ ಸುಮಾರು ಹತ್ತು ಲೀಟರಿನಷ್ಟು ದ್ರಾವಣ ಬೇಕಾಗುತ್ತದೆ. ಬಿದಿರು ನೆನೆಸಿಟ್ಟ ಈ ದ್ರಾವಣ ಕಂದು ಜಿಗಿಹುಳು ನಿಯಂತ್ರಿಸುವುದರಲ್ಲಿ ಯಶಸ್ವಿ ಎನ್ನುತ್ತಾರೆ ಬಿಹಾರದ ರೈತರು.

ಬೀಜೋಪಚಾರಕ್ಕೆ ಅಶ್ವಗಂಧ ಮತ್ತು ದತೂರ

ತರೀಕೆರೆಯ ಜಿ. ಮಲ್ಲಪ್ಪ ರಾಗಿ ಮತ್ತು ಜೋಳಕ್ಕೆ ಮಾಡುವ ಬೀಜೋಪಚಾರದ ಕ್ರಮದಿಂದ ಅವರ ಹೊಲದ ಬೆಳೆ ಸಮೃದ್ಧವಾಗಿ ಬೆಳೆಯುತ್ತದೆಯಂತೆ. ಅತಿಯಾದ ಖರ್ಚು ಬೇಡದ ಸರಳ ಕ್ರಮ ಅವರದು. ೨೫೦ ಗ್ರಾಂ.ನಷ್ಟು ಅಶ್ವಗಂಧ (Withania somnifera) ಗಿಡದ ಬೇರು, ೫೦ ಗ್ರಾಂ.ನಷ್ಟು ದತೂರ(Datura metel)ದ ಎಲೆ ಎರಡನ್ನೂ ಒಟ್ಟಾಗಿ ಪುಡಿ ಮಾಡಿ ಸ್ವಲ್ಪ ನೀರಿನಲ್ಲಿ ಕರಗಿಸುತ್ತಾರೆ. ಇನ್ನಷ್ಟು ನೀರು ಸೇರಿಸಿ ತೆಳು ದ್ರಾವಣ ಮಾಡಿ ಬೀಜವನ್ನು ಅದರಲ್ಲಿ ನೆನೆಸುತ್ತಾರಂತೆ. ಚೆನ್ನಾಗಿ ನೆನೆದ ಬಿತ್ತನೆ ಬೀಜವನ್ನು ನೆರಳಿನಲ್ಲಿ ಒಣಗಿಸಿ ಬಿತ್ತನೆಗೆ ಉಪಯೋಗಿಸುತ್ತಾರೆ. ಇದು ಒಂದೆರಡು ವರ್ಷದ ಅನುಭವ ವಲ್ಲ. ಕಳೆದ ಏಳು ವರ್ಷಗಳಿಂದ ಇದೇ ರೀತಿ ಬೀಜೋಪಚಾರ ಮಾಡಿ ಸಮೃದ್ಧವಾದ ಬೆಳೆ ತೆಗೆಯುತ್ತಿದ್ದಾರಂತೆ.

ಹೇನು ಓಡಿಸಲು ಎಕ್ಕದ ಕೋಲು

ಗುಜರಾತಿನ ಆನಂದ ಜಿಲ್ಲೆಯ ವಿಜಯಾಭಾಯಿ ಕೆಂಪು ಎಕ್ಕದ(Calotropis procera) ಕೋಲುಗಳನ್ನು ಗಿಡದ ಮೇಲಿನ ಹಸಿರು ಅಥವಾ ಕಪ್ಪು ಹೇನು ಓಡಿಸಲಿಕ್ಕೆ ಉಪಯೋಗಿಸುತ್ತಾರೆ. ಅವರ ಭತ್ತದ ಗದ್ದೆಯಲ್ಲಿ ಈ ಹೇನುಗಳ ಕಾಟ ಹೆಚ್ಚಾಗಿತ್ತಂತೆ. ಒಂದು ಸಲ ಹಾರ ಮಾಡಲಿಕ್ಕೆ ಎಕ್ಕದ ಹೂಗಳನ್ನು ಸಂಗ್ರಹಿಸುತ್ತಿದ್ದಾಗ, ಗಿಡದ ಎಲೆ ತುಂಬಾ ಕಪ್ಪು ಹೇನು(Aphid) ಕಾಣಿಸಿತಂತೆ. ಆಗ ಅವರಿಗೆ ತಮ್ಮ ಭತ್ತದ ಗದ್ದೆ ನೆನಪಾಯಿತು. ಗಿಡ ಮುತ್ತುವ ಹೇನು ಗಿಡದ ರಸ ಹೀರಿ, ಎಲೆಯ ತುಂಬಾ ಬಿಳಿಗೆರೆ ಮೂಡಿಸಿ ಬೆಳೆ ಹಾಳು ಮಾಡುವುದಕ್ಕೆ ಈ ಎಕ್ಕ ಔಷಧಿಯಾಗಬಹುದೇನೋ ಎಂದೆನಿಸಿತು ಅವರಿಗೆ. ನೋಡೋಣ ವೆಂದು ಕೊಂಬೆಗಳನ್ನು ಮುರಿದು ತಂದು ೧೫ ಅಡಿಗೆ ಒಂದರಂತೆ ಗದ್ದೆಯಲ್ಲಿಟ್ಟರು. ಅವರ ಅಚ್ಚರಿ, ಸಂತೋಷಕ್ಕೆ ಭತ್ತದ ಗಿಡ ಬಿಟ್ಟು ಹೇನುಗಳೆಲ್ಲಾ ಎಕ್ಕದ ಎಲೆಗೆ ಮುತ್ತಿಗೆ ಹಾಕಿದವು. ಇದೇ ಎಕ್ಕ ೧೦ ದಿನಗಳ ನಂತರ ಒಣಗಿ ಹೋದಾಗ ಹೇನುಗಳೆಲ್ಲಾ ಮತ್ತೆ ಭತ್ತಕ್ಕೆ ಓಡಲು ಸುರು. ಪುನಃ ಬೇಗನೆ ಮತ್ತೆ ಹೊಸದಾಗಿ ಎಕ್ಕದ ಕೊಂಬೆ ನೆಟ್ಟರು. ಹೀಗೆ ೨-೩ ಬಾರಿ ಎಕ್ಕವನ್ನು ಬದಲಾಯಿಸಿದಾಗ ಹೇನುಗಳ ಕಾಟ ತಪ್ಪಿ ಭತ್ತದ ಗಿಡಗಳು ಪುಷ್ಟಿಯಾಗಿ ಬೆಳೆದವಂತೆ.

ಧಾನ್ಯ ಸಂಗ್ರಹಣೆಯಲ್ಲಿ ಬೀಳುವ ಕ್ರಿಮಿಕೀಟಗಳ ನಾಶಕ್ಕೆ

ಬೆಳೆದ ತೆನೆಯನ್ನು ಚೆನ್ನಾಗಿ ಬಡಿದ ನಂತರ ಅದನ್ನು ಮೂರು ದಿನ ಭೂಮಿಯಲ್ಲೇ ಬಿಡುತ್ತಾರೆ. ಅನಂತರ ಅದನ್ನು ಮತ್ತೆ ಬಡಿದು ಗೋಣಿಚೀಲಗಳಲ್ಲಿ ಅಥವಾ ಹುಲ್ಲಲ್ಲಿ

ಕಟ್ಟಿ ಸಂಗ್ರಹಿಸುತ್ತಾರೆ. ಒಂದು ತಿಂಗಳ ನಂತರ(ಶಿವರಾತ್ರಿಯ ಸಮಯದಲ್ಲಿ) ಅದನ್ನು ಹೊರ ತೆಗೆದು ೩, ೫ ಅಥವಾ ೭ ದಿನಗಳವರೆಗೆ ಹಗಲೂ ರಾತ್ರಿ ಬಿಸಿಲಿನಲ್ಲಿ ಒಣಗಿಸುತ್ತಾರೆ. ನಂತರ ಅದನ್ನು ಶೋಧಿಸಿ, ಸ್ವಚ್ಛ ಮಾಡಿ ನೆಕ್ಕಿ ಅಥವಾ ನೆಕ್ಕಿಲಿ(Vitex negundo) ಗಿಡದ ಎಲೆಯ ಪುಡಿಯೊಂದಿಗೆ ಗೋಣಿಚೀಲಗಳಲ್ಲಿ ತುಂಬಿ ಗೋಣಿಚೀಲದ ಬಾಯಿಯನ್ನು ಹುಲ್ಲಿನಿಂದ ಕಟ್ಟುತ್ತಾರೆ. ನೆಕ್ಕಿ ಗಿಡದ ಪುಡಿಯನ್ನು ಭತ್ತದೊಂದಿಗೆ ಬೆರೆಸುವಾಗ ೧೫:೧ ಅಥವಾ ೨೦:೧ ಪ್ರಮಾಣದಲ್ಲಿ ಬೆರೆಸಲಾಗುತ್ತದೆ. ಇದು ಕರ್ನಾಟಕದ ಕೆಲಭಾಗಗಳಲ್ಲಿ ರೈತರು ಬಳಸುವ ಪದ್ಧತಿ.


■■

ಅಧ್ಯಾಯ : ಎರಡು

ದ್ವಿದಳ ಧಾನ್ಯ ಮತ್ತು ಎಣ್ಣೆಕಾಳುಗಳು

ಬೀಜಗಳ ಸಂರಕ್ಷಣೆ

ತಮಿಳುನಾಡಿನ ತಿರುಚ್ಚಿ ಜಿಲ್ಲೆಯ ರೈತರಾದ ಕೃಷ್ಣನ್, ರಾಮಸ್ವಾಮಿ ಮತ್ತು ಎಂ. ಪೆರುಮ್ಮಾಳ್‌ರವರು ನೈಸರ್ಗಿಕ ವಿಧಾನದಿಂದ ಬೀಜಗಳನ್ನು ಸಂರಕ್ಷಣೆ ಮಾಡುತ್ತಾರೆ. ಕೃಷ್ಣನ್ ಮತ್ತು ರಾಮಸ್ವಾಮಿಯವರು ದ್ವಿದಳ ಧಾನ್ಯವಾದ ತೊಗರಿಬೇಳೆಯನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ನಂತರ ಗೆದ್ದಲು ಹುತ್ತದ ಮಣ್ಣಿನ ಕೆಸರನ್ನು ಲೇಪಿಸುತ್ತಾರೆ. ಈ ವಿಧಾನವು ಶೇಖರಣೆ ಮಾಡಿರುವಂತಹ ಕಾಳುಗಳಿಗೆ ಹುಳುಗಳು ಬೀಳುವುದನ್ನು ತಡೆಹಿಡಿಯುತ್ತದೆ. ಅಲ್ಲದೆ ಕೆಲವು ಹಳ್ಳಿಗಳಲ್ಲಿ ರೈತರು ಧಾನ್ಯಗಳನ್ನು ಸಂಗ್ರಹಿಸಿಡುವ ಮೊದಲು ಹರಳೆಣ್ಣೆ ಮತ್ತು ಅರಿಶಿಣವನ್ನು ಮಿಶ್ರಣ ಮಾಡುತ್ತಾರೆ ಎಂದು ಕೃಷ್ಣನ್ ಹೇಳಿದ್ದಾರೆ. ಈ ರೀತಿಯಾಗಿ ಧಾನ್ಯಗಳು ಹುಳ ಬೀಳದೇ ಇರುವ ಹಾಗೆ ಒಂದು ವರ್ಷದವರೆಗೂ ಶೇಖರಿಸಿಡಬಹುದಂತೆ. ಹಾಗೇ, ಪೆರುಮ್ಮಾಳ್‌ರವರು ನಾಯಿ ತುಳಸಿ (Ocimum canum sim) ಎಲೆಗಳನ್ನೂ ಧಾನ್ಯಗಳ ಜೊತೆಯಲ್ಲಿ ಮಿಶ್ರಣ ಮಾಡಿ ಅವು ಕೆಡದಂತೆ ಸಂಗ್ರಹಿಸುತ್ತಾರೆ.



ದ್ವಿದಳ ಧಾನ್ಯ ಸಂರಕ್ಷಣೆ

ಸುಣ್ಣದ ಪುಡಿಯನ್ನು ದ್ವಿದಳ ಧಾನ್ಯಗಳಿಗೆ ಮಿಶ್ರಣ ಮಾಡುವುದರಿಂದ ಕೀಟ ಬಾಧೆ ಇರುವುದಿಲ್ಲ. ಹಾಗೆಯೇ ನಾಟಿ ಹಸುಗಳ ಸಗಣಿಯನ್ನು ಬೆರಣಿ ಮಾಡಿ, ಈ ಬೆರಣಿಯ ಪುಡಿಯನ್ನು ಧಾನ್ಯಗಳಿಗೆ ಮಿಶ್ರಣ ಮಾಡುವುದರಿಂದ ಕೀಟ ಬಾಧೆ ನಿಯಂತ್ರಿಸಬಹು ದೆನ್ನುತ್ತಾರೆ ಹಾಸನದ ಸಂತೆಶಿವರ ಬಸವರಾಜುರವರು.

ತೊಗರಿ ಮತ್ತು ಅವರೇ ಬೆಳೆಯಲ್ಲಿ ಕೀಟ ಹತೋಟಿ

ತುಮಕೂರು ಜಿಲ್ಲೆಯ ವೀರಪ್ಪನದೊಡ್ಡಿ ಮಹಾರುದ್ರಪ್ಪನವರು ತಮ್ಮ ತೊಗರಿ ಮತ್ತು ಅವರೇ ಬೆಳೆಗಳಲ್ಲಿ ಕೀಟಗಳನ್ನು ನಿಯಂತ್ರಿಸಲು ಬಿಲ್ವಪತ್ರೆ ಮತ್ತು ಬೇವಿನಸೊಪ್ಪನ್ನು ಬಳಸುತ್ತಾರೆ. ಬಿಲ್ವಪತ್ರೆ ಎಲೆಗಳನ್ನು ೩-೪ ದಿನ ನೀರಿನಲ್ಲಿ ನೆನೆಸಿ, ಅದರ ರಸ ತೆಗೆದು, ಆ ರಸಕ್ಕೆ ಬೇವಿನ ಎಲೆಯ ರಸ ಸೇರಿಸಿ ಗಿಡಗಳಿಗೆ ಸಿಂಪಡಿಸುತ್ತಾರೆ.

ಕಡಲೆ ಬೆಳೆ ರಕ್ಷಣೆ

ಕಡಲೆ (Bengalgram) ಜೊತೆಗೆ ಜೋಳ ಬೆಳೆಯುವುದರಿಂದ ಗಿಡಸೊರಗುವ ರೋಗ (Fusarium wilt)ವನ್ನು ತಡೆಯಬಹುದೆಂಬುದು ಉತ್ತರ ಪ್ರದೇಶದ ಅನೇಕ ರೈತರ ಅನುಭವ.

ಕಡಲೆಗೆ ಬರುವ ಕಾಯಿಕೊರಕದ ಬಾಧೆ ತಡೆಯಲು ಕಡಲೆಯ ಜೊತೆಗೆ ಕೊತ್ತಂಬರಿ ಮತ್ತು Linseed ಬೆಳೆಯುವುದು, ಹಾಗೆಯೇ ಟೊಮೊಟೊ ಮತ್ತು ಮೆಣಸಿಗೆ ಬರುವ ಹಳದಿ ರೋಗ (Mosaic) ತಡೆಯಲು ಅವುಗಳ ಜೊತೆಗೆ ಚೆಂಡು ಹೂವಿನ ಗಿಡಗಳನ್ನು ಬೆಳೆಸುವುದು ಕೂಡ ಉತ್ತರ ಪ್ರದೇಶದ ರೈತರ ಅನುಭವ.

ಕಡಲೆಕಾಯಿಗೆ ಬರುವ ಬೆಂಕಿರೋಗ ನಿಯಂತ್ರಣಕ್ಕೆ ಗುಜರಾತಿನ ಕಾಲಾಭಾಯಿ ಎನ್ನುವವರು ಇಂಗು ಬಳಸುತ್ತಾರಂತೆ. ಕಾಲು ಕೆ.ಜಿ. ಇಂಗನ್ನು ೨ ಲೀಟರ್ ನೀರಿನಲ್ಲಿ ಕದಡಿ ದ್ರಾವಣ ತಯಾರಿಸುತ್ತಾರಂತೆ. ಈ ದ್ರಾವಣದಲ್ಲಿ ಸುಮಾರು ೨೦ ಕೆ.ಜಿ. ಬಿತ್ತನೆ ಬೀಜವನ್ನು ೧೨ ಗಂಟೆಗಳ ಕಾಲ ನೆನೆಸಿ ಬಿತ್ತನೆಗೆ ಬಳಸುವುದರಿಂದ, ಕಡಲೆಕಾಯಿ ಗಿಡಕ್ಕೆ ಬರುವ ಸೊರಗು (blight) ರೋಗವನ್ನು ತಡೆಗಟ್ಟಬಹುದಂತೆ.


ಕಡಲೆಯಲ್ಲಿ ಮರಿಹುಳುವಿನ ಹತೋಟಿಗೆ

ಗುಜರಾತಿನ ಸಬರ್‌ಕಾಂತ ಜಿಲ್ಲೆಯ ಶ್ರೀ ಅಲಿಬೆನ್ ವೆಂಕರ್‌ರವರು ಆಡುಸೋಗೆ (Adhatoda vasica) ಮತ್ತು ಹೊಂಗೆ (Pongammia pinnata)ಯನ್ನು 'ಕಡಲೆ' ಬೆಳೆಯಲ್ಲಿ ಮರಿಹುಳುವಿನ ಹತೋಟಿಗೆ ಬಳಸುತ್ತಾರೆ. ಸುಮಾರು ಐದು ಕೆ.ಜಿ.ಯಷ್ಟು ಆಡುಸೋಗೆ ಮತ್ತು ಹೊಂಗೆಯ ಸಣ್ಣ ಟೊಂಗೆ ಮತ್ತು ಎಲೆಗಳನ್ನು ಜಜ್ಜಿ ರಸ ತೆಗೆಯಬೇಕು. ಈ ರಸವನ್ನು ಮತ್ತೆ ಒಂದರ ಪ್ರಮಾಣಕ್ಕೆ ಐದು ಲೀಟರ್ ನೀರು ಬೆರೆಸಿ ಬೆಳೆಗೆ ಸಿಂಪಡಿಸಬೇಕು. ಒಂದೆಕ್ರೆಗೆ ಎಂಟರಿಂದ ಹತ್ತು ಲೀಟರ್ ದ್ರಾವಣ ಬೇಕು. ವಾರದಲ್ಲಿ

ಮೂರು ದಿನ ಬೆಳಿಗ್ಗೆ ಈ ದ್ರಾವಣದ ಸಿಂಪರಣೆಯಿಂದ ಸಮಾಧಾನಕರ ಫಲಿತಾಂಶ ಕಾಣಬಹುದಂತೆ.

ತೇವಾಂಶವನ್ನು ದೂರವಿಡಲು ಗೇರು

ಬೇಳೆಕಾಳುಗಳನ್ನು ಬಿಸಿಲಿನಲ್ಲಿ ೪ ರಿಂದ ೫ (ಹಗಲು ಮತ್ತು ರಾತ್ರಿ) ದಿನಗಳವರೆಗೆ ಒಣಗಿಸಿದ ನಂತರ ಅದರ ಜೊತೆ ಬಿಡಿಸಿದ ಗೇರಿನ (Anacardium occidentale) ಹೊರಗಿನ ಸಿಪ್ಪೆಯನ್ನು ಬೆರೆಸಿ ನಂತರ ಆ ಚೀಲಗಳನ್ನು ಹುಲ್ಲಿನಿಂದ ಕಟ್ಟಲಾಗುತ್ತದೆ. ಗೇರು ಬೀಜದ ಸಿಪ್ಪೆಯಲ್ಲಿರುವ ಎಣ್ಣೆಯ ಪದಾರ್ಥಕ್ಕೆ ಕಾವನ್ನು ಉಳಿಸಿಕೊಳ್ಳುವ ಮತ್ತು ತೀಕ್ಷ್ಣವಾದ ಗುಣವಿರುವುದರಿಂದ ಅದು ಕೀಟಗಳನ್ನು ದೂರವಿಡುತ್ತದೆ. ಕೆಲವು ರೈತರು ಇದರೊಂದಿಗೆ ಬೂದಿಯನ್ನು ಬೆರೆಸುತ್ತಾರೆ. ಈ ಮಾಹಿತಿಯನ್ನು ನೀಡಿದವರು ಶ್ರೀ ಪಾಂಡುರಂಗ ಲಕ್ಷ್ಮಣ ನಾಯಕ್ ಮತ್ತು ಮಾಸ್ತಿ ಅವಂತಿ ಗೋಯಂಕರ್, ಬೆಲಹಳ್ಳಿ, ಅಂಕೋಲ.



ಕಡಲೆಕಾಯಿ ಜೊತೆ ಕರ್ಪೂರ

ಕಡಲೆಕಾಯಿಯನ್ನು ೬-೭ ತಿಂಗಳ ಕಾಲ ಸಂಗ್ರಹಿಸಿಡಲು ಕರ್ಪೂರವನ್ನು (Camphor) ಬಳಸಲಾಗುವುದು. ಚೆನ್ನಾಗಿ ಒಣಗಿದ ಕಡಲೆಕಾಯಿಗಳನ್ನು ಪಾಲಿಥಿನ್‌ನಂತಹ ಒಳ ಅರಿವೆ ಇರುವ ಗೋಣಿ ಚೀಲಗಳಲ್ಲಿ ಒಂದು ಅಡಿಯಷ್ಟು ಎತ್ತರಕ್ಕೆ ತುಂಬಿ ಅದರ ಮೇಲೆ ೮-೧೦ ಕರ್ಪೂರದ ಚೂರುಗಳನ್ನು ಹಾಕಿ ಕಡಲೆಕಾಯಿಯನ್ನು ತುಂಬುತ್ತಾರೆ. ಹೀಗೆ ಆ ಚೀಲವನ್ನು ಪೂರ್ತಿಯಾಗಿ ತುಂಬಿದ ನಂತರ ಅದರ ಬಾಯಿಯನ್ನು ಗಟ್ಟಿಯಾಗಿ ಕಟ್ಟಲಾಗುತ್ತದೆ. ಈ ಚೀಲಗಳನ್ನು ನೀರಿನಾಂಶ ಇಲ್ಲದ ಜಾಗದಲ್ಲಿ ಇಡುತ್ತಾರೆ. ಈ ಕಾರ್ಯವನ್ನು ಮಳೆಗಾಲ ಆರಂಭವಾಗುವ ಮೊದಲೇ ಮುಗಿಸಬೇಕಾಗುತ್ತದೆ. ಇದೇ ವಿಧಾನವನ್ನು ಬೇರೆ ಬೇರೆ ಕಾಳುಗಳನ್ನು ಸಂಗ್ರಹಿಸಿಡಲು ಬಳಸುತ್ತಾರೆ. ಈ ವಿಚಾರವನ್ನು ಕಾರವಾರ ತಾಲ್ಲೂಕು, ಅಮ್ದಳ್ಳಿ ಹಳ್ಳಿಯ ರೈತರು ತಿಳಿಸಿರುತ್ತಾರೆ.

ಕಾಯಿ ಕೊರಕ ನಿಯಂತ್ರಣ

ತೊಗರಿಬೇಳೆಯಲ್ಲಿ ಕಾಯಿ ಕೊರಕದ ನಿಯಂತ್ರಣಕ್ಕೆ ಅನೇಕ ದೇಶೀಯ ಪದ್ಧತಿಗಳಿವೆ.

* ಬೇಸಿಗೆಯಲ್ಲಿ ಆಳವಾಗಿ ಉಳುಮೆ ಮಾಡುವುದರಿಂದ ಕೋಶಾವಸ್ಥೆಯಲ್ಲಿರುವ ಹುಳುಗಳು ಹಕ್ಕಿಗಳಿಗೆ ಆಹಾರವಾಗುತ್ತವೆ. ಹಾಗೇ ಬಿಸಿಲಿನಿಂದಲೂ ಸಾಯುತ್ತವೆ.

* ಜೋಳದೊಂದಿಗೆ ಬೇಳೆ ಬೆಳೆಯುವುದರಿಂದ ಹಕ್ಕಿಗಳು ಆಕರ್ಷಿತವಾಗಿ ಹುಳುಗಳನ್ನು ತಿನ್ನುತ್ತವೆ.

* ತೊಗರಿಬೇಳೆಯೊಂದಿಗೆ ಚೆಂಡು ಹೂ ಬೆಳೆಯುವುದರಿಂದ ಕಾಂಡ ಕೊರಕ ಚೆಂಡು ಹೂವಿನ ಕಡೆ ಆಕರ್ಷಿತವಾಗಿ ಅಲ್ಲೇ ಮೊಟ್ಟೆ ಇಟ್ಟು ಅದನ್ನೇ ತಿನ್ನುವುದಂತೆ.

* ೩-೪ ಲೀಟರ್ ದನದ ಮೂತ್ರವನ್ನು ಅಷ್ಟೇ ಪ್ರಮಾಣದ ಸೆಗಣಿಯೊಂದಿಗೆ ಬೆರೆಸಿ ೪ ದಿನ ಕೊಳೆಯಲು ಬಿಡಬೇಕು. ನಂತರ ಇದನ್ನು ಸೋಸಿ ಬಂದ ನೀರಿಗೆ ಕಾಲು ಕೆ.ಜಿ. ಸುಣ್ಣ ಬೆರೆಸಿ. ಈ ದ್ರಾವಣವನ್ನು ೫೦-೮೦ ಲೀಟರ್ ನೀರಿನಲ್ಲಿ ಬೆರೆಸಿ ೧ ಎಕರೆಗೆ ಸಿಂಪಡಿಸುವುದರಿಂದ ಕಾಂಡ ಕೊರಕದ ನಿಯಂತ್ರಣ ಸಾಧ್ಯವಂತೆ. ಮಾತ್ರವಲ್ಲದೆ ಬೆಳೆಯ ಬೆಳವಣಿಗೆಯೂ ಚುರುಕುಗೊಳ್ಳುತ್ತದೆ.

* ಸುಮಾರು ೪ ಕೆ.ಜಿ.ಯಷ್ಟು ಹಸಿ ಮೆಣಸನ್ನು ಜಜ್ಜಿ ೫-೮ ಲೀಟರ್ ನೀರಿನಲ್ಲಿ ನೆನೆಸಿಡಿ. ಹಾಗೆ ಅರ್ಧದಿಂದ ಮುಕ್ಕಾಲು ಕೆ.ಜಿ. ಬೆಳ್ಳುಳ್ಳಿಯನ್ನು ಜಜ್ಜಿ ಕಾಲು ಲೀಟರ್ ಸೀಮೆ ಎಣ್ಣೆಯಲ್ಲಿ ೧ ರಾತ್ರಿ ನೆನೆಸಿಡಿ. ನಂತರ ಎರಡನ್ನೂ ಒಟ್ಟು ಮಾಡಿ ಸೋಸಿ ೫೦ರಿಂದ ೮೦ ಲೀಟರ್ ನೀರಿನಲ್ಲಿ ಬೆರೆಸಿ ೧ ಎಕರೆಗೆ ಸಿಂಪಡಿಸಿ.

* ೧೦೦ ಲೀಟರ್ ನೀರಿಗೆ ೫ ಕೆ.ಜಿ. ಬೆಲ್ಲ ಸೇರಿಸಿ ಬೆಳೆಗೆ ಸಿಂಪಡಿಸುವುದರಿಂದ ಇರುವೆ ಮತ್ತಿತರ ಕೀಟಗಳು ಆಕರ್ಷಿತವಾಗಿ ಕಾಂಡ ಕೊರಕದ ಮೊಟ್ಟೆ ಮತ್ತು ಸಣ್ಣ ಮರಿಗಳನ್ನು ತಿನ್ನುವುದು.

* ಬೇವಿನ ಬೀಜದ ದ್ರಾವಣ ಸಿಂಪಡಿಸುವುದರಿಂದ ಕಾಂಡ ಕೊರಕ ತೊಗರಿ ಬೆಳೆಯ ಮೇಲೆ ಮೊಟ್ಟೆ ಇಡುವುದನ್ನು ತಪ್ಪಿಸಬಹುದಂತೆ. ದೇಶದಾದ್ಯಂತ ರೈತರಿಂದ ಸಂಗ್ರಹಿಸಿದ ಈ ದೇಶೀಯ ಪಟ್ಟಿಗಳನ್ನು ಹನೀಬೀ ೯(೧) ೧೯೯೮ರಲ್ಲಿ ಪ್ರಕಟಿಸಲಾಗಿದೆ.

ದ್ವಿದಳ ಧಾನ್ಯಗಳ ಬೀಜಗಳನ್ನು ಆರಿಸುವುದು

ದ್ವಿದಳ ಧಾನ್ಯಗಳ ಬೆಳೆಗಳಲ್ಲಿ ಕಾಳು ಕಟ್ಟಿದ ಎಲ್ಲ ಕಾಯಿಗಳು ಒಮ್ಮೆಲೇ ಬಲಿತು ಮಾಗುವುದಿಲ್ಲ. ಕಾರಣ ಇಂಥ ಬೆಳೆಗಳಲ್ಲಿ ಮೊದಲು ಬಲಿತು ಮಾಗಿದ ಕಾಯಿಗಳನ್ನು ಬೀಜಕ್ಕೆಂದು ಹಿಡಿದಿಟ್ಟು ಬಿತ್ತುವ ಪೂರ್ವದಲ್ಲಿ ಉತ್ತಮ ಬೀಜಗಳನ್ನು ಬೇರ್ಪಡಿಸಿ ಬಿತ್ತಲಿಕ್ಕೆ ಉಪಯೋಗಿಸಬೇಕು. ಹಿಂದಿನಿಂದ ಬಲಿತು ಮಾಗಿದ ಕಾಯಿಗಳ ಬೀಜಗಳು ಅಷ್ಟೊಂದು ಸದೃಢವಾಗಿ ಬಲಿತು ಮಾಗುವ ಭರವಸೆ ಇರದ್ದರಿಂದ ಅವುಗಳ ಮೊಳಕೆ ಯೊಡೆಯುವ ಪ್ರಮಾಣವು ಕಡಿಮೆ ಇರುತ್ತದೆ.

ಹೆಸರು ಕಾಳು ಕರೀ ಉದ್ದಿನ ಸಂರಕ್ಷಣೆಗೆ

ಚೆನ್ನಾಗಿ ಒಣಗಿದ ಹೆಸರು ಕಾಳು ಇಲ್ಲವೆ ಕರೀ ಉದ್ದಿನ ಕಾಳನ್ನು ಮನೆಯಲ್ಲಿ ಅಡುಗೆ ಮಾಡುವಾಗ ಉತ್ಪತ್ತಿಯಾದ ಬೂದಿಯನ್ನು ಬೆರೆಸಿ ಮಡಿಕೆಗೆ ತುಂಬಬೇಕು. ೧ ಕೆ.ಜಿ. ಕಾಳು ಇದ್ದರೆ ೧/೨ ಕೆ.ಜಿ.ಯಷ್ಟು ಬೂದಿ ಬೆರೆಸಬೇಕು. ಹೀಗೆ ಮಡಿಕೆಗೆ ತುಂಬಿದ ನಂತರ

ಮುಚ್ಚಳದ ಬದಲು ಬಟ್ಟೆಯನ್ನು ಕಟ್ಟಿ ಮೇಲೆ ಬಾಯಿಯ ಬಳಿ ಬೂದಿಯನ್ನು ಸ್ವಲ್ಪ ಜಾಸ್ತಿ ಹಾಕಬೇಕು. ಹೀಗೆ ೨ ರಿಂದ ೩ ವರ್ಷ ಹುಳು ಕಾಟದಿಂದ ರಕ್ಷಿಸಬಹುದು. ಇದು ಗುಂಜೂರು ಪ್ರಾಂತ್ಯದ ರೈತರ ಅನುಭವವಾಗಿದೆ.

ಕಂಟು ಹಾಕುವುದು

ತೊಗರಿ ಮತ್ತು ಹರಳು ಬೆಳೆಗಳಲ್ಲಿ ಕೊಂಡಲು (ಕಂಬಳಿ) ಹುಳುಗಳ ಬಾಧೆ ಸರ್ವೇಸಾಮಾನ್ಯ. ಇವುಗಳ ಹತೋಟಿಗಾಗಿ 'ಕಂಟು' ಹಾಕುವ ಪದ್ಧತಿಯೊಂದು ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಬೆಟ್ಟದ ಮಲ್ಲೇನಹಳ್ಳಿಯ ಸುತ್ತಮುತ್ತ ರೂಢಿಯಲ್ಲಿದೆ. ಇದರಂತೆ ಹಳೆ ಟೈರು, ಹಳೇ ಕಂಬ್ಳಿ, ಗೋಣಿಚೀಲ ಮತ್ತು ಬೇವಿನ ಹಿಂಡಿಗಳನ್ನು ಒಟ್ಟಿಗೆ ಸುಡಲಾಗುತ್ತದೆ. ಇದರಿಂದ ಉತ್ಪತ್ತಿಯಾಗುವ ಹೊಗೆಯಿಂದ ಹುಳುಗಳು ಸಾಯುತ್ತವಂತೆ.

ಹರಳು ಗಿಡದ ಕೊಂಡಲಿ ಹುಳುವಿಗೆ

ಗುಜರಾತಿನ ಬನಸ್ಕಾಂತ ಜಿಲ್ಲೆಯವರಾದ ಅರ್‌ಜನ್‌ಭಾಯಿ ಭಾಲಭಾಯಿ ದರಬಾರ್ ರವರು ಆಡಿನ ಮೂತ್ರ ಮತ್ತು ಬೇವಿನ ಎಲೆಗಳನ್ನು ಹರಳು (ಔಡಲ) ಗಿಡದಲ್ಲಿ ಕಾಣಿಸಿ ಕೊಳ್ಳುವ ಕೊಂಡಲಿ ಹುಳದ (ಸೆಮಿಲೂಪರ್) ನಿಯಂತ್ರಣಕ್ಕೆ ಉಪಯೋಗಿಸುತ್ತಾರೆ.

ಇವರು ಕಬ್ಬಿಣದ ಡಬ್ಬದಲ್ಲಿ ಎರಡು ಕೆ.ಜಿ.ಯಷ್ಟು ಚೆನ್ನಾಗಿ ಅರೆದಿರುವಂತಹ ಬೇವಿನ ಎಲೆಗಳನ್ನು ಹಾಕಿ ಅದರಲ್ಲಿ ಎರಡು ಅಥವಾ ಮೂರು ಲೀಟರ್‌ನಷ್ಟು ಆಡಿನ ಮೂತ್ರವನ್ನು ಸೇರಿಸುತ್ತಾರೆ. ನಂತರ ಈ ಮಿಶ್ರಣವನ್ನು ನೀರಿನೊಂದಿಗೆ ೧:೩ ಅನುಪಾತದಲ್ಲಿ ಮಿಶ್ರಣ ಮಾಡಿಕೊಂಡು ಆಗಾಗ ಬೆಳೆಗಳಿಗೆ ಸಿಂಪಡಿಸುತ್ತಾರೆ.

ಕಾಳು ಸಂಗ್ರಹಣೆ

ಉತ್ತರ ಪ್ರದೇಶದ ಕಾನ್‌ಪುರದ ರೈತರು ಉದ್ದು, ಕಡಲೆಯ ಕಾಳುಗಳನ್ನು ಸಂಗ್ರಹಿಸುವಾಗ ಸಾಸಿವೆ ಎಣ್ಣೆಯಿಂದ ಚೆನ್ನಾಗಿ ಸವರಿ, ಬೂದಿಯೊಂದಿಗೆ ಬೆರೆಸಿ ಸಂಗ್ರಹಿಸುತ್ತಾರಂತೆ. ಹೀಗೆ ಮಾಡುವುದರಿಂದ ಕೀಟದ ಕಾಟ ಕಡಿಮೆಯಂತೆ.

ಕಾಳುಗಳೆ ನಿಮಗಿಲ್ಲವಿನ್ನು ಕೀಟಗಳ ಕಾಟ

ತೊಗರಿ, ಅವರೆ ಮೊದಲಾದ ದ್ವಿದಳ ಧಾನ್ಯಗಳಿಗೆ ಸಂಗ್ರಹಣ ಕೀಟ (Storage pests) ಜಾಸ್ತಿ. ಹಸುವಿನ ಗಂಜಲದಲ್ಲಿ ಬಿತ್ತನೆ ಬೀಜಗಳನ್ನು ತೊಳೆದು, ನೆರಳಲ್ಲಿ ಒಣಗಿಸಿ ಸಂಗ್ರಹಿಸಿಟ್ಟರೆ ಕೀಟಗಳ ಕಾಟ ಇರುವುದಿಲ್ಲ.

ಆರಕ (Kodomillet)ದ ಜೊತೆಯಲ್ಲಿ ದ್ವಿದಳ ಧಾನ್ಯಗಳನ್ನು ಸಂಗ್ರಹಿಸಿಟ್ಟರೆ ಹುಳು ಬೀಳುವುದಿಲ್ಲ.

ಹರಳು ಬೀಜಗಳನ್ನು ಹುಳು ಬೀಳುವ ಯಾವುದೇ ಬೀಜಗಳ ಜೊತೆ ವಿಶೇಷವಾಗಿ ಅಲಸಂದೆ, ಅವರೆ ಮತ್ತು ತೊಗರಿಯ ಜೊತೆ ಬೆರೆಸಿ ಇಡುವುದರಿಂದ ಹುಳುಗಳ ಕಾಟವನ್ನು

ನಿವಾರಣೆ ಮಾಡಿಕೊಳ್ಳಬಹುದು. ಈ ಮಾಹಿತಿಯನ್ನು ಭೂತಲಿಂಗಪ್ಪ, ದ್ಯಾವರಹಳ್ಳಿ, ಚಳ್ಳಕೆರೆ ತಾಲ್ಲೂಕು ಚಿತ್ರದುರ್ಗ ಇವರು ನೀಡಿರುತ್ತಾರೆ.

ತೊಗರಿ ಬೀಜಗಳಿಗೆ ಸಂಗ್ರಹಣಾ ಕೀಟಗಳ ಹಾವಳಿ ತೀರಾ ಜಾಸ್ತಿ. ಇದರ ನಿವಾರಣೆಗೆ ತೊಗರಿ ಬೀಜಗಳನ್ನು ಚೆನ್ನಾಗಿ ಬಿಸಿಲಲ್ಲಿ ಒಣಗಿಸಿ. ರಾತ್ರಿ ಪೂರ್ತಿ ಬಯಲಲ್ಲೇ ಬಿಡಬೇಕು. ಮುಂಜಾನೆ ಇಬ್ಬನಿಯಲ್ಲಿ ನೆನೆದ ಮರಳನ್ನು ಮಣ್ಣಿನ ಕುಡಿಕೆಯ ತಳಭಾಗದಲ್ಲಿ ಸ್ವಲ್ಪ ಹಾಕಿ ಅದರ ಮೇಲೆ ತೊಗರಿ ಬೀಜ ಹರಡಬೇಕು. ನಂತರ ಬೀಜದ ಮೇಲೆ ಮತ್ತಷ್ಟು ಮರಳು ತುಂಬಿ ಎತ್ತಿಟ್ಟರೆ ಕೀಟಗಳ ಕಾಟ ಇರುವುದಿಲ್ಲ.

ಹರಳು ಬೀಜಗಳನ್ನು ಹುರಿದು, ಕುಟ್ಟಿದ ಪುಡಿಯಿಂದ ತೊಗರಿ ಬೀಜಗಳನ್ನು ತಿಕ್ಕಿ ಸಂಗ್ರಹಿಸಿದರೂ ಹುಳು ಬೀಳುವುದಿಲ್ಲ. ಈ ಮಾಹಿತಿ ಗೌರಮ್ಮ, ಗೊಲ್ಲಪಲ್ಲಿ, ತಳಿ, ತಮಿಳುನಾಡು ಇವರು ನೀಡಿರುತ್ತಾರೆ.

ಮುಖಹುಳುಗಳಿಂದ ದ್ವಿದಳ ಧಾನ್ಯಗಳ ರಕ್ಷಣೆ

ಮುಖಹುಳು (Callosobruches chinensis) ಸಂಗ್ರಹಿಸಿಟ್ಟಿರುವ ಅವರೆ, ತೊಗರಿ, ಹುರಳಿ, ಕಡಲೆ, ಅಲಸಂದಿ, ಹೆಸರು ಮುಂತಾದ ದ್ವಿದಳ ಧಾನ್ಯಗಳಿಗೆ ದಾಳಿಯಿಟ್ಟು ಕೆಲವೇ ತಿಂಗಳುಗಳಲ್ಲಿ ಧಾನ್ಯವನ್ನು ನಾಶಗೊಳಿಸುತ್ತವೆ. ಇದರಿಂದ ರೈತರಿಗೆ ಗಣನೀಯ ನಷ್ಟ ಉಂಟಾಗುತ್ತದೆ. ಕಟಾವಿನ ನಂತರ ಸಂಗ್ರಹದ ಮಡಿಗಳಿಗೆ ಪ್ರವೇಶಿಸುವ ಈ ಕೀಟವು ಶೀಘ್ರಗತಿಯಲ್ಲಿ ಅಭಿವೃದ್ಧಿ ಹೊಂದಿ ಧಾನ್ಯವನ್ನು ಅನುಪಯುಕ್ತಗೊಳಿಸುತ್ತವೆ.

ಇವುಗಳ ನಿಯಂತ್ರಣಕ್ಕೆ ಉದಯಪುರದ ಅಭಿಷೇಕ್ ಶುಕ್ಲ ಎಂಬುವರು ಪರಿಣಾಮಕಾರಿ ವಿಧಾನವನ್ನು ಬಳಸುತ್ತಿದ್ದಾರೆ. ಪುದಿನದ (Mentha Spicate or M. arvensis or M. piperita) ಎಣ್ಣೆಯನ್ನು ಒಂದು ಮುಚ್ಚಳದಲ್ಲಿ ಅಥವಾ ಒಂದು ಚಿಕ್ಕ ಮಡಿಕೆಯಲ್ಲಿ ೧-೨ ಹನಿಯಷ್ಟು ಹಾಕಿ ಇಟ್ಟರೆ ಇದು ಹೊರಗಿನಿಂದ ಬರುವ ಕೀಟವನ್ನು ನಿಯಂತ್ರಿಸುತ್ತದೆಯಂತೆ. ಒಂದು ವೇಳೆ ಕೀಟಗಳು ಒಳಗಡೆ ಪ್ರವೇಶಿಸಿದ್ದರೆ, ಈ ತೈಲದ ಪರಿಣಾಮದಿಂದ ಕೀಟಗಳ ಮೊಟ್ಟೆಯಿಡುವ ಶಕ್ತಿ ಕುಂದುತ್ತದೆಯೆಂದು ಅಭಿಷೇಕ್ ಹೇಳುತ್ತಾರೆ.

ದ್ವಿದಳ ಧಾನ್ಯಗಳ ರಕ್ಷಣೆ

ಗುಜರಾತಿನ ವಲಸಾದ್ ಜಿಲ್ಲೆ ಧರಮ್‌ಪುರ ತಾಲ್ಲೂಕು ಬಿಲ್‌ಪುಡಿ ಗ್ರಾಮದ ರೈತ ಬಾಪ್ ಜಿ ಬಾಯ್ ಭಾಯಲ್ ಬಾಯ್ ಗವಿಂತ್ ಅವರು ದ್ವಿದಳ ಧಾನ್ಯಗಳ ರಕ್ಷಣೆಗೆ ತಮ್ಮದೇ ಆದ ಸಾಂಪ್ರದಾಯಿಕ ವಿಧಾನವನ್ನು ಬಳಸುತ್ತಿದ್ದಾರೆ. ಇವರು ಭತ್ತದ ಹುಲ್ಲಿನ ಹಗ್ಗದಿಂದ ಮಾಡಿದ ಬುಟ್ಟಿಯಲ್ಲಿ ತೇಗದ ಎಲೆಗಳನ್ನು ಜೋಡಿಸಿ, ಒಣಗಿದ ಧಾನ್ಯವನ್ನು, ಬೇವಿನ ಎಲೆ, ಬೂದಿ, ಕಬ್ಬಿಣದ ತುಂಡುಗಳೊಂದಿಗೆ ತುಂಬಿಸಿ ಬುಟ್ಟಿಯನ್ನು ತೇಗದ ಎಲೆ ಹಾಗೂ ಭತ್ತದ ಹುಲ್ಲಿನ ಹಗ್ಗದಿಂದ ಮುಚ್ಚಿ ಭದ್ರಪಡಿಸುತ್ತಾರೆ. ನಂತರ ಸಗಣಿ

ಮತ್ತು ಮಣ್ಣಿನ ಮಿಶ್ರಣವನ್ನು ಬುಟ್ಟಿಗೆ ಸುತ್ತಲು ಲೇಪಿಸಿ ಸಂಗ್ರಹಿಸುವುದರಿಂದ ಧಾನ್ಯಗಳನ್ನು ಬಹುಕಾಲ ಹಾಳಾಗದಂತೆ ರಕ್ಷಿಸಬಹುದು. ಬಾಯ್ ಗವಿಂತ್ ಹತ್ತಾರು ವರ್ಷಗಳಿಂದ ಈ ವಿಧಾನವನ್ನು ಅನುಸರಿಸುತ್ತಿರುವರು.

ದ್ವಿದಳ ಧಾನ್ಯಗಳ ಬೀಜಗಳನ್ನು ಆರಿಸುವುದು

ದ್ವಿದಳ ಧಾನ್ಯಗಳ ಬೆಳೆಗಳಲ್ಲಿ ಕಾಳು ಕಟ್ಟಿದ ಎಲ್ಲ ಕಾಯಿಗಳು ಒಮ್ಮೆಲೇ ಬಲಿತು ಮಾಗುವುದಿಲ್ಲ. ಕಾರಣ ಇಂಥ ಬೆಳೆಗಳಲ್ಲಿ ಮೊದಲು ಬಲಿತು ಮಾಗಿದ ಕಾಯಿಗಳನ್ನು ಬೀಜಕ್ಕೆಂದು ಹಿಡಿದಿಟ್ಟು ಬಿತ್ತುವ ಪೂರ್ವದಲ್ಲಿ ಉತ್ತಮ ಬೀಜಗಳನ್ನು ಬೇರ್ಪಡಿಸಿ ಬಿತ್ತಲಿಕ್ಕೆ ಉಪಯೋಗಿಸಬೇಕು. ಹಿಂದಿನಿಂದ ಬಲಿತು ಮಾಗಿದ ಕಾಯಿಗಳ ಬೀಜಗಳು ಅಷ್ಟೊಂದು ಸದೃಢವಾಗಿ ಬಲಿತು ಮಾಗುವ ಭರವಸೆ ಇರದ್ದರಿಂದ ಅವುಗಳ ಮೊಳಕೆಯೊಡೆಯುವ ಪ್ರಮಾಣವು ಕಡಿಮೆ ಇರುತ್ತದೆ.

ಕಾಯಿಕೊರಕ ನಿಯಂತ್ರಣ

ತೊಗರಿ, ಅವರೆ ಮತ್ತಿತರ ದ್ವಿದಳ ಧಾನ್ಯ ಬೆಳೆಗಳಲ್ಲಿ ಕಾಯಿಕೊರಕ (Pod borer) ಕೀಟದ ಹಾವಳಿ ಹೆಚ್ಚು. ಇದರ ಹತೋಟಿಗಾಗಿ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಕಾಡುಪ್ರದೇಶದ ರೈತ ಶ್ರೀ ಪ್ರಸನ್ನಯ್ಯ ಎಸ್.ಸಿ. ಸಸ್ಯಮೂಲದ ಕೀಟನಾಶಕವೊಂದನ್ನು ತಯಾರಿಸಿದ್ದಾರೆ. ಇದನ್ನು ಹಲವಾರು ರೈತರು ಬಳಸಿ ಯಶಸ್ವಿಯಾಗಿದ್ದಾರೆ. ಅಲ್ಲದೆ ಬೆಂಗಳೂರಿನ 'ಗ್ರೀನ್ ಪ್ರತಿಷ್ಠಾನ' ಇದರ ಬಳಕೆಗೆ ಶಿಫಾರಸ್ಸು ಮಾಡುತ್ತಿದೆ.

ತಲಾ ಅರ್ಧ ಕೆ.ಜಿ. ಕಾಡು ಸುಡೆ (Solanum indicum), ಎಟ್ಟಿಕಾಯಿ (Adina cordifolia), ಉರುಗಲ, ಲಕ್ಕಿ (Vitexnegunda) ಲೋಳೆ ಸರ (Aloe vera), ವಿಷಮದಾರಿ (Clerodendron inerme) ಸೊಪ್ಪುಗಳು, ಅರ್ಧ ಕೆ.ಜಿ. ಉರುಗಲ ತೊಗಟೆ ಮತ್ತು ಕಾಲು ಕೆ.ಜಿ. ಬೇವಿನ ಬೀಜಗಳನ್ನು ಬೇರೆ ಬೇರೆಯಾಗಿ ಕುಟ್ಟಿ, ಮಣ್ಣಿನ ಮಡಿಕೆಯೊಂದರಲ್ಲಿ ಹಾಕಿ, ಅವು ಮುಳುಗುವಷ್ಟು ಪ್ರಮಾಣದ ಗಂಜಲವನ್ನು ಹಾಕಿ ಮಡಿಕೆಯ ಬಾಯಿಯನ್ನು ಮುಚ್ಚಬೇಕು. ಒಂದು ವಾರದ ನಂತರ ಈ ದ್ರಾವಣವನ್ನು ಚೆನ್ನಾಗಿ ಸೋಸಿ (ಶೋಧಿಸಿ) ನೀರಿನೊಂದಿಗೆ ೧:೧೦ರ ಪ್ರಮಾಣದಲ್ಲಿ ಬೆರೆಸಿ ಬೆಳೆಗೆ ಸಿಂಪಡಿಸಬೇಕು. ಅವರೆ ಕಾಯಿಯಲ್ಲಿ ಕಾಯಿಕೊರಕದ ಹಾವಳಿ ತುಂಬಾ ಇರುವಾಗ ೧:೮ರ ಪ್ರಮಾಣದಲ್ಲಿ ನೀರಿನೊಂದಿಗೆ ಬೆರೆಸಿ ಸಿಂಪಡಿಸಬೇಕು ಎಂಬುದು ಈ ಹೊಸ ಶೋಧನೆಯ ಸಾರಾಂಶ.

■■

ಅಧ್ಯಾಯ : ಮೂರು

ತರಕಾರಿ ಪದಾರ್ಥಗಳು

ಮೆಣಸಿನ ಬೆಳೆ ಸಂರಕ್ಷಣೆಗೆ

ಗುಜರಾತಿನ ಪುರುಷೋತ್ತಮ್ ಭಾಯಿಯವರು ಮೆಣಸಿನಕಾಯಿ ಬೆಳೆಯಲ್ಲಿ ರಸ ಹೀರುವ ಉಪದ್ರವಿಗಳ ನಾಶಕ್ಕಾಗಿ ತಂಬಾಕು, ಲೋಳೆಸರ (Aloe vera) ಮತ್ತು ನಿಂಬೆ ಹಣ್ಣಿನ ರಸವನ್ನು ನೀರಿನೊಂದಿಗೆ ಉಪಯೋಗಿಸಿಕೊಳ್ಳುತ್ತಾರೆ. ಇವರು ಎರಡು ಕೆ.ಜಿ. ತಂಬಾಕಿನ ಪುಡಿಯನ್ನು ಎರಡು ಕೆ.ಜಿ. ಲೋಳೆಸರ, ೨೫೦ ಗ್ರಾಂ ನಿಂಬೆ ರಸ ಇವುಗಳನ್ನು ೨೦ ಲೀಟರ್ ನೀರಿನೊಂದಿಗೆ ಕುದಿಸಿಕೊಳ್ಳುತ್ತಾರೆ. ಈ ಕಷಾಯವನ್ನು ೧೫ ಲೀಟರ್ ನೀರಿನಲ್ಲಿ ೨೫೦ ಮಿ.ಲೀ.ನಂತೆ ಮಿಶ್ರಣ ಮಾಡಿಕೊಂಡು ಎಂಟು ದಿನಗಳಿಗೆ ಒಂದು ಬಾರಿಯಂತೆ ಬೆಳೆಗಳಿಗೆ ಸಿಂಪಡಿಸುತ್ತಾರೆ. ಈ ವಿಧಾನದಿಂದ ಬೆಳೆಗಳಲ್ಲಿ ರೋಗಗಳು ಶೇಕಡಾ ೭೦ರಿಂದ ೮೦ರಷ್ಟು ಕಡಿಮೆಯಾಗುತ್ತದೆಂದು ಹೇಳಿದ್ದಾರೆ.

ಥ್ರಿಪ್ಸ್ ಬಾಧೆಗೆ ತಂಬಾಕಿನ ಪುಡಿ

ಈರುಳ್ಳಿ ಬೆಳೆಯು ಥ್ರಿಪ್ಸ್ ಬಾಧೆಗೇನಾದರೂ ಒಳಗಾದರೆ ಅದರ ಬೆಳವಣಿಗೆಯು ಕುಂಠಿತಗೊಂಡು, ಇಳುವರಿಯು ಗಣನೀಯವಾಗಿ ಇಳಿಮುಖವಾಗುತ್ತದೆ. ಇದಕ್ಕೆ ಪರಿಹಾರ ವಾಗಿ ಗುಜರಾತ್ ರಾಜ್ಯದ, ಜಾಮ್‌ನಗರ ಜಿಲ್ಲೆಯ ಅಜಯ್‌ಭಾಯಿಯವರು ೫ ಕೆ.ಜಿ. ತಂಬಾಕಿನ ಪುಡಿಯನ್ನು (ನಸ್ಯಪುಡಿ) ೧೫ ಲೀಟರ್ ನೀರಿನಲ್ಲಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳುತ್ತಾರೆ. ಇಂತಹ ೫೦೦ ಮಿ.ಲೀ. ಮಿಶ್ರಣಕ್ಕೆ ೧೫ ಲೀ. ನೀರನ್ನು ಮಿಶ್ರಣ ಮಾಡಿ ಬೆಳೆಗೆ ಸಿಂಪಡಿಸುತ್ತಾರೆ. ಹೀಗೆ ಮೊದಲನೇ ಬಾರಿಗೆ ಮಾಡಿದ ಸಿಂಪಡಣೆಯಿಂದ ಶೇಕಡಾ ೫೦ರಷ್ಟು ಥ್ರಿಪ್ಸ್ ಬಾಧೆ ಕಡಿಮೆಯಾಗುವುದಲ್ಲದೇ ಎರಡನೇ ಬಾರಿಯ ಸಿಂಪಡಣೆ ಯಿಂದ ಶೇಕಡಾ ೮೦ ರಿಂದ ೯೦ರಷ್ಟು ಬಾಧೆ ಕಡಿಮೆಯಾಗುತ್ತದೆಯೆಂದು ಅಜಯ್‌ಭಾಯಿ ಹೇಳಿದ್ದಾರೆ. ಈ ವಿಧಾನವನ್ನು ನೆರೆಯ ಹಳ್ಳಿಯವರಿಂದ ಕಲಿತಿದ್ದು ತಮ್ಮ ಹೊಲದಲ್ಲೇ ಇದನ್ನು ಪ್ರಯೋಗಿಸಿ ನೋಡಿದ್ದಾರೆ.

ಬೆಂಡೆ ಗಿಡ ರಕ್ಷಣೆಗೆ ಅರಿಶಿಣ

ವೈರಸ್‌ನಿಂದಾಗಿ ಬೆಂಡೆಯ ಗಿಡ ಹಳದಿಯಾಗುತ್ತದೆ. ಇದನ್ನು ತಡೆಯಲು ಬೆಂಡೆಯ ಬೀಜ ಬಿತ್ತುವಾಗಲೇ ಸಾಲಿನಲ್ಲಿ ಅರಿಶಿಣವನ್ನು ಬೆಳೆಸುವ ಕ್ರಮದಿಂದ ದಕ್ಷಿಣ ಕನ್ನಡದ ಶ್ರೀಮತಿ ವಿದ್ಯಾಲಕ್ಷ್ಮಿ ಎಂಬುವರು ಪರಿಹಾರ ಕಂಡುಕೊಂಡಿದ್ದಾರೆ. ಈ ಕ್ರಮವನ್ನು ಇವರು ಕಳೆದ ೧೦ ವರ್ಷಗಳಿಂದ ಅನುಸರಿಸುತ್ತಲಿರುವರು. ಮಳೆಗಾಲದಲ್ಲಿ ತರಕಾರಿ ಬೆಳೆಯುವಾಗ ಅದರೊಂದಿಗೆ ಅರಿಶಿಣ ಗಿಡವನ್ನು ನೆಟ್ಟಲ್ಲಿ ಕೀಟ, ಹುಳುಗಳ ಕಾಟದಿಂದ ತರಕಾರಿಯ ರಕ್ಷಣೆ ಆಗುವುದು ಮತ್ತು ಹೆಚ್ಚಿನ ಶ್ರಮವಿಲ್ಲದೆ ಅರಿಶಿಣವನ್ನು ಬೆಳೆಯಬಹುದಂತೆ.

ಕಾಯಿಕೊರಕ ಹುಳುಗೆ ಬೆಳ್ಳುಳ್ಳಿ ಮದ್ದು

ಅರ್ಧ ಕೆ.ಜಿ. ಬೆಳ್ಳುಳ್ಳಿಯನ್ನು ೧೦೦ ಮಿ.ಲೀ. ಸೀಮೆಎಣ್ಣೆಯಲ್ಲಿ ನೆನೆಸಿ, ಮಾರನೆ ದಿನ ಇದನ್ನು ಸೋಸಿ, ಅದಕ್ಕೆ ೧೦೦ ಗ್ರಾಂ ಹಸಿರು ಮೆಣಸಿನಕಾಯಿಯನ್ನು ಅರೆದು ಹಾಕಿ ನಂತರ ಇದಕ್ಕೆ ೧೦೦ ಮಿ.ಲೀ. ನೀರನ್ನು ಸೇರಿಸಿ, ಕಾಯಿ ಕೊರಕ ಹುಳುಗಳ ಬಾಧೆಯಿರುವ ತರಕಾರಿ ಬೆಳೆಗೆ ಸಿಂಪಡಿಸಬಹುದು ಎಂಬುದು ದೇವನಹಳ್ಳಿ ತಾಲ್ಲೂಕು ದೊಡ್ಡಕೋಗಿಲು ಗ್ರಾಮದ ರಾಜಣ್ಣನವರ ಅನುಭವ.

ಗಿಡ ಹೇನು ತಡೆಯಲು ದಾಲ್ಚಿನ್ನಿ


ಗುಜರಾತ್ ರಾಜ್ಯದ ಪ್ರಹ್ಲಾದ್ ಬಾಯಿ ಪಟೇಲ್‌ರವರು ಮೂಲಂಗಿಯಲ್ಲಿ ಗಿಡ ಹೇನಿನ (Aphids) ಹಾವಳಿಯನ್ನು ತಡೆಯಲು ಒಂದು ಉಪಾಯ ಕಂಡು ಹಿಡಿದಿರುವರು. ಇವರ ಪ್ರಕಾರ ಉಪಯೋಗಕ್ಕೆ ಬಾರದ ೫೦೦ ಗ್ರಾಂ ದಾಲ್ಚಿನ್ನಿ ೨೫೦ ಗ್ರಾಂ ತಂಬಾಕು ಪುಡಿಯನ್ನು ಒಂದು ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಕಷಾಯ ತಯಾರಿಸಬೇಕು. ನಂತರ ೧೦ ಲೀಟರ್ ನೀರನ್ನು ಆರಿದ ಈ ಕಷಾಯಕ್ಕೆ ಹಾಕಿ ಚೆನ್ನಾಗಿ ಕುಲುಕಿಸಿದ ನಂತರ ಬೆಳೆಗಳಿಗೆ ಸಿಂಪಡಿಸಬೇಕು. ಒಂದೆರಡು ದಿನಗಳಲ್ಲಿ ಇದರ ಪರಿಣಾಮ ಗೊತ್ತಾಗುತ್ತದೆ ಹಾಗೂ ಕೀಟಗಳು ನಾಲ್ಕು ದಿನದೊಳಗೆ ಸಂಪೂರ್ಣ ನಾಶ ಹೊಂದುತ್ತವಂತೆ. ಈ ಪದ್ಧತಿಯನ್ನು ಈ ರೈತರು ಸುಮಾರು ೨೫-೩೦ ವರ್ಷಗಳಿಂದ ಅನುಸರಿಸುತ್ತಿದ್ದಾರೆ.

ಕೀಟನಾಶವಾಗಿ ಸುಡು ಮಣ್ಣಿನ ಬಳಕೆ

ದಕ್ಷಿಣ ಕನ್ನಡ ಜಿಲ್ಲೆಯ ರೈತರು ತಯಾರಿಸುವ ವಿಶೇಷ ಗೊಬ್ಬರ ಹಾಗೂ ಜೈವಿಕ ಕೀಟ ಹತೋಟಿಯ ಕ್ರಮ ಕುತೂಹಲಕಾರಿಯಾಗಿದೆ. ಹೊಲದಂಚಿನಲ್ಲಿ ಬೆಳೆದ ಮುಳ್ಳು, ಕೊಳೆಯದ ದಪ್ಪ ರೆಂಬೆಗಳು ಇತ್ಯಾದಿಗಳನ್ನು ಒಂದೆಡೆ ರಾಶಿ ಹಾಕಿ, ಮಣ್ಣಿನೊಡನೆ ಸುಡುವುದು, ಸುಟ್ಟ ಮಣ್ಣನ್ನು ತರಕಾರಿ ಬೆಳೆಗಳಿಗೆ ಹಾಕಿದರೆ ಉತ್ತಮ ಇಳುವರಿ ತೆಗೆಯ ಬಹುದು ಎನ್ನಲಾಗಿದೆ. ಈ ಪೊಟಾಷ್‌ಯುಕ್ತ ಮಣ್ಣು ಕೀಟನಾಶಕವಾಗಿ ಪರಿವರ್ತಿತ ವಾಗುತ್ತದೆ. ರಸ ಹೀರುವ ಪೀಡೆಗಳು ನಾಶವಾಗುತ್ತವೆಯಂತೆ.

ಬದನೆಕಾಯಿ ಬೂದಿಹುಳು ನಿಯಂತ್ರಣ

ತಮಿಳುನಾಡು ರಾಜ್ಯದ, ವಿರುದ್‌ನಗರ್ ಜಿಲ್ಲೆಯ ಸುಂದರರಾಜ ಪುರಮ್ ಗ್ರಾಮದ ರೈತರು ಬದನೆಕಾಯಿಯಲ್ಲಿ ಕಂಡುಬರುವ ಬೂದಿಹುಳಕ್ಕೆ ಒಂದು ಉಪಾಯವನ್ನು ಕಂಡುಕೊಂಡಿದ್ದಾರೆ. ಎರಡು ತಿಂಗಳ ಬದನೆಕಾಯಿ ಬೆಳೆ ಬೂದಿಹುಳುಗಳ ಅಕ್ರಮಣಕ್ಕೆ ಬಹಳ ಅನುಕೂಲವಾಗಿರುತ್ತದೆ. ಅತಿಚಿಕ್ಕ ಹುಳು ಮರಿಗಳು (ಗ್ರಬ್ಸ್) ಹಸಿರಾದ ಪೌದೆಯನ್ನು ಹಾಳು ಮಾಡಿ ಎಲೆಯ ಧ್ಯುತಿ ಸಂಶ್ಲೇಷಣೆ ಭಾಗವನ್ನು ಕಡಿಮೆ ಗೊಳಿಸುತ್ತವೆ. ಇದಕ್ಕೆ ಸುಂದರ ರಾಜಪುರಮ್ ಗ್ರಾಮದ ರೈತರು ಅವರೆವ್ (Casspa auri culatum) ಎಂಬ ಸಸ್ಯದ ಎಲೆ



ಗಳನ್ನು ಮಣ್ಣಿನ ಮಡಕೆಯಲ್ಲಿ ಹಾಕಿ ಸುಟ್ಟು ಬೆಂಕಿಯ ಜ್ವಾಲೆ ಬದನೆಕಾಯಿ ಗಿಡಗಳಿಗೆ ತಲುಪುವಂತೆ ಮಾಡುತ್ತಾರೆ. ಇದರಿಂದ ಬೂದಿ ಹುಳದ ನಷ್ಟ ಕಡಿಮೆಯಾಗುತ್ತದೆ ಎಂದು ತಿಳಿಸಿದ್ದಾರೆ.

ಎಲೆ ಸುರುಳಿ ರೋಗದ ನಿಯಂತ್ರಣ


ಗುಜರಾತಿನ ಭಾವನಗರದ ಪೊಪಟ್ ಬಾಯ್ ಎಂಬ ರೈತ ಬದನೆ ಅಥವಾ ಮೆಣಸಿನ ಬೆಳೆಗಳಲ್ಲಿ ಎಲೆ ಸುರಳಿ ರೋಗಕ್ಕೆ ಸಮುದ್ರದ ಕಳೆ(Algae-sea weed)ಯ ದ್ರಾವಣವನ್ನು ಬಳಸುತ್ತಿರುವುದಾಗಿ ತಿಳಿದು ಬಂದಿದೆ.

ಮೊದಲು ಸಮುದ್ರದ ಕಳೆಯನ್ನು ಸಂಗ್ರಹಿಸಿ ಒಣಗಿಸಿಡಲಾಗುತ್ತದೆ. ರೋಗದ ಸೂಚನೆ ಕಂಡಾಗ, ಈ ಸಮುದ್ರ ಕಳೆಯನ್ನು ರಾತ್ರಿಯಿಡಿ ನೀರಿನಲ್ಲಿ ನೆನೆಸಿ ಬೆಳಿಗ್ಗೆ ಅದನ್ನು ಹಿಂಡಿ ದ್ರಾವಣವನ್ನು ಸಂಗ್ರಹಿಸಲಾಗುತ್ತದೆ. ಈ ದ್ರಾವಣ/ನೀರನ್ನು ಶೋಧಿಸಿ, ಸಿಂಪರಣಾ ಯಂತ್ರದ ಸಹಾಯದಿಂದ ರೋಗವಿರುವ ಬೆಳೆಗಳ ಮೇಲೆ ಪೋಪಟ್ ಬಾಯಿ ಸಿಂಪಡಿಸುತ್ತಾರೆ. ಈ ಕ್ರಮವನ್ನು ಅಹಮದಾಬಾದಿನ ಸದ್ಭಾವ SRISTI ಸಂಶೋಧನಾ ಪ್ರಯೋಗಾಲಯದಲ್ಲಿ ಪರೀಕ್ಷಿಸಿದಾಗ ಶೇ. ೩೦-೩೫ರಷ್ಟು ರೋಗ ನಿಯಂತ್ರಣಕ್ಕೆ ಬಂದಿರುವುದು ಕಂಡುಬಂದಿದೆ.

ಈ ಕ್ರಮವನ್ನು ಪೊಪಟ್‌ಬಾಯ್ ಅವರು ತಮ್ಮ ಪೂರ್ವಿಕರಿಂದ ಕಲಿತಿರುವುದಾಗಿ ಇದನ್ನು ತಮ್ಮ ಗ್ರಾಮದ ಶೇ. ೨೦ರಷ್ಟು ರೈತರು ಅನುಸರಿಸುತ್ತಿರುವುದಾಗಿ ಹೇಳುತ್ತಾರೆ.

ಹೆಣ್ಣು ನೊಣಗಳ ಮೋಹಕ ಬಲೆ

ತರಕಾರಿ ಬೆಳೆಗಳಲ್ಲಿ ಹೆಣ್ಣು ನೊಣದ ಬಾಧೆ ತುಂಬಾ ಹಾನಿಕಾರಕ. ಇವುಗಳ ಹತೋಟಿಗೆ ಧಾರವಾಡ ತಾಲ್ಲೂಕಿನ ನಿಗದಿ ಗ್ರಾಮದ ಶ್ರೀ ಎಸ್.ಎಮ್. ಭಂಡಾರಿಯವರು ಸರಳ ಮೋಹಕ ಬಲೆಯೊಂದನ್ನು ತಯಾರಿಸಿದ್ದಾರೆ. ಒಂದು ದೊಡ್ಡ ಮತ್ತೊಂದು ಚಿಕ್ಕ ಭರಣಿಗಳನ್ನು ತೆಗೆದುಕೊಂಡು ಚಿಕ್ಕದರಲ್ಲಿ ಮಿಥೈಲ್ ಯೂಜಿನಾಲ್‌ನಂತಹ ಯಾವುದೇ ಸುಗಂಧ ದ್ರವ್ಯವನ್ನು ತುಂಬಿ ಮುಚ್ಚಳಿಕೆಗೆ ರಂಧ್ರಗಳನ್ನು ಮಾಡಿರುವ ದೊಡ್ಡ ಭರಣಿಯಲ್ಲಿ ಅಳವಡಿಸಲಾಗಿದೆ. ನಂತರ ಸರಪಳಿಯ ಸಹಾಯದಿಂದ ನೇತಾಡುವಂತೆ ಮಾಡಿದಾಗ ಆಕರ್ಷಿತವಾದ ಹೆಣ್ಣು ನೊಣಗಳು ಬಂದು ಮುಚ್ಚಳದ ರಂಧ್ರಗಳ ಮೂಲಕ ಭರಣಿಯೊಳಗೆ ಬೀಳುತ್ತವೆ. ಕೆಳಗಡೆ ನೀರನ್ನು ಹಾಕುವುದರಿಂದ ಅದರೊಳಗೆ ಕೀಟಗಳು ಬಿದ್ದು ಸಾಯುತ್ತವೆ.



ತೊಂಡೆಕಾಯಿ ಕೊರಕಕ್ಕೆ (Heliothis) ಮಡ್ಡಿ ಚಿಕಿತ್ಸೆ

ತೊಂಡೆಕಾಯಿ ಬಿಡುವ ಕಾಲಕ್ಕೆ ಕಂಡುಬರುವ ಕಾಯಿಕೊರಕಗಳ ಹತೋಟಿಗೆ ಹಲವು ದೇಶೀಯ ಕ್ರಮಗಳುಂಟು. ಇವುಗಳಲ್ಲಿ ಗುಜರಾತಿನ ಡಾಂಗ್ ಜಿಲ್ಲೆ ನಂದ್ಯಾಡಿ ಗ್ರಾಮದ ರಾಮ್ಜಿಬಾಯಿ ಲಕ್ಷ್ಮಣ್ಣೆ ದೇಶ್‌ಮುಖ್ ಅವರದು ಒಂದು. ಕೀಟಗಳು ಕಂಡುಬರುವ ಸಮಯಕ್ಕೆ ತೊಂಡೆಯ ಬಳ್ಳಿಗಳ ಮೇಲೆ ಮಡ್ಡಿ(molases)ಯನ್ನು ಸುರಿಯುತ್ತಾರೆ/ಸಿಂಪಡಿಸುತ್ತಾರೆ. ಮಡ್ಡಿಯ ಸಿಹಿಗೆ ಮುತ್ತಿಕೊಳ್ಳುವ ಕಪ್ಪು ಇರುವೆಗಳು ಹುಳುಗಳನ್ನು ತಿನ್ನುತ್ತವೆ. ಇರುವೆಗಳು ಹುಳುಗಳ ಅರ್ಧಭಾಗವನ್ನು ಮಾತ್ರ ತಿಂದು ಹೊಸ ಹುಳಗಳನ್ನು ಹಿಡಿಯುತ್ತವೆ. ಹೀಗೆ ಈ ಕೀಟದ ಹತೋಟಿ ಸಾಧ್ಯವಾಗಿದೆ. ಈ ಕ್ರಮ ಅನುಸರಿಸಲು ಒಂದು ಎಕರೆಗೆ ೫೦ ಕೆ.ಜಿ. ಮಡ್ಡಿ ಬೇಕಾಗುತ್ತದೆ.

ಕಾಡಿಗೆ ರೋಗಕ್ಕೆ ಔಷಧಿ

ಕೇರಳದ ಪುಲಿಂಕಟ್ಟ ಗ್ರಾಮದ ರೈತರು ತಮ್ಮ ತರಕಾರಿ ಬೆಳೆಗಳಲ್ಲಿ ಕಾಡಿಗೆ ಮತ್ತು ಹಳದಿ ರೋಗದಿಂದಾಗಿ ತೀವ್ರ ನಷ್ಟ ಅನುಭವಿಸುತ್ತಿದ್ದರು. ಜೊತೆಗೆ ಏಡಿಗಳ ಕಾಟವೂ ಹೆಚ್ಚಾಗಿತ್ತು. ಆಗ ರೈತರ ಗುಂಪೊಂದು ತಂಬಾಕು, ಸೋಪು ಮತ್ತು ಸೀಮೆ ಎಣ್ಣೆಗಳನ್ನು ಕೊಳೆಸಿ ರೋಗನಾಶಕ ಒಂದನ್ನು ಅಭಿವೃದ್ಧಿಪಡಿಸುವ ಬಗ್ಗೆ ಯೋಚಿಸಿತು. ಹೀಗೆ ಅಭಿವೃದ್ಧಿಯಾದ ರೋಗನಾಶಕವು ತರಕಾರಿ ಬೆಳೆಗಳಲ್ಲಿನ ಬ್ಯಾಕ್ಟೀರಿಯಾ ರೋಗಗಳಿಗೆ ಪರಿಣಾಮಕಾರಿ ಔಷಧವಂತೆ. ಅದಕ್ಕೂ ಹೆಚ್ಚಾಗಿ ಇದು ಹೊಲಗಳಲ್ಲಿನ ಏಡಿ ಸಂಖ್ಯೆಯನ್ನು ಕಡಿಮೆ ಮಾಡುತ್ತದೆ ಎಂಬುದು ಅವರ ವಾದ.

ಹೇನು ಹತೋಟಿ

ಬದನೆ, ಕುಂಬಳ ಮತ್ತಿತರ ಬೆಳೆಗಳಲ್ಲಿ ಕಂಡುಬರುವ ಹೇನುಗಳನ್ನು ಮನೆ (ಒಲೆ) ಬೂದಿ ಚೆಲ್ಲುವ ಮುಖಾಂತರ ನಿಯಂತ್ರಿಸಬಹುದು. ಇದು ಮಂಡ್ಯ ಜಿಲ್ಲೆ ಮುದ್ದೇನ ಗೌಡನ ಕೊಪ್ಪಲಿನ ಲಕ್ಕಣ್ಣಗೌಡ ಮತ್ತು ಇತರರು ಅನುಸರಿಸುತ್ತಿರುವ ಕ್ರಮ.

ಬದನೆಯಲ್ಲಿ ಹೇನು ನಿಯಂತ್ರಣ

ತಮಿಳುನಾಡಿನ ಕಾಂಚೀಪುರಂ ಶ್ರೀ ದಾಮೋದರನ್‌ರ ಹತ್ತು ಗುಂಟೆಗಳಲ್ಲಿದ್ದ ಬದನೆಗೆ ಹೇನುಗಳ ಬಾಧೆ ಹೆಚ್ಚಾಗಿತ್ತು. ಆಗ ೨೦೦ ಗ್ರಾಂ ತಂಬಾಕನ್ನು ಒಂದು ಲೀಟರ್ ಕುದಿಯುವ ನೀರಿನಲ್ಲಿ ಒಂದು ದಿನದ ಕಾಲ ನೆನೆಸಿದರು. ಮರುದಿನ ಅದನ್ನು ಸೋಸಿ ಸಂಗ್ರಹವಾದ ರಸವನ್ನು ಒಂಬತ್ತು ಲೀಟರ್ ನೀರಿನೊಂದಿಗೆ ಬೆರೆಸಿ ಬೆಳೆಗೆ ಸಿಂಪಡಿಸಿದರು. ಇದರಿಂದ ಹೇನುಗಳ ಪರಿಣಾಮಕಾರಿ ಹತೋಟಿ ಸಾಧ್ಯವಾಗಿದೆಯಂತೆ.

ಸೂಚನೆ : ಸಸ್ಯ ಮೂಲದ ಔಷಧಿಗಳನ್ನು ಸಿಂಪಡಿಸಿದಾಗ ಪ್ರತಿ ಲೀಟರ್ ದ್ರಾವಣಕ್ಕೆ ೧೦ ಮಿ.ಮೀ. ಸೋಪಿನ (ಬಟ್ಟೆ ಸೋಪು) ದ್ರಾವಣವನ್ನು ಮಿಶ್ರ ಮಾಡುವುದರಿಂದ ಔಷಧಿ ನೀರಿನಲ್ಲಿ ಚೆನ್ನಾಗಿ ಕಲೆಯುವುದಲ್ಲದೆ ಬೆಳೆಗಳ ಮೇಲೆ ಅಂಟಿಕೊಳ್ಳಲು ಸಹಕಾರಿ ಯಾಗುತ್ತದೆ.

ತರಕಾರಿ ತೋಟಕ್ಕೆ ಸೇವಂತಿಗೆಯ ನೆರವು

ಬದನೆ, ಟೊಮಾಟೋ, ಮೆಣಸಿನ ತೋಟದ ಬದುಗಳಲ್ಲಿ ಸೇವಂತಿಗೆ ಹೂವಿನ ಗಿಡ ಬೆಳೆಸುವುದರಿಂದ ಆ ತರಕಾರಿಗಳನ್ನು ಕಾಡುವ ಕಾಯಿಕೊರಕದ ಕಾಟ ತಪ್ಪುತ್ತದೆಯಂತೆ. ಅದೇ ರೀತಿ ಬಾಳೆ ಸಸಿ ನೆಡುವ ಮೊದಲು ಮತ್ತು ಬದನೆ, ಮೆಣಸು, ಟೊಮಾಟೋ ಸಸಿಗಳನ್ನು ನೆಡುವ ಮೊದಲು ಕೂಡ ಸೇವಂತಿಗೆಯ ಗಿಡಗಳನ್ನು ನೆಡುವುದರಿಂದ ಈ ಬೆಳೆಗಳನ್ನು ಕಾಡುವ ಸೊರಗು ರೋಗದಿಂದ ಮುಕ್ತಿ ಪಡೆಯಬಹುದು ಎನ್ನುತ್ತಾರೆ ತಮಿಳುನಾಡಿನ ಕರಿಯಣಿಕ್ಕಂ ಹಳ್ಳಿಯ ರೈತರು.

ತರಕಾರಿ ಬೆಳೆಗಳಿಗೆ ಕಳ್ಳು



ಗುಜರಾತ್ ರಾಜ್ಯದ ದಾಹೋದ ಜಿಲ್ಲೆಯ ಪರಸನಹಳ್ಳಿಯ ರೈತ ಮಹಿಳೆ ಸುನಿತಾಬೆನ್ ಮುಕೇಶಭಾಯಿ ತಾಳೇಮರ(Phonenix sylvestails)ದಿಂದ ಇಳಿಸಿದ ಕಳ್ಳು ತರಕಾರಿ ಬೆಳೆಗಳ ಮೇಲೆ ಸಿಂಪಡಿಸುತ್ತಾರಂತೆ. ೧.೫ ಲೀಟರ್ ಕಳ್ಳನ್ನು ೧೫ ಲೀಟರ್ ನೀರಿನಲ್ಲಿ ಬೆರೆಸಿದ ದ್ರಾವಣವನ್ನು ತರಕಾರಿ ಬೆಳೆಗಳ ಮೇಲೆ ಸಿಂಪಡಿಸುವುದರಿಂದ ತರಕಾರ ಗಿಡಗಳನ್ನು ಕಾಡುವ ಗಿಡ ಹೇನು, ಬಿಳಿನೊಣ ಇವಲ್ಲದೇ

ಅನೇಕ ರೀತಿಯ ಬ್ಯಾಕ್ಟೀರಿಯಾ ಮತ್ತು ವೈರಸ್ ಕಾಯಿಲೆಗಳನ್ನು ಕೂಡ ದೂರವಿಡುತ್ತದೆ ಯಂತೆ.

ಸೇವಂತಿಗೆಯಿಂದ ಗಂಟುಹುಳು ನಿಯಂತ್ರಣ

ತಮಿಳುನಾಡಿನ ಗಾಂಧಿನಗರ ಜಿಲ್ಲೆಯ, ವಚ್ಚಾಲಕುಂಡು ಗ್ರಾಮದ ನಿವಾಸಿ ಎಸ್. ಕುಪ್ಪುಸ್ವಾಮಿ ಇದೇ ರೀತಿ ಟೊಮೋಟೊ, ಮೆಣಸಿನಕಾಯಿ ಬೆಳೆಯ ಸುತ್ತ ಸೇವಂತಿಗೆ ಬೆಳೆಸುತ್ತಾರೆ. ಹೀಗೆ ಬೆಳೆಸಿದ ಸೇವಂತಿಗೆಯ ವಾಸನೆ ಟೊಮೋಟೊ, ಮೆಣಸಿನಕಾಯಿ ಬೆಳೆಗೆ ಗಂಟುಹುಳು (Nematode) ಕಾಟವನ್ನು ತಪ್ಪಿಸುತ್ತದಂತೆ. ಕುಪ್ಪುಸ್ವಾಮಿಯವರ ಇನ್ನೆರಡು ಸೊಪ್ಪಿನ ಕಷಾಯದ ಕಿವಿಮಾತುಗಳೂ ಇವೆ.

ನೀರಾ (ಹೆಂಡ)ದಿಂದ ಬ್ಯಾಕ್ಟೀರಿಯಾಗಳ ನಿಯಂತ್ರಣ

ತರಕಾರಿಗಳಿಗೆ ಸಾಮಾನ್ಯವಾಗಿ ಬ್ಯಾಕ್ಟೀರಿಯಾ ಹಾಗೂ ವೈರಸ್ ರೋಗಗಳ ಕಾಟ ಬಹಳ, ಇದರ ಜತೆ ಬಿಳಿ ಹುಳು ಏಫಿಡ್ ಕೂಡ ಸಾಮಾನ್ಯ. ಇವು ಇಳುವರಿ ಇಳಿಸಿಬಿಡುತ್ತವೆ. ಇವಕ್ಕೆ ಉತ್ತರವಾಗಿ ಗುಜರಾತ್‌ನ ಝೋಲಾದ್ ಪ್ರಾಂತ್ಯದ ರೈತರು ನೀರಾ ರಸವನ್ನು (Phoenix sylvestris) ಬಳಸುತ್ತಾರೆ. ೧.೫ ಲೀಟರ್ ನೀರಾ ರಸಕ್ಕೆ ೧೫ ಲೀಟರ್ ನೀರು ಬೆರೆಸಿ ಸಿಂಪಡಿಸಿದರೆ ಹುಳಗಳ ಹಾಗೂ ರೋಗದ ಬಾಧೆ ತಡೆಯಬಹುದು.

ಸೊರಗು ರೋಗ ಹತೋಟಿ

ಬೊಗನ್‌ವಿಲ್ಲಾ (Bougainvillea) ಎಲೆಯ ದ್ರಾವಣದಲ್ಲಿ ಟೊಮೋಟೊ ಬೀಜ ಗಳನ್ನು ನೆನೆಸಿ ಬಿತ್ತನೆ ಮಾಡುವುದರಿಂದ ಸಸಿ ಸೊರಗುವ ಕಾಯಿಲೆ ಹತೋಟಿಗೆ ಬರುವುದಂತೆ. ೨೦ ಮಿ.ಲೀ ಸೊಪ್ಪಿನ ದ್ರಾವಣವನ್ನು ಒಂದು ಲೀಟರ್ ನೀರಿನಲ್ಲಿ ಬೆರೆಸಿ, ಈ ದ್ರಾವಣದಲ್ಲಿ ಟೊಮೋಟೊ ಬೀಜಗಳನ್ನು ಸುಮಾರು ೬ ಗಂಟೆಗಳ ಕಾಲ ನೆನೆಸಿಡಬೇಕಂತೆ.

ಮಿಶ್ರ ಬೆಳೆಯಿಂದ ಕೀಟ ಹತೋಟಿ

ಸಾವಯವ ವಿಧಾನದಲ್ಲಿ ಎಲೆಕೋಸು ಬೆಳೆಸುವ ರೈತರು ಮೂರು ಸಾಲು ಎಲೆಕೋಸುಗಳ ನಡುವೆ ಒಂದು ಸಾಲು ಸಾಸಿವೆ ಬೆಳೆಯುತ್ತಾರೆ. ಕೋಸಿಗೆ ಬರುವ ನೊಣಗಳು ಮೊಟ್ಟೆ ಯಿಡಲು ಸಾಸಿವೆಗೆ ಹೋಗಿ ಕೂರುವುದ ರಿಂದ ಕೋಸು ಸುರಕ್ಷಿತ.



ಟೊಮೋಟೊ ಗಿಡಗಳ ಮಧ್ಯೆ ಚೆಂಡು ಹೂವಿನ ಗಿಡ ಬೆಳೆಸಿದರೆ, ಟೊಮೋಟೊಗೆ ಬರುವ ಹುಳ ಹಾಗೂ ರೋಗ ತಡೆಯಬಹುದೆಂಬುದು ಹಲವರ ಅನುಭವ.

ಟೊಮೋಟೊ ಗಿಡಗಳ ವೈರಸ್ ಹತೋಟಿ

ಎಣ್ಣೆ ತೆಗೆದು ಉಳಿಯುವ ಬೇವಿನ ಹಿಂಡಿ, ಸಾಸಿವೆ ಹಿಂಡಿ ಇವುಗಳನ್ನು ಪುಡಿ ಮಾಡಿ ಟೊಮೋಟೊ ಗಿಡಗಳ ಬುಡಕ್ಕೆ ಹಾಕುವುದರಿಂದ ಅವುಗಳಿಗೆ ವೈರಸ್ ಕಾಯಿಲೆ ಬರುವುದನ್ನು ತಡೆಗಟ್ಟಬಹುದೆಂಬುದು ಉತ್ತರ ಪ್ರದೇಶದ ರೈತರ ಅನುಭವ.


ಟೊಮೋಟೊ ಬೆಳೆಯಲ್ಲಿ ಕೀಟ ನಿಯಂತ್ರಣ

ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನ ಕರೆಯಾಗಳಹಳ್ಳಿಯ ಕೃಷಿಕ ಕಂಠಪ್ಪನವರು, ತಮ್ಮ ಟೊಮೋಟೊ ಬೆಳೆಗೆ ಬರುವ ಕೀಟಗಳನ್ನು ನಿಯಂತ್ರಿಸಲು, ಬೇವಿನ ಎಲೆಗಳನ್ನು ನೀರಿನಲ್ಲಿ ನೆನೆಸಿ, ನಂತರ ಅದರ ರಸ ತೆಗೆದು, ಅದಕ್ಕೆ ಸೋಪಿನ ಪುಡಿ ಬೆರೆಸಿ, ಗಿಡಗಳಿಗೆ ಸಿಂಪಡಿಸುತ್ತಾರೆ.

ಟೊಮೋಟೊ ಹೇನುಗಳಿಂದ ರಕ್ಷಣೆ

ಶಿಡ್ಲಘಟ್ಟ ತಾಲ್ಲೂಕಿನ ಬೆಳ್ಳೂಟಿ ಗ್ರಾಮದ ವೆಂಕಟಪ್ಪನವರು ತಮ್ಮ ಟೊಮೆಟೋ ಹೊಲದಲ್ಲಿ ಕಾಣಿಸಿಕೊಂಡ ಹೇನುಗಳನ್ನು ನೈಸರ್ಗಿಕವಾಗಿ ಹತೋಟಿ ಮಾಡಲು ಪ್ರಯತ್ನಿಸಿದ್ದಾರೆ. ಇವರ ಪ್ರಕಾರ ೨೫ ಗ್ರಾಂ. ಸೀತಾಫಲದ ಸೊಪ್ಪನ್ನು ಲೀಟರ್ ನೀರಿನಲ್ಲಿ ನೆನೆಸಿ ಅದನ್ನು ಅರೆದು ಸೋಸಬೇಕು. ಸೋಸಿದ ರಸವನ್ನು ೧ ಲೀಟರ್ ನೀರಿಗೆ ಹಾಕಿ ನಂತರ ೫ ಗ್ರಾಂ ಸೋಪ್ ಪೌಡರ್ (ನಿರ್ಮಾ ಅಥವಾ ಸರ್ಫ್) ಬೆರೆಸಿ ಸಂಜೆಯ ವೇಳೆ ಸಿಂಪಡಿಸುವುದು ಉತ್ತಮ. ಇದರಿಂದ ಟೊಮೆಟೋ ಬೆಳೆಗೆ ಬೀಳುವ ಹೇನುಗಳಿಂದ ರಕ್ಷಣೆ ಸಿಗುವುದಂತೆ.

ಸಸ್ಯಗಳ ಹೇನು ನಿಯಂತ್ರಿಸಲು



ಹಸಿಮೆಣಸಿನಕಾಯಿ ಮತ್ತು ಬೆಳ್ಳುಳ್ಳಿಯನ್ನು ಸಮ ಪ್ರಮಾಣದಲ್ಲಿ ಬೆರೆಸಿಕೊಂಡು ಚೆನ್ನಾಗಿ ಜಜ್ಜಿ ಸಾರವನ್ನು ಸಿದ್ಧಪಡಿಸಿಕೊಳ್ಳಬೇಕು. ಇದರ ಎರಡರಷ್ಟು ನೀರು ಬೆರೆಸಿಕೊಂಡು ಬೆಳೆಗಳ ಮೇಲೆ ಸಿಂಪಡಿಸಬೇಕು. ಇದರಿಂದ ತರಕಾರಿ ಬೆಳೆಗಳಿಗೆ ಸಾಮಾನ್ಯವಾಗಿ ಬೀಳುವ ಹೇನು ನಿಯಂತ್ರಿಸಬಹುದು.

ಹೊಲದಲ್ಲೇ ಆಲೂಗಡ್ಡೆಯ ಶೇಖರಣೆ !

ಹೊಸಕೋಟೆ ತಾಲ್ಲೂಕಿನ ಬೆಂಡಗಾನಹಳ್ಳಿಯ ಸುತ್ತಮುತ್ತಲಿನ ರೈತರು ಆಲೂಗಡ್ಡೆಯನ್ನು ಹೊಲದಲ್ಲೇ ಶೇಖರಿಸುವ ಸರಳ ಉಪಾಯವನ್ನು ಬಹಳ ಹಿಂದೇ ಕಂಡುಕೊಂಡಿರುವರು. ಹೊಲದ ಎತ್ತರ ಪ್ರದೇಶದಲ್ಲಿ, ನೆಲ ಗಟ್ಟಿ ಮಾಡಿ, ೨೫ ಅಡಿ ಉದ್ದ ೪ ಅಡಿ ಅಗಲಕ್ಕೆ ಪ್ರತಿ ೪ ಅಡಿಗೆ ಎರಡೆರಡು

ಕಲ್ಲುಕಂಬ ಹಾಕಿ ಚಪ್ಪರ ಹಾಕುವುದು. ಚಪ್ಪರಕ್ಕೆ ನೀಲಗಿರಿ ತೊಲೆಗಳನ್ನು ಹಾಕಿ, ತೆಂಗಿನ ಗರಿ, ಹೊಂಗೆಸೊಪ್ಪು ಹೊದಿಸಿ, ಮರೆ ಮಾಡುವುದು. ಗಟ್ಟಿನೆಲದ ಮೇಲೆ ಕಾಶಿ ಹುಲ್ಲು ಅಥವಾ ಅಂಚಿ ಹುಲ್ಲು, ಕಬ್ಬಿನ ಗರಿಗಳನ್ನು ದಪ್ಪನಾಗಿ ಹೊದೆಸುವುದು. ಅದರ ಮೇಲೆ ಅಗೆದು ತೆಗೆದ ಆಲೂಗಡ್ಡೆಯನ್ನು ತಂದು ೩-೫ ಅಡಿ ಎತ್ತರದಷ್ಟು ದಪ್ಪವಾಗಿ ಈ ಮೇಲೆ ತಿಳಿಸಿದ ಸೊಪ್ಪು ಅಥವಾ ಆಲೂಗಡ್ಡೆಯ ಸೊಪ್ಪನ್ನೇ ಗಟ್ಟಿಯಾಗಿ ಹಾಕಿ ರಾಶಿಯನ್ನು ಮುಚ್ಚಲಾಗುತ್ತದೆ. ಎರಡು ಮೂರು ವಾರಗಳಿಗೊಮ್ಮೆ ಹುಳು ಬಿದ್ದಿದೆಯೆ ಎಂದು ನೋಡುತ್ತಿರಬೇಕು. ಈ ರೀತಿ ಆಲೂಗಡ್ಡೆಯನ್ನು ೨-೩ ತಿಂಗಳು ಶೇಖರಿಸಿಡಲು ಸಾಧ್ಯ. ಆಲೂಗಡ್ಡೆಗೆ ಇಲಿ, ಹೆಗ್ಗಣಗಳ ಕಾಟ ತಪ್ಪಿಸಲು ರೈತರು ಕಂಡುಕೊಂಡ ಸರಳ ಅಷ್ಟೇ ಪರಿಣಾಮಕಾರಿ ಕ್ರಮ ಎಂದರೆ ರಾಶಿಯ ಸುತ್ತಲೂ ಎಕ್ಕದ ಗಿಡ, ಎಲೆಗಳನ್ನು ಹಾಕುವುದು. ಇದರಿಂದ ಹತ್ತಿರ ಬಂದ ಮೂಷಕಗಳು ಎಕ್ಕದ ಘಾಟಿಗೆ ಹೆದರಿ, ಆಲೂಗಡ್ಡೆ ಆಸೆ ಬಿಟ್ಟು ಪರಾರಿಯಾಗುತ್ತವಂತೆ.

ಈ ರೀತಿಯ ಎರಡು ಚಪ್ಪರಗಳು ಒಂದು ಎಕರೆಯಲ್ಲಿ ಬೆಳೆಯುವ ಆಲೂಗಡ್ಡೆಯನ್ನು ಶೇಖರಿಸಲು ಸಾಕಂತೆ. ಪ್ರತಿ ಚಪ್ಪರಕ್ಕೆ ೧೨ ಕಲ್ಲುಕಂಬ ಬೇಕಾಗುತ್ತದೆ. ಚಪ್ಪರ ಹಾಕಲು, ಸೊಪ್ಪು, ಹುಲ್ಲು ತಂದು ಹೊಂದಿಸಲು ಒಟ್ಟಾರೆ ೭ ರಿಂದ ಹತ್ತು ಆಳುಗಳು ಬೇಕಾಗುತ್ತದೆ. ಮಧ್ಯಾಹ್ನದ ಸುಡು ಬಿಸಿಲಿನಲ್ಲೂ, ಈ ರಾಶಿಯ ಒಳಗೆ ಕೈ ಹಾಕಿ ತಡವಿದರೆ, ತಂಪಾದ ಶೈತ್ಯಾಗಾರದಲ್ಲಿ ಆಲೂಗಡ್ಡೆಗಳು ನಿದ್ರಿಸುತ್ತಿರುವುದು ತಿಳಿಯುತ್ತದೆ.

ಇಟ್ಟರೇ ಸೆಗಣಿಯಾದೆ .... ಔಷಧಿಯೂ ಆದೆ!

ಹಿತ್ತಲಿನಲ್ಲಿ ಬೆಳೆದ ಚೀನಿಕಾಯಿ, ಕುಂಬಳ ಕಾಯಿ ನಾಳೆ ಅಡುಗೆಗೆ ರೆಡಿ ಎನ್ನುವಷ್ಟರಲ್ಲೇ ಮಂಗ ಮಾಯವಾದರೆ? ಮಂಗಗಳಿಂದ ಹೇಗಪ್ಪ ಕಾಪಾಡುವುದು? ಅದಕ್ಕೆ ತೀರ್ಥಹಳ್ಳಿ ತಾಲ್ಲೂಕಿನ ಬಸವನಗದ್ದೆಯ ರವಿ ಉಪಯೋಗಿಸಿದ್ದು ಸೆಗಣಿ. ಸೆಗಣಿ ಕದಡಿ ಕಾಯಿಯ ಮೇಲೆಲ್ಲಾ ಹಚ್ಚಿಟ್ಟರೆ ಮಂಗ ತಿನ್ನುವುದಿಲ್ಲವಂತೆ; ಮಂಗದ ಕಾಟದಿಂದ ಕಾಯಿಗಳು ಪಾರು. ಇಂಗು ತಿಂದ... ಅಲ್ಲಲ್ಲಾ... ಸೆಗಣಿ ತಿಂದ ಮಂಗ! ಎನ್ನುತ್ತಾರೆ ಬಸವಗದ್ದೆಯ ರವಿ.

ಗಿಡ ಸೊರಗುತ್ತಿದೆಯೇ?

ಬ್ಯಾಕ್ಟೀರಿಯವೋ, ಬೂಸ್ಟೋ ಒಟ್ಟಾರೆ ಗಿಡ ಸೊರಗುವ ಕಾಯಿಲೆ ತಡೆಯಲು ಉತ್ತರ ಪ್ರದೇಶದ ರೈತರು ಅನೇಕ ದಾರಿ ಹುಡುಕಿದ್ದಾರೆ.

ಕಡಲೆ ಕಾಳಿನ ಗಿಡಗಳ ಜೊತೆಯಲ್ಲಿ ಬಾರ್ಲಿಯನ್ನು ಬೆಳೆಸುವುದರಿಂದ ಕಡಲೆ ಗಿಡ ಸೊರಗುವುದನ್ನು ತಡೆಯಬಹುದಂತೆ.

ಅದೇ ರೀತಿ ತೊಗರಿಗಿಡಗಳ ನಡುವೆ ಜೋಳ ಬೆಳೆಸುವುದರಿಂದ ತೊಗರಿ ಗಿಡಗಳು ಸೊರಗುವುದನ್ನು ತಪ್ಪಿಸಬಹುದಂತೆ.

ಒಂದು ಕೆ.ಜಿ. ಕಡಲೆಕಾಳಿಗೆ ಒಂದು ಗ್ರಾಂ. ಇಂಗು ಅಥವಾ ೨.೫ ಗ್ರಾಂನಷ್ಟು ಸಾಸಿವೆ ಎಣ್ಣೆಯಿಂದ ಬೀಜೋಪಚಾರ ಮಾಡಿ ಬಿತ್ತಿದರೆ ಗಿಡಸೊರಗುವ ಕಾಯಿಲೆಯಿಂದ ಮುಕ್ತಗೊಳಿಸಬಹುದಂತೆ.


ಆಡಿನ ಹಾಲು ಔಷಧಿಯೇ?

ಹೌದೆನ್ನುತ್ತಾರೆ ಗುಜರಾತಿನ ಮಾನಭಾಯಿ ನಾತುಭಾಯಿ ಅಗೋರಿ. ಹಸಿಮೆಣಸಿನ ಕಾಯಿ, ಕಾಳುಮೆಣಸು, ಬದನೆ ಇವುಗಳಿಗೆ ಬರುವ ಎಲೆ ಮುದುಡುವ ರೋಗ, ಹೂ ಉದುರುವುದು ಇವೆಲ್ಲವನ್ನೂ ತಪ್ಪಿಸಲು ಆಡಿನ ಹಾಲೆ ಸರಿಯಾದ ಔಷಧಿ ಎನ್ನುತ್ತದೆ ಅವರ ಅನುಭವ. ಔಷಧಿ ಸಿಂಪರಣೆ ಮಾಡುವ ಯಂತ್ರ ಉಪಯೋಗಿಸಿ ಆಡಿನ ಹಾಲನ್ನು ಗಿಡಗಳ ಮೇಲೆ ಸಿಂಪಡಿಸುವುದರಿಂದ ಒಂದೇ ವಾರದಲ್ಲಿ ಕಾಯಿಲೆ ಹತೋಟಿಗೆ ಬರುತ್ತದೆ.

ಎಲೆಕೋಸಿನಲ್ಲಿ ಹುಳು

ಹಸಿರು ಬಣ್ಣದ ಕಂಬಳಿ ಹುಳುಗಳು (Heliothis armigera) ಎಲೆಕೋಸನ್ನು ತಿಂದು ರೈತರಿಗೆ ಕಾಟ ಕೊಡುತ್ತವೆ.

ಗುಜರಾತಿನ ಭಾಗವನ್ ಭಾಯಿ ಅಂಬಾಬಾಯಿ ಗೋರಿಯವರು ಕತ್ತಾಳೆ (Agave americana) ಮತ್ತು ಮೆಣಸಿನಕಾಯಿ ಉಪಯೋಗಿಸಿ ಈ ಹುಳುಗಳನ್ನು ನಾಶಪಡಿಸುತ್ತಾರೆ.



ಕತ್ತಾಳೆ ಎಲೆಯನ್ನು ಕಲ್ಲಿನ ಮೇಲೆ ಚೆನ್ನಾಗಿ ಜಜ್ಜಿ, ಹಿಂಡಿ ರಸ ತೆಗೆಯುತ್ತಾರೆ. ಈ ರಸಕ್ಕೆ ಒಂದು ಮುಷ್ಟಿಯಷ್ಟು ಒಣಗಿದ ಕೆಂಪು ಮೆಣಸಿನಕಾಯಿಯ ಪುಡಿಯನ್ನು ಸೇರಿಸಿ ಕಲಿಸುತ್ತಾರೆ. ಪೇಸ್ಟ್‌ನಂತಹ ಈ ಮಿಶ್ರಣಕ್ಕೆ ಸುಮಾರು ೧೫ ಲೀ.ನಷ್ಟು ನೀರು ಸೇರಿಸಿ ದ್ರಾವಣ ತಯಾರಿಸಿ ಔಷಧಿ ಸಿಂಪರಣೆಯ ಯಂತ್ರಗಳಿಂದ ತೋಟದ ಕ್ಯಾಬೇಜ್ ಬೆಳೆಯ ಮೇಲೆಲ್ಲಾ ಸಿಂಪಡಿಸುತ್ತಾರೆ. ಕಳೆದ ೭ ವರ್ಷಗಳ ಅವರ ಅನುಭವದ ಪ್ರಕಾರ ಈ ವಿಧಾನದಿಂದ ಕಂಬಳಿ ಹುಳುಗಳನ್ನು ಯಶಸ್ವಿಯಾಗಿ ನಿಯಂತ್ರಿಸಲು ಸಾಧ್ಯ ಎನ್ನುತ್ತಾರೆ ಭಾಗವನ್‌ಭಾಯಿ.

ಕೋಸಿನಲ್ಲಿ ಕೀಟ ನಿಯಂತ್ರಣ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕಿನ ಅರದೇಶನಳ್ಳಿಯ ಕೃಷ್ಣಪ್ಪನವರು ಹೂಕೋಸು ಮತ್ತು ಎಲೆಕೋಸಿಗೆ ಹಾನಿ ಮಾಡುವ ಹೂಜಿ ಹುಳು ನಿಯಂತ್ರಿಸಲು ಬೇವಿನ ಬೀಜದ ಕಷಾಯವನ್ನು ಸಿಂಪಡಿಸುತ್ತಾರಂತೆ. ಅವರು ಒಂದು ಕೆ.ಜಿ. ಬೇವಿನ ಬೀಜವನ್ನು ನೆನೆಸಿ, ಅರೆದು ೧೦೦ ಲೀಟರ್ ನೀರಿನೊಂದಿಗೆ ಬೆರೆಸಿ ಅದನ್ನು ಸೋಸಿ ಬೆಳೆಗೆ ಸಿಂಪಡಿಸುತ್ತಾರಂತೆ.

ಮೆಣಸಿನ ಕಾಯಿಯಲ್ಲಿ ಕಪ್ಪು ಚಿಟ್ಟೆ ಬಾಧೆ ನಿಯಂತ್ರಣ

ಗುಜರಾತಿನ ದಾಹುದ್ ಪ್ರದೇಶದಲ್ಲಿ ಮೆಣಸಿನಕಾಯಿ ಗಿಡಗಳ ಎಲೆ ತಿನ್ನುವ ಕಪ್ಪು ಚಿಟ್ಟೆ(Spodoptera liteura)ಯನ್ನು ನಿಯಂತ್ರಿಸಲು ಕಪುರಿಬೆಹೆನ್ ಚೌಹಾನ್ ಅವರು ಗುಜರಾತಿಯಲ್ಲಿ ಕಡ ಎನ್ನುವ ಗಿಡದ (Picrorhioa kurrvoa) ಎಲೆಗಳನ್ನು ಉಪಯೋಗಿಸುತ್ತಾರಂತೆ. ಮೆಣಸಿನ ಗಿಡಗಳನ್ನು ಹೊಲಕ್ಕೆ ನಾಟಿ ಮಾಡಿದ ನಂತರ, ಕಡದ ಎಲೆಗಳನ್ನು, ಮೆಣಸಿನ ಸಾಲುಗಳ ಮಧ್ಯೆ ಹರಡುತ್ತಾರೆ. ಕಡದ ಎಲೆಗಳು ಕಹಿಯಾಗಿರುವುದರಿಂದ ಕಪ್ಪು ಚಿಟ್ಟೆಗಳು ದೂರ ಸರಿಯುತ್ತವಂತೆ ಮತ್ತು ಎಲೆಗಳು ನೆಲಕ್ಕೆ ಹೊದಿಕೆಯಾಗುವುದರಿಂದ ಮಣ್ಣಿನಲ್ಲಿ ತೇವಾಂಶವನ್ನು ಕಾಯ್ದಿರಿಸಿಕೊಂಡಂತಾಗುತ್ತದೆ ಎಂಬುದು ಕಪುರಿಬೆಹೆನ್ ಚೌಹಾನ್ ಅವರ ಅಭಿಪ್ರಾಯವಾಗಿದೆ.

ತಂಬಾಕಿನಿಂದ ಕೀಟ ನಿಯಂತ್ರಣ

ರೈತರು ಹಿಂದಿನ ಕಾಲದಿಂದಲೂ ವಿವಿಧ ಬೆಳೆಗಳಲ್ಲಿ ಕೀಟ ಹತೋಟಿ ಮಾಡಲು ತಂಬಾಕಿನ ಕಷಾಯವನ್ನು ಬಳಸುತ್ತಾರೆ. ಪಶ್ಚಿಮ ಬಂಗಾಳದ ಜನಿಯ ಗ್ರಾಮದ ಅಶ್ವಿನಿ ಮಂದಾಲ್ ಅವರು, ಹೂಕೋಸಿನ ಬೆಳೆಯಲ್ಲಿ ಬರುವ ವಜ್ರ ಬೆನ್ನಿನ ಹುಳು (Plutella maculipennis), ಕಂಬಳಿ ಹುಳು (Diacrisia) ಮುಂತಾದ ಕೀಟಗಳನ್ನು ನಿಯಂತ್ರಿಸಲು ತಂಬಾಕಿನ ಕಷಾಯವನ್ನು ಉಪಯೋಗಿಸುತ್ತಾರಂತೆ.

ಎಲೆ ಮುದುಡುವ ರೋಗಕ್ಕೆ ಬೂದಿಯ ಔಷಧಿ

ಮೆಣಸಿನ ಕಾಯಿಯಲ್ಲಿ ಎಲೆಮುದುಡುವ ರೋಗ ಸಾಮಾನ್ಯವಾಗಿ ಕಂಡುಬರುವ ಕಾಯಿಲೆ. ತ್ರಿಪುರಾದ ರೈತರು ಇದನ್ನು ತಡೆಯಲು ಬೂದಿಯನ್ನು ಸೀಮೆಎಣ್ಣೆಯೊಂದಿಗೆ ಮಿಶ್ರಮಾಡಿ ಗಿಡದ ಮೇಲೆ ಧೂಳೀಕರಿಸುತ್ತಾರಂತೆ. ಸೀಮೆಎಣ್ಣೆಯ ಪ್ರಮಾಣವೇನಿದ್ದರೂ ಘಾಟು ವಾಸನೆ ಹೊಡೆಯುವಷ್ಟು ಮಾತ್ರ ಸಾಕೆನ್ನಲಾಗಿದೆ.

ತರಕಾರಿ ಕೀಟಗಳ ನಿಯಂತ್ರಣ


೨ ತಿಂಗಳು ಬೆಳೆದ ಚೀನಿ, ಬದನೆ, ಕುಂಬಳ ಗಿಡಗಳ ಎಲೆಗಳ ಮೇಲೆ ಕೆಲವು ಹನಿ ಸೀಮೆ ಎಣ್ಣೆ ಸಿಂಪಡಿಸಿ ನಂತರ ಹಳೆ ವಿಭೂತಿ (ಬೆರಣಿ ಸುಟ್ಟ ಬೂದಿ)ಯನ್ನು ಚೆಲ್ಲುವುದರಿಂದ ಸಾಮಾನ್ಯವಾಗಿ ಈ ಗಿಡಗಳ ಮೇಲೆ ಬರುವ ಕೀಟಗಳು ಇರುವುದಿಲ್ಲವಂತೆ. ಇದೇ ಕ್ರಮವನ್ನು ಮತ್ತೊಮ್ಮೆ ಹೂ ಬಿಡುವ ಕೆಲವು ದಿನಗಳ ಮುಂಚಿತವಾಗಿ ಮಾಡುವುದರಿಂದ ಕೀಟಗಳ ನಿಯಂತ್ರಣ ಸಾಧ್ಯ. ಹಾಗೇ ಮೆಣಸಿನ ಗಿಡದ ಎಲೆ, ಕಾಯಿಗಳು ಉದುರಲಾರಂಭಿಸಿದಾಗ ಕುಂಬಾರನ ಮನೆಯ ಬೂದಿಯನ್ನು ಹೊಲದ ಮೇಲೆ ಚೆಲ್ಲಿದರೆ, ಉದುರುವಿಕೆ ನಿಲ್ಲುತ್ತದೆ ಎಂಬ ಮಾಹಿತಿಯನ್ನು ಲಕ್ಷ್ಮೀಬಾಯಿ ಪೋತುರೆಡ್ಡಿಪಲ್ಲಿ, ಆಂಧ್ರಪ್ರದೇಶ ಇವರು ನೀಡಿರುತ್ತಾರೆ.

ಸಸ್ಯಗಳಿಗೆ ಕಚಗುಳಿ

ನಮಗೆ ಯಾರಾದರೂ ಕಚಗುಳಿ ಕೊಟ್ಟರೆ ನಾವು ನಗುತ್ತೇವೆ. ಸಸ್ಯಗಳಿಗೆ ಕೊಟ್ಟರೆ ಅವುಗಳು ದಪ್ಪವಾಗುತ್ತವಂತೆ. ಸಸ್ಯ ವಿಜ್ಞಾನದ ಪ್ರಾಧ್ಯಾಪಕ ಜೈಲ್ ಟೈಲರ್ ಪ್ರಕಾರ ಕಚಗುಳಿ ಗಿಡದ ಬೆಳವಣಿಗೆಯನ್ನು ಕುಂಠಿತಗೊಳಿಸುವುದಂತೆ. ದಿನಕ್ಕೊಂದು ಹತ್ತುಬಾರಿ ಗಿಡಗಳನ್ನು ಮುಟ್ಟುವುದರಿಂದ ಗಿಡಗಳು ಕುಳ್ಳಗಾಗಿ ಅವುಗಳ ಕಾಂಡಗಳು ದಪ್ಪ ವಾಗುತ್ತವಂತೆ. ಸಸ್ಯಗಳಿಗೆ ನರವ್ಯೂಹವಿಲ್ಲದಿದ್ದರೂ ಹೊರಗಿನ ಪ್ರಚೋದನೆಗಳಿಗೆ ಪ್ರತಿಕ್ರಿಯಿಸುವ ಕಿಣ್ವಗಳಿರುವುದರಿಂದ ಹೀಗಾಗುತ್ತದಂತೆ.

ಹುಳದ ಕಾಟ ತಪ್ಪಿಸಲು ಹಕ್ಕಿಯ ನೆರವು

ಆಲೂಗಡ್ಡೆ, ಮೆಣಸಿನಕಾಯಿಯಂತಹ ಸಸ್ಯಗಳಲ್ಲಿ ಕಂಡುಬರುವ ಕಾಂಡ ಕತ್ತರಿಸುವ ಹುಳುವಿನ ಕಾಟ ತಪ್ಪಿಸಲು ತ್ರಿಪುರಾ ರಾಜ್ಯದ ಜನರು ಹಕ್ಕಿಗಳ ನೆರವು ಪಡೆಯುತ್ತಾರೆ. ಹೊಲದಲ್ಲಿ ಬಿದರಿನ ಕಡ್ಡಿಗಳು, ಒಣಗಿದ ಹುಲ್ಲು ಇವನ್ನೆಲ್ಲಾ ಉಪಯೋಗಿಸಿ, ಅಟ್ಟಣಿಗೆ ಹಾಕುತ್ತಾರಂತೆ. ಅಟ್ಟಣಿಗೆಯಲ್ಲಿ ಬಂದು ಕುಳಿತುಕೊಳ್ಳುವ ಹಕ್ಕಿಗಳು ಹುಳುಗಳನ್ನು ತಿಂದು ಗದ್ದೆಯ ಕಾವಲು ನಡೆಸುತ್ತವೆ. ಬೆಳದಿಂಗಳ ರಾತ್ರಿ ಹಕ್ಕಿಗಳ ಚಟುವಟಿಕೆ ಹೆಚ್ಚಂತೆ.



ಕ್ಯಾರೆಟ್ ಈರುಳ್ಳಿ ಸಂಬಂಧಿಗಳೇ?

ಈ ಪ್ರಶ್ನೆಗೆ ನಮ್ಮ ನಾಡಿನ ಕೃಷಿಋಷಿ ಸೋರ ಹುಣಗೆ ನಾರಾಯಣರೆಡ್ಡಿಯವರ ಉತ್ತರ ಹೌದೆಂಬ ಅನುಭವದ ಮಾತು. ಕ್ಯಾರೆಟ್ ಬೆಳೆಯ ಮಧ್ಯೆ ಒಂದೊಂದು ಸಾಲು ಈರುಳ್ಳಿ ಬಿತ್ತನೆ ಮಾಡಿದರೆ ಎರಡೂ ಬೆಳೆಗೆ ಹುಳ ಬರುವುದಿಲ್ಲವಂತೆ. ನೀವು ಕ್ಯಾರೆಟ್ ಒಂದೇ ಬೆಳೆಯುತ್ತಿದ್ದರೆ ಅದರ ಸಂಬಂಧಿಯನ್ನೂ ಬಿತ್ತನೆ ಮಾಡಿ ಫಲಿತಾಂಶ ನಮಗೆ ತಿಳಿಸಿ. ಹಾಗೆ ಬೀನ್ಸ್ ಬೆಳೆಯ ಮಧ್ಯೆ ಒಂದೊಂದು ಸಾಲು ಮುಸುಕಿನ ಜೋಳ ಬಿತ್ತಿದರೆ ಬೀನ್ಸ್ ಕಾಯಿ ಕೊರೆಯುವ ಹುಳ ಹತೋಟಿಯಾಗುವುದು.

ಬಂಗಲೆ ಸೊಪ್ಪು

ಬಂಗಲೆ ಸೊಪ್ಪನ್ನು ನೀರಿನಲ್ಲಿ ಕೊಳೆಸಿ ಅದರ ದ್ರಾವಣವನ್ನು ತರಕಾರಿಗೆ ಸಿಂಪಡಿಸಿದರೆ ಕ್ರಿಮಿಕೀಟಗಳು ಬೀಳುವುದು ಕಡಿಮೆಯಾಗುವುದನ್ನು ಮಲೆನಾಡಿನ ರೈತರು ಕಂಡುಕೊಂಡಿರುವರು.


ಮೆಣಸಿನ ರೋಗಕ್ಕೆ

ಮೆಣಸಿನ ಮುಡಿಗೆ ಇಂಗಿನ ನೀರು ಸಿಂಪಡಿಸಿದರೆ ಕೊಳೆರೋಗ (wilt) ಕಡಿಮೆಯಾಗುವುದಾಗಿ ಧಾರವಾಡದ ಶ್ರೀ ಭರಮೆಗೌಡರ ಅನುಭವ. ಹಾಗೇ ಮೆಣಸಿನಕಾಯಿ ಮಲ್ಲೆ ರೋಗ, ಎಲೆ ಮುದುಡು ರೋಗ ಈ ಬೆಳೆಯನ್ನು ಅತಿಯಾಗಿ ಬಾಧಿಸುತ್ತವೆ. ಮೆಣಸಿನ ಬೆಳೆ ಸಾಲುಗಳ ನಡುವೆ ಅಂತರ ಬೆಳೆಯಾಗಿ ಅಥವಾ ಬೆಳೆಯ ಸುತ್ತಾ ಮುಸುಕಿನ ಜೋಳ ಬೆಳೆದಲ್ಲಿ ಈ ರೋಗ ಹರಡುವುದನ್ನು ತಪ್ಪಿಸಬಹುದು.

ಇದೇ ನಂಜು ರೋಗ ತಡೆಗಟ್ಟಲು ಅಜಮೇರಿನ ಕೆಲವು ರೈತರು ಕೀಂಪ್ (ಲೆಪ್ಟಡೇನಿಯಾ ಪೈರೋಬೆಕ್ನಿಕಾ) ಮತ್ತು ತಂಬಾಕಿನ ರಸಗಳ ಮಿಶ್ರಣವನ್ನು ಸಿಂಪರಿಸಿ ರೋಗ ಹತೋಟಿ ಸಾಧಿಸಿದ್ದಾರೆ.

ಬೆರಣಿಯೊಳಗೆ ಬೀಜ

ಹೀರೆ, ಸೌತೆ, ಕುಂಬಳ ಇವುಗಳ ಬೀಜಗಳನ್ನು ಮಲೆನಾಡ ಮಹಿಳೆಯರು ಸೆಗಣಿಯ ಬೆರಣಿಯಲ್ಲಿಟ್ಟು ೨-೩ ವರ್ಷದವರೆಗೆ ಹಾಳಾಗದಂತೆ ಸಂಗ್ರಹಿಸಿಡುತ್ತಾರೆ. ಸೆಗಣಿಯಿಂದ ದಪ್ಪ ಬೆರಣಿಯನ್ನು ತಟ್ಟಿ ಹಸಿಯಾಗಿರುವಾಗಲೇ ಅದರಲ್ಲಿ ಬೀಜಗಳನ್ನು ಇಟ್ಟು ಬೆರಳಿನಿಂದ ಒತ್ತುತ್ತಾರೆ. ಬಿಸಿಲಿನಲ್ಲಿ ಒಣಗಿದ ನಂತರ ಇಂತಹ ಬೆರಣಿಗಳನ್ನು ಚಿತ್ರದಲ್ಲಿ ತೋರಿಸಿರುವಂತೆ ಒಂದರ ಮೇಲೊಂದು ಪೇರಿಸಿ ಹಗ್ಗದಲ್ಲಿ ಸೇರಿಸಿಟ್ಟುಬಿಡುತ್ತಾರೆ.



ಸುಲಭದಲ್ಲಿ ದೊರಕುತ್ತಿರುವ ಗೋಣಿ ಚೀಲಗಳು, ರಾಸಾಯನಿಕ ಗೊಬ್ಬರಗಳ ಚೀಲಗಳು, ಪ್ಲಾಸ್ಟಿಕ್ ಲಕೋಟೆಗಳು (ಕವರ್) ಹಿಂದಿನ ಬೀಜ ಸಂಗ್ರಹಣೆಯ ಪದ್ಧತಿಗಳನ್ನು ಜನ ಮರೆಯುವಂತೆ ಮಾಡಿವೆ. ಜೊತೆಗೆ ಈ ಎಲ್ಲಾ ಬೀಜ ಸಂಗ್ರಹಣಾ ಪದ್ಧತಿಗಳಿಗೆ ಅಡುಗೆ ಕೋಣೆಯ ಅಟ್ಟ ಅನುಕೂಲವಾದ ಜಾಗವಾಗಿತ್ತು. ಅಡುಗೆ ಕೋಣೆಯ ಹೊಗೆ ಬಹುಮಟ್ಟಿಗೆ ಕ್ರಿಮಿನಾಶಕವಾಗಿತ್ತು. ಆದರೆ ಈಗ ಹೊಗೆಯಿಲ್ಲದ ಅಡುಗೆಕೋಣೆಗಳು ಸಾಮಾನ್ಯವಾಗಿರುವಾಗ ಬೀಜ ಸಂಗ್ರಹಣಾ ಪದ್ಧತಿಗಳೂ ಬದಲಾಗುತ್ತಿವೆ.


ಮೆಣಸಿನ ರೋಗಕ್ಕೆ ಸಾವಯುವ ರೋಗನಾಶಕ

ತುಮಕೂರು ಜಿಲ್ಲೆ ಪಾವಗಡ ತಾಲೂಕಿನ ಚೆನ್ನಕೃಷ್ಣಪ್ಪ ರೆಡ್ಡಿಯವರು ಮೆಣಸಿನ ಗಿಡಗಳಿಗೆ ಬರುವ ಎಲೆ ಮುದುರು ರೋಗಕ್ಕೆ ತಮ್ಮ ಪರಿಸರದಲ್ಲಿ ಸುಲಭವಾಗಿ ಸಿಗುವ

ಏಳು ತೆರನಾದ ಸೊಪ್ಪುಗಳನ್ನು ಬಳಸಿ ಒಂದು ಕಷಾಯವನ್ನು ಕಂಡುಹಿಡಿದಿದ್ದಾರೆ. ಬೇವು, ಎಕ್ಕ, ಬಿಳಿಲಕ್ಕಿ, ಆಡುಮುಟ್ಟದ ಸೊಪ್ಪು (Tylophora asthamatica), ಈಶ್ವರೀ ಬೇರು (Aristolochia indica), ಕಡ್ಡಿಕಳ್ಳಿ ಹಾಗೂ ಕಣಗಲೆಸೊಪ್ಪುಗಳನ್ನು (Nerium odorum) ಒಂದೊಂದು ಕಿಲೋನಂತೆ ಸಮಪ್ರಮಾಣದಲ್ಲಿ ತೆಗೆದುಕೊಳ್ಳಬೇಕು. ಈ ಸೊಪ್ಪುಗಳನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿ ಸುಮಾರು ೮೦ ಲೀಟರ್ ನೀರಿಗೆ ಹಾಕಿ ಡೀಸೆಲ್ ಬಣ್ಣ ಬರುವವರೆಗೆ ಕುದಿಸಬೇಕು. ಇದು ಒಂದು ಎಕರೆಗೆ ಸಾಕಾಗುತ್ತದೆ. ಒಂದು ದಿನ ಹಾಗೇ ಬಿಟ್ಟು, ತಣಿಸಿ ನಂತರ ಸೋಸಬೇಕು. ಸೋಸಿದ ಕಷಾಯಕ್ಕೆ ಅಷ್ಟೇ ಪ್ರಮಾಣದ ನೀರು ಬೆರೆಸಬೇಕು. ಸ್ವಲ್ಪ ಬಟ್ಟೆ ಸೋಪಿನ ದ್ರಾವಣ ಬೆರೆಸಿ ಸಿಂಪಡಿಸಿದರೆ ಮೆಣಸಿನ ಬೆಳೆಗೆ ಬರುವ ಎಲೆ ಮುದುರು ರೋಗವನ್ನು ಹತೋಟಿಯಲ್ಲಿಡಬಹುದಂತೆ.

ತೆಂಗಿನ ಕರಟದೊಳಗೆ ಸಂಗ್ರಹಣೆ

ಮಂಗಳೂರು ಕೇರಳದ ಗಡಿ ಪ್ರದೇಶಗಳಲ್ಲಿ ವಿವಿಧ ತರಕಾರಿ ಬೀಜ ಸಂಗ್ರಹಿಸುವ ಕೆಲವು ವಿಧಾನಗಳು ಹೀಗಿವೆ : ಒಳಗಡೆ ತಿರುಳು ಪೂರ್ಣವಾಗಿ ಬೆಳೆಯದ, ಆದರೆ ಸಂಪೂರ್ಣವಾದ ಕರಟ ಅಥವಾ ಚಿಪ್ಪು ಇರುವಂತಹ ತೆಂಗಿನ ಕಾಯಿಯನ್ನು ಬೀಜ ಸಂಗ್ರಹಕ್ಕೆ ಬಳಸಲಾಗುತ್ತದೆ. ಇಂತಹ ತೆಂಗಿನಕಾಯಿಯನ್ನು ನೀರಿನಲ್ಲಿ ಸುಮಾರು ೨ ತಿಂಗಳ ಕಾಲ ನೆನೆಸಿಡುತ್ತಾರೆ. ಅನಂತರ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಲಾಗುತ್ತದೆ. ಹೀಗೆ ಒಣಗಿದ ತೆಂಗಿನ ಕಾಯಿಯ ಒಂದು ಕಣ್ಣನ್ನು ತೆಗೆದು ಆ ರಂಧ್ರದ ಮೂಲಕ ಒಂದು ಕಡ್ಡಿ ಹಾಕಿ ಒಳಭಾಗವನ್ನು ಸಂಪೂರ್ಣ ಸ್ವಚ್ಛಗೊಳಿಸಲಾಗುತ್ತದೆ. ಈ ರಂಧ್ರದ ಮೂಲಕ ಅಗತ್ಯವಾದ ತರಕಾರಿಗಳ ಬೀಜವನ್ನು ಒಳಗೆ ಹಾಕುತ್ತಾರೆ. ರಂಧ್ರದ ಅಳತೆಗೆ ಸೂಕ್ತವಾದಂತಹ ಕಡ್ಡಿ ಅಥವಾ ಬೆಂಡಿನಿಂದ ಮುಚ್ಚಳವನ್ನು ಸಿದ್ಧಗೊಳಿಸಿ, ಮುಚ್ಚಿ ಸುತ್ತಲೂ ಸುಣ್ಣ ಹಚ್ಚುತ್ತಾರೆ. ಸಾಧಾರಣವಾಗಿ ಅಡುಗೆ ಕೋಣೆಯ ಅಟ್ಟದ ಮೇಲೆ ಇಂತಹ ಬೀಜ ತುಂಬಿದ ತೆಂಗಿನಕಾಯಿಗಳನ್ನು ಸಂಗ್ರಹಿಸಿಡುತ್ತಾರೆ. ಇಲ್ಲಿ-ಹೆಗ್ಗಣಗಳಂತಹ ಮೂಷಿಕಗಳಾಗಲೀ, ಇನ್ನಾವುದೇ ಕ್ರಿಮಿ ಕೀಟಗಳಾಗಲೀ ಕಾಟ ಕೊಡಲು ಅಸಾಧ್ಯ. ೨-೩ ವರ್ಷಗಳವರೆಗೆ ಈ ರೀತಿ ಬೀಜ ಸಂಗ್ರಹಿಸಿಡಲು ಸಾಧ್ಯ. ಜೊತೆಗೆ ಬೀಜ ಸಂಗ್ರಹಕ್ಕಾಗಿ ಸಿದ್ಧಗೊಳಿಸಿದ ತೆಂಗಿನ ಕಾಯಿಗಳು ಅನೇಕ ವರ್ಷಗಳು ಬಾಳಿಕೆ ಬರುತ್ತವೆ. ಅಜ್ಜನ ಕಾಲದಲ್ಲಿ ತಯಾರಿಸಿದ ಇಂತಹ ಸಂಗ್ರಾಹಕಗಳನ್ನು ಮೊಮ್ಮಕ್ಕಳು ಬೀಜ ಸಂಗ್ರಹಿಸಲು ಬಳಸುವುದೂ ಇದೆ.



ಭತ್ತದ ಹುಲ್ಲಿನಿಂದ ಬೇಳೆಕಾಳು ರಕ್ಷಣೆ

ಭತ್ತದ ಹುಲ್ಲಿನಿಂದ ಹೆಣೆದ ಹಗ್ಗದ ಬುಟ್ಟಿಯ ಒಳಗೆ ತೇಗ(Tectona grandis)ದ ಎಲೆಗಳನ್ನು ಹರಡಿ, ಅದರ ಮೇಲೆ ಬೇಳೆಕಾಳುಗಳನ್ನು ತುಂಬಿಸುತ್ತಾರಂತೆ. ಹೀಗೆ ತುಂಬಿಸುವಾಗ ಬೇಳೆಕಾಳುಗಳ ಜೊತೆಯಲ್ಲಿ ಬೇವಿನ ಎಲೆ, ಕಬ್ಬಿಣದ ತುಂಡುಗಳು, ಬೂದಿ, ಚರ್ಮ, ಉದ್ದು ಅಥವಾ ಹೆಸರು ಬೇಳೆಯ ಹೊಟ್ಟು ಇವನ್ನೆಲ್ಲಾ ಬುಟ್ಟಿಯನ್ನು ಮಣ್ಣು ಮತ್ತು ಸಗಣಿಯಿಂದ ಸಾರಿಸಬೇಕು. ಹೀಗೆ ಸಂಗ್ರಹಿಸಿದ ಬೇಳೆಕಾಳುಗಳು ವರ್ಷಾನುಗಟ್ಟಲೆ ಹಾಳಾಗದೇ ಉಳಿಯುವುದಂತೆ. (ಈ ಕ್ರಮ ನಮ್ಮ ದಕ್ಷಿಣ ಕನ್ನಡದಲ್ಲಿ ಬಳಕೆಯಿರುವ ಮೂಡೆಯನ್ನು ಹೋಲುತ್ತದೆ.) ಇದು ಗುಜರಾತ್‌ನ ಧರ್ಮಾಪುರ ಪ್ರಾಂತ್ಯದ ರೈತರ ಪದ್ಧತಿ.

ಬೀಜ ಮೊಳಕೆ ಬರಿಸುವುದು

ನಿಧಾನವಾಗಿ ಮೊಳಕೆಯೊಡೆಯುವ ಮೂಲಂಗಿ, ಬೀಟ್‌ರೂಟ್‌ನಂತಹ ಬೀಜಗಳನ್ನು ಬಟ್ಟೆಯಲ್ಲಿ ಬಿಗಿಯಾಗಿ ಸುತ್ತಿ ನೀರಿನಲ್ಲಿ ಒಮ್ಮೆ ನೆನೆಸಿ ನಂತರ ಆ ಬಟ್ಟೆಯ ಗಂಟನ್ನು ನೆಲದಲ್ಲಿ ಹುದುಗಿಸಿಟ್ಟು ಆಗಾಗ ನೀರನ್ನು ಚಿಮುಕಿಸುತ್ತಿದ್ದರೆ, ಭೂಮಿಯ ಶಾಖಕ್ಕೆ ಮೊಳಕೆ ಬರದವೂ ಕೂಡ ಮೊಳಕೆ ಬರುತ್ತವೆ ಎನ್ನುವುದು ಶ್ರೀ ಸುಬ್ರಾಯ ತಿಮ್ಮಣ್ಣ ಭಟ್, ತಾರೆಸರ, ಯಲ್ಲಾಪುರ ಇವರ ಅನುಶೋಧನೆಯಾಗಿದೆ.

ಹಾಗೇ ತಿಂಗಳ ಅವರೆ ಮತ್ತು ಮನೆ ಅವರೆ ಬೀಜಗಳನ್ನು ಹಾಲಿನಲ್ಲಿ ನೆನೆಸಿಟ್ಟು ಮರುದಿನ ಬಿತ್ತಿದರೆ ಮೊಳಕೆ ಬೇಗ ಬಂದು ಬೆಳವಣಿಗೆ ಚುರುಕಾಗುತ್ತದೆ ಎನ್ನುವುದು ಟಿ.ಎಸ್. ಹೆಗಡೆ, ಹಿತ್ತಲಹಳ್ಳಿ ಇವರ ಅನುಶೋಧನೆಯಾಗಿದೆ.

ಹಣ್ಣು/ಕಾಯಿಯ ಗಾತ್ರವನ್ನು ಹೆಚ್ಚಿಸಲು ಒಂದು ಸರಳ ವಿಧಾನ

ಬದನೆಕಾಯಿಯ ಬೀಜಕ್ಕೆ ಜೇನು ಮತ್ತು ತುಪ್ಪವನ್ನು ಲೇಪಿಸಿ ತದಂತರ ಅದಕ್ಕೆ ದಪ್ಪನೆಯ ಸಗಣಿಯಿಂದ ಹೊರಲೇಪನವನ್ನು ಮಾಡಬೇಕು. ಈ ತೆರನಾಗಿ ಉಪಚರಿಸಿದ ಬೀಜವನ್ನು ಬಿತ್ತಿದರೆ ಅದರಿಂದ ಕುಂಬಳಕಾಯಿಯ ಗಾತ್ರದ ಬದನೆಕಾಯಿಯನ್ನು ಪಡೆಯಬಹುದು ಎನ್ನುವುದು ಕೆ. ಉಮೇಶ, ಬೀಜಶಾಸ್ತ್ರ, ಪಿಎಚ್.ಡಿ. ವಿದ್ಯಾರ್ಥಿ, ಕೃಷಿ ವಿ.ವಿ. ನಿಲಯ, ಬೆಂಗಳೂರು ಇವರ ಶೋಧನೆ.

ಬದನೆಕಾಯಿ ಕೊರೆಯುವ ಹುಳದ ನಿಯಂತ್ರಣ

ಧಾರವಾಡದ ಯಳವತ್ತಿಯ ಭರಮ ಗೌಡರು ಬಹು ರುಚಿಕಟ್ಟಿನ ಜನ. ರೊಟ್ಟಿಗೆ ಬದನೆ ಪಲ್ಯ ಆಗದಿದ್ದರೆ ಅವರಿಗೆ ಬಲು ಕೋಪ. ಆದರೆ ಈ ಬದನೆ ಕಂಡರೆ ಕಾಯಿ ಕೊರೆಯುವ ಹುಳಕ್ಕೂ ಅಷ್ಟೇ ಪ್ರೀತಿ. ಸಮಸ್ಯೆ ಶುರುವಾದದ್ದು ಹೀಗೆ.

ಬದನೆಯ ಎರಡು ಸಾಲಿನ ನಡುವೆ ಸಬ್ಬಸ್ಸಿಗೆ ಬೆಳೆದರೆ ಹುಳದ ಉಪಟಳ ಕಡಿಮೆ ಯೆನ್ನುವ ತಂದೆಯ ಸಲಹೆಯನ್ನು ಹೊಲಕ್ಕೆ ತಂದಾಗ ಸಬ್ಬಸ್ಸಿಗೆ ಸುವಾಸನೆಯಿಂದ ಕಾಯಿಕೊರೆಯುವ ಹುಳಗಳು ಬದನೆ ಹತ್ತಿರ ಸುಳಿಯದಂತಾಗಿರುವುದು ಗೌಡರ ಅನುಭವ.

ನುಗ್ಗೆ ಇಳುವರಿ ಹೆಚ್ಚಿಸಲು

ಮರದಲ್ಲೇ ಒಣಗಿರತಕ್ಕಂತಹ ನುಗ್ಗೆ ಕಾಯಿಯ ಬೀಜವನ್ನು ಹಾಗಲಕಾಯಿಯ ಬೀಜದೊಂದಿಗೆ ಚೆನ್ನಾಗಿ ಮಿಶ್ರ ಮಾಡಿ ಅದನ್ನು ಸ್ವಲ್ಪ ದಿನಗಳ ತನಕ ಭದ್ರವಾಗಿ ಜೋಡಿಸಿಡಬೇಕು. ಈ ರೀತಿಯಾಗಿ ಶೇಖರಿಸಿದ ನುಗ್ಗೆ ಬೀಜವನ್ನು ಬಿತ್ತನೆ ಮಾಡಿದರೆ ಅದರಿಂದ ಹೆಚ್ಚಿನ ಇಳುವರಿ ಬರುವುದು.

ಹೊಗೆಸೊಪ್ಪಿನಿಂದ ಕೀಟನಾಶಕ

ಹೊಗೆಸೊಪ್ಪನ್ನು ನೀರಿನಲ್ಲಿ ಹಾಕಿ ಕುದಿಸಿ ದ್ರಾವಣವನ್ನು ತಯಾರಿಸಬೇಕು. ಇದನ್ನು ಕೀಟನಾಶಕವಾಗಿ ಬಳಸುವುದರಿಂದ ಕೋಸಿನ ಬೆಳೆಗೆ ತಗಲುವ ಕೀಟಗಳಾದ ಡೈಮಂಡ್ ಮೋತ್, ಬ್ಲಾಕ್ ಮೋತ್ (Plutella maushpennis), ಕಂಬಳಿ ಹುಳು (Diocrisia obligue), ಚಿಟ್ಟೆಗಳು ಮುಂತಾದುವನ್ನು ನಿಯಂತ್ರಿಸಬಹುದು ಎಂಬುದು ಪಶ್ಚಿಮ ಬಂಗಾಳದ ಅಶ್ವಿನಿ ಮಂಡಲ್ ಎಂಬ ರೈತರ ಅನುಭವ.

ನಿಂಬೆ ಕಾಂಡ ಕೊರಕ ಕೀಟಕ್ಕೆ ಇಂಗು

ನಿಂಬೆ ಗಿಡಗಳಲ್ಲಿ ಕಾಂಡ ಕೊರೆಯುವ ಕೀಟಗಳ ಬಾಧೆ ಆಗಸ್ಟ್ ತಿಂಗಳಲ್ಲಿ ಪ್ರಾರಂಭವಾಗುವ ಸಾಧ್ಯತೆ ಹೆಚ್ಚು. ಗಿಡ ಬೆಳೆದು ಉತ್ತಮ ಫಸಲು ಕೊಡುವ ವೇಳೆಯಲ್ಲಿಯೇ ಕೀಟದ ಹಾವಳಿಯಿಂದಾಗಿ ಕಾಂಡದ ಸಣ್ಣರಂಧ್ರಗಳಿಂದ ಹಳದಿ ಪುಡಿ ಹೊರಬರುತ್ತದೆ. ಡಿಸೆಂಬರ್ ತಿಂಗಳಲ್ಲಿ ಹೂ ಮತ್ತು ಕಾಯಿಗಳು ಉದುರಲು ಪ್ರಾರಂಭವಾಗಿ ಕ್ರಮೇಣ ಗಿಡ ನಾಶವಾಗುತ್ತದೆ. ಇದರ ನಿವಾರಣೆಗೆ ಎರಡು ಗ್ರಾಂ. ಅಡುಗೆ ಇಂಗನ್ನು ಮಳೆ ನೀರಿನಿಂದ ಒದ್ದೆಯಾಗದಂತೆ ಮತ್ತು ಅದರ ವಾಸನೆ ಗಿಡಕ್ಕೆ ದೊರೆಯುವಂತೆ ಸಣ್ಣ ಚಿಪ್ಪಿನಲ್ಲಿ ಇಟ್ಟು ಅದರ ಮೇಲೆ ದೊಡ್ಡ ಚಿಪ್ಪನ್ನು ಬೋರಲಾಗಿ ಹಾಕಿ ಇಡಬೇಕು. ಇದರಿಂದ ಕಾಂಡ ಕೊರಕವನ್ನು ಸುಲಭವಾಗಿ ನಿಯಂತ್ರಿಸಬಹುದು ಎಂಬುದು ಹಾಸನ ಜಿಲ್ಲೆ, ಚನ್ನರಾಯ ಪಟ್ಟಣ ತಾಲ್ಲೂಕು, ಶ್ರವಣಬೆಳಗೊಳದ ಕೆ.ವೈ. ನಂಜೇಗೌಡರ ಅನುಭವ.

ನಿಂಬೆ ಗಿಡಗಳ ಅಂಟು ರೋಗ

ನಿಂಬೆ ಗಿಡಗಳಿಗೆ ಸಾಮಾನ್ಯವಾಗಿ ತಗಲುವ ರೋಗವೆಂದರೆ ಕಾಂಡ ಸೋರುವ (Gummy disease) ಈ ಅಂಟು ರೋಗ. ಈ ರೋಗದಿಂದ ಎಲೆಗಳು ಒಣಗುತ್ತವೆ ಮತ್ತು ಮರದ ಕೆತ್ತೆಗಳಲ್ಲಿ ಹುಣ್ಣಿನ ತರಹ ಕಾಣಿಸಿಕೊಳ್ಳುತ್ತದೆ. ಇದರ ಜೊತೆ ಅಂಟಿನಂತಹ ದ್ರವ ಪದಾರ್ಥ ಹೊರಹೊಮ್ಮುತ್ತದೆ.

ಈ ರೋಗಕ್ಕೆ ಗುಜರಾತಿನ ಮೆಹಸನಾ ತಾಲೂಕಿನ ಶ್ರೀ ಸೋಮಾಭಾಯಿ ಪಟೇಲರು ನೀರಿನ ಕಾಲುವೆಯಲ್ಲಿ ಹರಳೆಣ್ಣೆಯನ್ನು ಹಾಕಿ ಗಿಡಗಳಿಗೆ ನೀರನ್ನು ಬಿಡುತ್ತಾರೆ. ಇದರ ಜೊತೆ ಹೊಗೆಸೊಪ್ಪಿಗೆ ಪುಡಿಯನ್ನು ಗಿಡಗಳಿಗೆ ಸಿಂಪಡಿಸುತ್ತಾರೆ. ಈ ರೀತಿ ಮಾಡಿದಾಗ ಎರಡು ಅಥವಾ ಮೂರು ದಿನಗಳಲ್ಲಿ ಗಿಡಗಳು ರೋಗದಿಂದ ಗುಣ ಹೊಂದುತ್ತವೆ. ಸೋಮಾಭಾಯಿಯವರು ಈ ಪ್ರಯೋಗವನ್ನು ಸುಮಾರು ಹತ್ತು ವರ್ಷಗಳಿಂದ

ಮಾಡುತ್ತಿದ್ದಾರೆ. ಅದೂ ಅಲ್ಲದೆ ಅವರ ಹಳ್ಳಿಯ ರೈತರು ಸಹ ಈ ಪ್ರಯೋಗವನ್ನೇ ಮಾಡುತ್ತಾರೆ ಎಂದು ತಿಳಿದುಬಂದಿದೆ.

ಅಲಸಂದೆ ತುಕ್ಕು (Rust) ರೋಗಕ್ಕೆ

ಒಂದು ಎಕರೆ ಅಲಸಂದೆ ಬೆಳೆಗೆ ೧೦ ಕೆ.ಜಿ. ಬೇವಿನ ಬೀಜದ ಕಷಾಯ + ೪ ಕೆ.ಜಿ. ವಿಷಂಪುರಿ ಸೊಪ್ಪಿನ ಕಷಾಯ + ೧೦೦ ಗ್ರಾಂ ಪರಂಗಿ ಕಳ್ಳಿ ರಸ (ಸೋಪಿನಂತೆ ನೊರೆ ಬರುತ್ತದೆ.) ಮಿಶ್ರಮಾಡಿ ೨೦ ಮತ್ತು ೪೦ನೇ ದಿನ ಸಿಂಪಡಣೆ ಮಾಡಿದರೆ, ತುಕ್ಕು ರೋಗ ಮತ್ತು ಕಾಯಿ ಕೊರತೆ ನಿವಾರಣೆಯಾಗುತ್ತದೆ ಎನ್ನುವುದು ಬಸವರಾಜರ ಮತ್ತೊಂದು ಪ್ರಯೋಗ.

■■

ಅಧ್ಯಾಯ : ನಾಲ್ಕು

ಹಣ್ಣುಗಳ ಹತೋಟಿ ಕ್ರಮಗಳು

ಗೆದ್ದಲಿನ ಹತೋಟಿಗೆ ಎಕ್ಕದ ಔಷಧಿ

ಎಕ್ಕದ ಎಲೆಗಳನ್ನು ನೀರಿನಲ್ಲಿ ಎರಡು ದಿನ ಕೊಳೆ ಹಾಕಬೇಕು. ಎರಡು ದಿನಗಳ ನಂತರ, ಮೇಲಿನ ದ್ರಾವಣವನ್ನು ಸೋಸಿ ತೆಗೆದು, ನೀರಿನೊಂದಿಗೆ ಬೆರೆಸಿ, ತೆಳು ಮಾಡಿದ ದ್ರಾವಣವನ್ನು ಮರ, ಗಿಡಗಳಿಗೆ ಸಿಂಪಡಿಸಬೇಕು. ಗೆದ್ದಲಿನ ಕಾಟವಿರುವ ಜಾಗದಲ್ಲಿ ಈ ಎಕ್ಕದ ರಸದ ದ್ರಾವಣವನ್ನು ಹಾಕುವುದರಿಂದ ಗೆದ್ದಲಿನ ಕಾಟ ಕಡಿಮೆಯಾಗುತ್ತದೆಯಂತೆ ಈ ಮಾಹಿತಿ ವಿ. ಕಣ್ಣಪ್ಪನ್ ವೈರುಕಣ್ಣನ್, ದಕ್ಷಿಣ ರಸ್ತೆ, ಎತ್ತುಕುಡಿ ಇವರು ನೀಡಿರುತ್ತಾರೆ.


ಬಾಳೆಗಿಡದ ಎಲೆ ಚುಕ್ಕೆ ರೋಗದ ನಿಯಂತ್ರಣಕ್ಕೆ ಹೊಗೆಸೊಪ್ಪಿನ ಔಷಧಿ

ಹೊಗೆಸೊಪ್ಪನ್ನು ನೀರಿನಲ್ಲಿ ಸುಮಾರು ಎರಡು ದಿನಗಳ ಕಾಲ ನೆನೆಸಬೇಕು. ನಂತರ ಮೇಲಿನ ತಿಳಿ ದ್ರಾವಣವನ್ನು ತೆಗೆದು ಗಿಡಗಳಿಗೆ ಸಿಂಪಡಿಸುವುದರಿಂದ ಎಲೆ ಚುಕ್ಕೆ ರೋಗ ಹತೋಟಿಗೆ ಬರುವುದಂತೆ. ರೋಗದ ಸರಿಯಾದ ನಿಯಂತ್ರಣಕ್ಕೆ ಬೆಳಿಗ್ಗೆ ಅಥವಾ ಸಂಜೆ ಇದನ್ನು ಸಿಂಪಡಿಸುವುದು ಹೆಚ್ಚು ಸೂಕ್ತ. ಈ ಮಾಹಿತಿಯನ್ನು ಎಸ್. ರವಿ ಸುಬ್ಬಯ್ಯ, ದಕ್ಷಿಣ ರಸ್ತೆ, ಎತ್ತುಕಡಿ ಇವರು ನೀಡಿರುತ್ತಾರೆ.

ಬಾಳೆ ಗಿಡಗಳ ಗೊನೆ ರೋಗ ಹತೋಟಿ

ಬಾಳೆ ಗಿಡಗಳಲ್ಲಿ ಕಂಡುಬರುವ ಗೊನೆ ರೋಗವು ಬಾಳೆಗೊನೆ ವೈರಸ್ ಕೀಟಾಣುವಿನಿಂದ ಹರಡುತ್ತದೆ. ಇಂತಹ ರೋಗಕ್ಕೆ ಈಡಾದ ಗಿಡವು ಗೊಂಚಲಾಗಿ, ಸಂಕುಚಿತಗೊಂಡು, ಅಂಚುಗಳೆಲ್ಲಾ ಹಳದಿಯಾಗುತ್ತವೆ ಮತ್ತು ನೇರವಾಗಿ ಮರಗಟ್ಟಿದಂತಿರುತ್ತದೆ. ಕೇರಳದ ಪಲೂರ್ಕವು ನಗರದವರಾದ ಜಾರ್ಜ್‌ರವರು ಹುರಿದ ಮೆಂತ್ಯೆಕಾಳುಗಳನ್ನು (Trigonella foenumgraecum) ಗಿಡದ ತಿರುಳಿನಲ್ಲಿ ಹಾಕಿದರೆ, ಈ ರೋಗವನ್ನು ತಡೆಹಿಡಿಯಬಹುದು ಎಂದು ಹೇಳಿದ್ದಾರೆ.

ಬಳ್ಳಿ ಬೆಳೆಗಳಲ್ಲಿ ಇರುವೆ ಹತೋಟಿ



ದ್ರಾಕ್ಷಿಯಂತಹ ಬಳ್ಳಿಗಳಿಗೆ ಹತ್ತಿ ಹೋಗುವ ಇರುವೆಗಳನ್ನು ತಡೆಯಲು, ಒಂದು ಬಟ್ಟೆಯನ್ನು ಸೀಮೆ ಎಣ್ಣೆಯಲ್ಲಿ ಅದ್ದಿ, ಬಳ್ಳಿ ಹಬ್ಬುವ ಚಪ್ಪರದ ಕಾಲುಗಳಿಗೆ ಕಟ್ಟಬೇಕು. ಸೀಮೆಎಣ್ಣೆ ಇರುವೆಗಳನ್ನು ಓಡಿಸುತ್ತದೆಯಂತೆ. ಈ ಮಾಹಿತಿ : ವಿ. ಕಣ್ಣಪ್ಪನ್ ವೈರಕಣ್ಣಿ, ದೇವಸ್ಥಾನದ ರಸ್ತೆ, ಎತ್ತುಕಡಿ, ಪಾಂಡಿಚೇರಿ ಇವರಿಂದ ಪಡೆಯಲಾಗಿದೆ.

ಕಾಯಿಗಳು ಉದುರುವುದನ್ನು ತಡೆಯಲು ಮರಕ್ಕೆ ಮೊಳೆ !

ಸುಣ್ಣದ ಮತ್ತು ಕ್ಷಾರದ ಭೂಮಿಯಲ್ಲಿ ಬೆಳೆಯುವ ಹಣ್ಣಿನ ಗಿಡಗಳಲ್ಲಿ ಕಬ್ಬಿಣಾಂಶದ ಕೊರತೆಯಿರುತ್ತದೆ. ಇದರ ಕೊರತೆಯು ಪತ್ರಹರಿತ್ತಿನ, ಸಸ್ಯಗಳ ಬೆಳವಣಿಗೆ ಮತ್ತು ಜೀವರಾಸಾಯನಿಕಗಳ ಮೇಲೆ ಪರಿಣಾಮ ಬೀರುತ್ತದೆ. ಈ ರೀತಿಯ ತೊಂದರೆಯನ್ನು ತಡೆಯಲು ಕೇರಳದ ಪಲೂರ್ಕಾವು ನಗರದವರಾದ ಜಾರ್ಜ್‌ರವರು ಕಬ್ಬಿಣದ ಮೊಳೆಗಳನ್ನು ಮರದ ಬುಡಗಳಿಗೆ ಚುಚ್ಚಿ ಎಳೆಯ ಕಾಯಿಗಳು ಬೀಳುವುದನ್ನು ಹತೋಟಿಯಲ್ಲಿಡಬಹುದು ಎಂದು ತಿಳಿಸಿದ್ದಾರೆ.

ಸಸ್ಯಗಳಿಗೆ ತಂಬಾಕು ಬಳಕೆ

ಕೊಪ್ಪಳ ಜಿಲ್ಲೆ ಕುಷ್ಟಗಿಯ ರೈತ ಜಗನ್ನಾಥ್ ಎಂಬುವರು ದಾಳಿಂಬೆ ಗಿಡಗಳಿಗೆ ಬಾಧಿಸುವ ಬೇರುಹುಳು (Root grub) ಜಂತುಹುಳು (Root knot nematodes) ಮತ್ತು ಕಾಂಡ ಕೊರಕ(Stem borer)ಗಳ ನಿಯಂತ್ರಣಕ್ಕೆ ಕೀಟನಾಶಕವಾಗಿ ತಂಬಾಕನ್ನು ಬಳಸಿ ಪರಿಹಾರ ಕಂಡುಕೊಂಡಿದ್ದಾರೆ.

ತಂಬಾಕು ಮಣ್ಣಿನಲ್ಲಿ ಬೆರೆತು ಕ್ರಮೇಣ ಸಾವಯವ ಗುಣವನ್ನು ಪಡೆದು ಕ್ರಿಮಿಕೀಟಗಳಿಗೆ ತಡೆಗೋಡೆ ನಿರ್ಮಿಸುತ್ತದೆಯಂತೆ. ನಂತರ ಬೇರು ವಿಸ್ತಾರವಾಗಿ ಹಬ್ಬಿ ಗಿಡಕ್ಕೆ ಸಮೃದ್ಧವಾಗಿ ಸಾರವನ್ನು ಒದಗಿಸುತ್ತದೆಂದು ಹೇಳುವರು. ಇವರು ತಮ್ಮ ತೋಟದ ದಾಳಿಂಬೆ ಗಿಡಗಳಿಗೆ ಇದನ್ನು ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ. ಭೂಮಿ ಹಸಿ ಇರುವಾಗ ಗಿಡವೊಂದಕ್ಕೆ ಸುಮಾರು ಒಂದು ಕಿಲೋದಷ್ಟು ತಂಬಾಕನ್ನು ಮಣ್ಣಿಗೆ ಸೇರಿಸಿ ತೆಳುವಾಗಿ ಮಣ್ಣು ಮುಚ್ಚುತ್ತಾರೆ. ಕೆಲವು ದಿನಗಳ ನಂತರ ಮಣ್ಣಿನಲ್ಲಿರುವ ಉಪದ್ರವ ಹುಳ, ಕ್ರಿಮಿಕೀಟಗಳು ನಾಶವಾಗಿರುತ್ತವೆ ಎಂದು ಜಗನ್ನಾಥ್ ಹೇಳುತ್ತಾರೆ. ತಾಜಾ ತಂಬಾಕು ದುಬಾರಿ ಎನ್ನಿಸಬಹುದು. ಹಾಗಾಗಿ ನಿರುಪಯುಕ್ತ ಅಗ್ಗದ ತಂಬಾಕು ಹಾಕಿದರೂ ಇದೇ ಪರಿಣಾಮ

ಬೀರಬಹುದಂತೆ. ತಂಬಾಕು ಬೆಲೆ ಇಳಿದಾಗಲಂತೂ ದಾಳಿಂಬೆ ಗಿಡಗಳ ತಂಬಾಕು ಮೆಲ್ಲುವ ಈ ಚಿಕಿತ್ಸೆಗೆ ಮತ್ತಷ್ಟು ಪ್ರೋತ್ಸಾಹ ಸಿಗಬಹುದು.

ಕಲ್ಲಂಗಡಿ ಮತ್ತು ಟೊಮೊಟೋಗಳಲ್ಲಿ ನುಸಿ ನಿಯಂತ್ರಣ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ದಾಸೇಗೌಡನದೊಡ್ಡಿಯ ರಾಮಕೃಷ್ಣಯ್ಯನವರು ನುಸಿ ನಿಯಂತ್ರಣಕ್ಕಾಗಿ ಸಸ್ಯ ಮೂಲದ ಕೀಟನಾಶಕವೊಂದನ್ನು ಅಭಿವೃದ್ಧಿಪಡಿಸಿದ್ದಾರೆ. ತಲಾ ಒಂದು ಕೆ.ಜಿ. ಬೇವಿನ ಸೊಪ್ಪು, ಲಕ್ಕಿ ಸೊಪ್ಪು (Vitex Negundo), ಗ್ಲಿರಿಸಿಡಿಯಾ ಸೊಪ್ಪು, ರಾಂಫಲ ಸೊಪ್ಪು (Annona sp.) ಮತ್ತು ಅರ್ಧ ಕೆ.ಜಿ. ವಿಷಮದಾರಿ (Clerodendron inerme) ಸೊಪ್ಪುಗಳನ್ನು ಚೆನ್ನಾಗಿ ಕುಟ್ಟಿ ೧೦ ಲೀಟರ್ ಹಸುವಿನ ಗಂಜಲದಲ್ಲಿ ೨೦-೨೫ ದಿನಗಳವರೆಗೆ ನೆನೆಸಿಡಬೇಕು. ನಂತರ ಶೋಧಿಸಿ ೧:೪ರ ಪ್ರಮಾಣದಲ್ಲಿ ನೀರಿನೊಂದಿಗೆ ಬೆರೆಸಿ ಗಿಡಗಳಿಗೆ ಸಿಂಪಡಿಸಬೇಕು. ಹೀಗೆ ಸಿಂಪಡಿಸುವುದರಿಂದ ಕಲ್ಲಂಗಡಿ ಮತ್ತು ಟೊಮೆಟೊಗಳ ನುಸಿ (Aphids) ಮತ್ತು ಥ್ರಿಪ್ಸ್ (Thrips) ಕೀಟಗಳು ನಿಯಂತ್ರಣಕ್ಕೆ ಬರುತ್ತವೆ. ಬಾಳೆಯ ಗಿಡದ ಬುಡಕ್ಕೆ ೧/೨ ಲೀಟರ್ ದ್ರಾವಣ ಹಾಕಿದರೆ ಗಿಡವು ರೋಗಮುಕ್ತವಾಗುತ್ತೆ.

ಪರಂಗಿ ನಂಜಾಣು ರೋಗದ ಹತೋಟಿ

ಒಂದು ಕೆ.ಜಿ. ಬೋಗನ್‌ವಿಲ್ಲಾ ಎಲೆಗಳನ್ನು ೮-೧೦ ಲೀಟರ್ ನೀರಿನಲ್ಲಿ ಒಂದು ದಿನ ನೆನೆಸಿ ಮರುದಿನ ಮುಂಜಾನೆ ಒಂದು ಲೀಟರ್ ಕೆನೆರಹಿತ ಆಕಳ ಹಾಲಿನಲ್ಲಿ ಬೆರೆಸಿ ಮಿಶ್ರಣ ಮಾಡಬೇಕು. ಈ ದ್ರಾವಣವನ್ನು ಸೋಸಿ ೧೮-೧೯ ಲೀಟರ್ ನೀರಿನಲ್ಲಿ ಬೆರೆಸಿ ಪರಂಗಿ ಗಿಡಗಳ ವಯಸ್ಸಿಗನುಗುಣವಾಗಿ ಹದಿನೈದು ದಿವಸಗಳಿಗೊಮ್ಮೆ ಬೇರಿನ ಮೂಲಕ ಉಣಿಸಬೇಕು. ಹೀಗೆ ಮಾಡುವುದರಿಂದ ಪರಂಗಿ ಬೆಳೆಯಲ್ಲಿ ನಂಜಾಣು ರೋಗವನ್ನು ಪರಿಣಾಮಕಾರಿಯಾಗಿ ಹತೋಟಿ ಮಾಡಬಹುದು ಎಂಬುದು ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಹೊನ್ನಾಪುರದ ಶ್ರೀ ಚಂದ್ರಶೇಖರ ಎಸ್. ಚಿನವಾಲರ ಶೋಧನೆ.

ಹಿಪ್ಪುನೇರಳೆ ಸೊಪ್ಪಿನ ಬೇರಿನ ಗಂಟು ರೋಗ ನಿವಾರಣೆಗೆ

ಹಿಪ್ಪುನೇರಳೆ ಸೊಪ್ಪಿನ ಬೇರಿನ ಗಂಟು ರೋಗ ನಿವಾರಣೆಗೆ ಹೊಸಕೋಟೆ ತಾಲ್ಲೂಕಿನ ರಾಜಣ್ಣನವರು ಒಂದು ಹೊಸ ವಿಧಾನ ರೂಪಿಸಿರುವರು. ಹಿಂಡಿಯನ್ನು ಉಳುಮೆ ಮಾಡಿದ ನಂತರ ಹೊಲಕ್ಕೆ ಹಾಕಿ ಮಣ್ಣಿನಿಂದ ಮುಚ್ಚಿ ನಂತರ ನೀರನ್ನು ಕಟ್ಟುವುದರಿಂದ ಬೇರಿನ ಗಂಟನ್ನು ನಿವಾರಿಸಬಹುದು ಹಾಗೂ ಇದರಿಂದ ಎಲೆಯ ಇಳುವರಿ ವೃದ್ಧಿಸುತ್ತದೆ ಎಂಬುದು ರಾಜಣ್ಣನವರ ಅನುಭವವಾಗಿದೆ.

ಗಂಟುಹುಳದ ಮತ್ತೊಂದು ಹತೋಟಿ ವಿಧಾನ

ತಮಿಳುನಾಡಿನ ವಿರುದುನಗರ ಜಿಲ್ಲೆಯ ರೈತ ಶಂಕರಲಿಂಗನವರ ಬಾಳೆಯ ತೋಟಕ್ಕೆ ಯಾವಾಗಲೂ ಗಂಟುಹುಳುವಿನ ಕಾಟ. ಇದರಿಂದ ಬಾಳೆಯ ತೋಟವನ್ನು ಮುಕ್ತಗೊಳಿಸಲು

ಅವರು ಹುಡುಕಿಕೊಂಡ ಉಪಾಯ ಹೀಗಿದೆ. ಭೂಮಿಯನ್ನು ಸಿದ್ಧಗೊಳಿಸುವ ಸಮಯದಲ್ಲೇ ಎಕರೆಗೆ ೭೦ ಗಾಡಿ ಚೆನ್ನಾಗಿ ಕೊಳೆತ ಗೊಬ್ಬರ ಹಾಕಿ ಕನಿಷ್ಠ ೬ ಬಾರಿ ಚೆನ್ನಾಗಿ ಉಳುಮೆ ಮಾಡುತ್ತಾರೆ. ನಂತರ ಮಡಿಗಳನ್ನು ಸಿದ್ಧಪಡಿಸಿ, ಅದರ ಎರಡೂ ಬದಿಯಲ್ಲಿ ಆರು ಅಡಿ ಅಂತರದಲ್ಲಿ ಬಾಳೆಯ ಸಸಿಗಳನ್ನು ನೆಡುತ್ತಾರೆ. ಹೀಗೆ ಸಸಿ ನೆಟ್ಟ ೭೦ ದಿನಗಳ ನಂತರ, ಬೇವು ಮತ್ತು ಹರಳಿನ ಹಿಂಡಿಯನ್ನು ಸಮಪ್ರಮಾಣದಲ್ಲಿ ಬೆರೆಸಿ, ಪ್ರತೀ ಗಿಡದ ಬುಡಕ್ಕೆ ೨೫-೩೦ ಗ್ರಾಂ. ಹಾಕುತ್ತಾರೆ. ಇಷ್ಟಲ್ಲದೇ ಗಿಡ ನೆಟ್ಟು ೮ ತಿಂಗಳ ನಂತರ, ಪ್ರತೀ ಗಿಡದ ಬುಡಕ್ಕೆ ೫೦ ಗ್ರಾಂ. ಶೇಂಗಾ ಹಿಂಡಿ ಹಾಕುತ್ತಾರೆ. ಈ ರೀತಿಯ ಬೇಸಾಯ ಕ್ರಮದಿಂದ ಗಂಟು ಹುಳುವಿನ ಕಾಟ ತಡೆಯಬಹುದು ಎನ್ನುತ್ತದೆ ಶಂಕರಲಿಂಗಂನವರ ಅನುಭವ.

ಕಾಂಡ ಕೊರಕ ಮತ್ತು ಮಿಡತೆ ಹಾವಳಿಗೆ ತಡೆ

ನಿಂಬೆ ಬೆಳೆಯಲ್ಲಿ ಕಾಂಡ ಕೊರಕದ ಹತೋಟಿಗೆ ಎರಡು ಗ್ರಾಂ. ಇಂಗನ್ನು ನಿಂಬೆ ಗಿಡಕ್ಕೆ ಕಟ್ಟಿ ತೂಗು ಹಾಕಿ ಎಂಬ ಸಲಹೆ ಹಾಸನದ ಬಸವರಾಜರದ್ದು. ಇದನ್ನು ಆಗಸ್ಟ್ ತಿಂಗಳಲ್ಲೇ ಮಾಡುವುದು ಸೂಕ್ತವಂತೆ. ಇವರು ವೀಳ್ಯದೆಲೆ ಬೆಳೆಯ ಮಿಡತೆ ಹಾವಳಿಯನ್ನು ಪಚ್ಚೆ ಕರ್ಪೂರದಿಂದ ನಿವಾರಿಸಿದ್ದಾರೆ.

ರಾಯರ ತೋಟದಲ್ಲಿ ಮರಕ್ಕೆ ಗೆದ್ದಲು!

ತೀರ್ಥಹಳ್ಳಿಯ ಸಾವಯವ ಕೃಷಿಋಷಿ ಪುರುಷೋತ್ತಮ ರಾಯರು ನೆಲ್ಲಿ ಮರಕ್ಕೆ ವಿಪರೀತ ಕಾಂಡಕೊರೆಯುವ ಹುಳುಗಳ ಕಾಟ ತಡೆಯಲು ಕತ್ತಾಳೆ ನೀರನ್ನು ಕೆಮ್ಮಣ್ಣಿಗೆ ಸೇರಿಸಿ, ಕೆಸರು ಮಾಡಿ ಬುಡದಿಂದ ತಲೆವರೆಗೂ ಲೇಪಿಸುತ್ತಿದ್ದರು. ಒಳಗೆ ಸೇರಿರುವ ಹುಳುಗಳಿಗೆ ಅಲ್ಲೇ ಸಾವು. ಹೊರಗಿನಿಂದ, ಹೋಗುವ ಹುಳುಗಳ ದಾರಿ ಬಂದ್. ಹೇಗಿದೆ ನಮ್ಮ ರಾಯರ ಉಪಾಯ. (ಮರದ ಬೇರು ಮಾತ್ರ ಮಣ್ಣಿನ ಸಹವಾಸ ಇಷ್ಟಪಡುತ್ತದೆ ಎನ್ನುವುದು ಕೃಷಿ ವಿಜ್ಞಾನಿಗಳ ಇದುವರೆಗಿನ ನಂಬಿಕೆ. ಈಗ ಕಾಂಡಕ್ಕೂ ಮಣ್ಣಿನ ಸಹವಾಸ ಹೇಗಾಗುತ್ತದೆಂಬುದನ್ನು ಕಾದು ಪರೀಕ್ಷಿಸಬೇಕಾಗಿದೆ.

ಕಾಳು ಮೆಣಸಿನ ದಿಂಡಿನ ಉಪಯೋಗ

ಮೆಣಸಿನ ಕಾಳನ್ನು ತೆಗೆದು ನಂತರ ಉಳಿಯುವ ದಿಂಡು ಅಥವಾ ಗುಂಜು ಕೃಷಿಗೆ ಬಲು ಉಪಯುಕ್ತ. ಈ ದಿಂಡು ಅಥವಾ ಗುಂಜನ್ನು ನಿಂಬೆ, ಮಾವು ಮತ್ತು ಮೂಸಂಬಿಗೆ ಮುಚ್ಚಿಗೆಯಾಗಿ ಹಾಕುವುದರಿಂದ ಆ ಗಿಡಗಳಿಗೆ ಬರುವ ಕಾಂಡ ಕೊರಕದ ಬಾಧೆ ಕಡಿಮೆಯಾಗುತ್ತದೆ. ಹಾಗೇ ದಿಂಡಿಗೆ ಬೆಂಕಿ ಕೊಟ್ಟು, ಬರುವ ಹೊಗೆಯನ್ನು ಹೂವಿನ ಹಂತದಲ್ಲಿ ಮಾವಿನ ಮರಕ್ಕೆ ಹಾಕಿದರೆ ಗೊರಟಿಗೆ ಬೀಳುವ ಹುಳುಗಳ (Stoneweevil) ಬಾಧೆ ಕಡಿಮೆಯಾಗುತ್ತದೆ.

ಸಾವಯುವ ದ್ರಾಕ್ಷಿ

ದ್ರಾಕ್ಷಿ ತಿನ್ನಲೇನೋ ಇಷ್ಟ. ಆದರೆ, ಅಬ್ಬಾ ಅದಕ್ಕೆ ಹಾಕುವ ಔಷಧಿ ನೆನಸಿಕೊಂಡರೆ ದ್ರಾಕ್ಷಿಯೇ ಬೇಡ ಅನ್ನಿಸುತ್ತದೆ. ಸಾವಯವ ರೀತಿಯಲ್ಲಿ ದ್ರಾಕ್ಷಿ ಬೆಳೆಸಲು ಇಚ್ಛಿಸುವ ದ್ರಾಕ್ಷಿ ಬೆಳೆಗಾರರಿಗೊಂದು ಸುದ್ದಿ. ಬೆಳಿಗ್ಗೆ ಬಿದ್ದ ಮಂಜು ಬಿಸಿಲೇರಿ ಕರಗುವ ಮೊದಲೇ ಮಂಜಿನ ಹನಿಗಳು ಇನ್ನೂ ಎಲೆಯ ಮೇಲೆ ಇರುವಾಗಲೇ ಗಿಡಗಳ ಮೇಲೆ ಬೂದಿ ಉದುರಿಸಬೇಕು. ಗಂಜಲ(ಹಸುವಿನ ಮೂತ್ರ)ದೊಂದಿಗೆ ಹೊಗೆಸೊಪ್ಪನ್ನು ಅರೆದು ಸಿಂಪಡಿಸುವುದರಿಂದಲೂ ಕೀಟಗಳ ಕಾಟ ತಪ್ಪಿಸಬಹುದು. ಜೊತೆಗೆ ಹೊಂಗೆಯ ಹಿಂಡಿಯನ್ನು ಗಿಡದ ಬುಡಕ್ಕೆ ಹಾಕುವುದರಿಂದ ಗೆದ್ದಲಿನ ಕಾಟವನ್ನು ತಪ್ಪಿಸಬಹುದು.

ಬಲೆಯೊಳಗೆ ದಾಳಿಂಬೆ ಬೆಳೆ

ದುಬಾರಿ ಬೆಲೆ ಕೊಟ್ಟು ಕ್ರಿಮಿನಾಶಕ ಬಳಸಿಯೂ ಕೈಸುಟ್ಟುಕೊಳ್ಳುವ ಪರಿಸ್ಥಿತಿ ಬರದಿರಲೆಂದು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ಸುಬ್ಬರಾವ್ ಎನ್ನುವ ರೈತರು ರಸಹೀರುವ ಪತಂಗದಿಂದ ದಾಳಿಂಬೆಯನ್ನು ರಕ್ಷಿಸಲು ದಾಳಿಂಬೆ ತೋಟಕ್ಕೆ ಸುತ್ತಲೂ ಹಾಗೂ ಮೇಲೆ ಬಲೆ ಹಾಕಿಸಿದ್ದಾರಂತೆ. ಪ್ರತಿ ಎಕರೆಗೆ ಬಲೆ ಹಾಕಲು ರೂ. ೨೫-೩೦ ಸಾವಿರ ವೆಚ್ಚವಾಗುವುದಂತೆ. ಆದರೇನು ಕೀಟದ ದಾಳಿ ತಪ್ಪಿ ಹೆಚ್ಚಾಗುವ ಫಸಲಿನಿಂದ ಎಕರೆಗೆ ರೂ. ೪೦ ಸಾವಿರ ಹೆಚ್ಚಿನ ಲಾಭವಂತೆ. ಬಲೆಯನ್ನು ಸರಿಯಾಗಿ ಬಳಸಿ ತೆಗೆದಿಟ್ಟರೆ ಸುಮಾರು ಆರು ವರ್ಷ ಬಳಸಬಹುದಂತೆ. ಅಂದರೆ ಏನಿಲ್ಲವೆಂದರೂ ಬಲೆಯಿಂದಾಗಿ ಕನಿಷ್ಠ ೨ ಲಕ್ಷ ಅಧಿಕ ಲಾಭ

ಬಾಳೆಹಣ್ಣಿನ ಗಾತ್ರ ಹೆಚ್ಚಿಸಲು

ಬಾಳೆ ಗೊನೆ ಹಾಕುವ ಸಂದರ್ಭದಲ್ಲಿ ಅಂದರೆ ಹೂ ಆಗಿ ಕಾಯಿ ಬಿಡುವ ಸಂದರ್ಭದಲ್ಲಿ ಹೂವನ್ನು ಮುರಿದು ತೆಗೆಯಬೇಕು. ಹೂ ಇದ್ದ ಜಾಗದಿಂದ ರಸವನ್ನು ತಡೆಗಟ್ಟಲು ಒಂದು ಪಾಲಿಥಿನ್ ಚೀಲದಲ್ಲಿ ೫೦ ಗ್ರಾಂ.ನಷ್ಟು ಬೂದಿಯನ್ನು ನೀರಿನ ಜೊತೆ ಬೆರೆಸಿ ಬಾಳೆ ಗೊನೆಯ ತುದಿಗೆ ಅಂದರೆ ರಸ ತೊಟ್ಟಿಕ್ಕುವ ಜಾಗಕ್ಕೆ ನೇತು ಹಾಕಬೇಕು. ಇದರಿಂದ ಬಾಳೆಕಾಯಿಗಳು ದೊಡ್ಡ ಗಾತ್ರದಲ್ಲಿ ಬೆಳೆಯುತ್ತವೆ. ಒಂದು ತಿಂಗಳ ಬಳಿಕ ಕಾಯಿ ಬಲಿತ ಮೇಲೆ ರೈತರು ಅದರ ಮೇಲೆ ಸಣ್ಣ ಕೆರೆಗಳಲ್ಲಿ ಅಥವಾ ಹಳ್ಳಗಳಲ್ಲಿ ಸಿಗುವ ಪಾಚಿ (Algae)ಯನ್ನು ಕಾಯಿಗಳ ಮೇಲೆ ಹಚ್ಚುವುದರಿಂದ ಕಾಯಿಯು ಒಳ್ಳೆಯ ಬಣ್ಣದಿಂದ ಕಂಗೊಳಿಸುತ್ತದೆ.

ಕಂಬಳಿ ಹುಳುಗಳ ನಿಯಂತ್ರಣ

ಎರಡು ಚಮಚದಷ್ಟು ಕರಿಮೆಣಸನ್ನು ಎರಡು ಬೆಳ್ಳುಳ್ಳಿಯೊಂದಿಗೆ ಚೆನ್ನಾಗಿ ಅರೆದು, ನಾಲ್ಕು ಲೀಟರ್ ನೀರಿನೊಂದಿಗೆ, ೨೦೦ ಗ್ರಾಂ ಸಾಬೂನು ಬೆರೆಸಿ ಚೆನ್ನಾಗಿ ಕುದಿಸಿ ಕಲಕಬೇಕು. ನಂತರ ಇದನ್ನು ಕಂಬಳಿ ಹುಳು ಬಿದ್ದಂತಹ ಹಣ್ಣಿನ ಗಿಡಕ್ಕೆ ಸಿಂಪಡಿಸಬೇಕು. ಇದಲ್ಲದೆ

ಬೇವಿನ ಜೊತೆಯಲ್ಲಿ ಬೆಳ್ಳುಳ್ಳಿಯನ್ನು ಸೇರಿಸಿದ ದ್ರಾವಣವನ್ನು ಕಂಬಳಿ ಹುಳು ನಿಯಂತ್ರಣಕ್ಕೆ ಬಳಸಬಹುದು.

೧೦ ಕೆ.ಜಿ. ಬೇವಿನ ಚಿಗುರೆಲೆಯೊಂದಿಗೆ ೨೫೦ ಗ್ರಾಂ ಒಣಗಿದ ಬೇವಿನ ಬೀಜ ಅಥವಾ ೫೦ ಗ್ರಾಂ ಬೇವಿನ ಎಣ್ಣೆ, ೧ ಕೆ.ಜಿ. ಬೆಳ್ಳುಳ್ಳಿ ಹಾಗೂ ಒಂದು ಕೆ.ಜಿ. ಬೇವಿನ ಕಾಂಡದ ಅಥವಾ ಬೇರಿನ ಪುಡಿ ಇವುಗಳನ್ನೆಲ್ಲ ಒಟ್ಟಾಗಿ ಸೇರಿಸಿ ಚೆನ್ನಾಗಿ ಅರೆದು ಗೊಜ್ಜನ್ನು ತಯಾರಿಸಿಕೊಳ್ಳಬೇಕು. ನಂತರ ೧೨ ಲೀಟರ್ ನೀರನ್ನು ಬೆರೆಸಿಕೊಂಡು ತಾಮ್ರ ಅಥವಾ ಮಣ್ಣಿನ ಪಾತ್ರೆಯಲ್ಲಿ ಕಡಿಮೆ ಉಷ್ಣತೆಯಲ್ಲಿ ಇದರ ಪ್ರಮಾಣ ಅರ್ಧದಷ್ಟು ಕಡಿಮೆಯಾಗುವ ತನಕ ಕುದಿಸತಕ್ಕದ್ದು. ಈ ಮಿಶ್ರಣ ತಂಪಾದ ಮೇಲೆ ಶೋಧಿಸಿ, ಉಳಿಯುವ ವಸ್ತುವು ಸಾರಯುಕ್ತವಾಗಿರುತ್ತದೆ. ಇದನ್ನು ಮತ್ತೆ ಚೆನ್ನಾಗಿ ಜಜ್ಜಿ ಬೇವಿನ ಎಣ್ಣೆ ಹಾಗೂ ಸ್ವಲ್ಪ ಪ್ರಮಾಣದ ಅರಿಶಿಣವನ್ನು ಕುದಿಸಿದ ನೀರಿನಲ್ಲಿ ಬೆರೆಸಬೇಕು. ಇದನ್ನು ಸಾಗುವಳಿಗೆ ಮುನ್ನ ಬೆಳೆಗಳ ಮೇಲೆ ಎರಚಬಹುದು. ಹೀಗೆ ಕುದಿಸಿ ಸಾರವನ್ನು ಶೋಧಿಸಿದ ನಂತರ ४ ರಿಂದ ೫ ವಾರಗಳ ಕಾಲದವರೆಗೆ ಮುಚ್ಚಳವಿರುವ ಜರಡಿಯಲ್ಲಿ ಹಾಕಿ ಇಡಬೇಕು. ನಂತರ ಇದನ್ನು ಮತ್ತೊಮ್ಮೆ ಶೋಧಿಸಿ ಬೆಳೆಗಳಿಗೆ ಸಿಂಪಡಿಸಬಹುದು. ಇದನ್ನು ಪ್ರತಿ ಮೂರು ದಿನಗಳಿಗೊಮ್ಮೆ ಪ್ರಾರಂಭದಲ್ಲಿ ಸಿಂಪಡಿಸಿ, ಸಸ್ಯಗಳು ಬೆಳೆದಂತೆ ಪ್ರತಿ ೭ ದಿನಗಳಿಗೊಮ್ಮೆ ಸಿಂಪಡಿಸಬಹುದು.

ಸಮಂಜಸ ಜೊತೆಗಾರರು

ಹಿಪ್ಪುನೇರಳೆ ಕಡ್ಡಿಗಳನ್ನು ಕೊತ್ತಂಬರಿ ಗಿಡದೊಂದಿಗೆ ಬೆಳೆಯುವುದರಿಂದ ಹಿಪ್ಪುನೇರಳೆ ಗಿಡದ ಎಲೆಗಳು ಚೆನ್ನಾಗಿ ಬೆಳೆದು ಉದ್ಯಮದಲ್ಲಿ ರೇಶಿಮೆ ಗೂಡಿನ ಉತ್ಪತ್ತಿ ಹೆಚ್ಚುತ್ತದೆ. ಇದು ಕರ್ನಾಟಕ ಹಿಪ್ಪುನೇರಳೆ ಬೆಳೆಗಾರರ ಅನುಭವದಿಂದ ತಿಳಿದುಬಂದಿದೆ.

ಮಾವನ್ನು ಹಣ್ಣಾಗಿಸುವ ವಿಧಾನ

ಮಾವಿನ ಕಾಯಿಯನ್ನೇ ಕೊಯಿದು ಒಂದು ಬುಟ್ಟಿಯಲ್ಲಿ ಮೊದಲು ಕಕ್ಕೆಗಿಡದ ಎಲೆಗಳನ್ನು ಹಾಕಿ ಅದರ ಮೇಲೆ ಮಾವಿನ ಕಾಯಿಗಳನ್ನು ಇಡಬೇಕು. ಇದಾದ ಮೇಲೆ ಮತ್ತೆ ಕಕ್ಕೆಗಿಡದ ಎಲೆಗಳಿಂದ ಕಾಯಿಗಳನ್ನು ಮೇಲಿನಿಂದ ಮುಚ್ಚಬೇಕು. ಸಾಮಾನ್ಯವಾಗಿ ಪದರುಗಳಲ್ಲಿ ಮೇಲೆ ಮತ್ತು ಕೆಳಗೆ ಕಕ್ಕೆ ಗಿಡದ ಎಲೆಗಳನ್ನು ಹಾಸುತ್ತಾರೆ. ಇದರಿಂದ ಮಾವಿನಕಾಯಿ ಬೇಗ ಹಣ್ಣಾಗುವುದೆಂದು ರಾಜಸ್ಥಾನದ ಉದಯಪುರ್ ಜಿಲ್ಲೆಯ ಅರಣ್ಯ ಅಧಿಕಾರಿಯೊಬ್ಬರು ಹೇಳುತ್ತಾರೆ.

ಕಲ್ಲಂಗಡಿ ಬೀಜ ಉಪಚಾರ

ಕಲ್ಲಂಗಡಿ ಹಣ್ಣಿನ ಬೀಜಗಳನ್ನು ಕುಂಕುಮ ಕದಡಿದ ನೀರಿನಲ್ಲಿ ಒಂದು ರಾತ್ರಿ ನೆನೆಸಿ ನಂತರ ಬಿತ್ತನೆ ಮಾಡಿದರೆ ಚೆನ್ನಾಗಿ ಮೊಳಕೆ ಬರುವುದರ ಜೊತೆಗೆ ಆರೋಗ್ಯ ವೃದ್ಧಿಸುತ್ತದೆ ಎನ್ನುವುದು ಪ್ರಭಾಕರ್, ಗೆಣಸಿನಕುಣಿ, ಸಾಗರ ಇವರ ಶೋಧನ.

ಹಾಗೇ ಕಲ್ಲಂಗಡಿ ಹಣ್ಣಿನ ಬೀಜಗಳನ್ನು ಆಕಳ ಹಾಲಿನಲ್ಲಿ ಒಂದು ರಾತ್ರಿ ನೆನೆಸಿ ನಂತರ ಬಿತ್ತನೆ ಮಾಡಿದರೆ ಚೆನ್ನಾಗಿ ಮೊಳಕೆ ಬರುವುದರ ಜೊತೆಗೆ ಆರೋಗ್ಯವಾಗಿ ಗಿಡ ಬೆಳೆಯುತ್ತದೆ. ಇದರ ಪ್ರಯೋಗ ಮಾಡಿದವರು ಸೇನಾಪತಿ ಗೌಡರು, ಗೆಣಸಿನಕುಣಿ, ಸಾಗರ.

ನಿಂಬೆಗಿಡಗಳ ಅಂಟು ರೋಗಕ್ಕೆ

ನಿಂಬೆಗಿಡಗಳಿಗೆ ಸಾಮಾನ್ಯವಾಗಿ ತಗಲುವ ರೋಗವೆಂದರೆ ಕಾಂಡ ಸೋರುವ (Gummy disease) ಅಂಟುರೋಗ. ಈ ರೋಗದಿಂದ ಎಲೆಗಳು ಒಣಗುತ್ತವೆ ಮತ್ತು ಮರದ ಕೆತ್ತೆಗಳಲ್ಲಿ ಹುಣ್ಣಿನ ತರಹ ಕಾಣಿಸಿಕೊಳ್ಳುತ್ತದೆ. ಇದರ ಜೊತೆ ಅಂಟಿನಂತಹ ದ್ರವ ಪದಾರ್ಥ ಹೊರ ಹೊಮ್ಮುತ್ತದೆ.


ಈ ರೋಗಕ್ಕೆ ಗುಜರಾತಿನ ಮೆಹಸನಾ ತಾಲೂಕಿನ ಶ್ರೀ ಸೋಮಾಭಾಯಿ ಪಟೇಲರು ನೀರಿನ ಕಾಲುವೆಯಲ್ಲಿ ಹರಳೆಣ್ಣೆಯನ್ನು ಹಾಕಿ ಗಿಡಗಳಿಗೆ ನೀರನ್ನು ಬಿಡುತ್ತಾರೆ. ಇದರ ಜೊತೆ ಹೊಗೆಸೊಪ್ಪಿಗೆ ಪುಡಿಯನ್ನು ಗಿಡಗಳಿಗೆ ಸಿಂಪಡಿಸುತ್ತಾರೆ. ಈ ರೀತಿ ಮಾಡಿದಾಗ ಎರಡು ಅಥವಾ ಮೂರು ದಿನಗಳಲ್ಲಿ ಗಿಡಗಳು ರೋಗದಿಂದ ಗುಣ ಹೊಂದುತ್ತವೆ. ಸೋಮಾಭಾಯಿಯವರು ಈ ಪ್ರಯೋಗವನ್ನು ಸುಮಾರು ಹತ್ತು ವರ್ಷಗಳಿಂದ ಮಾಡುತ್ತಿದ್ದಾರೆ. ಅದೂ ಅಲ್ಲದೆ ಅವರ ಹಳ್ಳಿಯ ರೈತರು ಸಹ ಈ ಪ್ರಯೋಗವನ್ನೇ ಮಾಡುತ್ತಾರೆ ಎಂದು ತಿಳಿದುಬಂದಿದೆ.

ಮಾವಿನ ಸಮಗ್ರ ರಕ್ಷಣೆ

ಮಾವಿನ ಬೂದಿರೋಗಕ್ಕೆ ಚಿತ್ರದುರ್ಗದ ಮಹಾವೀರ್ ಮತ್ತು ಬೆಂಗಳೂರಿನ ಗೋವಿಂದ ಕಬಾಡಿಯವರು ತಮ್ಮದೇ ಆದಂತಹ ಎರಡು ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಮಹಾವೀರ್‌ರವರು ಮೊದಲನೇ ಹಂತವಾಗಿ ಫಸಲು ಬಂದ ನಂತರ ಸಗಣಿ ಮತ್ತು ಗಂಜಲದ ಮಿಶ್ರಣವನ್ನು ರಂಧ್ರಗಳಿಗೆ ಮತ್ತು ಮೇಲ್ಮೈಗೆ ತುಂಬುತ್ತಾರೆ. ಈ ವಿಧಾನವನ್ನು ವರ್ಷಕ್ಕೆ ಒಮ್ಮೆ ಮಾತ್ರ ಮಾಡುತ್ತಾರೆ. ನಂತರ ಜೀವಾಮೃತವನ್ನು ೧೦ ಲೀಟರ್ ಗಂಜಲ, ೧೦ ಕಿಲೋ ಸಗಣಿ, ೨ ಕಿಲೋ ಬೇಳೆಕಾಳಿನ ಹಿಟ್ಟು, ೨ ಕಿಲೋ ಕಪ್ಪು ಬೆಲ್ಲ, ೨ ಹಿಡಿ ಮಣ್ಣು ಇವುಗಳನ್ನು ೨೦೦ ಲೀ. ನೀರಿಗೆ ಕೊಳೆ ಹಾಕಿ ೯ ದಿನಗಳ ನಂತರ ಫಿಲ್ಟರ್ ಮಾಡಿ ತಯಾರಿಸಿ ಕೊಳ್ಳುತ್ತಾರೆ. ಇದನ್ನು ೨೦ ಅಥವಾ ೩೦ ದಿನಗಳಿಗೊಮ್ಮೆ ಹೂ ಬಿಡುವ ಮೊದಲು ಮರಗಳಿಗೆ ಸಿಂಪಡಿಸಿದರೆ ಬೂದಿ ರೋಗವನ್ನು ತಡೆಯಬಹುದು ಎನ್ನಲಾಗಿದೆ. ಹೂ ಬಿಟ್ಟ ನಂತರವೂ ಬೂದಿರೋಗ ಕಾಣಿಸಿಕೊಂಡರೆ ೧೫ ದಿನಗಳ ಅಂತರದಲ್ಲಿ ಎರಡು ಬಾರಿ ಹುಳಿ ಮಜ್ಜಿಗೆಯನ್ನು ಸಿಂಪಡಿಸುತ್ತಾರೆ. ಕಾಯಿ ಕಚ್ಚಿಕೊಂಡ ನಂತರ 'ಅಗ್ನಿಅಸ್ತ್ರ' ಮಿಶ್ರಣವನ್ನು ೫ ಕೆ.ಜಿ. ಬೇವಿನ ಎಲೆ, ೨ ಕೆ.ಜಿ. ಹೊಗೆಸೊಪ್ಪು ೩ ಕೆ.ಜಿ. ಬೆಳ್ಳುಳ್ಳಿ, ೪ ಕೆ.ಜಿ. ಚಿಕ್ಕ ಹಸಿಮೆಣಸಿನಕಾಯಿ, ೨೦ ಲೀ. ಜವಾರಿ ಆಕಳ ಗಂಜಲ ಇವುಗಳನ್ನು ೨೦ ದಿನಗಳು ನೆನೆಸಿ ನಂತರ ಸೋಸಿ ತಯಾರಿಸಿಕೊಳ್ಳುತ್ತಾರೆ. ಇದನ್ನು ೨೦೦ ಲೀ. ನೀರಿಗೆ ಸೇರಿಸಿ ಎರಡು ಬಾರಿ ಸಿಂಪಡಿಸಿದರೆ ಬಿಳಿಸೊಳ್ಳೆಗಳ ಸಮಸ್ಯೆಯನ್ನೂ ತಡೆಗಟ್ಟಬಹುದಂತೆ.

ಮಾವಿನ ಗಿಡಕ್ಕೆ ಸಾವಯವ ಕಷಾಯ

ಗುಜರಾತಿನ ಜುನಾಗಡ್ ಜಿಲ್ಲೆಯ ತಲಾಲ ತಾಲೂಕಿನ, ಹದ್ಮಾಟಿಯ ಕರಮ್‌ಸಿಂಹ ಭಾಯಿಯವರು ಮಾವಿನ ಗಿಡಗಳಿಗೆ ಒಂದು ಸಾವಯವಾಗಿ ಕಷಾಯವನ್ನು ಬಳಸಿ ಉತ್ತಮ ಇಳುವರಿಯನ್ನು ಪಡೆಯುತ್ತಿದ್ದಾರೆ. ಸ್ಥಳೀಯವಾಗಿ 'ಬಂದಿ' ಎಂದು ಕರೆಯಲಾಗುವ ರೋಗದ ಕಾರಣದಿಂದ ಮಾವಿನ ಗಿಡವು ಒಣಗಿ ಹೋಗುತ್ತದೆ. ಪರಿಣಾಮವಾಗಿ ಹೂ ಬಿಡುವುದು ಕೂಡ ಗಣನೀಯವಾಗಿ ಕಡಿಮೆಯಾಗುತ್ತದೆ. ಕಾಯಿಯಾಗುವ ಸಮಯದಲ್ಲಿ ಕೀಟಗಳ ಹಾವಳಿಯಿಂದ ಉತ್ಪನ್ನವೂ ಕಡಿಮೆಯಾಗಿ ಲಾಭವೂ ಸಿಗುವುದಿಲ್ಲ. ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಅವರು ಅಂಕೋಲೆ (Alangium salvifolium (L.F.) Wang) ಮತ್ತು ಕೆಲವು ವಿಶೇಷ ಗಿಡಮೂಲಿಕೆಗಳನ್ನು ಜೇನು, ಶುಂಠಿ ಮತ್ತು ಉಪ್ಪಿನ ಜೊತೆ ಸೇರಿಸಿ ಮಾವಿನ ಗಿಡಗಳಿಗೆ ಉಪಯೋಗಿಸಿ ಉತ್ತಮ ಫಲಿತಾಂಶವನ್ನು ಪಡೆದಿದ್ದಾರೆ. ಈ ವಿಧಾನವನ್ನು ಅವರು ಐದು ವರ್ಷಗಳಿಂದ ಅನುಸರಿಸುತ್ತಿದ್ದಾರೆ. ಮೊದಲನೇ ವರ್ಷದಲ್ಲಿ ಮಿಶ್ರಣವನ್ನು ಒಂದು ಮರಕ್ಕೆ ಬಳಸಿ, ಅದರಲ್ಲಿ ಉತ್ತಮ ಹೂ ಬಿಡುವುದನ್ನು ಗಮನಿಸಿದ್ದರು. ಎರಡನೇ ವರ್ಷದಲ್ಲಿ ಅವರ ತೋಟದ ಅರ್ಧದಷ್ಟು ಮರಗಳಲ್ಲಿ ಉಪಯೋಗಿಸಿದಾಗ ಹಿಂದಿನ ಫಲಿತಾಂಶವನ್ನೇ ಪಡೆದರು. ಹೀಗಾಗಿ ಅವರು ತಮ್ಮ ತೋಟದ ಎಲ್ಲಾ ಮರಗಳಿಗೂ ಈ ವಿಧಾನವನ್ನೇ ಅನುಸರಿಸಿದರು. ಮೊದಲು ಎಕರೆಗೆ ೪ ರಿಂದ ೬ ಕ್ವಿಂಟಾಲ್ ಮಾವನ್ನು ಪಡೆಯುತ್ತಿದ್ದ ಅವರು ಈಗ ಸರಾಸರಿ ೧೩ ಕ್ವಿಂಟಾಲ್‌ನಷ್ಟು ಇಳುವರಿಯನ್ನು ಪಡೆಯುತ್ತಿದ್ದಾರೆ. ಅವರು ಮಿಶ್ರಣವನ್ನು ಸುಗ್ಗಿ ಕಾಲ ಮುಗಿದ ಮೂರು ತಿಂಗಳ ನಂತರ ಪ್ರತಿ ಗಿಡಕ್ಕೆ ೫೦೦ ಗ್ರಾಂ.ನಂತೆ ವರ್ಷಕ್ಕೆ ಒಂದು ಸಾರಿ ಕೊಡುತ್ತಾರೆ. ಅವಶ್ಯಕತೆಗೆ ತಕ್ಕಂತೆ ಮಿಶ್ರಣದ ಪ್ರಮಾಣವನ್ನು ಹೆಚ್ಚಿಗೆ ಕೊಡಬಹುದು ಎನ್ನುತ್ತಾರೆ. ಈ ವಿಧಾನದಿಂದ ಯಾವುದೇ ರೀತಿಯ ದುಷ್ಪರಿಣಾಮಗಳು ಕಂಡುಬರುವುದಿಲ್ಲವೆಂದು ಕರಮ್‌ಸಿಂಹ ಭಾಯಿಯವರು ಹೇಳಿದ್ದಾರೆ. ಹೆಚ್ಚಿನ ಉತ್ಪನ್ನಕ್ಕಾಗಿ ಮಾವಿನ ಗೊರೆಯನ್ನು ಅಂಕೋಲೆ ಹಣ್ಣಿನ ರಸದಲ್ಲಿ ನೆನೆಸಿ ಉಳುಮೆ ಮಾಡಿದರೆ ಉತ್ತಮ ಎನ್ನಲಾಗಿದೆ.



ಶಿಲೀಂಧ್ರ ನಿಯಂತ್ರಣ

ನಿಂಬೆ ಜಾತಿಗೆ ಸೇರಿದ ಮರಗಳ ಮೇಲೆ ಮಳೆಗಾಲದಲ್ಲಿ(ಸೆಪ್ಟೆಂಬರ್ - ನವೆಂಬರ್) ಶಿಲೀಂಧ್ರಗಳು ಬೆಳೆಯುವುದು ಸಾಮಾನ್ಯ. ಇವನ್ನು ನಿಯಂತ್ರಿಸದಿದ್ದಲ್ಲಿ ಮರಗಳು ಸಾಯುತ್ತವೆ. ಸಾಮಾನ್ಯವಾಗಿ ಶಿಲೀಂಧ್ರಗಳ ನಿಯಂತ್ರಣಕ್ಕೆ ಬೋರ್ಡ್ಯಾಕ್ಸ್ ಮಿಶ್ರಣ ವನ್ನು ಬಳಸಲಾಗುತ್ತಿದೆ. ಈ ಮಿಶ್ರಣವು ಇವುಗಳ ಬೆಳವಣಿಗೆಯನ್ನು ನಿಯಂತ್ರಿಸಲು

ಮೂರರಿಂದ ನಾಲ್ಕು ದಿನಗಳು ಬೇಕಾಗುತ್ತದೆ. ಆದರೆ ಕೇರಳದ ಪುಳಿಯಾಂಕುಡಿ ಗ್ರಾಮ, ತಿರುನೇಲ್ಮೇಲಿ ಜಿಲ್ಲೆಯ ಅಂತೋನಿಸ್ವಾಮಿಯವರು ಸ್ಥಳೀಯವಾಗಿ ದೊರೆಯುವ ವಸ್ತುಗಳನ್ನು ಬಳಸಿ ಕೇವಲ ಮೂರು ಗಂಟೆಗಳಲ್ಲಿ ಈ ಶಿಲೀಂಧ್ರಗಳ ಬೆಳವಣಿಗೆಯನ್ನು ನಿಯಂತ್ರಿಸಬಹುದೆಂದು ತೋರಿಸಿಕೊಟ್ಟಿರುತ್ತಾರೆ.

ಎರಡು ಕಿ.ಗ್ರಾಂ. ಲೋಳೆಸರ (Aloe vera) ಮತ್ತು ಒಂದು ಕಿ.ಗ್ರಾಂ. ಬೆಳ್ಳುಳ್ಳಿಯನ್ನು ಸ್ವಲ್ಪ ನೀರಿನಲ್ಲಿ ಚೆನ್ನಾಗಿ ಅರೆದು ಪೇಸ್ಟ್ ರೀತಿಯಲ್ಲಿ ಮಾಡಿಕೊಂಡು ಶಿಲೀಂಧ್ರಗಳು ಬೆಳೆಯುತ್ತಿರುವ ಮರಗಳ ಭಾಗಗಳ ಮೇಲೆ ಸವರಿದರೆ ಕೇವಲ ಮೂರು ಗಂಟೆಗಳಲ್ಲಿ ಇವುಗಳ ಬೆಳವಣಿಗೆಯನ್ನು ನಿಯಂತ್ರಿಸಬಹುದೆಂದು ಅಂತೋನಿಸ್ವಾಮಿಯವರು ಹೇಳುತ್ತಾರೆ.


ಕೀಟ ನಿಯಂತ್ರಣಕ್ಕೆ ಬೆಳ್ಳುಳ್ಳಿಯ ಬಳಕೆ

ಬೆಳ್ಳುಳ್ಳಿ ಇತರೆ ಬೆಳೆಗಳಿಗೆ ಬೀಳುವಂತಹ ಪೀಡೆಗಳನ್ನು ನಿಯಂತ್ರಿಸುವ ಶಕ್ತಿಯನ್ನು ಹೊಂದಿದೆ. ಇಂತಹ ಬೆಳ್ಳುಳ್ಳಿ ಯಾವುದೇ ರಾಸಾಯನಿಕ ಗೊಬ್ಬರಗಳನ್ನು ಹಾಕದೆ ಬೆಳೆದಿರುವಂತಹದಾಗಿರಬೇಕು. ಏಕೆಂದರೆ ಬೆಳ್ಳುಳ್ಳಿಗೆ ರಾಸಾಯನಿಕ ಗೊಬ್ಬರವನ್ನು ಬಳಸಿ ಬೆಳೆದಿದ್ದರೆ ಈ ರಾಸಾಯನಿಕ ಗೊಬ್ಬರಗಳು ಬೆಳ್ಳುಳ್ಳಿಯಲ್ಲಿರುವ ಸಹಜ ರಾಸಾಯನಿಕಗಳ ಶಕ್ತಿಯನ್ನು ನಿಸ್ಸಾರಗೊಳಿಸುತ್ತವೆ. ಬೆಳ್ಳುಳ್ಳಿಯಲ್ಲಿರುವಂತಹ ಕೀಟ ವಿಕರ್ಷಕ ಗುಣವು ಅತ್ಯಂತ ಕಹಿ ಮತ್ತು ತೀಕ್ಷ್ಣವಾದ ಬಾಷ್ಪತೈಲದಲ್ಲಿನ ಡೈಯಲಿಲ್ ಡೈಸಲ್ಫೈಡ್, ಡೈಯಲಿಲ್ ಟ್ರೈಸಲ್ಫೈಡ್ ಮತ್ತು ಸಲ್ಫೋಕ್ಸೈಡ್‌ಗಳ ಪ್ರಭಾವದಿಂದ ಕೂಡಿದೆ. ಈ ರೀತಿ ನಾಟಿ ಔಷಧಿಗಳ ವ್ಯವಸ್ಥಿತ ರೀತಿಯ ಬಳಕೆಯಲ್ಲಿ ಬೆಳ್ಳುಳ್ಳಿಯ ಮಹತ್ವ ತಿಳಿಸುವ 'ಪೀಡೆಗಳ ಹತೋಟಿಗಾಗಿ ಸಸ್ಯಗಳು' ಎಂಬ ಪುಸ್ತಕವನ್ನು ಬೆಂಗಳೂರು ಇಕ್ರಾ (Institute for Cultural Research and Action) ಸಂಸ್ಥೆ ಪ್ರಕಟಿಸಿದೆ. ಇದರಿಂದ ಸಂಗ್ರಹಿಸಲಾಗಿರುವ ಕೆಲ ಮುಖ್ಯ ಹತೋಟಿ ಕ್ರಮಗಳನ್ನು ಈ ಕೆಳಗೆ ಕೊಡಲಾಗಿದೆ.



ಹಂದಿ ಹಾವಳಿಗೆ ಬಾಟಲಿ ಬಾಣ !

ಜಮಖಂಡಿಯ ಕೃಷಿಕ ಸುರೇಶ್ ಪಾಟೀಲರು ತಮ್ಮ ಜಮೀನಿನಲ್ಲಿ ಹಂದಿಗಳ ಹಾವಳಿಯನ್ನು ತಡೆಯಲು ಸರಳ ಹಾಗೂ ಖರ್ಚಿಲ್ಲದ ತಂತ್ರವೊಂದನ್ನು ಕಂಡುಕೊಂಡಿದ್ದಾರೆ. ಗಿಡದ ಕೊಂಬೆಗೆ ಖಾಲಿ ಬಾಟಲಿಯನ್ನು ಮೇಲ್ಮುಖವಾಗಿ ನೇತು ಹಾಕಬೇಕು. ಬಾಟಲಿಯಿಂದ ಅರ್ಧ ಅಡಿ ಕೆಳಗೆ ಬರುವಂತೆ ಇಳಿಬಿಟ್ಟು ಅದರ ಕೊನೆಗೆ ಒಂದು ದಪ್ಪ ರಟ್ಟನ್ನು ಕಟ್ಟಬೇಕು. ಬಾಟಲಿಯ ಪಕ್ಕದಿಂದ ಹಾಯ್ದು ಬರುವ ದಾರಕ್ಕೆ ಎರಡು ಕಬ್ಬಿಣದ ನಟ್‌ಗಳನ್ನು ಸ್ವಲ್ಪ ಅಂತರದಲ್ಲಿ ಕಟ್ಟಬೇಕು. ಬೀಸುವ ಗಾಳಿಗೆ ರಟ್ಟು ಆ ಕಡೆ ಈ ಕಡೆ ಹಾರಾಡುವುದರಿಂದ ಕಬ್ಬಿಣದ ನಟ್‌ಗಳು ಬಾಟಲಿಗೆ ತಾಗಿ ಟಣ್ ಟಣ್ ಎಂದು ನಿರಂತರವಾಗಿ ಶಬ್ದ ಮಾಡುತ್ತದೆ. ಈ ಶಬ್ದದಿಂದಾಗಿ ಹಂದಿಗಳು ಸಮೀಪ ಸುಳಿಯುವುದಿಲ್ಲ ಎನ್ನುತ್ತಾರೆ ಪಾಟೀಲರು. ಹತ್ತಿರದ ಬಾಳೆ ಕೃಷಿಕ ಮಹಾದೇವ ಇವರೂ ಸಹ ಈ ತಂತ್ರವನ್ನು ಅಳವಡಿಸಿಕೊಂಡಿದ್ದು ಬಾಳೆ ತೋಟವನ್ನು ಹಂದಿ ಕಾಟದಿಂದ ಮುಕ್ತಿಗೊಳಿಸಿಕೊಂಡಿದ್ದಾರೆ.



ಬಾಳೆ ಗಿಡ


೧೫೦ ಗ್ರಾಂ.ನಷ್ಟು ಕಪ್ಪೆ ಚಿಪ್ಪನ್ನು ಪುಡಿ ಮಾಡಿ, ನೀರಲ್ಲಿ ಕುದಿಸಿ ಬಾಳೆಗುಂಡಿಗೆ ಹಾಕಿದರೆ ಬಾಳೆಗಿಡದ ಕಾಂಡಕ್ಕೆ ಹಾನಿಯುಂಟುಮಾಡುವ ಕ್ರಿಮಿಕೀಟಗಳನ್ನು ನಾಶಪಡಿಸುತ್ತದೆ ಎಂಬುದನ್ನು ಪ್ರಯೋಗ ಮಾಡಿ ನೋಡಿದವರು ಕನ್ಯಾಕುಮಾರಿ ಜಿಲ್ಲೆಯ ಶ್ರೀ ವೇಲು ಮೂದಲಿಯಾರ್‌ರವರು.

ಅಧ್ಯಾಯ : ಐದು

ತೆಂಗು ಬೆಳೆಯಲ್ಲಿ

ತೆಂಗಿನ ಮರದ ಕೆಂಪು ದುಂಬಿಗಳ ನಿಯಂತ್ರಣಕ್ಕೊಂದು ಹೊಸ ಪ್ರಯೋಗ


ತಮಿಳುನಾಡಿನ ಅಂಬಸಮುದ್ರಂ ಪ್ರದೇಶದಲ್ಲಿ ಕೆಂಪು ದುಂಬಿಗಳ ಕಾಟದಿಂದ ರೈತರು ಕಂಗಾಲಾಗಿದ್ದರು. ಸರ್ಕಾರ ಶಿಫಾರಸ್ಸು ಮಾಡಿದ ಎಲ್ಲಾ ಹತೋಟಿ ಕ್ರಮಗಳೂ ವಿಫಲವಾಗಿ, ರೈತರು ವರ್ಷಕ್ಕೆ ೫೦-೬೦ ಮರಗಳನ್ನು ಕಳೆದುಕೊಳ್ಳುವಂತಹ ಸ್ಥಿತಿಯನ್ನು ತಲುಪಿದ್ದರು. ಶ್ರೀ ಗಣಪತಿ ಸುಂದರಂ ಎಂಬುವವರು ಈ ಸಮಸ್ಯೆಗೊಂದು ಪರಿಣಾಮಕಾರಿ ಪರಿಹಾರ ಕಂಡು ಹಿಡಿದಿದ್ದಾರೆ. ಅವರು ಕೆಂಪು ದುಂಬಿಗಳ ಬಾಧೆಗೊಳಗಾಗಿರುವ ಯಾವುದಾದರೂ ಒಂದು ಮರವನ್ನು ನೆಲದಿಂದ ಮೇಲೆ ೩-೪ ಅಡಿ ಬಿಟ್ಟು ಕತ್ತರಿಸಿ, ಕತ್ತರಿಸಿದ ಭಾಗವನ್ನು ಸುಡುತ್ತಾರೆ. ನೆಲದ ಮೇಲ್ಭಾಗದಲ್ಲಿ ಉಳಿದ ಕಾಂಡದಿಂದ ಕೆಂಪು ಮಿಶ್ರಿತ ಕಂದು ರಸ ಸೋರುತ್ತದೆ. ಈ ರಸದ ವಾಸನೆಗೆ ಕೆಂಪು ದುಂಬಿಗಳು ಆಕರ್ಷಣೆಗೊಳಗಾಗಿ ಕತ್ತರಿಸಿದ ಮರದ ಬುಡದ ಬಳಿ ಬಂದು ಸೇರುತ್ತವೆ. ನಂತರ ಅವುಗಳನ್ನು ನಿರ್ಮೂಲನೆ ಮಾಡುತ್ತಾರೆ. ಕಾಲಕ್ರಮವಾಗಿ ಕತ್ತರಿಸಿದ ಮರದ ಕಾಂಡವನ್ನು ಆಗಿಂದಾಗ್ಗೆ ಓರೆಯಾಗಿ ಮತ್ತೆ ಕತ್ತರಿಸುತ್ತಿರುತ್ತಾರೆ. ಇದರಿಂದ ಹೆಚ್ಚು ರಸ ಸೋರಿ, ಹೆಚ್ಚು ಹುಳುಗಳು ಬಂದು ಸೇರುತ್ತವೆ. ಈ ರೀತಿ ಕತ್ತರಿಸಿದ ಒಂದು ಮರವು ಸುತ್ತಲಿನ ಸುಮಾರು ೧೦ ಎಕರೆ



ಪ್ರದೇಶದಿಂದ ಹುಳುಗಳನ್ನು ಆಕರ್ಷಿಸುತ್ತದೆ ಎಂಬುದು ತಮಿಳುನಾಡಿನ ಗಣಪತಿ ಸುಂದರಂ ಅವರ ಅನುಭವ.

ತೆಂಗಿನ ಗಿಡ ಕೊರೆಯುವ ದುಂಬಿ

ಪಾಂಡಿಚೇರಿಯ ಎತ್ತುಕ್ಕುಡಿ ಗ್ರಾಮದ ಪಿ. ಶೇಖರ ಪಾತು ಪಿಳ್ಳೈ ತೆಂಗಿನ ಗಿಡ ಕೊರೆಯುವ ದುಂಬಿ ಓಡಿಸಲು ಸುಲಭವಾದ ಔಷಧಿ ಹುಡುಕಿಕೊಂಡಿದ್ದಾರೆ. ಗಿಡ ಕೊರೆಯುವ ದುಂಬಿ (Rhinocerus beetle, Oryctes rhinocerus) ಸುಳಿ ಕೊರೆದು ಬೆಳೆದು ನಿಂತ ತೆಂಗಿನ ಮರಗಳನ್ನೇ ಸಾಯಿಸುವುದುಂಟು. ತೆಂಗಿನ ಮರದೆಡೆಗೆ ಬರುವ ದುಂಬಿಗಳನ್ನು ಆಕರ್ಷಿಸಲು ಹರಳಿನ (Castor) ಪುಡಿ ಮತ್ತು ನೀರಾ ಅಥವಾ ಕಳ್ಳು ಬಳಸುತ್ತಾರೆ. ಸುಮಾರು ೨ ಕೆ.ಜಿ. ಯಷ್ಟು ಹರಳಿನ ಬೀಜದ ಪುಡಿಯನ್ನು ಒಂದೆರಡು ಲೀಟರ್ ನೀರಾದಲ್ಲಿ ಬೆರೆಸಿ ಮಡಿಕೆಯಲ್ಲಿ ತುಂಬಿ ತೆಂಗಿನ ಗಿಡಗಳ ಮಧ್ಯದಲ್ಲಿ ಇಡುತ್ತಾರೆ. ಹೀಗೆ ತೆಂಗಿನ ತೋಟದಲ್ಲಿ ಅಲ್ಲಲ್ಲಿ ಮಡಿಕೆಗಳನ್ನು ಇಡುವುದರಿಂದ ದುಂಬಿಗಳು ತೆಂಗಿನ ಮರದ ಬದಲು ಇದಕ್ಕೆ ಆಕರ್ಷಿತವಾಗಿ ಬಂದು ತಿಂದು ಸಾಯುತ್ತವೆ. ಆದರೆ, ಮಡಿಕೆಯಲ್ಲಿನ ವಿಷ ಸಾಕುಪ್ರಾಣಿಗಳ ಬಾಯಿ ಸೇರದಂತೆ ಎಚ್ಚರಿಕೆ ವಹಿಸುವುದು ಅತ್ಯಗತ್ಯ. ಮಡಿಕೆಯಲ್ಲಿನ ದ್ರಾವಣವನ್ನು ತಿಂಗಳಿಗೊಂದಾವರ್ತಿ ಬದಲಾಯಿಸಿದರೆ ಸಾಕು.



ತೆಂಗಿನ ಮರಕ್ಕೆ ಅಳಿಲು, ಇಲಿಗಳ ಕಾಟವೇ?

ತೆಂಗಿನ ಮರ ಹತ್ತಿ ಅಳಿಲು ಕಾಡುತ್ತಿದೆಯೇ? ಬುಡದಿಂದ ಸುಮಾರು ಹತ್ತು ಅಡಿ ಎತ್ತರಕ್ಕೆ ಮರದ ಸುತ್ತ ಸುಮಾರು ಎರಡು ಅಡಿ ಅಗಲದ ತಗಡಿನ ಹಾಳೆಯನ್ನು ಮೊಳೆಯಿಂದ ಹೊಡೆದು ಕಟ್ಟಿ ಬಿಡಬೇಕು. ಅಳಿಲುಗಳಿಗೆ ಮರ ಹತ್ತಲು ಸಾಧ್ಯವಾಗದೆ ಅವುಗಳ ಕಾಟ ತಪ್ಪುತ್ತದೆ. ಇದು ಪಾಂಡಿಚೇರಿ ರೈತರು ಅನುಸರಿಸುವ ಪದ್ಧತಿ.

ತೆಂಗಿನ ನುಸಿಗೆ ನುಸಿ ಗುಳಿಗೆ

೫ ಗ್ರಾಂ ಇಂಗು, ೨.೫. ಗ್ರಾಂ ಪಚ್ಚೆ ಕರ್ಪೂರ ಮತ್ತು ೨.೫ ಗ್ರಾಂ. ನುಸಿ ಗುಳಿಗೆಗಳನ್ನು ಪುಡಿ ಮಾಡಿ, ಮಿಶ್ರ ಮಾಡಿ ತೆಂಗಿನ ಮರದಲ್ಲಿ ಹೊಸದಾಗಿ ಬರುವ ಹೊಂಬಾಳೆ ಕೆಳಭಾಗಕ್ಕೆ

ಇಟ್ಟರೆ ಇದರಿಂದ ಬರುವ ವಾಸನೆಗೆ ನುಸಿಪೀಡೆ ನಿಯಂತ್ರಿಸಲು ಸಾಧ್ಯ ಎಂಬುದು ಚನ್ನರಾಯಪಟ್ಟಣ ತಾಲ್ಲೂಕು ಸಂತೇಶಿವರದ ಬಸವರಾಜು ಅವರ ಅಭಿಪ್ರಾಯ.

ಕೃಷ್ಣಮೂರ್ತಿಯವರ ದೇಶೀಯ ಕಷಾಯ

ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕು ಇಡಗೋಡು ಗ್ರಾಮದ ಚಲ್ಲಾಕೃಷ್ಣಮೂರ್ತಿ ಸಾವಯವ ಕೃಷಿಕರು. ಇವರು ತೆಂಗಿನ ನುಸಿಗೆ ಮೂರು ತರಹದ ದೇಶೀಯ ಕಷಾಯವನ್ನು ಕಂಡುಕೊಂಡಿದ್ದಾರೆ. ಈ ದೇಶೀಯ ಪದ್ಧತಿಗಳಿಂದ ತೆಂಗಿನ ಮರಕ್ಕೆ ಬರುವ ರೋಗಗಳನ್ನು ಕಡಿಮೆ ಖರ್ಚಿನಲ್ಲಿ ಹತೋಟಿಯಲ್ಲಿಡಬಹುದೆಂದು ಸಾಧಿಸಿ ತೋರಿಸಿದ್ದಾರೆ. ಇವರ ಕ್ರಮಗಳನ್ನು ಕೆಳಗೆ ಕೊಡಲಾಗಿದೆ.

೧. ಬೇವಿನ ಕಷಾಯ

೧೦ ಕೆ.ಜಿ. ಬೇವಿನ ಬೀಜದ ಪುಡಿಯನ್ನು ಐದು ಲೀಟರ್ ನೀರಿನಲ್ಲಿ ೪೮ ಗಂಟೆಗಳ ಕಾಲ ನೆನೆಸಿಟ್ಟು ಚೆನ್ನಾಗಿ ಕಲಸಿ ಕಷಾಯವನ್ನು ತಯಾರಿಸಿಕೊಳ್ಳಬೇಕು. ಈ ಕಷಾಯವನ್ನು ೨೦೦ ಲೀಟರ್ ನೀರಿನೊಂದಿಗೆ ಬೆರೆಸಿ ಮರಕ್ಕೆ ಸಿಂಪಡಿಸುವುದರಿಂದ ನುಸಿ ರೋಗ ತಡೆಗಟ್ಟಬಹುದೆನ್ನುತ್ತಾರೆ.

೨. ವಿಷಮದಾರಿ ಕಷಾಯ

೧೦ ಕೆ.ಜಿ. ವಿಷಮದಾರಿ (Clerodendron inermi) ಸೊಪ್ಪನ್ನು ಚಿಕ್ಕದಾಗಿ ಕತ್ತರಿಸಿ ೫೦ ಲೀಟರ್ ನೀರಿನಲ್ಲಿ ೪೮ ಗಂಟೆಗಳ ಕಾಲ ನೆನೆಸಿಟ್ಟು, ಈ ದ್ರಾವಣವನ್ನು ೨೦೦ ಲೀಟರ್ ನೀರಿನೊಂದಿಗೆ ಬೆರೆಸಿ ಸಿಂಪಡಿಸಬೇಕೆನ್ನುತ್ತಾರೆ.

೩. ಉಪ್ಪಿನ ಪ್ರಯೋಗ


ಇವರು ಐದು ಕೆ.ಜಿ. ಉಪ್ಪನ್ನು ಗೋಣಿಚೀಲದಲ್ಲಿ ಕಟ್ಟಿ ತೆಂಗಿನಮರದ ಸುಳಿಯಲ್ಲಿಡುವುದರಿಂದಲೂ ನುಸಿರೋಗವನ್ನು ತಡೆಗಟ್ಟಬಹುದು ಎನ್ನುತ್ತಾರೆ.

ಇದರ ಜೊತೆಗೆ ತೆಂಗಿನ ಗರಿ ಕೊರೆಯುವ ಹುಳವನ್ನು ಹಿಡಿದು ನಾಶಪಡಿಸಲು ಒಂದು ಅಗಲ ಬಾಣಲೆಯಲ್ಲಿ ಸೀಮೆಎಣ್ಣೆ ಮತ್ತು ನೀರಿನ ಮಿಶ್ರಣವನ್ನು ಹಾಕಿಕೊಳ್ಳುತ್ತಾರೆ. ರಾತ್ರಿಯ ವೇಳೆ ಈ ಬಾಣಲೆಯ ಹತ್ತಿರ ದೀಪವನ್ನು ಹಚ್ಚಿಟ್ಟರೆ ಈ ದೀಪಕ್ಕೆ ಆಕರ್ಷಿತವಾದ ಹುಳುಗಳು ಸೀಮೆಎಣ್ಣೆ ಮಿಶ್ರಿತ ನೀರಿನ ಪಾತ್ರೆಯಲ್ಲಿ ಬಿದ್ದು ನಾಶವಾಗುತ್ತವೆ. ಇದು ಸಹ ಒಂದು ಹುಳುಗಳ ಹತೋಟಿಯ ಕ್ರಮ.

ಇವರು ತಮ್ಮ ತೋಟದಲ್ಲಿ ತೆಂಗಿನ ಮರಗಳೊಂದಿಗೆ ಅಡಿಕೆ, ಬಾಳೆ, ಸಪೋಟ, ಮೂಸಂಬಿ, ಕರಿಮೆಣಸು, ಏಲಕ್ಕಿ, ಶುಂಠಿ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಈ ರೀತಿಯ ವೈವಿಧ್ಯ ಬೆಳೆ ಪದ್ಧತಿಯಿಂದ ತೆಂಗಿನ ಹಲವು ಕೀಟಗಳನ್ನು ಹತೋಟಿಯಲ್ಲಿ ಇಡಬಹುದು ಎನ್ನುತ್ತಾರೆ.

ಬೇರುಹುಳುಗಳ ನಿಯಂತ್ರಣಕ್ಕೆ ಜೊಂಡಿನ ಬಳಕೆ

ಉತ್ತರ ಕನ್ನಡ ಜಿಲ್ಲೆಯ ಶಿರಸಿ ಪಕ್ಕ ಬೆಂಗಾಳಿ ಗ್ರಾಮದ ಶ್ರೀ ವೆಂಕಟೇಶ್, ಕೆರೆಕಟ್ಟೆಯಲ್ಲಿ ಬೆಳೆಯುವ ಜೊಂಡನ್ನು ತೆಂಗು, ಅಡಿಕೆ ತೋಟಕ್ಕೆ ಮುಚ್ಚಿಗೆ ಮಾಡಿ ಬೇರುಹುಳು ನಿವಾರಣೆ ಮಾಡುವುದನ್ನು ಕಂಡುಕೊಂಡಿದ್ದಾರೆ. ಜೊಂಡನ್ನು ಮುಚ್ಚಿಗೆ ಮಾಡಿದ ನಾಲ್ಕೈದು ತಿಂಗಳ ನಂತರ ವೆಂಕಟೇಶ್ ಪದರ ಸರಿಸಿ ನೋಡಿದಾಗ, ಸಾವಿರಾರು ಬೇರು ಹುಳುಗಳು ಭೂಮಿಯ ಒಳಭಾಗದಿಂದ ಜೊಂಡಿನ ಪದರಕ್ಕೆ ಅಂಟಿಕೊಂಡಿದ್ದು, ನಂತರ ಆಳುಗಳನ್ನು ಬಳಸಿ ಹುಳುಗಳನ್ನು ಹೆಕ್ಕಿಸಿ ನಾಶಪಡಿಸಿರುತ್ತಾರೆ. ಈ ಕೆರೆ ಜೊಂಡನ್ನು ಹೊಲದಲ್ಲಿ ಹರಡಿದ್ದಲ್ಲಿ ಉಪಯೋಗ ಹತ್ತಾರು. ಒಮ್ಮೆ ಮಳೆ ಬಂದಾಗ ನಾಲ್ಕೈದು ತಿಂಗಳು ನೀರು ಹಾಯಿಸುವ ಅಗತ್ಯವಿಲ್ಲ. ಇದರಿಂದ ತೋಟದಲ್ಲಿ ತೇವಾಂಶ ಹೆಚ್ಚಾಗುತ್ತದೆ ಅಷ್ಟೇ ಅಲ್ಲ, ಈ ತೇವಾಂಶ ವರ್ಷವಿಡೀ ಇರುತ್ತದೆ. ಜೊಂಡು ಒಂದಿಂಚಿಗಿಂತ ದಪ್ಪ ಇದ್ದರೆ ಯಾವುದೇ ಕಳೆ ಬೆಳೆಯುವುದಿಲ್ಲ, ಎರೆಹುಳುಗಳು ಹೆಚ್ಚಾಗುತ್ತವೆ. ಇದರಿಂದ ಸಾವಯವ ಗೊಬ್ಬರ ಅಧಿಕವಾಗಿ ತೋಟಕ್ಕೆ ಯಾವ ರೋಗ ಬಾಧೆ ಇಲ್ಲದೆ ನಳನಳಿಸುತ್ತದೆ ಎನ್ನುತ್ತಾರೆ ವೆಂಕಟೇಶ್.



ರೈನಾಸರಸ್ ದುಂಬಿ ನಿಯಂತ್ರಣ


ತೆಂಗಿನ ಬೆಳೆಗಳಲ್ಲಿ ಸುಳಿ ಕಡಿಯುವ ಈ ಕೀಟದ ಬಾಧೆ ವಿಪರೀತ. ಈ ಕೀಟಗಳನ್ನು ಗೂಬೆಯಿಂದ ನಿಯಂತ್ರಿಸಲು ಸಾಧ್ಯ. ಆದ್ದರಿಂದ ಗೂಬೆ ಸಾಕಾಣಿಕೆ ರೈತರಲ್ಲಿ ಬರಬೇಕು ಎನ್ನುತ್ತಾರೆ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಬಸವರಾಜು ಸಂತೇಶಿವರ. ಇವರ ಸಾಕಾಣಿಕೆಯನ್ನು ರೈತರು ಅನುಸರಿಸಬೇಕು. ಇವರ ತೋಟದಲ್ಲಿ ನಾಲ್ಕು ಗೂಬೆಗಳಿದ್ದು ಈ ಕೀಟದ ಹಾವಳಿ ಕಂಡುಬರುತ್ತಿಲ್ಲ. ಆದರೆ ಗೂಬೆ ಸಾಕಾಣಿಕೆಗೆ ಆಸಕ್ತಿ ಇಲ್ಲದ ರೈತರಿಗೆ ಮತ್ತೊಂದು ಉಪಾಯವನ್ನು ಇವರು ಕೊಡುತ್ತಾರೆ. ಐದು ಕೆ.ಜಿ. ಅರಳು ಬೀಜಗಳನ್ನು ಹುರಿದು, ರುಬ್ಬಿ ಚೆನ್ನಾಗಿ (ಘಮ ಘಮ ವಾಸನೆ ಬರುವವರೆಗೆ) ಬೇಯಿಸಿದರೆ ಅರಳೆಣ್ಣೆ ತೇಲುತ್ತಿರುತ್ತದೆ ಹಾಗೂ ಕೆಳಗೆ ಅರಳಿನ ಮಡ್ಡಿ(ಹಿಂಡಿ) ಶೇಖರವಾಗಿರುತ್ತದೆ. ಈ ಮಡ್ಡಿಯನ್ನು ಮಣ್ಣಿನ ಮಡಿಕೆಗಳಲ್ಲಿ ಇಟ್ಟು ಅವುಗಳ ಮೇಲೆ ರಂಧ್ರ ಮಾಡಿದ ಮಡಿಕೆಗಳಿಂದ ಮುಚ್ಚಬೇಕು. ಮಡ್ಡಿಯ ವಾಸನೆಗೆ ದುಂಬಿ ಬಂದು ಬಿದ್ದು ಸಾಯುತ್ತವೆ.

ಕೆಂಪು ಮೂತಿ ಕೀಟ ನಿಯಂತ್ರಣ

ಕೆಂಪು ಮೂತಿ (Red plam weevil) ಕೀಟಗಳ ಬಾಧೆ ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಿಂದ ಪ್ರಾರಂಭವಾಗುತ್ತದೆ. ಈ ಕೀಟ ನಿಯಂತ್ರಣಕ್ಕೆ ಅರ್ಧ ಲೀಟರ್ ನೀರಿನಲ್ಲಿ ೨೦೦ ಗ್ರಾಂ. ಬೆಲ್ಲ ಕರಗಿಸಿ ಇದರೊಂದಿಗೆ ೧೦೦ ಗ್ರಾಂ. ಹೊಗೆಸೊಪ್ಪಿನ ಪುಡಿಯನ್ನು ಮಿಶ್ರ ಮಾಡಿ ಈ ಮಿಶ್ರಣವನ್ನು ಮಡಿಕೆಯಲ್ಲಿ ಹಾಕಿ ತೆಂಗಿನ ತೋಟಗಳಲ್ಲಿ ಇಡಬೇಕು. ಕೆಂಪು ಮೂತಿ ಕೀಟಗಳು ಅದರಲ್ಲಿ ಬಂದು ಬೀಳುತ್ತವೆ. ಅಲ್ಲಿಯೇ ಸಾವನ್ನಪ್ಪುತ್ತವೆ. ಈ ರೀತಿ ನಿಯಂತ್ರಿಸಿ ಗಿಡಗಳನ್ನು ಉಳಿಸಿಕೊಳ್ಳಬಹುದು ಎಂಬುದೂ ಬಸವರಾಜು ಸಂತೇಶಿವರರ ಸ್ವಂತ ಅನುಭವ.

ನುಸಿ ಪೀಡೆಗೆ ತಾಮ್ರದ ಮದ್ದು

ತೆಂಗಿನ ಬೆಳೆಗಾರರಿಗೆ ತೀವ್ರ ತಲೆನೋವಾಗಿರುವ, ರೈತರ ಬದುಕಿನ ಆಸರೆಯನ್ನೇ ಕತ್ತರಿಸಿರುವ 'ನುಸಿಪೀಡೆ'ಗೆ ದೊಡ್ಡಬಳ್ಳಾಪುರ ತಾಲ್ಲೂಕಿನ ಕುಂಬಾರಪೇಟೆಯ ರೈತ ಶ್ರೀ ಡಿ.ಸಿ. ಶಿವಣ್ಣನವರು ಸುಲಭ ಪರಿಹಾರ ಕಂಡುಹಿಡಿದಿದ್ದಾರೆ. ಬಾಲ್ಯದಲ್ಲಿ ತಮ್ಮ ಕಾಲಿನಲ್ಲಿ ಆದ ಗಾಯಕ್ಕೆ ಗೋಮೂತ್ರದಲ್ಲಿ ತೊಳೆದು ಕಟ್ಟಿದ್ದ ತಾಮ್ರದ ಹಾಳೆ ಮದ್ದಾಗಿದ್ದನ್ನು ನೆನೆದು ಸ್ಫೂರ್ತಿಗೊಂಡ ಇವರು ಒಂದು ವಿನೂತನ ಪ್ರಯೋಗ ಮಾಡಿದ್ದಾರೆ. ಎಂಟರಿಂದ ಒಂಬತ್ತು ಇಂಚು ಉದ್ದದ ತಾಮ್ರದ ಮೊಳೆಯೊಂದನ್ನು ಮರದ ಬುಡದಿಂದ ಮೂರು ಅಡಿ ಎತ್ತರದಲ್ಲಿ ಕಾಂಡದೊಳಕ್ಕೆ ಗೋಡೆಗೆ ಮೊಳೆ ಹೊಡೆದಂತೆ ಹೊಡೆದು ಇನ್ನೊಂದು ತಾಮ್ರದ ತುಂಡನ್ನು ಕೆಲವು ಇಂಚುಗಳ ಅಂತರದಲ್ಲಿ ಲಂಬವಾಗಿ ಕಾಂಡದೊಳಕ್ಕೆ ಹೊಡೆಯಬೇಕು. ಹೀಗೆ ಮಾಡುವುದರಿಂದ ನುಸಿ ಪೀಡೆ ಕ್ರಮೇಣ ಹತೋಟಿಯಾಗುತ್ತದೆ ಎಂಬುದು ಇವರ ಅನುಭವ.



ಇಕ್ರಾ (ICRA) ಸಂಸ್ಥೆಯ ಸಲಹೆಗಳು

ತೆಂಗಿನ ನುಸಿಪೀಡೆ ನಿಯಂತ್ರಣಕ್ಕಾಗಿ ಅನೇಕ ಸಂಘ ಸಂಸ್ಥೆಗಳು, ಕೃಷಿ ವಿಶ್ವವಿದ್ಯಾಲಯಗಳು ಮತ್ತು ಸರ್ಕಾರ ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದರೂ ನುಸಿ ಪೀಡೆಯ ಬಾಧೆ ಕಡಿಮೆಯಾಗಿಲ್ಲದ ಪರಿಸ್ಥಿತಿಯಲ್ಲಿ ತಿರುವನಂತಪುರದ ಕೃಷಿ ಕಾಲೇಜಿನ ಕೀಟಶಾಸ್ತ್ರ ವಿಭಾಗ, ಕೇರಳ ಕೃಷಿ ವಿಶ್ವವಿದ್ಯಾನಿಲಯ, ಟಿ., ಸ್ಪೇನ್ಸ್ ಅಂಡ್ ಕಂಪನಿ ಮತ್ತು ವಿಠ್ಠಲಮಲ್ಯ ಸೈಂಟಿಫಿಕ್ ರಿಸರ್ಚ್ ಫೌಂಡೇಷನ್ ಇವರು, ದೇಶೀಯ ಕೀಟ ನಿಯಂತ್ರಣ ಪದ್ಧತಿಗಳ

ಅಧ್ಯಯನದ ಆಧಾರದ ಮೇಲೆ ಸಂಶೋಧನೆ ಮಾಡಿ ಕೆಲವು ಸಲಹೆಗಳನ್ನು ನೀಡಿದ್ದಾರೆ. ಶೇ. ೨ರ ಪ್ರಮಾಣದಲ್ಲಿ ಬೇವಿನ ಎಣ್ಣೆ, ಬೆಳ್ಳುಳ್ಳಿ ಮತ್ತು ಸೋಪಿನ ದ್ರಾವಣ ಸಿಂಪಡಿಸುವುದು.

- ಶೇ. ೨ರ ಪ್ರಮಾಣದಲ್ಲಿ ಬೇವಿನ ಎಣ್ಣೆ, ಬೆಳ್ಳುಳ್ಳಿ ಸೋಪಿನ ದ್ರಾವಣ ಮತ್ತು ಶೇ. ೪ರ ಪ್ರಮಾಣದಲ್ಲಿ ತೇವಗೊಳಿಸಿದ ಗಂಧಕವನ್ನು ಬೆರೆಸಿ ಸಿಂಪಡಿಸುವುದು.
- ಶೇ. ೨ರ ಪ್ರಮಾಣದಲ್ಲಿ ಹೊಂಗೆ (Pongamea) ಎಣ್ಣೆ, ಬೆಳ್ಳುಳ್ಳಿ ಮತ್ತು ಸೋಪಿನ ದ್ರಾವಣ ಸಿಂಪಡಿಸುವುದು. ಇವುಗಳು ಬೆಂಗಳೂರು ಮೂಲದ ಇಕ್ರಾ ಸಂಸ್ಥೆ ರೈತ ಮೂಲಗಳಿಂದಲೇ ಸಂಗ್ರಹಿಸಿದ ಪದ್ಧತಿಗಳು.

ಗ್ರೀನ್ (GREEN) ಫೌಂಡೇಷನ್ ಸಲಹೆ

ಅದೇ ರೀತಿ ಬೇಲಿ ಗಿಡದ ಎಲೆ, ಎಕ್ಕದ ಎಲೆ, ಬೇವಿನ ಬೀಜ, ಲಕ್ಕಿ ಸೊಪ್ಪು, ಲೋಳೆ ಸರ(Aloe vera) - ಅರಿಶಿಣದ ತುಂಡು ಮತ್ತು ಸೀತಾಫಲದ ಎಲೆ ಇವೆಲ್ಲವನ್ನು ತಲಾ ಒಂದೊಂದು ಕೇಜಿಯಂತೆ, ಬೇರೆ ಬೇರೆಯಾಗಿ ರುಬ್ಬಿ ರಸ ತೆಗೆದು, ಈ ರಸವನ್ನು ಒಂದು ಮಣ್ಣಿನ ಮಡಿಕೆಯಲ್ಲಿ ಒಂದು ವಾರ ನೆನೆಸಿ ನಂತರ ಪ್ರತಿ ಮೂರು ಲೀಟರ್ ನೀರಿಗೆ ೬೦೦ ಮಿ.ಲಿ. ಈ ರಸವನ್ನು ಬೆರೆಸಿ ತೆಂಗಿನ ಸುಳಿಯ ಮೇಲೆ ಅಥವಾ ಹೊಸದಾಗಿ ಅರಳುತ್ತಿರುವ ಹೊಂಬಾಳೆಯ ಮೇಲೆ ಎರಡು ತಿಂಗಳಿಗೊಮ್ಮೆ ಸುರಿಯುವುದರಿಂದ ನುಸಿ ಪೀಡೆಯನ್ನು ನಿಯಂತ್ರಿಸಬಹುದಂತೆ. ಇದು 'ಗ್ರಾಮ ಮಿತ್ರ' ಕ್ಯಾಲೆಂಡರ್ ಗ್ರೀನ್ ಪ್ರತಿಷ್ಠಾನ, ತಳಿ ಮೂಲದಿಂದ ತಿಳಿದುಬಂದಿರುವ ಕ್ರಮ.

ನುಸಿಪೀಡೆಗೊಂದು ಪರಿಣಾಮಕಾರಿ ಪ್ರಯೋಗ

ತಮಿಳುನಾಡು ರಾಜ್ಯದ ಕನ್ಯಾಕುಮಾರಿಯ ಹೆನ್ರಿ ಲಲ್ಲಿಸ್‌ರವರು ನುಸಿ ಕೀಟ ಹತೋಟಿಗೆ ಸಸ್ಯ ಔಷಧಿ ಒಂದನ್ನು ಕಂಡುಹಿಡಿದಿದ್ದಾರೆ. ಈ ಸಸ್ಯ ಔಷಧಿ ತಯಾರಿಸಲು ಹತ್ತು ಗಿಡಗಳನ್ನು ಬಳಸಲಾಗಿದೆ. ವಜ್ರ ನೀಲಿ (Tephrosia pupured), ಲಕ್ಕಿ (Fitex negundo), ಪಾದ್ರಿ/ಲಾಂಟಾನ (Lantana kamara), ಕಾಸಿಕಣಗಲು (Tinca rosea), ಹೊಂಗೆ (Hongamia pinnata), ಸೀತಾಫಲ (Anona squamosa), ಅರಿಶಿಣ (Curcuma longu), ಬೇವು, ಬೆಳ್ಳುಳ್ಳಿ ಹಾಗೂ ತಂಗಟೆ (Cassia auriculata) ಈ ಎಲ್ಲಾ ಸಸ್ಯಗಳನ್ನು ಸಮ ಪ್ರಮಾಣದಲ್ಲಿ ಸೇರಿಸಿ ಕಷಾಯ ತಯಾರಿಸುತ್ತಾರಂತೆ. ಈ ಸಸ್ಯ ಔಷಧಿಯು ಪ್ರಕೃತಿಗೆ ಸ್ನೇಹಪರವಾಗಿದ್ದು ಅನೇಕ ಕೀಟಗಳನ್ನು ಹತೋಟಿ ಮಾಡುತ್ತದೆ.

ಕೀಟಗಳಿಗೆ ವಿಕರ್ಷಕ ವಸ್ತುವಾಗಿ ಇದು ಕಾರ್ಯನಿರ್ವಹಿಸುತ್ತದೆ. ಈ ಗಿಡ ಮೂಲಿಕೆಯನ್ನು ಬಳಸಿ ಹೂಕೋಸಿನ, ಎಲೆಕೋಸಿನ ಕೀಟಗಳನ್ನು ಹಾಗೂ ಹತ್ತಿಯ, ತೊಗರಿ ಮತ್ತು ಹರಳು ಗಿಡಗಳಿಗೆ ದಾಳಿ ಮಾಡುವ ಕಾಯಿಕೊರಕ ಹುಳುಗಳನ್ನೂ ನಿಯಂತ್ರಿಸ ಬಹುದಾಗಿದೆ.

ನುಸಿರೋಗಕ್ಕೆ ಮತ್ತೆರಡು ಚಿಕಿತ್ಸೆ

೧೦೦ ಗ್ರಾಂ. ಸುಣ್ಣ, ೫ ಲೀಟರ್ ನೀರು ಮಿಶ್ರಣ ಮಾಡಿ ತೆಂಗಿನ ಭಾಗಕ್ಕೆ ಸಿಂಪಡಣೆ ಮಾಡಿದರೆ ನಿವಾರಣೆಯಾಗುತ್ತದೆ. ಪ್ರತಿ ತಿಂಗಳೂ ಬರುವ ಹೊಂಬಾಳೆ ಅರಳಿ ಹರಳುಗಳು ನಿಂತ ೧೦ನೇ ದಿನದ ನಂತರ ಮತ್ತೆ ಸಿಂಪಡಣೆ ಮಾಡಬೇಕು. ಈ ರೀತಿ ೫ ತಿಂಗಳು ಸಿಂಪಡಣೆ ಮಾಡಿದರೆ ನುಸಿ ಸಂಪೂರ್ಣ ನಿವಾರಣೆಯಾಗುತ್ತದೆನ್ನುವುದು ಹಾಸನದ ಬಸವರಾಜು ಸಂತೇಶಿವರರ ಅನುಶೋಧನೆ.

ಹಾಗೇ ತಮಿಳುನಾಡಿನ ವಾರಣಾಸಿ ಪಾಳ್ಯದ ನೋಚಿಕಾಡು ಗ್ರಾಮದ ರೈತ ವಿ.ಎಸ್. ಸಮಯಪ್ಪನ್ ತೆಂಗಿನ ಮರದ ನುಸಿ ನಿಯಂತ್ರಣಕ್ಕೆ ಸ್ಥಳೀಯ ಸಸ್ಯಗಳಾದ ಲೋಳೆಸರ (Alove vera), ಲಕ್ಕಿ (Vitex negundo) ಇವುಗಳನ್ನು ಬೇವಿನ ಹಿಂಡಿಯೊಂದಿಗೆ ಕಲಸಿ, ಮರದ ಕಾಂಡದ ಸುತ್ತ ಹಚ್ಚುತ್ತಾರೆ. ನಂತರ ಅದರ ಮೇಲೆ ಸಗಣಿಯನ್ನು ಹಚ್ಚುತ್ತಾರಂತೆ. ಹೀಗೆ ಮಾಡುವುದರಿಂದ ತೆಂಗಿನ ನುಸಿ ನಿಯಂತ್ರಣಕ್ಕೆ ಬರುತ್ತದೆ ಎನ್ನುವುದು ಅವರ ಅನುಭವ.

ತೆಂಗಿನ ಮರಗಳ ಅಂಟು ಸೋರುವ ಕಾಯಿಲೆಗೆ ನಿಸರ್ಗ ಚಿಕಿತ್ಸೆ

ತೆಂಗಿನ ಮರಕ್ಕೆ ದುಂಬಿಯ ಬಾಧೆ ಒಂದಾದರೆ ಚೆನ್ನಾಗಿ ಫಸಲು ಬಿಡುವ ತೆಂಗಿನ ಮರಕ್ಕೆ ಅಂಟುಸೋರಿ ಟೊಳ್ಳಾಗಿ ಮುರಿದು ಬೀಳುತ್ತವೆ. ಇಂತಹ ಸಮಸ್ಯೆಗೆ ೩ ಜನ ರೈತರು ನೀಡಿರುವ ಸಲಹೆಗಳು ಇಂತಿವೆ.



೧. ಸಾವಯುವ ಕೃಷಿಕರಾದ ಮೈಸೂರಿನ ಎ.ಪಿ. ಚಂದ್ರಶೇಖರ್ ತಿಳಿಸಿದಂತೆ 'ಇದು ಭಯಪಡುವಂತಹ ರೋಗವೇನಲ್ಲ. ತೆಂಗಿನ ಮರದ ಬುಡದಲ್ಲೇ ನಾಲ್ಕು ಮೂಲೆಯಲ್ಲಿ ನಾಲ್ಕು ಔಷಧ ಗಿಡಗಳನ್ನು ನೆಟ್ಟು ಆಗಿಂದಾಗ್ಗೆ ಈ ಸಸ್ಯಗಳ ಸೊಪ್ಪನ್ನೆ ಹಚ್ಚಿದರೆ ರೋಗ ವಾಸಿಯಾಗಬಹುದು ಎನ್ನುತ್ತಾರೆ. ಈ ಔಷಧ ಸಸ್ಯಗಳು ಇಂಥದೇ ಎಂದು ಏನಿಲ್ಲ. ತುಳಸಿ, ಬೇವು, ಹೊಂಗೆ, ಲಕ್ಕಿ, ಲಂಟಾನ, ಪಂಚಪತ್ರೆ, ಕಾಸರ್ಕ, ಬೆಳ್ಳುಳ್ಳಿ ಇಂಥವುಗಳು. ಈ ರೋಗ ಬೇಗ ವಾಸಿಯಾಗಬೇಕೆಂದರೆ ಪ್ರತಿ ಮರದ ಬುಡಕ್ಕೆ ೫ ಕಿಲೋ ಬೇವಿನ ಹಿಂಡಿ ಹಾಕಿ ಕಾಂಡ ಹಾಗೂ ಬುಡಕ್ಕೆ ದನದ ಗಂಜಲವನ್ನು ಎರಚಬೇಕು ಮತ್ತು

ಗೋಡಂಬಿ ಎಣ್ಣೆ ಅಥವಾ ಟಾರು ಬಿಸಿ ಮಾಡಿ ಜಾಗಕ್ಕೆ ಹಾಕಬಹುದು" ಎನ್ನುವುದಾಗಿ ಚಂದ್ರಶೇಖರ್ ಅಭಿಪ್ರಾಯಪಡುತ್ತಾರೆ.

೨. ಕೊಡಗಿನ ಗಮ್ಮನ ಕೊಲಿಯ ಡಾ. ನಂಜುಂಡಸ್ವಾಮಿಯವರ ಸಲಹೆಯಂತೆ ಶಾಖದ ಚಿಕಿತ್ಸೆಯಿಂದ ಈ ಅಂಟು ಸೋರುರೋಗ ವಾಸಿಯಾಗುತ್ತದೆಯಂತೆ. ಅಂಟು ಸುರಿಯುವಂತಹ ರಂಧ್ರಕ್ಕೆ ಬಿಸಿ ನೀರನ್ನು ಹಾಕಿದರೆ ಕೀಟ, ಕ್ರಿಮಿ ಅಥವಾ ಶಿಲೀಂಧ್ರಗಳಿದ್ದರೆ ಅವು ನಾಶವಾಗುತ್ತವೆಯಂತೆ.

೩. ಬೆಂಗಳೂರಿನ ಆರ್.ಎಸ್. ವೀರರಾಜೇಂದ್ರ ಅರಸ ಅವರ ಸಲಹೆಯಂತೆ ಒಂದು ಮುಷ್ಠಿ ಕಡಲುಪ್ಪು, ಒಂದು ಹಿಡಿ ಬೇವಿನಸೊಪ್ಪು, ಇಷ್ಟೆ ಪ್ರಮಾಣದ ತುಂಬೆ, ಅಷ್ಟೇ ಕರಿ ತುಳಸಿ ಮತ್ತು ೪ ಬೆಳ್ಳುಳ್ಳಿ, ೫ ಈರುಳ್ಳಿ, ಒಂದು ಮುಷ್ಠಿ ಅರಿಶಿಣ ಇವುಗಳನ್ನೆಲ್ಲ ಸೇರಿಸಿ ಅರೆದು ಸಮಪ್ರಮಾಣದಲ್ಲಿ ಗಟ್ಟಿ ಸಗಣಿಯನ್ನು ಸೇರಿಸಿ ರಂಧ್ರಗಳಿಗೆ ಹಾಕಿ ಮುಚ್ಚಿದ ಮೇಲೆ ಬೂದಿಯನ್ನು ಚಿಮುಕಿಸಬೇಕು. ಅವರ ತೆಂಗಿನ ಮರಗಳು ಈ ಚಿಕಿತ್ಸೆ ಮಾಡಿದ್ದರಿಂದ ವಾಸಿಯಾಗಿದೆಯಂತೆ.

ತೆಂಗಿನ ನುಸಿರೋಗಕ್ಕೆ ರೈತ ಸಂಘದ ಪರಿಹಾರ

ಕರ್ನಾಟಕದಲ್ಲಿ ತೆಂಗಿನ ಮರಕ್ಕೆ ನುಸಿ ರೋಗ ಬಂದು ರೈತರು ಕಂಗಾಲಾಗಿದ್ದರು. ತಲ್ಲಣಿಸಿರುವ ರೈತರಿಗೆ ರೈತ ಸಂಘದ ಪ್ರಧಾನ ಕಾರ್ಯದರ್ಶಿ ನುಲೇನೂರು ಶಂಕರಪ್ಪನವರು ಸಾವಯವ ಕೃಷಿ ಹಾಗೂ ಜೈವಿಕ ನಿಯಂತ್ರಣ ಪದ್ಧತಿ ಅನುಸರಿಸಬೇಕೆಂದು ಕರೆ ನೀಡಿದ್ದರು. ರೈತ ಸಮುದಾಯದ ಹಿರಿಯ ಅನುಭವಿ ರೈತರು ಹೇಳುವಂತೆ ಮರದ ಕೆಳಗೆ ಬೇವಿನ ಹೊಗೆ ಹಾಕಬೇಕು. ಬೆಳ್ಳುಳ್ಳಿ ಬೇವಿನೆಣ್ಣೆ ಹಾಗೂ ಪರ ಭಕ್ಷಿತ ಕೀಟಗಳನ್ನು ಬಳಸಿ ನುಸಿ ಪೀಡೆ ನಿಯಂತ್ರಿಸಬಹುದು. ಹಾಗೇ ಬೇವಿನೆಣ್ಣೆ, ಬೆಳ್ಳುಳ್ಳಿ ಹಾಗೂ ದುರ್ಬಲ ಸೋಪಿನ ದ್ರಾವಣವನ್ನು ತಯಾರಿಸಿ ಸಿಂಪಡಿಸುವುದರಿಂದ ನುಸಿಬಾಧೆ ನಿಯಂತ್ರಿಸಬಹುದಾಗಿದೆ. ಕೇರಳದಲ್ಲಿ ಇದು ಯಶಸ್ವಿಯಾಗಿದೆ ಎಂಬುದಾಗಿ ರೈತಸಂಘ ಪ್ರಕಟಿಸಿರುತ್ತದೆ.

ದನದ ಗಂಜಲದಿಂದಲೂ

ಬಹುದಿನಗಳಿಂದ ಶೇಖರಿಸಿದ ದನಗಳ ಗಂಜಲ ೧ ಲೀಟರ್ + ೧೦೦ ಗ್ರಾಂ ಹಿಪ್ಪೇಹಿಂಡಿ, + ೫ ಮೆಣಸಿನ ಕಾಳಿನಪುಡಿ ಕಷಾಯ ತಯಾರಿಸಿ ೨೪ ಗಂಟೆ ನಂತರ ೫ ಲೀಟರ್ ನೀರು ಸೇರಿಸಿ ತೆಂಗಿನ ಮರದ ಶಿರಕ್ಕೆ ಸಿಂಪಡಿಸಬೇಕು. ಈ ದ್ರಾವಣದ ಪ್ರಮಾಣ ಒಂದು ಮರಕ್ಕೆ ಸಾಕು. ನುಸಿ ನಿವಾರಣೆಯಾಗುತ್ತದೆ. ಪ್ರತಿ ದಿನಗಳಿಗೊಂದು ಸಾರಿ, ೩ ಬಾರಿ ಸಿಂಪರಣೆ ಮಾಡಬೇಕು.

೨೦೦ ಗ್ರಾಂ ಯಾವುದಾದರೂ ಎಣ್ಣೆ (ಹರಳೆಣ್ಣೆ, ಬೇವಿನ ಎಣ್ಣೆ, ಹೊಂಗೆ ಎಣ್ಣೆ, ಇತ್ಯಾದಿ) + ಪರಂಗಿಕಳ್ಳಿ ರಸ + ೫ ಲೀಟರ್ ನೀರು ಮರದ ಶಿರಕ್ಕೆ ಸಿಂಪಡಣೆ. ಎಣ್ಣೆಯ

ಅಂಶ ಹರಳುಗಳ ಮೇಲೆ ಶೇಖರಣೆ ಮಾಡುವುದರಿಂದ ನುಸಿ ಹುಳುಗಳು ಕೂರಲು ಸಾಧ್ಯವಾಗುವುದಿಲ್ಲ. ಇದು ಹಾಸನದ ಬಸವರಾಜು, ಸಂತೇಶಿವರರ ಅನುಶೋಧನೆ.

ತೆಂಗಿನಕಾಯಿ ಮೊಳಕೆ ಭರಿಸುವುದು

ಬೀಜಕ್ಕೆ ಬೇಕಾದ ತೆಂಗಿನ ಕಾಯಿಯನ್ನು ಕರಾವಳಿ ರೈತರು ಒಂದು ವಾರ ಕಾಲ ನೀರಿನಲ್ಲಿ ಹಾಕಿಡುತ್ತಾರೆ. ಅನಂತರ ತೆಂಗಿನ ಕಾಯಿಯನ್ನು ಅದರ ಕಣ್ಣುಗಳು ಅಡಿಮುಖವಾಗಿರುವಂತೆ ನೆಡುತ್ತಾರೆ. ಹೀಗೆ ಮಾಡುವುದರಿಂದ ಮೊಳಕೆಯೊಡೆಯುವ ಭ್ರೂಣ ಅಥವಾ ಕಣ್ಣಿಗೆ ಕಾಯಿಯ ಒಳಗಿನ ನೀರು ಸಲೀಸಾಗಿ ತಾಗುವುದರಿಂದ ಮೊಳಕೆಯೊಡೆಯಲು ಸುಲಭವಾಗುತ್ತದೆ.

ಕೆಂಪುಮೂತಿ ಕೀಟದ ನಿಯಂತ್ರಣ


ತಮಿಳುನಾಡಿನ ಗಣಪತಿ ಸುಂದರಂರವರು ಕೆಂಪುಮೂತಿ ಕೀಟದ ದಾಳಿಗೆ ತುತ್ತಾದ ತೆಂಗಿನ ಮರವನ್ನು ಬುಡದಿಂದ ಒಂದು ಅಡಿಯಷ್ಟು ಬಿಟ್ಟು ಕತ್ತರಿಸಿ ಸುಡುತ್ತಾರೆ. ಆ ಬುಡದಿಂದ ಒಂದು ರೀತಿಯ ದ್ರಾವಣವು ಸ್ರವಿಸುತ್ತದೆ. ಈ ದ್ರಾವಣವು ಕೀಟಗಳನ್ನು ಆಕರ್ಷಿಸುವಂತಹ ವಾಸನೆಯನ್ನು ಹೊಂದಿದೆ. ೧೦ ಎಕರೆಯಷ್ಟು ಭೂಭಾಗದ ಎಲ್ಲಾ ಕೀಟಗಳನ್ನು ಆಕರ್ಷಿಸುವಂತಹ ಸಾಮರ್ಥ್ಯ ಈ ಒಂದು ಮರದ ದ್ರಾವಣಕ್ಕಿದೆ. ಪ್ರತಿದಿನ ಬೆಳಗ್ಗೆ ಗಣಪತಿಯವರು ಹೀಗೆ ಆಕರ್ಷಿತಗೊಂಡ ಕೆಂಪುಮೂತಿ ಕೀಟಗಳನ್ನು ಸಂಗ್ರಹಿಸಿ ಸುಟ್ಟು ಹಾಕುತ್ತಾರೆ. ನಂತರ ಪುನಃ ಬುಡದ ಮೇಲ್ಭಾಗವನ್ನು ಓರೆಯಾಗಿ ಕತ್ತರಿಸಿ ಸ್ವಚ್ಛ ದ್ರಾವಣವು ಸ್ರವಿಸಲು ಅನುಕೂಲ ಮಾಡಿಕೊಡುತ್ತಾರೆ.

ಹಾಗೇ ಕೆಂಪುಮೂರ್ತಿ ಕೀಟಗಳ ನಿಯಂತ್ರಣಕ್ಕೆ ಹಾಸನದ ನಮ್ಮ ಸಾವಯವ ಕೃಷಿ ಬಸವರಾಜು ಸಂತೇಶಿವರವರು ಮತ್ತೊಂದು ಪರಿಹಾರ ಕಂಡು ಹಿಡಿದಿರುವರು. ಮೊದಲು ಕೀಟಗಳು ತೆಂಗಿನ ಗಿಡ ಮರಗಳಿಗೆ ಹೋಗಿ ಸೇರಿಕೊಳ್ಳದಂತೆ ತಡೆಯಬೇಕು. ಇದಕ್ಕಾಗಿ ಬಸವರಾಜುರವರು ಕೆಂಪುಮೂತಿ ಕೀಟಗಳು ಆಕರ್ಷಣೆಗೊಳ್ಳುವಂತಹ ವಿಶಿಷ್ಟವಾದ ಕಷಾಯವೊಂದನ್ನು ತಯಾರಿಸಿದ್ದಾರೆ. ಈ ಕಷಾಯವನ್ನು ತಯಾರಿಸಲು ತೆಂಗಿನ ಹಸಿರು ಗರಿಯೊಂದರ ಗರಿಗಳನ್ನೆಲ್ಲಾ ಸವರಿ ತೆಗೆದು ಉಳಿಯುವ ದಿಂಡನ್ನು ಸಣ್ಣಗೆ ಕತ್ತರಿಸಿ ಪುಡಿ ಮಾಡಿಕೊಳ್ಳಬೇಕು. ಒಂದು ಲೀಟರ್ ನೀರಿಗೆ ೧೦೦ ಗ್ರಾಂ. ಬೆಲ್ಲ ಬೆರೆಸಿ ಅದಕ್ಕೆ ೧೦ ಗ್ರಾಂ. ಹೊಗೆಸೊಪ್ಪಿನ ಪುಡಿ ಸೇರಿಸಿ ಕಷಾಯ ತಯಾರಿಸಿಕೊಳ್ಳಲಾಗುವುದು. ಈ ಕಷಾಯಕ್ಕೆ ತೆಂಗಿನ ದಿಂಡಿನ ಪುಡಿಯನ್ನು ಮಿಶ್ರಣ ಮಾಡಬೇಕು. ಇಂತಹ ಮಿಶ್ರಣವನ್ನು ಒಂದು ಮಡಕೆಗೆ ಹಾಕಿ, ಮತ್ತೊಂದು ಮಡಕೆಯ ತಳಭಾಗದಲ್ಲಿ ರಂಧ್ರ ಮಾಡಿ, ಮಿಶ್ರಣ ಹಾಕಿರುವಂತಹ ಮಡಕೆಯ ಮೇಲೆ ಬೋರಲು ಹಾಕಬೇಕು. ಈ ರಂಧ್ರದ ಮೂಲಕ ಬರುವ ವಾಸನೆಗೆ ಕೀಟಗಳು ಆಕರ್ಷಿತವಾಗಿ, ಮಡಕೆಯಲ್ಲಿನ ಮಿಶ್ರಣವನ್ನು ತಿನ್ನಲು ಆರಂಭಿಸುತ್ತವೆ.

ಈ ತರಹದ ಮಡಕೆಗಳನ್ನು ಒಂದು ಎಕರೆಯ ತೆಂಗಿನ ತೋಟದಲ್ಲಿ ೩-೪ ಕಡೆ ಇಡಬೇಕು. ಇದರಿಂದ ಕೀಟಗಳು ತೆಂಗಿನ ಮರಗಳತ್ತ ಹೋಗದೇ ಮಡಕೆಗಳಿಗೆ ಬಂದು ಸೇರುತ್ತವೆ. ಈ ಮಿಶ್ರಣಕ್ಕೆ ತಿಂಗಳಿಗೊಮ್ಮೆ ಬೆಲ್ಲದ ನೀರು ಮತ್ತು ಹೊಗೆಸೊಪ್ಪಿನ ದ್ರಾವಣ ಸೇರಿಸುತ್ತಿರಬೇಕು. ಈ ರೀತಿ ಮಾಡುವುದರಿಂದ ಕೆಂಪುಮೂತಿ ಕೀಟಗಳ ಹಾವಳಿಯನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದೆಂದು ಬಸವರಾಜುರವರು ತಿಳಿಸಿದ್ದಾರೆ.

ತೆಂಗಿನ ತೋಟಗಳಲ್ಲಿ ಕೋತಿಗಳು

ತುಮಕೂರು ಜಿಲ್ಲೆಯ ಕೆಲಸ್ಥಳಗಳಲ್ಲಿ ತೆಂಗಿನ ತೋಟಗಳಲ್ಲಿ ಕೆಂಪು ಮೂತಿಯ ಕೋತಿಗಳ ಹಾವಳಿ ವಿಪರೀತ. ಇವು ಸಾಮಾನ್ಯವಾಗಿ ಹಿಂಡಾಗಿ ಬಂದು ಬಿಡುತ್ತವೆ. ತೆಂಗಿನ



ಕಾಯಿಯನ್ನು ಆಹಾರಕ್ಕಾಗಿ ಮಾತ್ರ ತಿನ್ನದೆ, ಮೋಜಿಗಾಗಿ ಕೂಡ ಅವನ್ನು ಕಿತ್ತು ಕೆಳಗೆಸೆದು ಕುಣಿದು ಕುಪ್ಪಳಿಸುತ್ತವೆ. ಈ ಪ್ರದೇಶಗಳಲ್ಲಿ ಕೋತಿಗಳನ್ನು ಹೊಡೆದು ಸಾಯಿಸದೆಯೇ, ಓಡಿಸಲು ಉಪಾಯಗಳನ್ನು ಹುಡುಕಿಕೊಂಡಿದ್ದಾರೆ.

೧. ಮೊದಲು ಕೋತಿಗಳಿಗೆ ಇಷ್ಟವಾದಂತಹ ತಿಂಡಿ, ಬಾಳೆ ಹಣ್ಣು, ಒಣಕೊಬ್ಬರಿ, ಹುರಿದ ಕಡಲೇಕಾಯಿ, ಬೆಲ್ಲ ಇವುಗಳನ್ನು ಒಂದು ನಿರ್ದಿಷ್ಟ ಜಾಗದಲ್ಲಿಟ್ಟು ಅವುಗಳು ಅಲ್ಲಿ ಬಂದು ತಿನ್ನುವುದಕ್ಕೆ ರೂಢಿ ಮಾಡಿಸುತ್ತಾರೆ. ಇಂತಹ ಸಮಯದಲ್ಲಿ ಸಾಮಾನ್ಯ ಗಟ್ಟಿಮುಟ್ಟಾಗಿರುವ ಆ ಹಿಂಡಿನ ನಾಯಕ ಮೊದಲು ಬಂದು ತಿಂಡಿ ತಿನ್ನುತ್ತದೆ. ಕೆಲವು ದಿನಗಳ ನಂತರ ತಿಂಡಿಯನ್ನು ಕಾಗದದಲ್ಲಿ ಸುತ್ತಿ ಇಟ್ಟಾಗಲೂ ಸಹ ಇದೇ ಕ್ರಮ ಮುಂದುವರೆಯುತ್ತದೆ.

ಇದು ಚೆನ್ನಾಗಿ ಅಭ್ಯಾಸವಾದ ನಂತರ, ಒಂದು ದಿನ ಈ ಕಾಗದ ಪೊಟ್ಟಣದಲ್ಲಿ ೨-೩ ಅಡಿ ಉದ್ದದ ಸತ್ತ ಹಾವನ್ನು ಇಟ್ಟು ತಿಂಡಿಯ ಸ್ಥಳದಲ್ಲೇ ಇಡುತ್ತಾರೆ. ಎಂದಿನಂತೆ ಪೊಟ್ಟಣ ತೆಗೆದು ತಿಂಡಿ ತಿನ್ನಲು ಹೋಗುವ ನಾಯಕ ಸತ್ತ ಹಾವನ್ನು ನೋಡಿ ಗಾಬರಿಯಿಂದ ಕಿರುಚಲು ಶುರು ಮಾಡುತ್ತದೆ. ಹಾವಿನ ತಲೆಯನ್ನು ಒಂದು ಕಾಲಿಂದ ಬಿಗಿಯಾಗಿ ಹಿಡಿದು, ಉಳಿದ ಮೂರು ಕಾಲಲ್ಲಿ ಜೋರಾಗಿ ಕಿರುಚುತ್ತಾ ತೋಟದಿಂದ ದೂರ ಓಡುತ್ತದೆ. ಈ ನಾಯಕನ ಹಿಂದೆ ಹಿಂಡೂ ಸಹ ಕಿರುಚುತ್ತಾ ಓಡಿ ಹೋಗುತ್ತದೆ. ಹೀಗೆ ಹೋದ ನಾಯಕ ಸುಮಾರು ೪-೫ ಕಿ.ಮೀ. ದೂರದವರೆಗೂ ತನ್ನ ಮುಷ್ಟಿಯಿಂದ ಹಾವನ್ನು ಕೆಳಗೆ ಬಿಟ್ಟಿರುವುದಿಲ್ಲ. ಅನೇಕ ತಿಂಗಳುಗಳ ಕಾಲವಾದರೂ ಈ ಹಿಂಡು ತೋಟಕ್ಕೆ ಮತ್ತೆ ಬರುವುದಿಲ್ಲ.

೨. ಇನ್ನು ಕೆಲವು ರೈತರು ಅವರ ತೋಟದ ಪ್ರದೇಶದಲ್ಲಿ ಅಡಿಕೆ ಮರದ ಕಾಂಡದಿಂದ ಅಥವಾ ಕಬ್ಬಿಣದ ಜಾಲರಿಯಿಂದ ಒಂದು ಪಂಜರವನ್ನು ತಯಾರಿಸಿ ಅದರಲ್ಲಿ ಕೋತಿಗೆ ಇಷ್ಟವಾದ ತಿಂಡಿ ಇಟ್ಟು ಅಭ್ಯಾಸ ಮಾಡಿಸುತ್ತಾರೆ. ಹೀಗೆ ಅಭ್ಯಾಸವಾದ ಕೋತಿ ಒಳಗೆ ಹೋದ ನಂತರ ಪಂಜರದ ಬಾಗಿಲು ಎಳೆದು ಮುಚ್ಚುತ್ತಾರೆ. ೧-೨ ದಿನಗಳ ನಂತರ ಕೋತಿ ಸ್ವಲ್ಪ ಶಾಂತವಾದ ಮೇಲೆ ಅದರ ತಲೆಯನ್ನು ಕವಲು ಕಟ್ಟಿಗೆಯಿಂದ ಬಿಗಿಯಾಗಿ ಹಿಡಿದು ಅದರ ಹೊಟ್ಟೆಯ ಸುತ್ತಲೂ ಕುರಿಯ ಚರ್ಮವನ್ನು ಸುತ್ತಿ ಬೆನ್ನ ಬಳಿ ಹೊಲಿಗೆ ಹಾಕುತ್ತಾರೆ. ಆಗ ಈ ಕೋತಿ ವಿಕಾರವಾಗಿ, ಭಯಾನಕವಾಗಿ ಕಾಣುತ್ತದೆ. ಈ ಕೋತಿಯನ್ನು ಪಂಜರದಿಂದ ಹೊರಗೆ ಬಿಟ್ಟಾಗ ಅದರ ಹಿಂಡಿನ ಅನೇಕ ಕೋತಿಗಳು ಹೆದರಿ ಓಡಿ ಹೋಗುತ್ತವೆ. ಕೆಲವು ಕೋತಿಗಳು ಇದನ್ನು ಬೇರೆಯೆಂದು ಭಾವಿಸಿ ಕಚ್ಚಿ, ಜಗಳವಾಡುತ್ತವೆ. ಒಟ್ಟಿನಲ್ಲಿ ಇಡೀ ಹಿಂಡು ಚೆಲ್ಲಾಪಿಲ್ಲಿಯಾಗಿ ಈ ವಿಚಿತ್ರ ಕೋತಿಯ ಹತ್ತಿರ ಸುಳಿಯುವುದಿಲ್ಲ. ಕುರಿ ಚರ್ಮ ಹೊಲಿದ ಕೋತಿ ಕೆಲವು ಕಾಲದವರೆಗೂ ಒಂಟಿಯಾಗಿ ಇದ್ದು ಅನಂತರ ಬೇರೆ ಕಡೆಗೆ ಹೋಗುತ್ತದೆ.

ಕೆಂಪು ಮೂತಿ ಕೀಟಗಳ ಹತೋಟಿ

ಕೆಂಪು ಮೂತಿ ಕೀಟಗಳ ಹಾವಳಿಗೆ ಸಾವಿರಾರು ತೆಂಗಿನ ಮರಗಳು ಬಲಿಯಾಗುತ್ತಿವೆ. ತೆಂಗಿನ ಮರಗಳು ಸಂಪೂರ್ಣ ನಾಶವಾದಾಗಲೇ ಕೀಟಗಳ ಸುಳಿವು ಗೋಚರವಾಗುವುದು. ಈ ಕೀಟಗಳ ಸಂಪೂರ್ಣ ನಾಶ ಬಹಳ ಕಷ್ಟ. ೩-೧೫ ವರ್ಷದ ಮರಗಳಲ್ಲಿ ಇವುಗಳ ಹಾವಳಿ ಕಂಡುಬರುತ್ತದೆ. ೨೦ ಅಡಿ ಎತ್ತರದವರೆಗೂ ಇವು ಹಾರಬಲ್ಲದು. "ಕತ್ತಾಳೆ(Agave)ಯ ಗಡ್ಡೆ" (ಮಧ್ಯದ ಬಿಳಿ ಭಾಗ) ಕಿತ್ತು ತಂದು, ೧ ಲೋಟ ನೀರಿಗೆ (೧೫೦ ಮಿ.ಲಿ.) ೨ ಉಂಡೆ ಬೆಲ್ಲ (೨೦ ಗ್ರಾಂ) ಹಾಕಿ, ಕಾಯಿಸಿ ಆರಿಸಿ ಗಡ್ಡೆಗೆ ಲೇಪನ ಮಾಡಿ, ಒಂದು ತಟ್ಟೆಯಲ್ಲಿ ನೀರು ಹಾಕಿ ಮಧ್ಯಭಾಗದಲ್ಲಿ ನೀರಿನ ಮಟ್ಟಕ್ಕಿಂತ ಎತ್ತರವಾಗಿ ಚಪ್ಪೆಯಾದ ಕಲ್ಲು ಇಟ್ಟು ಆ ಕಲ್ಲಿನ ಮೇಲೆ ಕತ್ತಾಳೆ ಗಡ್ಡೆ ಇಡಬೇಕು. ನಂತರ ಕೆಲದಿನಗಳ ಚಿಟ್ಟೆಗಳು ಈ ಗಡ್ಡೆಯನ್ನು ರಂಧ್ರ ಮಾಡಿ ತಿನ್ನಲು ಪ್ರಾರಂಭಿಸಿದಾಗ ಅವುಗಳನ್ನು ಸುಲಭವಾಗಿ ಹಿಡಿದು ಕೊಲ್ಲಬಹುದು. ಈ ರೀತಿ ಮುನ್ನೆಚ್ಚರಿಕೆ ಕ್ರಮವಹಿಸಿ ೧೦೦ ತೆಂಗಿನ ಗಿಡಗಳ ಮಧ್ಯ ಎರಡು ಗಡ್ಡೆಗಳನ್ನು ಮೇಲಿನ ಕ್ರಮವಹಿಸಿ ಇಟ್ಟು ಸುಲಭವಾಗಿ ನಿಯಂತ್ರಿಸಬಹುದು ಎನ್ನುತ್ತಾರೆ ಹಾಸನದ ಬಿ. ಬಸವರಾಜು, ಸಂತೇಶಿವರರವರು.

ಇಲಿಗಳನ್ನು ಓಡಿಸಲು

ಬೋನಿನ ಸಹಾಯದಿಂದ ಒಂದು ಇಲಿಯನ್ನು ಹಿಡಿದು ಅದರ ಮುಂಭಾಗದ ಕಾಲುಗಳ ಹಿಂಭಾಗಕ್ಕೆ ಮೃದುವಾದ ತಂತಿಯ ಸಹಾಯದಿಂದ ಸಣ್ಣ ಗೆಜ್ಜೆಯನ್ನು ಕಟ್ಟಿ ಬಿಟ್ಟರೆ, ಅದರ ಓಡಾಟದಿಂದ ಬರುವ ಗೆಜ್ಜೆಯ ಶಬ್ದಕ್ಕೆ ಎಲ್ಲಾ ಇಲಿಗಳು ಓಡಿ ಹೋಗುತ್ತವೆ. ಅವುಗಳನ್ನು ಈ ಇಲಿಯೂ ಹಿಂಬಾಲಿಸುತ್ತದೆ; ಇವೆರಡೂ ಬಿ. ಬಸವರಾಜು, ಸಂಕೇಶಿವರ, ಹಾಸನ ಜಿಲ್ಲೆ ಇವರ ಅನುಶೋಧನೆಗಳು.

ಮಹಾರಾಷ್ಟ್ರದ ಸಮಾಜಕಾರ್ಯಕರ್ತ ಶ್ರೀ ಭಾಸ್ಕರ ಸಾವೆಯವರು ತೆಂಗಿನ ತೋಟದಲ್ಲಿ ಇಲಿಗಳ ಕಾಟ ತಡೆಯಲು ಅದರ ವೈರಿ ಬೆಕ್ಕಿನ ಮಲವನ್ನು ಸ್ವಲ್ಪ ಮರದ ಸುತ್ತ ಹಾಕುವರಂತೆ. ಯಾವುದೇ ಪ್ರಾಣಿಗಳು ಅವುಗಳ ವೈರಿಯ ಮಲದ ವಾಸನೆ ಬೇಗ ಗುರುತಿಸಿ, ಅದರಿಂದ ಅವುಗಳ ವೈರಿಯೇ ಅಲ್ಲಿರಬಹುದೆಂದು ಹೆದರಿ ಹತ್ತಿರವೂ ಸುಳಿಯಲಾರವಂತೆ. ಹಾಗಾಗಿಯೇ, ಈ ಸುಳಿವನ್ನು ಮುಚ್ಚಿಹಾಕಲು ಬೆಕ್ಕುಗಳು ತಮ್ಮ ಮಲವನ್ನು ಮಣ್ಣಿನಲ್ಲಿ ಹೂತಿಡುವುದು ಎಂಬುದು ನಮ್ಮ ಸಾವಯವ ಕೃಷಿಕ ನಾರಾಯಣ ರೆಡ್ಡಿಯವರ ಅನಿಸಿಕೆ.

ಕಾಂಡ ಕೊರೆಯುವ ಹುಳ (ಕುರುವಾಯ್) ತಡೆಯಲು

ಸುಳ್ಯದ ಸಾವಯವ ಕೃಷಿಕ, ಶ್ರೀನಿವಾಸ ಪೈಲೂರ್ ತೆಂಗಿನ ಮರಕ್ಕೆ ಅಸಾಧ್ಯ ಕಾಟಕೊಡುವ ಈ ಪೀಡೆಗೆ ಎರಡು ಮಾರ್ಗೋಪಾಯಗಳನ್ನು ತಿಳಿಸಿರುವರು. ಅವುಗಳೆಂದರೆ:

ಅ. ಕೆಂಡಸಂಪಿಗೆ ಮರವನ್ನು ತೆಂಗಿನ ಮರಗಳ ಹತ್ತಿರ ಬೆಳೆಸಿದರೆ ಅದರ ಹೂ ವಾಸನೆಗೆ ಈ ಕುರುವಾಯ್ ಸುಳಿಯದಂತೆ. ಇದು ಸುಳ್ಯದ ಇನ್ನಿತರ ರೈತರ ಅನುಭವವೂ ಹೌದಂತೆ.

ಆ. ನೆಲಗಡಲೆ ಹಿಂಡಿ ಅಥವಾ ಹರಳೆಣ್ಣೆ ತೆಗೆಯುವಾಗ ಸಿಗುವ ಮಡ್ಡಿ ತ್ಯಾಜ್ಯವನ್ನು ನೀರಿನಲ್ಲಿ ಹಾಕಿ ಒಂದು ವಾರ ಕಾಲ ಕೊಳೆಸಿ ನಂತರ ಅದಕ್ಕೆ ಅಷ್ಟೇ ಪ್ರಮಾಣದ ಸಗಣಿಯನ್ನು ಸೇರಿಸಿ ಮಿಶ್ರಣ ಮಾಡಿ, ದಪ್ಪ ಪಾಯಸದಂತೆ ಮಾಡಿ ಒಂದು ಮಡಿಕೆಯಲ್ಲಿ ಹಾಕಿಡಬೇಕು. ಇದು ತಡೆಯಲು ಅಸಾಧ್ಯವಾದಷ್ಟು ಗಬ್ಬುವಾಸನೆ ಬರುವಂತಿರುತ್ತದೆ. ಈ ಮಡಿಕೆಯನ್ನು ತೆಂಗಿನ ಮರಗಳ ಮಧ್ಯೆ ೫೦ ಮೀಟರ್ ಅಂತರದಲ್ಲಿ ಭೂಮಿಯ ಮಟ್ಟಕ್ಕೆ ಸಮನಾಗಿರುವಂತೆ ಹುಗಿದಿಡಬೇಕು. ಅದಕ್ಕೆ ನೀರು, ಬಿಸಿಲು ಬೀಳದಂತೆ ಎರಡು ಕಲ್ಲುಗಳ ಓರೆ ಗೋಡೆಮಾಡಿ, ಮೇಲೆ ಹಂಚೊಂದನ್ನು ಇಟ್ಟರೆ, ಇದರ ವಾಸನೆಗೆ ಆಕರ್ಷಿತವಾಗಿ ಕುರುವಾಯ್ ಬಂದು, ಇದರೊಳಗೆ ಬಿದ್ದು ಸಾಯುವಂತಾಗುತ್ತದೆ.

ತೆಂಗಿನ ಉತ್ತಮ ಭಿತ್ತನೆ ಬೀಜದ ಆಯ್ಕೆ

ಶಿವನಂಜಯ್ಯನವರ ಸಲಹೆಗಳು

ತಾಯಿಮರದ ವಯಸ್ಸು ೨೦ ರಿಂದ ೫೦ ವರ್ಷದೊಳಗಿರಲಿ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ತಾಯಿಮರ ಸಾಮೂಹಿಕ ನಿರ್ವಹಣೆಯಲ್ಲಿ ಪ್ರತಿವರ್ಷ ೮೦-೧೦೦ ಕಾಯಿ ನೀಡುವಂತಿರಬೇಕು. ವರ್ಷಬಿಟ್ಟು ವರ್ಷ ಬೆಳೆ ನೀಡುವ ತಾಯಿಗಿಡ ಉತ್ತಮವಲ್ಲ. ಈ ಬಗೆಯ ಇಳುವರಿಯಲ್ಲಿ ಸಮತೋಲನವನ್ನು ೨೦-೫೦ ವರ್ಷ ವಯೋಮಿತಿಯಲ್ಲಿಯ ಮರಗಳಲ್ಲಿ ಮಾತ್ರ ಕಾಣಬಹುದು. ಇದರ ಹೊರತಾದ ವಯಸ್ಸಿನ ಮರಗಳಲ್ಲಿ ಇಳುವರಿ ಏರುಪೇರಿದ್ದು ಆಯ್ಕೆ ಸರಿಯಾಗುವುದಿಲ್ಲ.

ಬೀಜವನ್ನು ವರ್ಷದ ನವೆಂಬರ್‌ನಿಂದ ಫೆಬ್ರವರಿ ತಿಂಗಳಲ್ಲಿ ಆರಿಸಿಕೊಳ್ಳಬೇಕು. ಈ ಕಾಲದ ಆಯ್ಕೆಗೆ ಯಾವ ವೈಜ್ಞಾನಿಕ ಕಾರಣವಿಲ್ಲ. ಆದರೂ ಒಂದು ಸಹಜ ಕಾರಣವಿದೆ. ಮೇಯಿಂದ ಅಕ್ಟೋಬರ್‌ವರೆಗೆ ತೆಂಗಿನ ಮರದಲ್ಲಿ ಸಾಮಾನ್ಯವಾಗಿ ತುಂಬಿದ ಗೊನೆಗಳಿದ್ದು, ಅದರ ಭಾರಕ್ಕೆ ಜೋತು ಬಿದ್ದು, ಉತ್ತಮವಾದ ಬಲಿತ ಕಾಯಿ ಕೆಲವು ವೇಳೆ ಸಿಕ್ಕುವ

ಸಂದರ್ಭ ಕಡಿಮೆ. ಅದೇ, ಮೇಲಿನ ತಿಂಗಳುಗಳಿದ್ದರೆ ಗೊನೆಯಲ್ಲಿ ಕಾಯಿಗಳು ಕಡಿಮೆ ಇದ್ದು ಗೊನೆ ಜಗ್ಗದೆ ಉತ್ತಮ ಕಾಯಿ ದೊರೆಯುತ್ತದೆ. ಅಂದರೆ ತಾರ್ಕಿಕವಾಗಿ ಮೇಲಿನ ಕಾಲ ಸರಿ.

ತಾಯಿಮರ ಆರೋಗ್ಯವಾಗಿದ್ದು ಸಾಧಾರಣ ನಿರ್ವಹಣೆಯಲ್ಲಿ ಸುಮಾರು ೩೦-೩೫ ಗರಿ ಹೊಂದಿದ್ದು, ಮರದ ಕೆಳಗೆ ನಿಂತು ನೋಡಿದರೆ ನೀಲಾಕಾಶ ಕಾಣದಂತೆ ಗರಿ ಒತ್ತಾಗಿರಲಿ. ಈ ರೀತಿಯ ಮರಗಳನ್ನು ಗೂಡುಕಟ್ಟಿದ ಮರ ಎನ್ನುತ್ತಾರೆ.

ಗೊನೆಗಳು ತೀರಾ ದಪ್ಪವಾಗಿರದೆ ಅದರಲ್ಲಿ ಸುಮಾರು ೨೫-೩೦ ಕಾಯಿಗಳಿದ್ದು, ಮರದಲ್ಲಿ ಸಹ ೧೦-೧೨ ಗೊನೆ ಇರಲಿ. ಗೊನೆಗಳು ಮರದಿಂದ ಜೋತು ಬೀಳದೆ ಅವು ಗರಿ ಮಟ್ಟೆಗಳ ಮೇಲೆ ಕುಳಿತಿರಲಿ.

ಕಾಯಿಯ ಹೊರ ಸಿಪ್ಪೆ ಮತ್ತು ಒಳ ಚಿಪ್ಪು ತೆಳುವಾಗಿದ್ದು, ಸುಲಿದ ಕಾಯಿಯ ತೂಕ ಸುಮಾರು ೭೦೦ ಗ್ರಾಂ.ಗಿಂತ ಮುಂದಿರಲಿ.

ತೋಟದ ಒಂದೇ ಬದಿಯಿಂದ ಬೀಜವನ್ನು ಆಯ್ದುಕೊಳ್ಳದೆ ತೋಟದಲ್ಲಿ ಅಡ್ಡಾದಿಡ್ಡಿ ಬೀಜ ಸಂಗ್ರಹಿಸಿ.

ತೋಟದಲ್ಲಿ ಸಹಜವಾಗಿಯೇ ಕೆಲ ಗಿಡ್ಡ ಮತ್ತು ಎತ್ತರದ ಮರಗಳಿದ್ದು ಅಂತಹ ಮರಗಳಿಂದ ಬೀಜ ಆಯ್ಕೆ ಮಾಡಿದರೆ ಸಹಜ ಹೈಬ್ರಿಡ್ ತಳಿ ದೊರೆಯುವ ಸಾಧ್ಯತೆ ಇರುತ್ತದೆ.

ಸಂಗ್ರಹಿಸಿದ ಬೀಜವನ್ನು ಸುಮಾರು ೮-೧೦ ದಿನ ನೆರಳಲ್ಲಿ ಮಾಗಿಸಿ, ಈಗ ಬೀಜ ನೆಡಲು ಸಿದ್ಧವಾಗಿರುತ್ತದೆ(ನೀರು ಕಡಿಮೆಯಾಗುವವರೆಗೆ ಮಾಗಿಸಬಾರದು).

ರೈತರು ಕಾಯನ್ನು ನಾಟಿ ಮಾಡುವಾಗ ಸಾಮಾನ್ಯವಾಗಿ ಉದ್ದ ನೆಡುತ್ತಾರೆ(ತೊಟ್ಟು ಮೇಲಿರುವಂತೆ). ಹೀಗೆ ಮಾಡುವುದರಿಂದ ಕಾಯಿಯಲ್ಲಿರುವ ಭ್ರೂಣಕ್ಕೆ ಅದರಲ್ಲಿಯ ನೀರು ತಾಗದಂತಾಗಿ ಅದು ಮೊಳೆಯಲು ನಾವು ಹೊರಗಿನಿಂದ ಹಾಕುವ ನೀರನ್ನೇ ಅವಲಂಬಿಸಬೇಕಾಗುತ್ತದೆ. ಆದ್ದರಿಂದ ಈ ವಿಧಾನದಲ್ಲಿ ಶೇ. ೫೦-೬೦ ಕಾಯಿ ಮಾತ್ರ ಮೊಳೆಯುತ್ತದೆ.

ಆದರೆ ಕಾಯನ್ನು ಅಡ್ಡ ಮಲಗಿಸುವುದರಿಂದ ಕಾಯಿಯೊಳಗಿನ ನೀರು ಭ್ರೂಣಕ್ಕೆ ಸದಾ ತಗಲುತ್ತಿದ್ದು ಹೊರಗಿನಿಂದ ಕೊಡುವ ನೀರಿನಲ್ಲಿ ವ್ಯತ್ಯಾಸವಾದರೂ ಶೇ. ೯೦-೯೫ ಬೀಜ ಮೊಳೆಯುತ್ತವೆ. ಬೇಸಗೆಯಲ್ಲಿ ಹದವರಿತು ಮಡಿಗಳಿಗೆ ನೀರು ನೀಡಿ ಉತ್ತಮ ಮೊಳಕೆ ಬಂದು ಉತ್ತಮ ಸಸಿ ದೊರೆಯುತ್ತದೆ(ನೀರು ನೀಡದಿದ್ದರೂ ಮುಂದೆ ಮಳೆಯಿಂದಾಗಿ ಖಂಡಿತ ಮೊಳಕೆ ಬರುತ್ತದೆ).

ಶ್ರೀ ಜಿ. ಶಿವನಂಜಯ್ಯನವರು ಪ್ರಾಂಶುಪಾಲರಾಗಿದ್ದು, ತುಮಕೂರು ಜಿಲ್ಲೆಯ ಜಯಚಾಮರಾಜಪುರದಲ್ಲಿ, 'ಕದಳ' ಸಹಜ ಕೃಷಿ ಫಾರಂನ್ನು ನಡೆಸುತ್ತಿರುವರು.

■■

ಅಧ್ಯಾಯ : ಆರು

ಸಾಂಬಾರು ಮತ್ತು ಎಣ್ಣೆ ಪದಾರ್ಥಗಳು

ಎಳ್ಳಿಗೆ ಬೇವಿನ ಕಷಾಯ

ಗುಜರಾತಿನ ಜಾಮ್‌ನಗರ್ ಜಿಲ್ಲೆಯ ಮೋಹನ್‌ಭಾಯಿಯವರು ಎಳ್ಳಿನ ಬೆಳೆಯಲ್ಲಿ ಇಳುವರಿಯನ್ನು ಹೆಚ್ಚಿಸಲು ಬೇವಿನ ಕಷಾಯವನ್ನು ಉಪಯೋಗಿಸುತ್ತಾರೆ. ಇದಕ್ಕಾಗಿ ಇವರು ಒಂದು ಕೆ.ಜಿ. ಬೇವಿನ ಎಲೆಗಳನ್ನು ೨೦ ಲೀಟರ್ ನೀರಿನಲ್ಲಿ ಒಂದು ಗಂಟೆಯವರೆಗೆ ಕುದಿಸುತ್ತಾರೆ. ಬಂದಿರುವಂತಹ ಕಷಾಯವನ್ನು ಹೂಗಳು ಬಿಡುವುದಕ್ಕಿಂತ ಮುಂಚೆಯೇ ಬೆಳೆಗಳಿಗೆ ಸಿಂಪಡಿಸುತ್ತಾರೆ. ಇದರಿಂದ ಇಳುವರಿಯು ಎಕರೆಗೆ ೧೨೦-೧೬೦ ಕೆ.ಜಿ.ಯವರೆಗೆ ಹೆಚ್ಚಾಗುತ್ತದೆ ಎಂದು ಹೇಳಿದ್ದಾರೆ.

ಹತ್ತಿಯ ತಳಿಯ ಬೀಜ ಶೇಖರಿಸುವುದು

ಹತ್ತಿಯ ಪೈರಿನಲ್ಲಿಯೂ ಎಲ್ಲಾ ಕಾಯಿಗಳು ಒಮ್ಮೆಲೇ ಬಲಿತು ಮಾಗಿ ಅರಳುವುದಿಲ್ಲ. ಕಾರಣ ರೋಗ ಮತ್ತು ಹುಳದ ಬಾಧೆ ಇಲ್ಲದ ಉತ್ತಮವಾಗಿ ಮೊದಲು ಬಲಿತು ಅರಳಿದ ತೊಳೆಗಳನ್ನು ಬಿಡಿಸಿ ಶೇಖರಿಸಿಟ್ಟು ಬೀಜಗಳನ್ನು ಬೇರ್ಪಡಿಸಿ ಬಿತ್ತಲಿಕ್ಕೆ ಉಪಯೋಗಿಸಬೇಕು.

ಜೀರಿಗೆ ಬೆಳೆಯಲ್ಲಿ ಬೆಂಕಿರೋಗ ನಿವಾರಣೆ

ಗುಜರಾತಿನ ರೈತರಾದ ಪತುಭಾಯಿ ರಾಥೋಡ್‌ರವರು ತಮ್ಮ ಜೀರಿಗೆ ಬೆಳೆಗೆ ತಗುಲಿದ ಬೆಂಕಿರೋಗ ನಿವಾರಿಸಲು, ತಮ್ಮದೇ ಆದ ರೋಗ ನಿವಾರಣಾ ಪದ್ಧತಿಯನ್ನು ಕಂಡು ಹಿಡಿದಿದ್ದಾರೆ. ಎಳೆ ಬೇವಿನ ಎಲೆಗಳನ್ನು, ಕತ್ತಾಳೆ (Agave sisalana) ಮತ್ತು ಎಕ್ಕ (Calotropis gigantea)ದ ಎಲೆಗಳೊಂದಿಗೆ ಚೆನ್ನಾಗಿ ಅರೆದು, ದ್ರಾವಣವನ್ನಾಗಿಸಿಕೊಂಡು, ೫೦೦ ಮಿ.ಲೀ. ದ್ರಾವಣಕ್ಕೆ ೫ ಗ್ರಾಂ. ಸೋಪಿನ ಪುಡಿ ಹಾಕಿ, ೧೫ ಲೀ. ನೀರಿನಲ್ಲಿ ಬೆರೆಸಿ, ಜೀರಿಗೆ ಬೆಳೆಗೆ ಸಿಂಪಡಿಸುತ್ತಾರೆ. ಇವರು ಈ ಪದ್ಧತಿಯನ್ನು ಕಳೆದ ೫ ವರ್ಷಗಳಿಂದ ಅನುಸರಿಸಿ ಉತ್ತಮ ಫಲ ಪಡೆದಿದ್ದಾರಂತೆ.

ಶುಂಠಿಯ ಜೊತೆಗೆ ಎಕ್ಕ!


ಶುಂಠಿಗೆ ಹುಳು, ಕೀಟ ರೋಗದ ಬಾಧೆ ಬರಬಾರದಂತೆ ಜೊತೆಗೆ ಎಕ್ಕ ಬೆಳೆಯಿರಿ ಎನ್ನುತ್ತಾರೆ ಗುಜರಾತಿನ ಸಬರಕಾಂತ ಜಿಲ್ಲೆಯ ಬಚ್ಚುಭಾಯಿ ಎಂ. ಪಾಂಡರ್. ಎಕ್ಕದ ವಾಸನೆ ಹುಳುಗಳನ್ನು ದೂರವಿಡುತ್ತದೆ ಎನ್ನುವುದು ಆ ಪ್ರಾಂತ್ಯದ ಜನರೆಲ್ಲರ ಅನುಭವವಂತೆ.

ಜೀರಿಗೆಯಿಂದ ದೂರ್ವೆಯನ್ನು ದೂರ ಓಡಿಸಬಹುದೇ?

ದೂರ್ವೆ ಅಥವಾ ಗರಿಕೆ (Cynodon dactylon) ಒಂದು ಬಹುವಾರ್ಷಿಕ ಕಳೆ. ಇದು ಜಮೀನಿಗೆ ಬಂತೆಂದರೆ ಸಂಪೂರ್ಣ ನಿವಾರಣೆ ಕಷ್ಟ. ಬೇರು ಆಳಕ್ಕಿಳಿಯುವುದರಿಂದ ಕೈಯಿಂದ ಕೀಳುವುದೂ ಪರಿಣಾಮಕಾರಿಯಲ್ಲ. ಗುಜರಾತಿನ ಮೆಹಸಾನ ಜಿಲ್ಲೆಯ ದೇವಶ್‌ಜಿ ಠಾಕೂರ್ ಇದರ ನಿಯಂತ್ರಣಕ್ಕೆ ದೇಶೀ ತಂತ್ರ ರೂಪಿಸಿದ್ದಾರೆ. ಕೊಯ್ಲಾದ ನಂತರ ಉಳಿಯುವ ಜೀರಿಗೆ ಗಿಡದ ಕಾಂಡ-ಕಡ್ಡಿಗಳನ್ನು ಗರಿಕೆ ಬೆಳೆದಿರುವ ಜಾಗದಲ್ಲಿ ಭೂಮಿಯ ಮೇಲೆ ಹರಡುತ್ತಾರೆ. ಮಳೆಗಾಲದಲ್ಲಿ ನೀರು, ಹರಡಿರುವ ಜೀರಿಗೆಯ ಒಣಗಿದ ಕಡ್ಡಿಗಳಿಂದ ನುಸುಳಿ ಭೂಮಿಯೊಳಕ್ಕೆ ಸೇರುತ್ತದೆ. ರೈತರ ಪ್ರಕಾರ ಈ ರೀತಿ ಮಾಡುವುದರಿಂದ ಗರಿಕೆಯ ಬೆಳವಣಿಗೆ ಕುಂಠಿತಗೊಳ್ಳುತ್ತವೆ. ಹರಡಿರುವ ಜೀರಿಗೆ ಗಿಡಗಳು ಕೊಳೆತ ಮೇಲೆ ಮಣ್ಣಿಗೆ ಸೇರಿಸುತ್ತಾರೆ. ಆಗ ಗರಿಕೆ ನಾಶವಾಗುತ್ತದೆ. ಆದರೆ ಹರಡಿರುವ ಜೀರಿಗೆ ಗಿಡಗಳು ಪೂರ್ತಿ ಕೊಳೆಯುವವರೆಗೂ ಯಾವ ಬೆಳೆಯನ್ನೂ ಬೆಳೆಯಬಾರದು ಎಂಬ ಅಭಿಪ್ರಾಯ ಇಲ್ಲಿಯ ರೈತರದ್ದು.

ಜೀರಿಗೆ ಗಿಡದ ಕಾಡಿಗೆ ರೋಗಕ್ಕೆ ನವ ಕಲಾಶಾಸ್ತ್ರ

ಗುಜರಾತಿನ ಅಜ್‌ಷೇರ್ ಜಿಲ್ಲೆಯ ಸುಕ್‌ದೇವ್ ಕುಮಾರ್‌ರವರು ತಮ್ಮ ಜೀರಿಗೆ ಬೆಳೆಗೆ ತಗುಲಿದ ಕಾಡಿಗೆ ರೋಗವನ್ನು ತಡೆಗಟ್ಟಲು ಶತಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲವಂತೆ. ಅವರು ತಮಗೆ ತಿಳಿದ ಎಲ್ಲಾ ವಿಧಾನವನ್ನು ಈ ರೋಗ ನಾಶಕ್ಕೆ ಪ್ರಯೋಗಿಸಿ ನೋಡಿ ಗುಣ ಕಾಣದೆ ಕಡೆಯದಾಗಿ ಒಂದು ಹೊಸ ಪ್ರಯೋಗವನ್ನು ಮಾಡಿ ನೋಡಿದರಂತೆ. ಅದೇನೆಂದರೆ ಸುಮಾರು ೫-೭ ಕೆ.ಜಿ. ಯಷ್ಟು 'ಕಿಂಪ್' (Kheemp - leptadenia reticulata) ಎಂಬ ಗಿಡದ ಕೊಂಬೆಗಳನ್ನು ತೆಗೆದು ನೀರಿನ ಟ್ಯಾಂಕ್‌ನಲ್ಲಿ ಇಡುತ್ತಾರೆ. ಒಂದು ವಾರದ ನಂತರ ಆ ನೀರನ್ನು ರೋಗ ತಗುಲಿದ



ಗಿಡಗಳಿಗೆ ಚಿಮುಕಿಸುತ್ತಾರೆ. ಈ ರೀತಿ ಮಾಡುವುದರಿಂದ ರೋಗವನ್ನು ಶೇಕಡ ೮೦ರಷ್ಟು ತಡೆಗಟ್ಟಬಹುದೆಂದು ಅವರು ಹೇಳುತ್ತಾರೆ.

ಬೆಳ್ಳುಳ್ಳಿಯ ರೋಗಗಳಿಗೆ ಸಜ್ಜೆ ಮತ್ತು ಹರಳೆಣ್ಣೆ!


ಭಾರತದ ಸಂಬಾರ ಮಂಡಳಿಯ ಪ್ರಕಾರ ಬೆಳ್ಳುಳ್ಳಿಯ ಉತ್ಪಾದನೆಯು ಗುಜರಾತಿನ ಜುನಾಗಡ್ ಜಿಲ್ಲೆಯಲ್ಲಿ ಹೆಚ್ಚಿರುತ್ತದೆ. ಇಲ್ಲಿಯ ರೈತರು ಬೆಳೆಗಳಲ್ಲಿಯ ರೋಗಗಳು ಹತೋಟಿಗೆ ರಾಸಾಯನಿಕಗಳನ್ನು ಬಳಸದೇ ತಮ್ಮದೇ ಆದಂತಹ ದೇಶೀಯ ಕ್ರಮಗಳನ್ನು ಅನುಸರಿಸುತ್ತಿದ್ದಾರೆ.

ಗುಜರಾತಿನ ಪುರುಷೋತ್ತಮ ಭಾಯಿಯವರು ತಮ್ಮ ಬೆಳ್ಳುಳ್ಳಿ ಬೆಳೆಗೆ ಮಜ್ಜಿಗೆ, ಗೋಮೂತ್ರ ಮತ್ತು ತುಂಬಾ ಹಳೆಯ ಕಮಟು ನಾತದ ಸಜ್ಜೆಯ (Pennisetum typhoides, Burm) ಹಿಟ್ಟನ್ನು ಮಿಶ್ರಣ ಮಾಡಿಕೊಂಡು ಬಳಸುತ್ತಾರೆ. ಬೆಳ್ಳುಳ್ಳಿ ಬೆಳೆಯಲ್ಲಿ ರೋಗವು ಕಾಣಿಸಿಕೊಂಡಾಗ ಅಥವಾ ಉಪದ್ರವಿಗಳ ಹಾವಳಿ ಹೆಚ್ಚಾದಾಗ ಈ ಮಿಶ್ರಣವನ್ನು ಸಿಂಪಡಿಸಿದ್ದಲ್ಲಿ ಪರಿಣಾಮಕಾರಿಯಾಗಿ ಹತೋಟಿಯಾಗುತ್ತದೆಂದು ಹೇಳಿದ್ದಾರೆ.

ಇದೇ ರಾಜ್ಯದ ಇನ್ನೊಬ್ಬ ರೈತರಾದ ರಮೇಶ್ ಭಾಯಿಯವರು ಹರಳೆಣ್ಣೆ (Ricinus communis L.), ನೀರು ಮತ್ತು ಅಡುಗೆ ಸೋಡಾ ಇವುಗಳನ್ನು ಬೆಳ್ಳುಳ್ಳಿಯ ಇಳುವರಿ ಹೆಚ್ಚಿಸಲು ಬಳಸುತ್ತಾರೆ. ಇದಕ್ಕಾಗಿ ಇವರು ೧.೫ ಲೀಟರ್ ಹರಳೆಣ್ಣೆ ಮತ್ತು ೧೦೦ ಗ್ರಾಂ ಅಡುಗೆ ಸೋಡಾವನ್ನು ೨೦ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ನೀರು ಹಾಯಿಸಿದ ಮೇಲೆ ಬೆಳೆಗಳಿಗೆ ಎರಡರಿಂದ ಮೂರು ಬಾರಿ ಸಿಂಪಡಿಸುತ್ತಾರೆ.

ಏಲಕ್ಕಿ ಬಿತ್ತನೆಯಲ್ಲಿ ಇರುವೆಗಳ ಹತೋಟಿ

ಯಕಶ್ಚಿತ್ ಇರುವೆ, ಏಲಕ್ಕಿ ಕೃಷಿಕರಿಗೆ ದೊಡ್ಡ ತೊಂದರೆ. ನೆಲದಲ್ಲಿ ಊರಿದ ಏಲಕ್ಕಿ ಬೀಜಗಳನ್ನೇ ಮಂಗಮಾಯ ಮಾಡಿಬಿಡುವ ಇರುವೆಗೆ ಯಾವ ಸಲಹೆ ನಿಮ್ಮಲ್ಲಿದೆ?



ತುಂಬ ಆಸ್ತಿಕರಾದ ಹಿತ್ತಲ ಹಳ್ಳಿಯ ಶ್ರೀ ನಾಗೇಂದ್ರ ಭಟ್ಟರು ಒಮ್ಮೆ ವಿಭೂತಿ ಹಣೆಗೆ ಲೇಪಿಸಿ ಕೊಳ್ಳುವಾಗ ಮನಸ್ಸು ಏಲಕ್ಕಿ ಕಡೆ ಜಾರಿ ಏಲಕ್ಕಿಗೂ ವಿಭೂತಿ ಸಂಸ್ಕಾರ ಮಾಡಿ ಊರಿ ಬಂದ ರಂತೆ. ಏಲಕ್ಕಿಯ ಇರುವಿಕೆಯೇ ಅರಿವಾಗದೆ ಇರುವೆಗಳು ಹತ್ತಿರ ಸುಳಿಯಲಿಲ್ಲವಂತೆ. ಇದನ್ನು ತಿಳಿದ ಆಚೀಚೆಯ ಕೃಷಿಕರು ಕೂಡ ವಿಭೂತಿಯನ್ನು ಬೀಜಗಳಿಗೆ ಲೇಪಿಸಿ ಬಿತ್ತತೊಡಗಿದ್ದಾರೆ.

ಇದಕ್ಕೆ ಮಲೆನಾಡಿನ ಕಮ್ಮರಡಿ, ಬಸವನಗದ್ದೆ ರೈತರ ಅನುಭವವೇ ಬೇರೆ. ಬಸವನಗದ್ದೆಯ ರವಿ, ಕಮ್ಮರಡಿಯ ನರಸಿಂಹ ಪ್ರಕಾರ ಏಲಕ್ಕಿಯನ್ನು ಚೆನ್ನಾಗಿ ನೀರಲ್ಲಿ ನೆನೆಸಿ ತೊಳೆದು ಅನಂತರ ರಂಗೋಲಿ ಪುಡಿ, ಮರಳು ಅಥವಾ ಬೂದಿಯಿಂದ ಸರಿಯಾಗಿ ಉಜ್ಜಿ ಬಿತ್ತಿದರೆ ಅದರಲ್ಲಿ ಸಿಹಿ ಅಂಶವೇ ಉಳಿಯದಿರುವುದರಿಂದ ಇರುವೆ ಏಲಕ್ಕಿಯ ಹತ್ತಿರ ಸುಳಿಯದು ಅನ್ನುತ್ತಾರೆ ಅವರು.

ಅರಿಶಿಣ ಗಿಡದ ಕಪ್ಪು ಚುಕ್ಕೆ ರೋಗಕ್ಕೆ

ಚಳಿಗಾಲದಲ್ಲಿ ಅರಿಶಿಣ ಗಿಡದ ರೆಂಬೆಗಳ ಮೇಲೆ ಕಪ್ಪು ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಇದರಿಂದ ಗಿಡದ ಬೆಳವಣಿಗೆಯೂ ಕುಂಠಿತಗೊಳ್ಳುತ್ತದೆ. ಇದಕ್ಕೆ ಪರಿಹಾರವಾಗಿ ಗುಜರಾತಿನ ದುಂಗಾರ್‌ಪುರ್ ಜಿಲ್ಲೆಯವರಾದ ದಹಯಭಾಯಿ ಕೆ. ಕತರಾರವರು ತಮ್ಮ ಒಂದು ಎಕರೆ ಭೂಮಿಗೆ ಆರರಿಂದ ಏಳು ಕ್ವಿಂಟಾಲ್ ಹರಳಿಂಡಿ ಮತ್ತು ೧೦೦ ಕೆ.ಜಿ. ಹೊಂಗೆ (Pongamia pinnata (L.) Plene.) ಎಲೆಗಳನ್ನು ಮಿಶ್ರಣ ಮಾಡಿ ಹೊಲದಲ್ಲಿ ಹರಡಿ ನೀರನ್ನು ಹಾಕುತ್ತಾರೆ. ನಂತರ ಒಣಗಿದ ಮೇಲೆ ಎರಡು ಬಾರಿ ಉಳುಮೆ ಮಾಡಿ ಅರಿಶಿಣವನ್ನು ಬಿತ್ತುತ್ತಾರೆ. ಈ ತರಹದ ಉಪಚಾರವು ಕಪ್ಪು ಚುಕ್ಕೆ ರೋಗವನ್ನು ತಡೆಗಟ್ಟುವುದಲ್ಲದೆ ಗೆದ್ದಲು ಸಹ ನಿವಾರಣೆಯಾಗುತ್ತದೆ ಮತ್ತು ಫಸಲು ಚೆನ್ನಾಗಿ ಬರುತ್ತದೆ ಎಂದು ಹೇಳಿದ್ದಾರೆ. ಈ ಕ್ರಮವನ್ನು ದಹಯಭಾಯಿಯವರು ತಮ್ಮ ತಾತನವರಾದ ಕಬಾಭಾಯಿಯವರಿಂದ ತಿಳಿದುಕೊಂಡಿದ್ದಾರೆ.

ಕಾಳು ಮೆಣಸು ಕೊಳೆರೋಗಕ್ಕೆ ಮಾನವ ಮೂತ್ರ


ಕಾಳು ಮೆಣಸಿನ ಬಳ್ಳಿಗೆ ಸೊರಗು ರೋಗ ಬಂದಾಗ ಎಲೆ ಹಣ್ಣಾಗಿ ಉದುರಿ ಬಳ್ಳಿಸಂದು ತುಂಡಾಗಿ ಬಿದ್ದು ಸ್ವಲ್ಪ ದಿನದಲ್ಲಿ ಇಡೀ ಬಳ್ಳಿಯೇ ನಾಶವಾಗುವುದು. ಅಲ್ಲದೇ ಬಳ್ಳಿ ಚಿಗುರಿ ಗೊಂಚಲು ಬೆಳೆದಂತೆ ಕಾಳು ಉದುರಲು ತೊಡಗಿ ಹಣ್ಣಾಗುವವರೆಗೂ ಉದುರುವುದು. ಇದಕ್ಕೆ ಪರಿಹಾರವಾಗಿ ಕಾಸರಗೋಡಿನ ಶ್ರೀ ಸುಬ್ರಾಯ ನಾಯಕ್ ಒಂದು ಲೀಟರ್ ಮನುಷ್ಯ ಮೂತ್ರಕ್ಕೆ ಎಂಟು ಲೀಟರ್ ನೀರು ಸೇರಿಸಿ ಬಳ್ಳಿಯ ಬುಡಕ್ಕೆ ಒಂದೊಂದು ಲೀಟರ್‌ನಂತೆ ಎರೆಯುತ್ತಾರಂತೆ. ಮೊದಲು ಎರಡು ಮೂರು ದಿನ ರೋಗಬಾಧಿತ ಬಳ್ಳಿಗಳಿಗೆ ಈ ರೀತಿ ಮಾಡಿ ಮುಂದೆ ತೋಟದ ಒಂದು ಬದಿಯಿಂದ ಎರೆಯುತ್ತಾ ಮುಂದುವರೆಸಿ ವರ್ಷದಲ್ಲಿ ಮೂರು ನಾಲ್ಕು ಸಲ ಆವರ್ತಿಸಿದರೆ ಕಾಳು ಮೆಣಸಿನ ಬಳ್ಳಿಯ ರೋಗ ಕಡಿಮೆಯಾಗಿ ಬಳ್ಳಿ ಸಾಯುವುದು ನಿಲ್ಲುತ್ತದೆಯಂತೆ. ಮುಂದೆ ಮಳೆ ಬಂದ ಕೂಡಲೇ ಒಂದು ಬಳ್ಳಿಗೆ ಅರ್ಧ ಕಿಲೋ ಕಹಿ ಬೇವಿನಸೊಪ್ಪನ್ನು ಹರಡಿ, ಕಾಲು ಕಿಲೋ ಎರೆಹುಳು ಗೊಬ್ಬರವನ್ನು ಮೇಲುಗೊಬ್ಬರವಾಗಿ ಕೊಡಬಹುದು. ಬಳ್ಳಿಯು ಮೊದಲಿನಂತೆ ಆರೋಗ್ಯ ವಾಗಿ ಚಿಗುರುತ್ತದೆಯೆಂದು ನಾಯಕ್ ಹೇಳುತ್ತಾರೆ.

ಹರಳು (ಎಣ್ಣೆಕಾಳು) ಬೆಳೆ ರೋಗಗಳಿಗೆ ವಿಷ ಉಮ್ಮತ್ತಿ

ಗುಜರಾತಿನ ರಾಜ್ಯದ ವಡೋದರ ಜಿಲ್ಲೆಯ ಮೋಹನ್‌ಭಾಯಿ ಶಾನಭಾಯಿ ಪಟೇಲ್‌ರವರು ಔಡಲ (ಹರಳು) ಗಿಡಗಳಿಗೆ ಬರುವಂತಹ ರೋಗಗಳಿಗೆ ವಿಷ ಉಮ್ಮತ್ತಿ (Datura metel L.) ಗಿಡದ ಉಪಯೋಗವನ್ನು ಮಾಡುತ್ತಾರೆ. ಔಡಲ ಬೆಳೆಯು ಯಾವಾಗಲೂ ಒಂದಲ್ಲ ಒಂದು ರೀತಿಯ ರೋಗದ ಬಾಧೆಗೆ ಒಳಪಟ್ಟು ಇದರಿಂದ ಗಿಡವು ಸುರುಟಿಕೊಳ್ಳುತ್ತದೆ ಅಥವಾ ಕಮರಿ ಹೋಗುತ್ತದೆ. ಸಾಮಾನ್ಯವಾಗಿ ರೈತರು ತಮ್ಮ ಹೊಲಗಳಲ್ಲಿ ಪ್ರತಿ ವರ್ಷವೂ ಒಂದೇ ತರಹದ ಬೆಳೆಗಳನ್ನು ಬೆಳೆದಾಗ ಈ ರೀತಿ ರೋಗಗಳ ಬಾಧೆಗೆ ಒಳಗಾಗುತ್ತವೆ. ಇವರ ಪ್ರಕಾರ ವಿಷ ಉಮ್ಮತ್ತಿ ಬೀಜಗಳನ್ನು ಇದೇ ಗಿಡದ ಎಲೆಗಳ ರಸದಲ್ಲಿ ನೆನೆಸಿ ನಂತರ ೨೪ ಗಂಟೆ ನೆರಳಿನಲ್ಲಿ ಒಣಗಿಸಬೇಕು. ಈ ರೀತಿ ಒಣಗಿಸಿರುವ ಬೀಜಗಳನ್ನು ಪುಡಿಮಾಡಿ ಉಪಯೋಗಿಸುವುದರಿಂದ ಔಡಲ ಗಿಡಗಳು ಆರೋಗ್ಯವಾಗಿ ಮತ್ತು ಬೇಗ ಬೆಳೆಯುತ್ತವೆ ಅಲ್ಲದೆ ಬೇರೆ ರೋಗಗಳು ಬರುವುದನ್ನೂ ನಿಯಂತ್ರಿಸುತ್ತದೆ ಎಂದು ಹೇಳಿದ್ದಾರೆ. ಈ ವಿಧಾನವನ್ನು ತಮ್ಮ ಹಿರಿಯವರಿಂದ ಕಲಿತಿದ್ದು ಹಳ್ಳಿಯಲ್ಲಿ ಕೆಲವರಿಗೆ ಮಾತ್ರ ಇದು ತಿಳಿದಿರುವುದಾಗಿ ಹೇಳಿದ್ದಾರೆ.

ಹರಳಿನ ಗಿಡದ ರಕ್ಷಣೆಗೆ ಬೇವಿನ ಎಲೆಯ ನೆರವು

ಕೊಂಡಲಿಹುಳು (Achaea janata) ಹರಳಿನ ಗಿಡದ ಎಲೆಗಳನ್ನೆಲ್ಲಾ ತಿಂದು ನಾಶಪಡಿಸುತ್ತದೆ. ಗುಜರಾತಿನ ರೈತರು ಈ ಕೊಂಡಲಿ ಹುಳದ ನಿಯಂತ್ರಣ ಮಾಡಲು ಕಂಡುಕೊಂಡಿದ್ದು ಬೇವು. ಸುಮಾರು ಎರಡು ಕೆ.ಜಿ.ಯಷ್ಟು ಬೇವಿನ ಎಲೆಯನ್ನು ೨-೩ ಲೀಟರ್‌ನಷ್ಟು ಪ್ರಮಾಣದ ಆಡಿನ ಮೂತ್ರದಲ್ಲಿ ನೆನೆಸಿಡುತ್ತಾರೆ. ನಂತರ ೫೦೦ ಮಿ.ಲಿ.ನಷ್ಟು ಸೋಸಿದ ದ್ರಾವಣ ವನ್ನು ೧೫ ಲೀಟರ್ ನೀರಿನಲ್ಲಿ ಬೆರೆಸಿ ಹರಳಿನ ಗಿಡಗಳ ಮೇಲೆ ಸಿಂಪಡಿಸುತ್ತಾರೆ. ಐದು ದಿನಗಳ ನಂತರ ಪುನಃ ಇದೇ ಔಷಧವನ್ನು ಪುನರಾವರ್ತಿಸುತ್ತಾರೆ.



ಶೇಂಗಾದ ಜೋಡಿ ಹೆಸರುಕಾಳು

ಗುಜರಾತಿನ ಬೂಜ್ ಜಿಲ್ಲೆಯ ಅಶ್ವಿನಿಭಾಯಿ ಕಲ್ಯಾಣಿಭಾಯಿ ಒಮ್ಮೆ ಶೇಂಗಾ ಬೆಳೆ ಬೆಳೆಸುವಾಗ ಜೊತೆಗೆ ಹೆಸರುಕಾಳನ್ನೂ ಹಾಕಿದರಂತೆ. ಆಶ್ಚರ್ಯವೆಂದರೆ, ಆ ವರ್ಷ ಅಕ್ಕಪಕ್ಕದ ಹೊಲಗಳಲ್ಲಿ ಕಂಡುಬಂದ ಎಲೆ ಚುಕ್ಕೆ ರೋಗ ಅವರ ಶೇಂಗಾದ ಸಸ್ಯಗಳಿಗೆ ಮಾತ್ರ ತಟ್ಟಲಿಲ್ಲವಂತೆ. ಇದು ಬಹುಶಃ ಹೆಸರುಕಾಳುಗಳ ಪ್ರಭಾವ ಇರಬಹುದೆಂದು ಮುಂದಿನ ವರ್ಷವೂ ಅದನ್ನೇ ಪುನರಾವರ್ತಿಸಿದಾಗ ಫಲಿತಾಂಶ ಖಚಿತ. ಹೆಸರುಕಾಳನ್ನು

ಶೇಂಗಾದ ಜೊತೆಗೆ ಬೆಳೆದರೆ, ಶೇಂಗಾದ ಗಿಡಗಳಿಗೆ ಎಲೆಚುಕ್ಕೆ ರೋಗ ಬರುವುದಿಲ್ಲ. ಈ ಅನುಭವವನ್ನೇ ಪರಿಷ್ಕರಿಸಿ, ಈಗ ೪ ಸಾಲು ಶೇಂಗಾದ ಬೆಳೆ ಮಧ್ಯದಲ್ಲಿ ಒಂದು ಸಾಲು ಹೆಸರುಕಾಳು ಬೆಳೆಸುವುದು ಹೆಚ್ಚು ಸೂಕ್ತ ಎಂದು ಹೇಳುತ್ತಾರೆ. ಕಳೆದ ಐದು ವರ್ಷಗಳಿಂದ ಅವರು ಈ ರೀತಿ ಶೇಂಗಾ ಬೆಳೆಯುವುದನ್ನು ನೋಡಿದ ಅಕ್ಕಪಕ್ಕದ ರೈತರೂ ಕೂಡ ಈಗ ಅವರನ್ನೇ ಅನುಸರಿಸಲಾರಂಭಿಸಿದ್ದಾರಂತೆ.

ನೆಲಗಡಲೆಯ ಬೀಜ ಹಿಡಿಯುವುದು

ನೆಲಗಡಲೆಯ ಪೈರಿನಲ್ಲಿ ಎಲ್ಲ ಕಾಯಿಗಳು ಒಮ್ಮೆಲೇ ಬಲಿಯದೆ ಭೂಮಿಯ ಒಳಗಡೆ ಬೆಳೆದು ಮಾಗುವುದರಿಂದ ನೆಲಗಡಲೆಯ ರಾಶಿ ಮಾಡಿದ ಮೇಲೆ ಸಂಪೂರ್ಣ ಬಲಿತು ಮಾಗಿದ ಕಾಯಿಗಳನ್ನು ಆರಿಸಿ ತೆಗೆದು ಬೀಜಕ್ಕೆಂದು ಒಳ್ಳೆ ಗಾಳಿಯಾಡುವ ಜಾಗದಲ್ಲಿ ಶೇಖರಿಸಿಟ್ಟು ಬಿತ್ತುವ ಪೂರ್ವದಲ್ಲಿ ಬೀಜಗಳನ್ನು ಬೇರ್ಪಡಿಸಿ ಬಿತ್ತಬೇಕು.

ಸೂರ್ಯಪಾನ ತಳಿಯ ಬೀಜ ಶೇಖರಿಸುವುದು

ಸೂರ್ಯಪಾನ (ಸೂರ್ಯಕಾಂತಿ) ತೆನೆಗಳಲ್ಲಿಯ ಕಾಳುಗಳು ತೆನೆಯ ಕಡೆದಂಡೆಯಿಂದ ಬಲಿತು ಮಾಗುತ್ತ ತೆನೆಯ ನಡುವಿನ ಬಿಂದುವಿನ ಕಡೆಗೆ ಕಾಳುಗಳು ಬಲಿಯುತ್ತ ಹೋಗುತ್ತವೆ. ಕಾರಣ ಸೂರ್ಯಪಾನದ ತೆನೆಯಲ್ಲಿಯ ಕಡೆದಂಡೆಯ ಎರಡು ಅಥವಾ ಮೂರು ಸಾಲುಗಳ ಕಾಳುಗಳನ್ನು ಬೇರ್ಪಡಿಸಿ ಅವುಗಳಲ್ಲಿ ಉತ್ತಮ ಬಲಿತ ಕಾಳುಗಳನ್ನು ಮಾತ್ರ ಬೀಜಕ್ಕೆಂದು ಉಪಯೋಗಿಸಬೇಕು. ಈ ಮೇಲಿನ ಎರಡೂ ಕ್ರಮಗಳನ್ನು ಶೋಧಿಸಿರುವವರು ಎ.ಎನ್. ಚನ್ನಪ್ಪಗೌಡರ್ ರಾಯಚೂರು.

■■

ಅಧ್ಯಾಯ : ಏಳು

ಅಡಿಕೆ ಬೆಳೆಯಲ್ಲಿ

ರೋಗ ಮುಕ್ತ ಅಡಿಕೆ ಬೆಳೆ

ಹನ್ನೊಂದು ಎಕರೆ ಜಮೀನಿನಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ ೬೫೦೦ ಅಡಿಕೆ ಮರಗಳನ್ನು ಬೆಳೆದಿರುವ ಸಂಗಯ್ಯನವರು ಹಾವೇರಿ ಜಿಲ್ಲೆ, ಕಾಗಿನೆಲೆ ಗ್ರಾಮದ ರೈತರು. ೧೪ ವರ್ಷದ ಈ ಮರಗಳಿಗೆ ಇದುವರೆಗೂ ಯಾವುದೇ ರಾಸಾಯನಿಕ ಮತ್ತು ಕೀಟನಾಶಕಗಳನ್ನು ಬಳಸಿಲ್ಲ. ಸಾಮಾನ್ಯವಾಗಿ ಅಡಿಕೆ ಬೆಳೆಗೆ ಕೊಳೆರೋಗ ಹಾಗೂ ಅಣಬಿ ರೋಗಗಳು ಕಾಣಿಸಿಕೊಳ್ಳುತ್ತವೆ. ಆದರೆ ಇವರ ತೋಟದಲ್ಲಿ ಇದಾವುದೇ ರೋಗವಿಲ್ಲ. ರೋಗ ತಗುಲಿದ ನಂತರ ನಿಯಂತ್ರಣ ಕಷ್ಟಸಾಧ್ಯ. ರೋಗ ಬರದಂತೆ ತಡೆಯುವ ಕ್ರಮವೇ ಅತ್ಯಂತ ಮಹತ್ವದ್ದು. ಪ್ರತಿ ವರ್ಷ ಮಳೆಗಾಲಕ್ಕೆ ಮೊದಲು ಅಡಿಕೆ ಮರಗಳ ಬುಡಗಳ ಸುತ್ತಲೂ ಅಗೆದು ಗುಣಿ ಮಾಡುತ್ತಾರೆ. ಪ್ರತಿ ಬುಡಕ್ಕೆ ಸಗಣಿ ಗೊಬ್ಬರ ಹಾಗೂ ನಾಲ್ಕು ಬುಟ್ಟಿ ಹೊಸ ಮಣ್ಣನ್ನು ಹಾಕುತ್ತಾರೆ. ಇದರಿಂದ ಅಡಿಕೆ ಮರಗಳು ಹೊಸ ಚೈತನ್ಯವನ್ನು ಪಡೆದುಕೊಳ್ಳುತ್ತವೆ. ಬೇಸಿಗೆಗೆ ಮೊದಲು ಪ್ರತಿ ಮರಕ್ಕೂ ಒಂದು ಕೆ.ಜಿ. ಮೈದಾ ಹಿಟ್ಟು ಹಾಗೂ ಸುಣ್ಣದ ಉತ್ತೆ ಮಾಡಿ ಬುಡದಿಂದ ಆರು ಅಡಿಯವರೆಗೆ ಲೇಪಿಸುತ್ತಾರೆ. ಈ ಕ್ರಮ ಅಣಬಿ ರೋಗವನ್ನು ತಡೆಯಲು ಸಹಕಾರಿ ಎನ್ನುತ್ತಾರೆ.

ಅಡಿಕೆ ಕೊಳೆ ನಿಯಂತ್ರಣಕ್ಕೆ ಹಾಳೆಕೊಟ್ಟೆ

ಮಲೆನಾಡು ಹಾಗೂ ಕರಾವಳಿಯಲ್ಲಿ ಮಳೆ ಪ್ರಾರಂಭವಾದರೆ ಆತಂಕ ಪ್ರಾರಂಭವಾಗುತ್ತದೆ. ಅಡಿಕೆ ಮರಗಳಲ್ಲಿನ ಕೊಳೆರೋಗ ನಿಯಂತ್ರಣಕ್ಕೆ ಬೋರ್ಡೋ ದ್ರಾವಣ ಸಿಂಪಡಿಸುವುದು, ಪ್ಲಾಸ್ಟಿಕ್ ಕೊಟ್ಟೆ ಕಟ್ಟುವುದು ಇವರ ಆತಂಕದ ಕೆಲಸವಾಗಿರುತ್ತದೆ. ಆದರೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕು ಹೆಗ್ಗಾರುಹಳ್ಳಿಯ ಶ್ರೀ ಲಕ್ಷ್ಮೀ ನಾರಾಯಣ ಭಟ್ಟರು ಬೋರ್ಡೋ ದ್ರಾವಣ ಅಥವಾ ಪ್ಲಾಸ್ಟಿಕ್ ಕೊಟ್ಟೆ ಇದುವರೆಗೂ ಉಪಯೋಗಿಸಿಲ್ಲ. ಇವರ ಕುಟುಂಬದವರು ಹಿಂದಿನಿಂದಲೂ ಅಡಿಕೆ ಹಾಳೆ ಕೊಟ್ಟೆ ಮಾಡಿ ಕಟ್ಟುತ್ತಿದ್ದರು. ಈ ಸಾಂಪ್ರದಾಯಿಕ ಪದ್ಧತಿಯನ್ನು ಭಟ್ಟರು ಮುಂದುವರಿಸಿಕೊಂಡು

ಬಂದಿದ್ದಾರೆ. ಇವರು ಸುಮಾರು ನಲವತ್ತಕ್ಕೂ ಹೆಚ್ಚು ವರ್ಷಗಳಿಂದ ಅಡಿಕೆಯ ಕೊಳೆರೋಗ ನಿಯಂತ್ರಣಕ್ಕೆ ಅಡಿಕೆ ಹಾಳೆಕೊಟ್ಟೆ ಕಟ್ಟಿಕೊಂಡು ಬಂದಿದ್ದಾರೆ.

ಭಟ್ಟರು ಅಡಿಕೆ ಗೊನೆಗಳಿಗೆ ಹಾಳೆಕೊಟ್ಟೆಯನ್ನು ಜೂನ್ ತಿಂಗಳಿನಿಂದ ಆಗಸ್ಟ್ ತಿಂಗಳವರೆಗೂ ಕಟ್ಟುತ್ತಾರೆ. ಜನವರಿ ತಿಂಗಳಿಂದ ಅಡಿಕೆ ಸೋಗೆಗಳು ಹಣ್ಣಾಗಿ ಉದುರಲು ಪ್ರಾರಂಭಿಸುತ್ತವೆ. ಭಟ್ಟರು ಹಾಳೆ ಕೊಟ್ಟೆ ತಯಾರಿಸಲು ಜನವರಿಯಿಂದ ಮೇ ತಿಂಗಳವರೆಗೆ ಸೋಗೆಗಳನ್ನು ಆಯ್ದುಕೊಳ್ಳುತ್ತಾರೆ. ಇವುಗಳನ್ನು ಮೊದಲು ಬಿಸಿಲು ಮಳೆ ಬೀಳದ ಜಾಗದಲ್ಲಿ ಸಂಗ್ರಹಿಸುತ್ತಾರೆ. ಮುಂಗಾರು ಆರಂಭದ ಪೂರ್ವದಲ್ಲಿ ಈ ಸೋಗೆಯಿಂದ ಹಾಳೆಗಳನ್ನು ಕಡಿದುಕೊಳ್ಳುತ್ತಾರೆ. ೨೦ ಹಾಳೆಗಳನ್ನು ಒಂದು ಕವಳಿಗೆಯಂತೆ ಜೋಡಿಸಿಕೊಂಡು, ಇಂತಹ ಏಳೆಂಟು ಕವಳಿಗೆಯನ್ನು ಒಂದು ಹೊರೆಯಾಗಿ ಮಾಡಿಕೊಳ್ಳುತ್ತಾರೆ. ಆರು ಅಡಿ ಉದ್ದ ಎರಡು ಇಂಚು ಅಗಲದ ಕಾಡು ಬಾಳೆ ಮರಗಳನ್ನು ಕಡಿದು ಬಳ್ಳಿಗಳನ್ನು ಮಾಡಿಕೊಟ್ಟು ಕೊಳ್ಳುವರು. ಹಾಗೆಯೆ ಹಾಳೆ ಕೊಟ್ಟೆ ತಯಾರಿಗೆ ಬಿದಿರು ಕಡ್ಡಿಗಳನ್ನು ಸಂಗ್ರಹಿಸಿಟ್ಟು ಕೊಂಡಿದ್ದಾರೆ. ಭಟ್ಟರು ಹೊರೆ ಕಟ್ಟಿಕೊಂಡಿದ್ದ ಹಾಳೆಯನ್ನು ನೀರಿನಲ್ಲಿ ನೆನೆಯಿಸಿ ಮೃದು ಮಾಡಿಕೊಳ್ಳುತ್ತಾರೆ. ನಂತರ ಬಿದಿರು ಕಡ್ಡಿಯ ಸಹಾಯದಿಂದ ಒಂದು ಉದ್ದ ಹಾಳೆ ಹಾಗೂ ಒಂದು ಗಿಡ್ಡಹಾಳೆಯನ್ನು ಜೋಡಿಸುತ್ತಾರೆ. ಇದನ್ನು ಕಾಲಿನಿಂದ ಮೆಟ್ಟಿಕೊಂಡು ಬಾಗಿಸಿ ಚಂದ್ರಾಕಾರ ಬರುವಂತೆ ಮಾಡುವರು. ಇದನ್ನು ಮಧ್ಯದಲ್ಲಿ ಕೊಯ್ಯುವರು; ಇದಕ್ಕೆ 'ಕಣ್ಣು' ಎನ್ನುವರು. ಹೀಗೆ ಕೊಯ್ದು ಹಾಳೆಗೆ ಆಚೆಈಚೆ ಬಿದಿರು ಕಡ್ಡಿಯನ್ನು ಪೋಣಿಸಿ ಕೊಟ್ಟೆ ತಯಾರಿಸಿಕೊಳ್ಳುವರು.

ಕೊಳೆ ನಿಯಂತ್ರಣಕ್ಕೆ ಬೋರ್ಡೋ ದ್ರಾವಣ ಸಾಮಾನ್ಯವಾಗಿ ಸಿಂಪಡಿಸಲಾಗುತ್ತದೆ. ಈ ದ್ರಾವಣ ೪೫ ದಿನಗಳವರೆಗೆ ಮಾತ್ರ ಪರಿಣಾಮಕಾರಿ. ಮತ್ತೆ ಮತ್ತೆ ದ್ರಾವಣ ಸಿಂಪಡಿಸುತ್ತಿರಬೇಕು. ಹಾಗಾಗಿ ಖರ್ಚು, ಆರೋಗ್ಯ, ಪರಿಸರ ಈ ಎಲ್ಲಾ ದೃಷ್ಟಿಯಿಂದಲೂ ಹಾಳೆ ಕೊಟ್ಟೆ ಕಟ್ಟುವುದು ಉತ್ತಮವೆನ್ನುತ್ತಾರೆ ಭಟ್ಟರು.

ಅಡಿಕೆ ಕೊಳೆ ರೋಗಕ್ಕೆ ಗೇರು ಸಿಪ್ಪೆಯ ಕಷಾಯ

ಅಡಿಕೆ ಕೃಷಿಕರಿಗೆ ಮಾರಕವಾದ ಕೊಳೆರೋಗ ಸಮಸ್ಯೆಗೆ ಎದೆಗುಂದದೆ ಪರಿಹಾರಕ್ಕಾಗಿ ಪ್ರಯತ್ನಿಸಿ ಗೆದ್ದವರೂ ಕೃಷಿಕ ಹಾಗೂ ಆಯುರ್ವೇದ ವೈದ್ಯ ಬಲ್ಲ ದಕ್ಷಿಣ ಕನ್ನಡದ ಬದನಾಜೆ ಶಂಕರ ಭಟ್ಟರು. ಇವರು ಗೇರು ಬೀಜದ ಎಣ್ಣೆಯನ್ನು ಆಯುರ್ವೇದ ಔಷಧಿಗಳಲ್ಲಿ ಬಳಕೆ ಮಾಡಲಾಗುತ್ತಿರುವ ಕ್ರಮವನ್ನೇ ಅನುಸರಿಸಿಕೊಂಡು ಈ ಕೊಳೆರೋಗ ನಿಯಂತ್ರಣಕ್ಕೆ 'ಫಲಿನಿ' ಎಂಬ ಕೀಟನಾಶಕವೊಂದನ್ನು ಆವಿಷ್ಕರಿಸಿದ್ದಾರೆ.

ಈ ಫಲಿನಿ ಕೊಳೆರೋಗ ಮತ್ತು ಫಸಲು ಉದುರುವಿಕೆ ತಡೆಯಲು ಸಹಕಾರಿಯಾಗಿದೆ ಎನ್ನುತ್ತಾರೆ. ಇದನ್ನು ಭಟ್ಟರು ಏಳೆಂಟು ವರ್ಷಗಳಿದ ಪ್ರಯೋಗ ನಡೆಸಿಕೊಂಡು ಬಂದಿದ್ದಾರೆ. ಇದರಿಂದ ಉತ್ತಮ ಫಲಿತಾಂಶ ದೊರೆತಿರುವುದಾಗಿ ತಿಳಿಸಿದ್ದಾರೆ. ಗೇರು ಸಿಪ್ಪೆಯ ಎಣ್ಣೆ, ಅರಿಶಿಣ, ನೊರೆಕಾಯಿ ಮತ್ತಿತರ ಗಿಡಮೂಲಿಕೆಗಳ ಮಿಶ್ರಣವನ್ನು ಕುದಿಸಿ

ಕಷಾಯ ತಯಾರಿಸಲಾಗುತ್ತದೆ. ಇವರು ಅಡಿಕೆಯ ಕೊಳೆರೋಗ ತಡೆಯಲು ಮಳೆಗಾಲದಲ್ಲಿ ಸಿಂಪಡಿಸಿದರೇ ಫಸಲು ಉದುರುವಿಕೆ ತಡೆಯಲು ಸಿಂಗಾರಕ್ಕೆ ಸಿಂಪಡಿಸುತ್ತಾ ಬಂದಿರುವರು.

ಅಡಿಕೆ ಕೊಳೆ ರೋಗಕ್ಕೆ ಮತ್ತೊಂದು ನಿಯಂತ್ರಣ ಕ್ರಮ

ಉತ್ತರ-ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಇಡಗುಂಜಿಯ ಕೆ.ಜಿ. ಬೋಡೆಯವರು ಅಡಿಕೆ ಕೊಳೆರೋಗ ನಿವಾರಣೆಗೆ ತಮ್ಮದೇ ಆದ ಪರಿಹಾರ ಕಂಡುಕೊಂಡಿದ್ದಾರೆ. ಒಂದು ಲೀಟರ್ ನೀರಿನಲ್ಲಿ ೧೦ ಗ್ರಾಂ.ನಂತೆ ಕೆಸುವಿನ (Colocasia antiqorum) ಎಲೆ ಅಥವಾ ಗಡ್ಡೆಯನ್ನು ಕುದಿಸಿ, ಸೋಸಿ, ಕೊಳೆರೋಗ ಬಾಧಿತ ಅಡಿಕೆ ಮರಗಳಿಗೆ ಸಿಂಪಡಿಸಿದರೆ, ಕೊಳೆರೋಗ ನಿಯಂತ್ರಣವಾಗುತ್ತದೆ ಎನ್ನುತ್ತಾರೆ ಬೋಡೆಯವರು.

■■

ಅಧ್ಯಾಯ : ಎಂಟು

ಹತ್ತಿಯ ಹತೋಟಿ ಕ್ರಮಗಳು

ಹತ್ತಿ ಬೆಳೆಯಲ್ಲಿನ ಎಫಿಡ್ಸ್ (ನುಸಿ) ನಿಯಂತ್ರಣಕೆ

ಗುಜರಾತಿನ ಭಾವನಗರ್ ಜಿಲ್ಲೆಯವರಾದ ಕಲ್ಯಾಣಭಾಯಿ ಜೀವರಾಜ್ ಭಾಯಿಯವರು ಉತ್ಸಾಹಭರಿತ ಪ್ರಯೋಗಶೀಲರು. ಹೆಚ್ಚು ಖರ್ಚು ಬರದೇ ಇರುವ ಹಾಗೆ ವ್ಯವಸಾಯವನ್ನು ಮಾಡುತ್ತಾರೆ. ಇವರು ಹತ್ತಿ ಬೆಳೆಯಲ್ಲಿ ಕಂಡುಬರುವಂತಹ ಎಫಿಡ್ಸ್‌ಗಳ (ನುಸಿಗಳ) ನಿಯಂತ್ರಣಕ್ಕೆ ಪಾಪಸುಕಳ್ಳಿ(Euphorbia)ಯಲ್ಲಿ ಬರುವಂತಹ ಹಾಲನ್ನು ೧೦೦ ಗ್ರಾಂನಷ್ಟು ತೆಗೆದುಕೊಂಡು ಅದಕ್ಕೆ ೧೫ ಲೀಟರ್ ನೀರನ್ನು ಮಿಶ್ರಣ ಮಾಡಿ ತಿಂಗಳಿಗೆ ಎರಡು ಬಾರಿಯಂತೆ ಸಿಂಪಡಿಸುತ್ತಾರೆ.

ಹತ್ತಿ ಬೆಳೆಯ ಉಪದ್ರವಿಗಳ ಹತೋಟಿ

ಆಂಧ್ರಪ್ರದೇಶದ ವಾರಂಗಲ್ ಜಿಲ್ಲೆಯ ಗೌತಮ್ ರಾಜಮಲ್ಲುರವರು ಬೇವಿನ ಕಷಾಯ ಮತ್ತು ಕಾಸರ್ಕದ (Strychnos nux-vomical .L.) ಕಷಾಯವನ್ನು ಹತ್ತಿಬೆಳೆಯ ಉಪದ್ರವಿಗಳ ಹತೋಟಿಗೆ ಉಪಯೋಗಿಸುತ್ತಾರೆ. ಹತ್ತಿ ಹೂ ಬಿಡುವ ಸಮಯದಲ್ಲಿ ಗೌತಮ್‌ರವರು ಬೇವಿನ ಕಷಾಯವನ್ನು ೨೦ ದಿನಗಳಲ್ಲಿ ೩ ಬಾರಿ ಸಿಂಪಡಿಸುತ್ತಾರೆ. ನಂತರದ ೨೦ ದಿನಗಳಲ್ಲಿ ಕಾಸರ್ಕದ ಕಷಾಯವನ್ನು ಒಂದು ಅಥವಾ ಎರಡು ಬಾರಿ ಸಿಂಪಡಿಸುತ್ತಾರೆ.

ಹತ್ತಿಯಲ್ಲಿ ಕೀಟಾಣುಗಳ ನಿಯಂತ್ರಣ

ಗುಜರಾತಿನ ಭಾವನಗರದ ನರನ್‌ಭಾಯಿ ಶಾಮ್‌ಜಿಭಾಯಿ ಸಾಲಂಕಿಯವರು ಕೃಷಿಕರಾಗಿದ್ದು, ತಮ್ಮ ೪ ಎಕರೆಯ ಭೂಮಿಯಲ್ಲಿ ಹತ್ತಿ, ಶೇಂಗಾ, ಮೆಣಸಿನಕಾಯಿ, ಜೋಳ, ನವಣೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ನರನ್‌ಭಾಯಿಯವರು ತಾವು ಬೆಳೆದಿರುವ ಹತ್ತಿ ಬೆಳೆಯ ಕೀಟ ಬಾಧೆಗೆ ಗಿಡ-ಮೂಲಿಕೆಗಳ ಕಷಾಯ ಒಂದನ್ನು ತಯಾರಿಸಿರುತ್ತಾರೆ.

ಈ ಕಷಾಯವನ್ನು ತಯಾರಿಸಲು ಅವರು ಮೊದಲು ಲೋಳೆಸರ, ಸೀತಾಫಲದ ಎಲೆ, ಬೇವಿನ ಒಳಗಿನ ತೊಗಟೆ, ಹಸಿಮೆಣಸಿನಕಾಯಿ ಮತ್ತು ನುಗ್ಗೆ ಬೇರು ಇವುಗಳನ್ನು ನೀರಿನಲ್ಲಿ

ಕುದಿಸುತ್ತಾರೆ. ತಣ್ಣಗಾದ ಮೇಲೆ ಇದನ್ನು ಸೋಸಿ ನೀರಿನೊಂದಿಗೆ ಮಿಶ್ರ ಮಾಡಿ ಬೆಳೆಗೆ ಸಿಂಪಡಿಸುವರು. ಇದರ ಉಪಯೋಗದಿಂದ ಒಳ್ಳೆಯ ಗುಣಮಟ್ಟದ ಹತ್ತಿಯನ್ನು ಪಡೆಯುವುದರ ಜೊತೆಗೆ ಕೀಟಾಣುಗಳ ನಿಯಂತ್ರಣವನ್ನು ಮಾಡಬಹುದು ಎನ್ನಲಾಗಿದೆ. ಈ ಕಷಾಯವನ್ನು ತಿಂಗಳಿಗೆ ೨-೩ ಸಲ ಉಪಯೋಗಿಸಬೇಕಾಗುತ್ತದೆ.

ಹತ್ತಿ ಬೆಳೆಯಲ್ಲಿ ಹೇನಿನ ನಿಯಂತ್ರಣ


ತಖಟ್‌ಸಿಂಗ್ ಪಟೇಲ್ ಎಂಬ ಗುಜರಾತಿನ ರೈತ ಹತ್ತಿ ಬೆಳೆಯಲ್ಲಿನ ಹೇನಿನ ನಿಯಂತ್ರಣಕ್ಕೆ ಈ ಕೆಳಗಿನ ಸಾವಯವ ಕೀಟನಾಶಕವನ್ನು ಕಂಡುಕೊಂಡಿದ್ದಾರೆ.

ಹೊಂಗೆ (Pongamia pinnata) ಮತ್ತು ತಗ್ಗಿ ಗಿಡ (Clerodendrum phlomides) ಇವುಗಳ ಎಲೆಗಳನ್ನು ಕತ್ತರಿಸಿ, ನೀರಿನಲ್ಲಿ ಚೆನ್ನಾಗಿ ಕುದಿಸಿ ಆರಿಸಿ ನಂತರ ಕೀಟಬಾಧಿತ ಹತ್ತಿ ಬೆಳೆಗೆ ಸಿಂಪಡಿಸಿ ನಿಯಂತ್ರಿಸಬಹುದೆಂದು ಸಿಂಗ್ ಹೇಳುತ್ತಾರೆ. ಹೊಂಗೆ ಮತ್ತು ತಗ್ಗಿಗಿಡಗಳಿಗೆ ಎಂದಿಗೂ ಕೀಟಗಳು ಬೀಳದೆ ಇರುವುದನ್ನು ಗಮನಿಸುತ್ತಿದ್ದ ತಖಟ್‌ಸಿಂಗ್‌ರವರಿಗೆ ಈ ಆಲೋಚನೆ ಹೊಳೆಯಿತಂತೆ.

ಈ ವಿಧಾನವನ್ನೂ ಹೈದ್ರಾಬಾದಿನ ಸದ್ಭಾವ SRISTI ಸಂಶೋಧನಾ ಪ್ರಯೋಗಾಲಯವು ಕೋಡಿಯಾಲ ಗ್ರಾಮದಲ್ಲಿ ಪರೀಕ್ಷಿಸಿದಾಗ ಶೇ. ೫೦ರಷ್ಟು ನಿಯಂತ್ರಣ ಸಾಧ್ಯವಾಗಿರುವುದಾಗಿ ವರದಿಯಾಗಿದೆ.

ಹತ್ತಿಯಲ್ಲಿ ಬಿಳಿನೊಣದ ನಿಯಂತ್ರಣ

ಬಿಳಿ ನೊಣ (Bemisia tabaci) ಹತ್ತಿ ಗಿಡದ ಎಲೆಯ ಅಡಿಯಲ್ಲಿ ಸೇರಿ, ರಸ ಹೀರಿ ಗಿಡವನ್ನು ನಿಧಾನವಾಗಿ ಶಕ್ತಿಹೀನವನ್ನಾಗಿ ಮಾಡುತ್ತದೆ. ಪಾಂಡಿಚೇರಿಯ ರೈತರಾದ ಶ್ರೀ ಬಾಲಸುಬ್ರಮಣಿಯಂರವರು ಇದರ ಪರಿಹಾರಕ್ಕೆ ಕಾಗದಕ್ಕೆ ಹರಳೆಣ್ಣೆಯನ್ನು ಹಚ್ಚಿ ೫-೬ ಅಡಿ ಅಂತರದಲ್ಲಿ ಗಿಡಗಳ ಮಧ್ಯೆ ಇವನ್ನು ಕಡ್ಡಿಗಳಿಗೆ ಕಟ್ಟಿ ಅನಂತರ ಸ್ಪ್ರೇಯರ್‌ನಿಂದ ಜೋರಾಗಿ ಗಿಡಗಳ ಮೇಲೆ ಗಾಳಿ ಹಾಯಿಸುತ್ತಾರೆ. ಬಿಳಿ ನೊಣ ಗಾಳಿಯ ರಭಸಕ್ಕೆ ಗಿಡದಿಂದ ಮೇಲೆದ್ದು ಹಾರುತ್ತಾ ಹೋಗಿ ಹರಳೆಣ್ಣೆಯ ಹಾಳೆಗಳಿಗೆ ಅಂಟಿಕೊಳ್ಳುತ್ತದೆ. ಶೇಕಡಾ ೮೦ರಷ್ಟು ಕೀಟ ನಿಯಂತ್ರಣ ಈ ಪದ್ಧತಿಯಿಂದ ಸಾಧ್ಯ ಎನ್ನುತ್ತಾರೆ ಪಾಂಡಿಚೇರಿಯ ರೈತರು.



ಹತ್ತಿಯಲ್ಲಿ ಕೀಟ ಹತೋಟಿ

ಹಿಪ್ಪೆ (Madhuca indica) ಮತ್ತು ಹುಣಿಸೆ (Tamarindus indica) ಮರದ ಸಿಪ್ಪೆಗಳಿಂದ ಮಾಡಿದ ದ್ರಾವಣವನ್ನು ಹತ್ತಿ ಗಿಡಗಳ ಮೇಲೆ ಸಿಂಪಡಿಸುವುದರಿಂದ ಹತ್ತಿಗೆ ಬೀಳುವ ಹುಳುಗಳನ್ನು ನಿಯಂತ್ರಿಸಬಹುದು. ಹುಳುಗಳು ಹತೋಟಿಗೆ ಬರದೇ ಇದ್ದಲ್ಲಿ, ಒಂದು ವಾರದ ನಂತರ ಮತ್ತೊಮ್ಮೆ ಸಿಂಪಡಿಸಬಹುದು. ಆದರೆ, ಸಿಂಪಡಣೆ ಅತಿಯಾದಲ್ಲಿ ಬೇರುಗಳು ಸುಟ್ಟು ಹೋಗುವ ಸಾಧ್ಯತೆಯೂ ಇರುತ್ತದೆ.

ಹತ್ತಿಗೆ ಬೀಳುವಂತಹ ಕೀಟಗಳನ್ನು ನಿಯಂತ್ರಿಸಲು

ಸುಮಾರು ೭೨ ಗಂಟೆಯಷ್ಟು ಹಳೆಯದಾದ ಹಸುವಿನ ಗಂಜಲದಲ್ಲಿ ಬೆಳ್ಳುಳ್ಳಿ, ಹಸಿಮೆಣಸಿನಕಾಯಿ, ಶುಂಠಿ, ಬೇವಿನ ಎಣ್ಣೆ, ತಂಬಾಕು ಇವುಗಳನ್ನು ಹಾಕಬೇಕು. ಇದನ್ನು ಸಿಂಪಡಿಸುವುದಕ್ಕಿಂತ ಮುಂಚೆ ಸಾಬೂನಿನ ದ್ರಾವಣವನ್ನು ಬೆರೆಸಬೇಕು. ೩೦ ರಿಂದ ೪೦ ಮಿಲಿ ಲೀಟರ್‌ನ ಈ ಸಾರಕ್ಕೆ ೧೫ ಲೀಟರ್ ನೀರನ್ನು ಬೆರೆಸಿ ಸಿಂಪಡಿಸಬಹುದು. ತೊಗರಿ ಬೆಳೆಗೆ ೭೦ ಮಿಲಿ ಲೀಟರ್‌ನ ಈ ಮಿಶ್ರಣಕ್ಕೆ ೧೫ ಲೀಟರ್‌ನಷ್ಟು ಸೇರಿಸಿ ಸಿಂಪಡಿಸಬೇಕು.

ಹತ್ತಿಗೆ ಹೊಗೆಸೊಪ್ಪಿನ ಉಪಚಾರ !

ಹತ್ತಿಗಿಡದಲ್ಲಿ ಹೂ ಉದುರುವುದು, ಇಳುವರಿ ಕಡಿಮೆ ಆಗುವುದನ್ನು ತಪ್ಪಿಸಲು ಹೊಗೆಸೊಪ್ಪಿನಿಂದ ಸಾಧ್ಯ ಎನ್ನುತ್ತಾರೆ ತಮಿಳುನಾಡಿನ ಎ.ಆರ್. ರಾಮರಾಜ್.

ಒಂದು ಕೆ.ಜಿ. ಹೊಗೆಸೊಪ್ಪನ್ನು ಪುಡಿ ಮಾಡಿ, ಮೂರು ಲೀಟರ್ ನೀರಿನಲ್ಲಿ ಕದಡಿ ಮೂರು ದಿನಗಳ ಕಾಲ ಮಡಿಕೆಯಲ್ಲಿ ಕೊಳೆಯಲು ಬಿಡುತ್ತಾರಂತೆ. ಅನಂತರ ಅದನ್ನು ಬಸಿದು ೫೦೦ ಮಿ.ಲಿ. ಬೇವಿನೆಣ್ಣೆ ಹಾಗೂ ಅದು ಸರಿಯಾಗಿ ಮಿಶ್ರವಾಗಲು ಸ್ವಲ್ಪ ಸೋಪು ಎಲ್ಲವನ್ನೂ ಒಟ್ಟು ಸೇರಿಸಿ, ನೀರು ಬೆರೆಸಿ ತೆಳು ಮಾಡಿದ ದ್ರಾವಣವನ್ನು ಹತ್ತಿಗಿಡದ ಮೇಲೆ ಸಿಂಪಡಿಸುತ್ತಾರಂತೆ. ಒಂದೇ ಆಕಾರದಲ್ಲಿ ಹೂ ಉದುರುವುದು ಕಡಿಮೆಯಾಗುವುದರ ಜೊತೆಗೆ ಕಾಯಿಕೊರಕ (Boll Worm) ಕಾಟವೂ ಕಡಿಮೆಯಾಗಿ ಒಟ್ಟಾರೆ ಹತ್ತಿ ಇಳುವರಿ ಹೆಚ್ಚುವುದು ನಿಶ್ಚಿತವಂತೆ.

ಹತ್ತಿಯ ಜೊತೆಗೆ ಬೆಂಡೆಕಾಯಿ!

ಹತ್ತಿಯಲ್ಲಿ ಹುಳದ ಕಾಟ ತಪ್ಪಿಸಲು ಏನೆಲ್ಲಾ ಪ್ರಯತ್ನಗಳು. ಔಷಧಿ ಹತೋಟಿಗೆ ಒಳಪಡದ ಹುಳುವನ್ನು ತಡೆಗಟ್ಟಲು ಔಷಧಿಯನ್ನೇ ಉತ್ಪಾದಿಸುವ ಹತ್ತಿಗಿಡಗಳ ಸೃಷ್ಟಿ (ಬಿಟಿ ಹತ್ತಿ) ಕೂಡ ನಡೆದಿದೆ.

ಇಂತಹ ಹುಳದ ಹತೋಟಿಗೆ ಬಹು ಹಿಂದೆ ೧೯೧೧ರಲ್ಲಿಯೇ ಮರಾಠಿ ಭಾಷೆಯಲ್ಲಿ ಬರೆದ ಪುಸ್ತಕವೊಂದರಲ್ಲಿ ರಾಸಾಯನಿಕ ರಹಿತ ಹತೋಟಿ ಕ್ರಮದ ಉಲ್ಲೇಖವಿದೆ. ಹತ್ತಿಗಿಡದ ಜೊತೆಗೆ ಬೆಂಡೆ ಬೆಳೆದರೆ, ಹುಳುಗಳು ಹತ್ತಿಯ ಬದಲಿಗೆ ಬೆಂಡೆಕಾಯಿ ಒಳಗೆ

ನುಗ್ಗುವುದಂತೆ. ಹತ್ತಿಯಲ್ಲಿ ಕಾಯಿ ಹಿಡಿಯುವ ಸಮಯದಲ್ಲಿ ಈ ಬೆಂಡೆ ಗಿಡ ಕಿತ್ತು ಹುಳುಗಳನ್ನು ನಾಶ ಮಾಡುವುದರಿಂದ ಹುಳದ ಹತೋಟಿ ಸಾಧ್ಯ ಎನುತ್ತಾರೆ ಅದರ ಲೇಖಕರು.

ಹತ್ತಿಯ ತಳಿಯ ಬೀಜ ಶೇಖರಿಸುವುದು

ಹತ್ತಿಯಲ್ಲಿ ಪೈರಿನಲ್ಲಿಯೂ ಎಲ್ಲ ಕಾಯಿಗಳು ಒಮ್ಮೆಲೇ ಬಲಿತು ಮಾಗಿ ಅರಳು ವುದಿಲ್ಲ. ಕಾರಣ ರೋಗ ಮತ್ತು ಹುಳದ ಬಾಧೆ ಇಲ್ಲದ ಉತ್ತಮವಾಗಿ ಮೊದಲು ಬಲಿತು ಅರಳಿದ ತೊಳೆಗಳನ್ನು ಬಿಡಿಸಿ ಶೇಖರಿಸಿಟ್ಟು, ಬೀಜಗಳನ್ನು ಬೇರ್ಪಡಿಸಿ ಬಿತ್ತಲಿಕ್ಕೆ ಉಪಯೋಗಿಸಬೇಕು. ಈ ಮೇಲಿನ ವಿವಿಧ ಹತ್ತಿ ದೇಶೀಯ ಹತೋಟಿ ಕ್ರಮಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿದ್ದು, ಹಿತ್ತಲಗಿಡ ಪತ್ರಿಕೆಯಲ್ಲಿ ದಾಖಲು ಮಾಡ ಲಾಗಿರುತ್ತದೆ.

■■

ಅಧ್ಯಾಯ : ಒಂಬತ್ತು

ಇತರೆ ಬೆಳೆಗಳ ಹತೋಟಿ ಕ್ರಮಗಳು

ರಸ ಹೀರುವ ಉಪದ್ರವಿಗಳಿಗೆ

ಗುಜರಾತಿನ ಬನಸ್ಕಾಂತ ಜಿಲ್ಲೆಯವರಾದ ಪುರುಷೋತ್ತಮ್ ಭಾಯಿಯವರು ಬೆಳೆಗಳಲ್ಲಿ ಕಾಣಿಸುವಂತಹ ಉಪದ್ರವಿಗಳ ನಾಶಕ್ಕೆ ಬೇವಿನ ಎಲೆಗಳನ್ನು ಮಜ್ಜಿಗೆಯೊಂದಿಗೆ ಬೆರೆಸಿ ಉಪಯೋಗಿಸುತ್ತಾರೆ. ಇದಕ್ಕಾಗಿ ಅವರು ಕಡೆದಿರುವಂತಹ ಮಜ್ಜಿಗೆಯನ್ನು ಸಂಗ್ರಹಿಸಿಕೊಳ್ಳುತ್ತಾರೆ. ನಂತರ ಬೇವಿನ ಎಲೆಗಳಿಂದ ತೆಗೆದಿರುವ ಕಷಾಯವನ್ನು ೨೦೦ ಮಿ.ಲೀ. ತೆಗೆದುಕೊಂಡು ಅದನ್ನು ಕಾಲು ಭಾಗ ಬರುವವರೆಗೂ ಕುದಿಸುತ್ತಾರೆ. ಇದನ್ನು ೧೫೦೦ ಮಿ.ಮೀ. ಮಜ್ಜಿಗೆಯಲ್ಲಿ ಮಿಶ್ರಣಮಾಡಿ ಬೆಳೆಗಳಿಗೆ ಸಿಂಪಡಿಸುತ್ತಾರೆ.

ಆರೋಗ್ಯವಾಗಿರುವ ೧.೫ ರ ಪ್ರಮಾಣದಲ್ಲಿ ಮಿಶ್ರಣ ಮಾಡಿರುವಂತಹ ನೀರು ಮತ್ತು ಮಜ್ಜಿಗೆಯು ಬೆಳೆಗಳಲ್ಲಿ ಕಾಣಿಸಿಕೊಳ್ಳುವ ರಸ ಹೀರುವ ಉಪದ್ರವಿಗಳ ನಿಯಂತ್ರಣಕ್ಕೆ ಸಹಾಯ ಮಾಡುತ್ತದೆ ಎಂಬುದಾಗಿ ಈಗಾಗಲೇ ದಾಖಲಾಗಿರುತ್ತದೆ. ವಿವರಕ್ಕೆ Honey Bee, 14(1) March, 2003ರಲ್ಲಿಯೂ ನೋಡಬಹುದು.

ಬೇವಿನ ಕಷಾಯ

ಬೇವಿನ ಹಣ್ಣುಗಳನ್ನು ಪುಡಿ ಮಾಡಿ ನೀರಿನಲ್ಲಿ ಒಂದು ರಾತ್ರಿ ನೆನೆಸಬೇಕು. ಮರುದಿನ ಬೆಳಗ್ಗೆ ಕಷಾಯವನ್ನು ಸೋಸಿಕೊಳ್ಳಬೇಕು. ಮೂರು ಲೀಟರ್ ಕಷಾಯಕ್ಕೆ ಅರ್ಧ ಕೆ.ಜಿ. ಸೋಪಿನ ಪುಡಿಯನ್ನು ಮಿಶ್ರಣ ಮಾಡಿಕೊಂಡರೆ ಒಂದು ಎಕರೆಯ ಬೆಳೆಗೆ ಸಾಕಾಗುತ್ತದೆಯಂತೆ. ಇದನ್ನು ಯಾವುದೇ ಬೆಳೆಗಳ ಪೂರ್ವಭಾವಿ ರಕ್ಷಣಾ ಕ್ರಮವಾಗಿ ಬೆಳೆಸಬಹುದು.

ಕಾಸರ್ಕದ ಕಷಾಯ

ಕಾಸರ್ಕದಿಂದ ತಯಾರಿಸಿರುವಂತಹ ಕಷಾಯವು ಅತ್ಯಂತ ವಿಷಯುಕ್ತವಾದ ಸಸ್ಯಕ್ಷಾರವೆಂದು ಈಗಾಗಲೇ ತಿಳಿದು ಬಂದಿದೆ. ಇದನ್ನು ಮೊದಲು ಇಲಿಗಳ ನಿಯಂತ್ರಣಕ್ಕೆ

ಉಪಯೋಗಿಸಲಾಗುತ್ತಿತ್ತು. (ವಿವರಕ್ಕೆ http://edis.ifas.ufl.edu/pio84 ನೋಡಿರಿ). ಇದನ್ನು ಹಲವು ಬೆಳೆಗಳಿಗೆ ಬೀಳುವ ಕೀಟಗಳ ಹತೋಟಿಗೆ ಬಳಸಬಹುದು.

ಒಂದು ಎಕರೆಗೆ ಅಗತ್ಯವಾದ ಕಷಾಯವನ್ನು ತಯಾರಿಸಬೇಕಾದ ೫ ಕೆ.ಜಿ.ಯಷ್ಟು ಕಾಸರ್ಕದ ಹಣ್ಣುಗಳನ್ನು ಪುಡಿ ಮಾಡಿ ಐದು ಲೀಟರ್ ನೀರಿನಲ್ಲಿ ಮಿಶ್ರಣ ಮಾಡಬೇಕು. ಅದನ್ನು ಎರಡು ಲೀಟರ್‌ನಷ್ಟು ಆಗುವವರೆಗೆ ಕುದಿಸಬೇಕು. ಇದಕ್ಕೆ ಅರ್ಧ ಕೆ.ಜಿ. ಸೋಪಿನ ಪುಡಿಯನ್ನು ಸೇರಿಸಿ ಸಿಂಪಡಿಸಬೇಕು. ಕಾಸರ್ಕದ ಹಣ್ಣುಗಳು ತುಂಬ ಘಾಟು ಇರುವುದರಿಂದ ಜಾಗ್ರತೆಯಿಂದ ಸಿಂಪಡಿಸಬೇಕು ಎಂದು ಹೇಳಿದ್ದಾರೆ.

ವಿದ್ಯಾರ್ಥಿಗಳ ಅನುಶೋಧನೆಗಳು

ಮದ್ದೂರಿನ ಶಿವಾರಗುಡ್ಡಹಳ್ಳಿಯ ಜವಾಹರ್ ನವೋದಯ ವಿದ್ಯಾಲಯದ ವಿದ್ಯಾರ್ಥಿಗಳು ಪಾರ್ಥೇನಿಯಂನ್ನು ಕೀಟನಾಶಕವಾಗಿ ಬಳಸಿ ಕೆಲವು ಅನುಶೋಧನೆಗಳನ್ನು ಮಾಡಿರುವರು.

ಪಾರ್ಥೇನಿಯಂ ಗಿಡದ ತಾಜಾ ಎಲೆಗಳನ್ನು ಸಂಗ್ರಹಿಸಿ, ಕತ್ತರಿಸಿ, ಅರೆದು, ರಸ ಹಿಂಡಿ, ಅದನ್ನು ಸೋಸಿಕೊಂಡು ಬಂದಂತಹ ದ್ರಾವಣವನ್ನು ಹೇನುಗಳಿರುವ ಗಿಡಗಳ ಮೇಲೆ ಸಿಂಪಡಿಸಲಾಯಿತು. ತುಲನಾತ್ಮಕವಾಗಿ ಬೇವಿನ ಕಷಾಯ ಹಾಗೂ ರಾಸಾಯನಿಕ ಕೀಟನಾಶಕವಾದ ಡೈ ಮಿತೊಯೇಟ್ ಸಹ ಸಿಂಪಡಿಸಲಾಯಿತು. ಪಾರ್ಥೇನಿಯಂ ದ್ರಾವಣ ರಾಸಾಯನಿಕ ಕೀಟನಾಶಕದಷ್ಟೇ ಪ್ರಭಾವಶಾಲಿಯಾಗಿತ್ತು. ಬೇವಿನ ದ್ರಾವಣಕ್ಕಿಂತ ಉತ್ತಮ ಪರಿಣಾಮ ಪಾರ್ಥೇನಿಯಂ ದ್ರಾವಣ ನೀಡಿದ್ದು ಸ್ಪಷ್ಟವಾಗಿ ಕಂಡುಬಂದಿದೆ. ಮಂಡ್ಯ, ಮದ್ದೂರಿನ ಹಲವಾರು ರೈತರು ಈ ದ್ರಾವಣವನ್ನು ಉಪಯೋಗಿಸುತ್ತಿದ್ದಾರೆ. ಶಾಲೆಯ ಕೈತೋಟದಲ್ಲಿ ಇದರ ಉಪಯೋಗವಾಗಿದೆ. ಕಳೆಯ ಉಪಟಳ ತಾನಾಗಿ ಕಮ್ಮಿಯಾಗಿದೆ ಎಂದು ಇವರಿಗೆ ಮಾರ್ಗದರ್ಶಕರಾಗಿದ್ದ ಶಿಕ್ಷಕಿ ರೇಮನಿ ಮತ್ತು ವಿದ್ಯಾರ್ಥಿನಿ ಅನಿತ ಅವರು ವಿವರಿಸಿದ್ದಾರೆ.

ಕೀಟಾಣುಗಳ ಹತೋಟಿಗೆ ಆಕಳಿನ ಗಂಜಲ


ಸಸ್ಯ ಕೀಟಾಣುಗಳು ಗಿಡಗಳಲ್ಲಿನ ಸಾರವನ್ನು ಹೀರಿಕೊಳ್ಳುವುದರಿಂದ ಇಳುವರಿಯು ಕಡಿಮೆಯಾಗುತ್ತದೆ. ಇದನ್ನು ನಿಯಂತ್ರಿಸಲು ಗುಜರಾತಿನ ಜುನಾಗಡ್ ಜಿಲ್ಲೆಯ ಪುರುಷೋತ್ತಮ ಭಾಯಿಯವರು ಒಂದು ಕೆ.ಜಿ. ಎಕ್ಕದ ಎಲೆಗಳು (Calotropis procera (Aif) F. Ait), ಒಂದು ಕೆ.ಜಿ. ಬೇವಿನ ಎಲೆ (Azadirachta indica a. Juss), ಒಂದು ಕೆ.ಜಿ. ಸೀತಾಫಲ ಎಲೆ (Annona squamosa L.), ಒಂದು ಕೆ.ಜಿ. ಲೋಳೆಸರ (Aloe vera (L.) Burm..f.,) ಮತ್ತು ಒಂದು ಕೆ.ಜಿ. ದತ್ತೂರ (Datura stamonium .L.) ಇವುಗಳನ್ನು ೨೫ ಲೀಟರ್ ಆಕಳ ಗೋಮೂತ್ರದಲ್ಲಿ ಕೊಳೆಯಲು ಬಿಡುತ್ತಾರೆ. ಸೋಸಿ ಬಂದಿರುವಂತಹ ಕಷಾಯವನ್ನು ೧೫ ಲೀಟರ್ ನೀರಿಗೆ ಒಂದು ಲೀಟರ್‌ನಂತೆ ಸೇರಿಸಿಕೊಂಡು ಕೀಟಗಳ ದಾಳಿಗೆ ಒಳಗಾಗಿರುವ ಗಿಡಗಳಿಗೆ ಸಿಂಪಡಿಸುತ್ತಾರೆ.

ಕೋತಿ-ಅಳಿಲುಗಳಿಂದ ರಕ್ಷಣೆ

ತೋಟದ ಬೆಳೆಗಳಾದ ಮಾವು, ತೆಂಗು, ಅಡಿಕೆ ಹಲವಾರು ಹಣ್ಣಿನ ಗಿಡಗಳಿಗೆ ಮಂಗಗಳ ಉಪಟಳ ತಪ್ಪಿದ್ದಲ್ಲ. ನಾನಾ ರೀತಿಯ ವಿಧಾನಗಳಿಂದ ಮಾಡಿದ ತಂತ್ರಗಾರಿಕೆಗಳಿಂದ ಸೋತು ಹೈರಾಣಾಗಿರುವ ರೈತರ ಬವಣೆ ಹೇಳತೀರದು. ಸಾಮಾನ್ಯವಾಗಿ ತೆಂಗಿನ ಗಿಡಗಳಿಗೆ ಕೋತಿಗಳ ಕಾಟ ಇದ್ದಿದ್ದೇ. ಹಿಂಡು ಹಿಂಡಾಗಿ ತೋಟಗಳಿಗೆ ಆಗಮಿಸುವ ಕೋತಿಗಳು ಕಾಯಿಗಳನ್ನು ಕಿತ್ತು ನೀರು ಕುಡಿದು ಎಸೆಯುವುದಲ್ಲದೇ ಗಿಡಗಳಿಂದ ಗಿಡಗಳಿಗೆ ಹಾರಾಡಿ ಗೊನೆಗಳನ್ನು ಹಾಳು ಮಾಡುತ್ತವೆ. ಇದರೊಂದಿಗೆ ಹೂವು, ಚಿಕ್ಕ ಚಿಕ್ಕ ಕಾಯಿಗಳು ಉದುರಿ ಗೊನೆಗಳಿಗೆ ಹಾನಿ ಉಂಟಾಗುತ್ತದೆ. ಇದಕ್ಕೆ ಪರಿಹಾರವಾಗಿ ಮಲೆನಾಡ ರೈತರು ತಗಡು ಅಥವಾ ಪ್ಲಾಸ್ಟಿಕ್ ಬ್ಯಾರಲ್‌ಗಳ ಮೇಲ್ಭಾಗ ಮತ್ತು ತಳಭಾಗಗಳನ್ನು ತೆಗೆದು ಲಂಬವಾಗಿ ಕತ್ತರಿಸಿ ಅದನ್ನು ಸುಮಾರು ೮-೧೦ ಅಡಿಗಳ ಮೇಲೆ ತೆಂಗಿನ ಕಾಂಡಗಳಿಗೆ ಬಿಗಿಯಾಗಿ ಹೊದೆಸುತ್ತಾರೆ. ಹೊದೆಸುವ ಮುನ್ನ ಅದರ ಮೇಲೆ ಹಳದಿ ಬಣ್ಣವನ್ನು ಬಳಿದು ಆರಿದ ನಂತರ ಅದಕ್ಕೆ ಹರಳೆಣ್ಣೆಯನ್ನು ಸವರುತ್ತಾರೆ. ಕಾರಣ ಅಳಿಲುಗಳು ಅಥವಾ ಮಂಗಗಳು ಮರ ಏರುವಾಗ ಕಾಲು ಜಾರುವ ಸಲುವಾಗಿ ಮತ್ತು ಹಳದಿ ಬಣ್ಣವು ತೆಂಗಿನ ಗಿಡಗಳಿಗೆ ಹಾನಿಯುಂಟು ಮಾಡುವ ಕೀಟಗಳನ್ನು ಆಕರ್ಷಿಸಿ ಲೇಪಿಸಿರುವಂತಹ ಎಣ್ಣೆಗೆ ಅಂಟಿಕೊಳ್ಳುವಂತೆ ಮಾಡುತ್ತದೆ. ಈ ಹೊದಿಕೆಯನ್ನು ತಿಂಗಳಿಗೊಮ್ಮೆ ತೆಗೆದು ಸ್ವಚ್ಛಗೊಳಿಸಿ ಎಣ್ಣೆಯನ್ನು ಸವರಿ ಪುನಃ ಕಾಂಡಗಳಿಗೆ ಹೊದೆಸುತ್ತಾರೆ. ಈ ರೀತಿ ಮಲೆನಾಡಿನ ರೈತರ ಕೋತಿಗಳ ಹಾವಳಿಗೆ ಒಂದು ಪರಿಹಾರವನ್ನು ಕಂಡುಕೊಂಡಿದ್ದಾರೆ.

ಗೆದ್ದಲುಗಳ ನಿಯಂತ್ರಣಕ್ಕೆ ಹೊಂಗೆ

ದಾನಭಾಯಿ ಮೊನಭಾಯಿ ದಾಮೊರ್‌ರವರು ಗುಜರಾತಿನ ದುಂಗಾರ್‌ಪುರ್ ಜಿಲ್ಲೆಯವರು. ಇವರು ಬೆಳೆಗಳಿಗೆ ತಗಲುವ ಗೆದ್ದಲುಗಳ ನಿಯಂತ್ರಣಕ್ಕೆ ಹೊಂಗೆಯ (Pongamia pinnata (L.) Pierre.) ೨೦ ಕೆ.ಜಿ. ಒಣಗಿದ ಎಲೆಗಳನ್ನು, ೨೦ ಕೆ.ಜಿ. ಕುರಿ ಹಿಕ್ಕೆಯೊಂದಿಗೆ ಎರಡಡಿ ಉದ್ದ, ಎರಡಡಿ ಅಗಲದ ಕಂದಕದಲ್ಲಿ ಹಾಕಿ ಮಣ್ಣನ್ನು ಮುಚ್ಚಿ ಮೇಲೆ ನೀರನ್ನು ಹಾಕುತ್ತಿರುತ್ತಾರೆ. ಮೂರು ಅಥವಾ ನಾಲ್ಕು ದಿನಗಳಾದ ನಂತರ ಅದನ್ನು ಚೆನ್ನಾಗಿ ಮಿಶ್ರಣ ಮಾಡಿ, ಪುಡಿ ಮಾಡಿಕೊಳ್ಳುತ್ತಾರೆ. ಬೀಜ ಬಿತ್ತನೆಯ ಸಮಯದಲ್ಲಿ ನಾಲ್ಕು ಕೆ.ಜಿ. ಮಿಶ್ರಣದಲ್ಲಿ ೨೦ ಕೆ.ಜಿ.



ಬಿತ್ತನೆ ಬೀಜಗಳನ್ನು ಬೆರೆಸುತ್ತಾರೆ. ಇದರಿಂದ ಗೆದ್ದಲುಗಳು ನಿಯಂತ್ರಣಗೊಳ್ಳುವುದಲ್ಲದೇ ಮಣ್ಣಿನ ಫಲವತ್ತತೆಯೂ ವೃದ್ಧಿಯಾಗುತ್ತದೆ ಎನ್ನಲಾಗಿದೆ.

ಶಿವಾನಂದ ಮೂಲಿಮನಿಯವರ 'ಬ್ರಹ್ಮಾಸ್ತ್ರ'

ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಶಿಗ್ಲಿ ಗ್ರಾಮದ ಶಿವಾನಂದ ಮೂಲಿಮನಿಯವರು ತಮ್ಮ ಬೆಳೆಗಳಿಗೆ ಬೇಕಾಗುವಂತಹ ಕೀಟನಾಶಕ ಮತ್ತು ಶಿಲೀಂಧ್ರನಾಶಕವನ್ನು ತಾವೇ ಸ್ವತಃ ತಯಾರಿಸಿಕೊಳ್ಳುತ್ತಿದ್ದು, ಇತರರಿಗೂ ಇದರ ಮಾಹಿತಿ ಮತ್ತು ಉಪಯೋಗವನ್ನು ತಿಳಿಸುತ್ತಿದ್ದಾರೆ. ಇವರು ತಯಾರಿಸಿರುವ ಕ್ರಿಮಿನಾಶಕಕ್ಕೆ 'ಬ್ರಹ್ಮಾಸ್ತ್ರ' ಎಂದು ಹೆಸರಿಟ್ಟಿದ್ದಾರೆ. ಇದರ ತಯಾರಿಕೆಗಾಗಿ ಅವರು ಬೇವಿನ ಎಲೆ ಎರಡೂವರೆ ಕಿಲೋ, ಬಿಲ್ವಪತ್ರೆ (Aegle marmelos, Corr.) ಒಂದು ಕಿಲೋ, ಒಂದು ಕಿಲೋ ದತ್ತೂರಿ (Datura fastuosa), ಒಂದು ಕಿಲೋ ಹೊಸಲಕ್ಕಿ (Justicia prostrata), ಒಂದು ಕಿಲೋ ಹುಲಗಲಿ (Pongamia glabra, Vent.), ಒಂದು ಕಿಲೋ ಸೀತಾ ಪೇರಲ (Annona squamosa), ಎರಡೂವರೆ ಕಿಲೋ ಬೆಳ್ಳುಳ್ಳಿ ಒಂದು ಕಿಲೋ ಹಸಿಮೆಣಸಿನಕಾಯಿ ಮತ್ತು ಒಂದು ಕಿಲೋ ಔಡಲ ಎಲೆಗಳನ್ನು (Castor leaves) ಅರೆದು ಪೇಸ್ಟ್ ಮಾಡಿ ೨೫ ಲೀಟರ್ ದೇಶಿ ಹಸುಗಳ ಮೂತ್ರದಲ್ಲಿ ೩೦ ದಿನಗಳವರೆಗೆ ನೆನೆಸುತ್ತಾರೆ. ಈ ನೆನೆಸಿರುವಂತಹ ಮಿಶ್ರಣವನ್ನು ಪ್ರತಿದಿನ ಒಂದು ಸಾರಿ ಪ್ರದಕ್ಷಿಣಾಕಾರದಲ್ಲಿ ಒಂದು ಕೋಲಿನಿಂದ ತಿರುಗಿಸುತ್ತಾರೆ. ೩೦ ದಿನಗಳ ಈ ಮಿಶ್ರಣವು ಬಳಕೆಗೆ ಸಿದ್ಧವಾಗುತ್ತದೆ. ಈ ಮಿಶ್ರಣವನ್ನು ಬೆಳೆ ಹಾಗೂ ಕ್ರಿಮಿಕೀಟಗಳ ಪ್ರಬಲತೆಯ ಪ್ರಮಾಣವನ್ನು ನೋಡಿಕೊಂಡು ಎರಡು ಅಥವಾ ಮೂರು ಬಾರಿ ಕೊಡುತ್ತಾರೆ.

ಇದೇ ರೀತಿ ಶಿಲೀಂಧ್ರ ನಾಶಕವನ್ನು ಕೂಡ ಅವರು ತಯಾರಿಸುತ್ತಾರೆ. ಇದಕ್ಕಾಗಿ ಅವರು ದೇಶಿ ಹಸುವಿನ ಹಾಲು ಒಂದು ಲೀಟರ್ ಮತ್ತು ಆರು ಲೀಟರ್ ಹಾಲಿನಿಂದ ತಯಾರಿಸಿದ ಮಜ್ಜಿಗೆ, ೨೫೦ ಗ್ರಾಂ. ಬೆಳ್ಳುಳ್ಳಿ, ೫೦ ಗ್ರಾಂ. ಶುಂಠಿ ಇವುಗಳನ್ನು ನುಣ್ಣಗೆ ಅರೆದು ಮೂರು ದಿನಗಳವರೆಗೆ ತಾಮ್ರದ ಪಾತ್ರೆಯಲ್ಲಿ ಹಾಕಿಡುತ್ತಾರೆ. ತಾಮ್ರದ ಪಾತ್ರೆಯಲ್ಲಿ ಹಾಕಿಟ್ಟರೆ ಕಾರ್ಬನ್ ಆಕ್ಸಿಕ್ಲೋರೈಡ್ ಬಿಡುಗಡೆ ಆಗಿ ಶಿಲೀಂಧ್ರನಾಶಕದ ಪ್ರಬಲತೆ ಇನ್ನೂ ಹೆಚ್ಚಾಗುತ್ತದೆಯಂತೆ. ಮೂರು ದಿನಗಳ ನಂತರ ಬಳಕೆಗೆ ಸಿದ್ಧವಾಗುವ ಶಿಲೀಂಧ್ರನಾಶಕವನ್ನು ೧೬ ಲೀಟರ್ ನೀರಿಗೆ ೧೦ ಮಿ.ಲೀ.ನಷ್ಟು ಸೇರಿಸುತ್ತಾರೆ. ಇದಕ್ಕೆ ಒಂದು ಲೀಟರ್ ಗೋಮೂತ್ರ ಹಾಗೂ ಒಂದು ಲೀಟರ್ ಸೋಪಿನ ಪುಡಿ ನೀರು ಸೇರಿಸಿ ಬಳಕೆ ಮಾಡಬಹುದು ಎಂದು ಹೇಳಿದ್ದಾರೆ.

ಬೂದು ರೋಗ ನಿಯಂತ್ರಣ

ಗುಜರಾತಿನ ಛೋಟಿಯಾಲ ತಾಲೂಕು ಸುರೇಂದ್ರ ನಗರದ ಕೃಷಿಕರಾದ ದೇವ್‌ಜಿ ಬಾಯಿ ಜಿರಮ್ ಬಾಯಿಯವರು ತಮ್ಮ ಬೆಳೆಯಲ್ಲಿ ಬರುವ ಬೂದು ರೋಗ ತಡೆಯಲು ವಿಶಿಷ್ಟ ಔಷಧಿ ಒಂದನ್ನು ಕಂಡುಕೊಂಡಿದ್ದಾರೆ. ಮೊದಲಿಗೆ ನವಣೆ ಹಿಟ್ಟನ್ನು ಹತ್ತು

ದಿನಗಳವರೆಗೆ ಕೊಳೆಸುತ್ತಾರೆ. ನಂತರ ರಸವನ್ನು ಸೋಸಿ ನೀರಿನಲ್ಲಿ ಸೇರಿಸಿ ಬೂದು ರೋಗದ ಗಿಡಗಳಿಗೆ ಸಿಂಪಡಿಸುತ್ತಾರೆ. ಇದರಿಂದ ಶೇಕಡ ೭೦ಕ್ಕೂ ಹೆಚ್ಚು ರೋಗ ನಿಯಂತ್ರಣವಾಗಿರುತ್ತದೆಯಂತೆ. ಅಲ್ಲದೆ ಗಿಡಗಳ ಹೂವು, ಎಲೆ, ಉದುರುವುದು ಕಡಿಮೆಯಾಗುತ್ತದೆ ಎನ್ನಲಾಗಿದೆ. ಇದರಿಂದ ಇಳುವರಿ ಉತ್ತಮವಾಗಿದೆ ಎನ್ನುವ ದೇವ್‌ಜಿ ಬಾಯಿ ಇದನ್ನು ತಮ್ಮ ತಂದೆಯವರಿಂದ ಕಲಿತಿದ್ದು ಎನ್ನುತ್ತಾರೆ. ತಮ್ಮ ಹಳ್ಳಿಯಲ್ಲಿನ ಇತರ ಕೆಲ ರೈತರೂ ಕೂಡ ಇದನ್ನೇ ಅನುಸರಿಸುತ್ತಿರುವುದಾಗಿ ಹೇಳುತ್ತಾರೆ.

ಬೆಳೆಗಳಲ್ಲಿ ಕೀಟಬಾಧೆಗೆ ಕಮಾಲ್ '೫೦೫'

ಹರಿಯಾಣ ರಾಜ್ಯದ ಈಶ್ವರ್ ಸಿಂಗ್ ಗಿಡ-ಮೂಲಿಕೆಗಳ ಕಷಾಯ ಒಂದನ್ನು ತಯಾರಿಸಿದ್ದು, ಇದನ್ನು ಜೈವಿಕ ಗೊಬ್ಬರವಾಗಿ, ಮಣ್ಣಿನ ಫಲವತ್ತತೆಗಾಗಿ ಹಾಗೂ ಹಲವಾರು ರೀತಿಯ ಬೆಳೆಗಳಲ್ಲಿನ ಕೀಟ ಮತ್ತು ರೋಗ ಬಾಧೆಗಳ ಹತೋಟಿಗೆ ಬಳಸುತ್ತಿದ್ದಾರೆ.

ಮೊದಲು ಇವರು ಬೇವಿನ ಎಲೆಗಳನ್ನು ನೀರಿನಲ್ಲಿ ಕುದಿಸಿ ನಂತರ ಬರುವ ಕಷಾಯವನ್ನು ಬೆಳೆಗಳಿಗೆ ಸಿಂಪಡಿಸುತ್ತಿದ್ದರು. ಈ ಕಷಾಯಕ್ಕೆ ಅವರು ಬೇವಿನ ಎಣ್ಣೆ ಮಿಶ್ರಣ ಮಾಡಿ ಉತ್ತಮ ಫಲಿತಾಂಶ ಕಂಡುಕೊಂಡರು.

ಈ ಕಷಾಯವನ್ನು ಇನ್ನೂ ಉತ್ತಮಗೊಳಿಸಲು ಅವರು ಬೇವಿನ ಎಲೆಗಳೊಂದಿಗೆ ಬೇವಿನ ಎಣ್ಣೆ, ನೆಲಬೇವು, ಬೆಲ್ಲ ಹಾಗೂ ಕೆಲ ಸ್ಥಳೀಯವಾಗಿ ದೊರಕುವ ಗಿಡ ಮೂಲಿಕೆಗಳನ್ನು ಬಳಸಿದ್ದಾರೆ. ಇವುಗಳ ಮಿಶ್ರಣವನ್ನು ಮಡಿಕೆಯಲ್ಲಿ ಗೋ-ಮೂತ್ರದೊಂದಿಗೆ ೧೫ ದಿನಗಳವರೆಗೆ ಕೊಳೆ ಹಾಕುತ್ತಾರೆ. ನಂತರ ಬರುವ ಕಷಾಯವನ್ನು ಸೋಸಿ ಒಂದು ಲೀಟರ್‌ಗೆ ೧೦೦ ಲೀಟರ್ ನೀರನ್ನು ಸೇರಿಸಿ ಬೆಳೆಗಳಿಗೆ ಸಿಂಪಡಿಸುವರು. ಈ ಕಷಾಯಕ್ಕೆ ಅವರು 'ಕಮಾಲ್ ೫೦೫' ಎಂದು ಹೆಸರಿಸಿದ್ದಾರೆ. ಇದರಿಂದ ಎಲ್ಲಾ ರೀತಿಯ ಕ್ರಿಮಿಕೀಟಗಳು ನಾಶವಾಗುವುದಲ್ಲದೇ ಕಷಾಯವು ಬೆಳೆಗಳ ಮೇಲೆ ಅಂಟಿರುವುದರಿಂದ ಪ್ರಾಣಿಗಳು ಬೆಳೆಗಳನ್ನು ತಿನ್ನುವುದಿಲ್ಲವೆನ್ನುತ್ತಾರೆ.

ನಾಟಿ ಸೊಳ್ಳೆ ಬತ್ತಿ

ಹಾಸನ ಜಿಲ್ಲೆ ಬೇಲೂರು ತಾಲೂಕು ಹಳೇಬೀಡು ಹೋಬಳಿಯ ಮಲ್ಲಿಕಾರ್ಜುನಪುರ ಗ್ರಾಮದ ಶ್ರೀ ಶಾಂತೇಗೌಡರು ಸೊಳ್ಳೆ ನಿವಾರಣೆಗೆ ಸರಳೋಪಾಯವೊಂದನ್ನು ಕಂಡುಕೊಂಡಿದ್ದಾರೆ.

ಇವರು ಒಂದು ಕಿಲೋದಷ್ಟು ಬೇವಿನಸೊಪ್ಪನ್ನು ಕಟ್ಟಿ ಅದಕ್ಕೆ ದೇಶೀಯ ಆಕಳ ಗಂಜಲ ಒಂದು ಲೀಟರ್, ೨೫೦ ಗ್ರಾಂ. ಅರಿಶಿಣ ಪುಡಿ ಇಷ್ಟನ್ನೂ ೫ ಕಿಲೋ ದೇಶೀಯ ದನದ ಸಗಣಿಯೊಂದಿಗೆ ಮಿಶ್ರ ಮಾಡಿ ಮುದ್ದೆ ಮಾಡಿ, ಎರಡಂಗುಲ ಅಗಲ, ಅರ್ಧ ಅಡಿ ಎತ್ತರದ ನಾಟಿ ಸೊಳ್ಳೆ ಬತ್ತಿ ತಯಾರಿಸಿಕೊಂಡು ಒಣಗಿಸಿ ಶೇಖರಿಸಿಟ್ಟುಕೊಳ್ಳುತ್ತಾರೆ. ಇವರು

ಸಂಜೆ ಸೊಳ್ಳೆ ಬರುವ ಮುನ್ನ ದನದ ಕೊಟ್ಟಿಗೆಯಲ್ಲಿ ಬತ್ತಿಯನ್ನು ಹಚ್ಚುವರು. ಬತ್ತಿ ನಿಧಾನವಾಗಿ ಉರಿದು ಹೊಗೆ ಕೊಟ್ಟಿಗೆಯಲ್ಲಿ ತುಂಬಿಕೊಳ್ಳುತ್ತದೆ. ಹೊಗೆಯಲ್ಲಿ ಬೇವು ಮತ್ತು ಅರಿಶಿಣದ ವಾಸನೆಗೆ ಸೊಳ್ಳೆ ಒಳಗಡೆ ಬರುವುದು ಕಡಿಮೆಯಾಗುತ್ತದೆ ಎನ್ನುತ್ತಾರೆ. ಹಾಗೆಯೇ ವಾಸದ ಮನೆಯಲ್ಲಿಯೂ ಕೂಡ ಹಚ್ಚಿದರೆ ಸೊಳ್ಳೆಯಿಂದ ಮುಕ್ತಿ. ಜೊತೆಗೆ ಮಾನವರ ಆರೋಗ್ಯಕ್ಕೆ ತುಂಬಾ ಒಳ್ಳೆಯದೇ ಹೊರತು ದುಷ್ಪರಿಣಾಮವಿಲ್ಲ ಎನ್ನುತ್ತಾರೆ ಗೌಡರು. ಸಾಮಾನ್ಯವಾಗಿ ಹೊಗೆ ಕುಡಿಯುವುದರಿಂದ ಶೀತ, ಕೆಮ್ಮು, ನೆಗಡಿ, ಗಂಟು ನೋವು, ಚರ್ಮ ಕಾಯಿಲೆ, ಕಜ್ಜಿ, ಕುರಗಳಿಂದ ಸ್ವಲ್ಪ ದೂರವಿರಬಹುದೆನ್ನುತ್ತಾರೆ. ಈ ಹೊಗೆಗೆ ಘಾಟು ಇಲ್ಲ. ಇದನ್ನು ಐದಾರು ವರ್ಷಗಳಿಂದ ಬಳಸಿಕೊಂಡು ಬಂದಿದ್ದೇವೆನ್ನುತ್ತಾರೆ.

ಕೀಟಗಳಿಂದ ವಸ್ತ್ರಗಳ ರಕ್ಷಣೆ

ಉಪದ್ರವ ಕೀಟಗಳಿಂದ ಬಟ್ಟೆಗಳು ಹಾಳಾಗದಂತೆ ರಕ್ಷಿಸಿಕೊಳ್ಳಲು ಇಲ್ಲೊಂದು ಸುಲಭೋಪಾಯವಿದೆ. ತಲಾ ೫೦ ಗ್ರಾಂ. ತೂಕದ ಕರೀ ಜೀರಿಗೆ (Nigella sotiva), ಬಜೆ (Acorus calamus), ಕರ್ಪೂರ, ಕಸ್ತೂರಿ ಅರಿಶಿಣ (Curarma aronatiea) ಮತ್ತು ಕಾಮ ಕಸ್ತೂರಿಯನ್ನು ಹತ್ತಿ ಬಟ್ಟೆಯಲ್ಲಿ ಹಾಕಿ ಬಟ್ಟೆ ಇಡುವ ಸ್ಥಳ/ಕಪಾಟಿನಲ್ಲಿಡಿ. ಈ ಸಸ್ಯಗಳು ಹೊರಸೂಸುವ ವಾಸನೆಗೆ ಕೀಟಗಳು ಬಟ್ಟೆಯ ಸಮೀಪ ಸುಳಿಯುವುದಿಲ್ಲ!

ಬಸವನ ಹುಳುವಿನ ನಿಯಂತ್ರಣಕ್ಕೆ

ಬಸವನ ಹುಳುಗಳು ರಾತ್ರಿ ವೇಳೆ ಬೆಳೆಗಳ ಮೇಲೆ ಹಾವಳಿ ನಡೆಸುತ್ತವೆ. ನೂರಾರು ಮರಿಗಳು ಬೇಸಿಗೆಯಲ್ಲಿ ಮಣ್ಣಿನ ಪದರದಲ್ಲಿ ಸೇರಿಕೊಳ್ಳುತ್ತವೆ. ಇವುಗಳ ನಿಯಂತ್ರಣಕ್ಕೆ ರೈತರಿಗೆ ಬಸವನ ಹುಳುವಿನ ಮೇಲಿರುವ ಮಮಕಾರ ಅಡ್ಡಿ ಬರುತ್ತದೆ. ಆದರೆ ನಮ್ಮ ಹಾಸನದ ಸಾವಯವ ಕೃಷಿಕ ಬಸವರಾಜು ಸಂತೇಶಿವರ ಕ್ರಮ ಈ ಕೆಳಕಂಡಂತಿದೆ.

ಬೆಳೆಗಳ ಮಧ್ಯ ಅಲ್ಲಲ್ಲಿ ಸಸ್ಯ ತ್ಯಾಜ್ಯ (ತೆಂಗಿನ ಗರಿ, ಅಡಕೆ ಗರಿ, ಹಸಿರೆಲೆ) ಇತ್ಯಾದಿಗಳ ರಾಶಿ ಹಾಕಿ, ಎರಡು ದಿನಗಳ ನಂತರ ರಾಶಿಯ ಸುತ್ತ ಬಾಳೆ ಮರದ ಪಟ್ಟೆ ಅಥವಾ ಅಡಕೆ ಪಟ್ಟೆಗಳನ್ನು ಜೋಡಿಸಬೇಕು. ಇದರ ಅಡಿಯಲ್ಲಿ ಬಸವನ ಹುಳುಗಳೆಲ್ಲಾ ಬಂದು ಸೇರುವುವು. ನಂತರ ಸುಣ್ಣದ ಪುಡಿ ಮತ್ತು ಉಪ್ಪಿನ ಪುಡಿ ಮಿಶ್ರಣ ಮಾಡಿ ಈ ಪಟ್ಟಿಗಳಲ್ಲಿ ಹಾಕಿ. ರಾತ್ರಿ ವೇಳೆ ಈ ರಾಶಿ ಕೆಳಭಾಗದಿಂದ ಬಸವನ ಹುಳುಗಳು ಹೊರ ಬರುವಾಗ ಈ ಮಿಶ್ರಣದ ಮೇಲೆ ಹರಿದು ಬರುತ್ತವೆ. ಸುಣ್ಣ ಮತ್ತು ಉಪ್ಪಿನ ಪುಡಿ ಮಿಶ್ರಣ ಇವುಗಳ ಮೈಗೆ ಲೇಪನವಾದಾಗ ಮೈಮೇಲೆ ಲೋಳೆ ಉತ್ಪಾದನೆಯಾಗುವುದು ನಿಂತು ಹೋಗುತ್ತದೆ. ಮೈ ಒಣಗಿ ತಲೆಯನ್ನು ಶಂಖದಿಂದ ಹಿಂದೆ ಮುಂದೆ ಎಳೆಯಲು ಸಾಧ್ಯವಾಗದೆ ಅಸುನೀಗುತ್ತವೆ. ಈ ಕ್ರಮದಿಂದ ಬಸವನ ಹುಳುವಿನ ನಿಯಂತ್ರಣ ಸುಲಭ. ಕಪ್ಪು ಬಸವನ ಹುಳುಗಳಿಗೂ ಇದೇ ಕ್ರಮ ಅನುಸರಿಸಿ ನಿಯಂತ್ರಿಸಬಹುದು ಎನ್ನುವುದು ಸಂತೇಶಿವರ

ಅನುಭವ. ಈ ಮಿಶ್ರಣವನ್ನು ಮಣ್ಣಿನ ಮೇಲೆ ಹಾಕಿದರೆ ರಸ ಸಾರಕ್ಕೆ ವ್ಯತ್ಯಾಸವಾಗಿ ಬೆಳೆಗಳಿಗೆ ತೊಂದರೆಯಾಗುತ್ತದೆ. ಆದಕಾರಣ ಬಾಳೆಮರದ ಪಟ್ಟೆ, ಅಡಕೆ ಪಟ್ಟೆ ಇತ್ಯಾದಿ ಬಳಸಿ ಈ ಸುಣ್ಣ ಮತ್ತು ಉಪ್ಪಿನ ಪುಡಿಗಳು ನೆಲ ಸೇರುವುದನ್ನು ತಪ್ಪಿಸಬೇಕು.

ಚೇಳು ಹುಲ್ಲಿನಿಂದ ಇಲಿಗಳ ನಿಯಂತ್ರಣ

ಬೆಳೆಗಳನ್ನು ಇಲಿಗಳಿಂದ ರಕ್ಷಿಸಿಕೊಳ್ಳಲು ಒಂದು ಹೊಸ ವಿಧಾನ ಹೀಗಿದೆ. ಉತ್ತರಾಂಚಲದ ಉದಮ್‌ಸಿಂಗ್ ನಗರ ಜಿಲ್ಲೆಯ ರೈತ ಶಿವದತ್ ಪಾಠಕ್ ತಮ್ಮ ಹೊಲದಲ್ಲಿ ಚೇಳಿನ ಹುಲ್ಲನ್ನು (Urtica dioica) ಅಲ್ಲಲ್ಲಿ ಬಿಸಾಡುತ್ತಾರೆ. ಹೀಗೆ ಬಿದ್ದ ಹುಲ್ಲಿನ ಮುಳ್ಳು ಚೇಳಿನ ಕೊಂಡಿಯಂತೆ ಕಾಣಿಸುವುದರಿಂದ ಇಲಿಗಳು ಬೆಳೆಯ ಹತ್ತಿರ ಸುಳಿಯುವುದಿಲ್ಲ. ಈ ಮುಳ್ಳಿನ ಸಂಪರ್ಕದಿಂದ ಇಲಿಗಳಲ್ಲಿ ನವೆ, ಜೊಲ್ಲು ಸುರಿಯುವಿಕೆ ಕಾಣಿಸುತ್ತದೆ. ಹತ್ತಿರ ಸುಳಿದರೂ ಇವು ಇಲಿಗಳಿಗೆ ಮತ್ತಷ್ಟು ಬಾಧೆ ನೀಡುತ್ತದೆ.


ಮಂಗನ ಉಪದ್ರವಕ್ಕೆ ರಾಕೆಟ್ ದಾಳಿ !

ಪಶ್ಚಿಮಘಟ್ಟದ ಅಡಿಕೆ, ತೆಂಗು ತೋಟಗಳಿಗೆ ಮಂಗಗಳ ಹಾವಳಿ ವಿಪರೀತ ಹೆಚ್ಚಾಗುತ್ತಿದ್ದು, ಈ ಭಾಗದ ತೋಟದ ಮಾಲೀಕರನ್ನು ಚಿಂತೆಗೀಡುಮಾಡಿವೆ. ರೈತರು ಈ ಮಂಗಗಳನ್ನು ಓಡಿಸಲು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇಂತಹ ಒಂದು ಪ್ರಯತ್ನ 'ಪಿವಿಸಿ ಪೈಪಿನ ಕೋವಿ'. ಕೋವಿಯ ತುದಿಗೆ ರಾಕೆಟ್ (ದೀಪಾವಳಿಯಲ್ಲಿ ಸಿಡಿಸುವ ರಾಕೆಟ್) ಜೋಡಿಸಿ, ಕಂಕುಳಲ್ಲಿ ಭದ್ರವಾಗಿಟ್ಟು, ಬೆಂಕಿ ತಾಗಿಸಿ ಸಿಡಿಸಿದ ರಾಕೆಟ್‌ಗಳಿಗೆ ಹೆದರಿ ಮಂಗಗಳು ದಿಕ್ಕಾಪಾಲು! ಬೇರೆ ಬೇರೆ ವ್ಯಾಸದ ಪಿವಿಸಿ ಪೈಪುಗಳ ತುಂಡಿನಿಂದ ಜೋಡಿಸಿ ಮಾಡಿದ ಎರಡು ಅಡಿ ಉದ್ದದ ಈ ಕೋವಿಯಿಂದ ಒಂದು ಸಲಕ್ಕೆ ನಾಲ್ಕೈದು ರಾಕೆಟ್ ಹಾರಿಸಬಹುದು. ಈ ಪ್ರಯೋಗವನ್ನು ಪುತ್ತೂರಿನ ಉದಯ್‌ರವರು ಉಪಯೋಗಿಸುತ್ತಿದ್ದಾರೆ.

ಮೂಗಿಲಿಯಿಂದ ಇಲಿ ನಿಯಂತ್ರಣ

ಮನೆ, ಹೊಲ, ಗದ್ದೆ ಹಾಗೂ ಗೋದಾಮುಗಳಲ್ಲಿ ಇಲಿಗಳ ಕಾಟ ಹೆಚ್ಚಾಗಿದ್ದರೆ ಇಲಿಗಳನ್ನು ನಿಯಂತ್ರಿಸಲು ಇಲಿ ಜಾತಿಯಲ್ಲಿರುವ ಇನ್ನೊಂದು ಪ್ರಾಣಿಯಾದ ಮೂಗಿಲಿ (Musk Rat)ಯನ್ನು ಸಾಕುವ ಒಂದು ಕುತೂಹಲ ಪದ್ಧತಿ ನಮ್ಮ ಹಾಸನದ ಜಿಲ್ಲೆಯಲ್ಲಿ ಈ ಹಿಂದೆ ಜಾರಿಯಲ್ಲಿತ್ತು. ಈ ಮೂಗಿಲಿ ಇದ್ದ ಜಾಗ ದಲ್ಲಿ ಇತರ ಇಲಿಗಳು, ಹಾವುಗಳು, ಚೇಳುಗಳು ಕೂಡ ಇರುವುದಿಲ್ಲವಂತೆ! ಕಾರಣ ಈ ಮೂಗಿಲಿ ಒಂದು ರೀತಿಯ ಘಾಟು ವಾಸನೆಯನ್ನು ಬಿಡುತ್ತದೆ. ಈ ಘಾಟು ವಾಸನೆಗೆ ಇಲಿಗಳು, ಹಾವು, ಚೇಳುಗಳು ದೂರ ಹೋಗುತ್ತವೆ. ಮೂಗಿಲಿಯನ್ನು ಸಾಕುಪ್ರಾಣಿಯಂತೆ ಸಾಕಿದರೆ ಉತ್ತಮ ಹಾಗೂ ಅನುಕೂಲಕರವಾಗಿರುತ್ತದೆ. ಒಂದು ಬಟ್ಟಲಿನಲ್ಲಿ ಹಾಲು ಅನ್ನ ಹಾಕಿ ಮೂಗಿಲಿಗೆ ರೂಢಿ ಮಾಡಿದರೆ ಅದು ಬಟ್ಟಲಿನಲ್ಲಿ ಮಾತ್ರ ತಿನ್ನಲು ರೂಢಿ ಮಾಡಿಕೊಳ್ಳುತ್ತದೆಯಂತೆ. ಈ

ರೀತಿ ಮೂಗಿಲಿಯನ್ನು ಸಾಕುವ ಪದ್ಧತಿಯನ್ನು ಬೇಲೂರು ತಾಲ್ಲೂಕಿನ ಮಲ್ಲಿಕಾರ್ಜುನ ಪುರದ ಸಿದ್ಧರಾಮೇಗೌಡರು ಬಹಳ ಹಿಂದಿನಿಂದ ರೂಢಿಸಿಕೊಂಡಿದ್ದಾರೆ. ರೇಷ್ಮೆ ಬೆಳೆ ಜಮೀನಿನಲ್ಲಿ ಗೋಣಿಚೀಲ ದಿಂದ ನಿರ್ಮಿಸಿದ ಹುಳು ಸಾಕಣೆ ಮನೆಯಲ್ಲಿ, ರೇಷ್ಮೆ ಹುಳು ಸಾಕುತ್ತಿದ್ದಾಗ ಇಲಿಗಳು ಹುಳುಗಳನ್ನು ತಿನ್ನಲು ಬರುತ್ತಿದ್ದವು. ಕೆಲವು ಅನುಭವಗಳ ಆಧಾರದ ಮೇಲೆ ಮೂಗಿಲಿ ಸಾಕಿ ರೇಷ್ಮೆಹುಳು ಹಾಗೂ ರೇಷ್ಮೆ ಗೂಡನ್ನು ಇಲಿಗಳ ಹಾವಳಿಯಿಂದ ಪಾರುಮಾಡಿದರು. ಮೂಗಿಲಿ ಬೆಕ್ಕಿನಂತೆ ಮಾನವನಿಗೆ ಹೊಂದಿಕೊಳ್ಳುತ್ತದೆ ಎಂಬುದು ಇವರ ಸ್ವ-ಅನುಭವ



ಗಿಡಗಳ ರೋಗ ಹತೋಟಿಯಲ್ಲಿ ದತ್ತೂರ

ಮೂರು ಕೆ.ಜಿ.ಯಷ್ಟು ದತ್ತೂರ (Datura meta) ಎಲೆಗಳನ್ನು ೨೦ ಲೀ. ನೀರಿನಲ್ಲಿ ಹಾಕಿ ಚೆನ್ನಾಗಿ ಕುದಿಸಿ ೫ ಲೀಟರ್‌ನಷ್ಟು ದ್ರಾವಣ ಮಾಡಿಕೊಳ್ಳಬೇಕು. ಈ ದ್ರಾವಣವನ್ನು ೧೫೦ ಮಿಲಿ ಲೀಟರ್‌ನಷ್ಟು ತೆಗೆದುಕೊಂಡು ೧೫ ಲೀ. ನೀರಿನೊಂದಿಗೆ ಬೆರೆಸಿ ಬೆಳೆಗೆ ಸಿಂಪಡಿಸಬೇಕು. ಹೀಗೆ ೪೫, ೫೫, ೬೫ ಮತ್ತು ೭೫ ದಿನಗಳಿಗೊಮ್ಮೆ ಸಿಂಪಡಿಸುವುದರಿಂದ ಸಾಮಾನ್ಯ ಎಲ್ಲಾ ಗಿಡಗಳಿಗೆ ಬ್ಯಾಕ್ಟೀರಿಯಾದಿಂದ ಬರುವ ರೋಗಗಳನ್ನು ತಡೆಗಟ್ಟಬಹುದೆಂಬುದು ಗುಜರಾತಿನ ಶ್ರೀ ಜಯಂತಿ ಧನಂಜಿಭಾಯಿ ಪಟೇಲ್‌ರವರ ಅನುಭವ.

ಕೀಟಗಳ ನಿಯಂತ್ರಣಕ್ಕೆ ಬೇವಿನ ಎಣ್ಣೆ ದೀಪ

ಬೇವಿನ ಎಣ್ಣೆ ದೀಪವನ್ನು ಕ್ಯಾಂಡಲ್‌ಗಳ ಬದಲಾಗಿ ಮನೆಯಲ್ಲಿ ಉಪಯೋಗಿ ಸುವುದರಿಂದ ಅದರ ಘಾಟು ವಾಸನೆಗೆ ಸೊಳ್ಳೆ ಮತ್ತು ಇತರ ಕ್ರಿಮಿಕೀಟಗಳು ಮನೆಯೊಳಗೆ ಬರುವುದಿಲ್ಲ. ಇದರಿಂದ ಮನೆಯಲ್ಲಿರುವ ಗೋದಾಮುಗಳಿಗೆ ಹುಳದ ಬಾಧೆ ಕಡಿಮೆ ಯಾಗುತ್ತದೆ. ಇದು ಮಾನವನ ಆರೋಗ್ಯದ ಮೇಲೆ ಸಹ ಉತ್ತಮ ಪರಿಣಾಮ ಬೀರುತ್ತದೆ. ಇದರ ಘಾಟಿನಿಂದ ತಲೆನೋವು, ಕಣ್ಣು ಉರಿ, ವಾಕರಿಕೆ, ಚರ್ಮದಲ್ಲಿ ಕಜ್ಜಿ ಗುಳ್ಳೆ ಮುಖದ ಮೊಡವೆಗಳು ಇತ್ಯಾದಿ ತೊಂದರೆಗಳ ನಿವಾರಣೆಯಾಗುತ್ತವೆ ಎಂಬುದು ಹಾಸನ ಜಿಲ್ಲೆಯ ಮಲ್ಲಿಕಾರ್ಜುನಪುರದ ಸಿದ್ಧರಾಮೇಗೌಡ ಎಂಬ ರೈತರ ಅನುಭವ.

ಕೀಟ ಮತ್ತು ರೋಗಗಳ ಹತೋಟಿ ಸಸ್ಯಜನ್ಯಗಳು

ಬೆಳಗಾವಿ ತಾಲ್ಲೂಕಿನ ಸುತಗಟ್ಟಿಯ ಶ್ರೀ ಅಭಯ ಮುತಾಲಿಕ ದೇಸಾಯಿಯವರು ವಿವಿಧ ಸಸ್ಯಜನ್ಯಗಳನ್ನು ಪರೀಕ್ಷಿಸಿ ಅವುಗಳ ವಿಶೇಷ ಕೀಟ ಅಥವಾ ರೋಗನಾಶಕ ಗುಣಗಳನ್ನು ಕಂಡುಹಿಡಿದಿದ್ದಾರೆ. ಸಸ್ಯಜನ್ಯಗಳನ್ನು ಅವುಗಳ ವಿಶೇಷ ಗುಣಗಳ ಆಧಾರದ ಮೇಲೆ ವಿವಿಧ ಗುಂಪುಗಳಾಗಿ ಈ ಕೆಳಕಂಡಂತೆ ವರ್ಗೀಕರಿಸಿದ್ದಾರೆ.

ಗುಣಗಳು	ಸಸ್ಯಜನ್ಯಗಳು
ಕೀಟಗಳ ಜಠರ ವಿಷಕಾರಕಗಳು	ಕರಿಬೇವು, ತಂಬಾಕು
ಸಂಪರ್ಕ ಮತ್ತು ಜಠರ ವಿಷಕಾರಕಗಳು	ಸೇವಂತಿಗೆ, ಚೆಂಡುಹೂ, ಕಲ್ನಾರು, ಸೀತಾಫಲ, ಲಂಟಾನ
ಜಠರ ವಿಷ ಮತ್ತು ಬೆಳವಣಿಗೆ ನಿರೋಧಕಗಳು	ಎಕ್ಕ, ಕರಿ ವೀಳ್ಯದೆಲೆ
ವಿಕರ್ಷಕ, ತಾತ್ಕಾಲಿಕ ವಿಷ	ಗ್ಲಿರಿಸಿಡಿಯಾ, ಆಡುಸೋಗೆ
ನಂಜು (ವೈರಸ್) ನಾಶಕ	ಬೋಗನ್ ವಿಲ್ಲಾ
ನಂಜು ನಿರೋಧಕ, ಶಿಲೀಂಧ್ರ ನಾಶಕಗಳು	ಸಾಸಿವೆ, ಬೆಳ್ಳುಳ್ಳಿ
ಶೀಲಿಂಧ್ರ ನಾಶಕ	ಸುವರ್ಣಗೆಡ್ಡೆ
ಬ್ಯಾಕ್ಟೀರಿಯ ನಾಶಕ	ಬಜೆ
ಕ್ರಿಮಿನಾಶಕಗಳು	ಗೋಮೂತ್ರ, ತುಳಸಿ, ಬಿಲ್ವಪತ್ರೆ

ಕಷಾಯ ತಯಾರಿಕೆ : ಒಂದು ಕೆ.ಜಿ. ಆಯಾ ಎಲೆಗಳನ್ನು ೧೦ ಲೀಟರ್ ಕುದಿಸಿದ ನೀರಿನಲ್ಲಿ ೨೪ ಗಂಟೆಗಳ ಕಾಲ ನೆನೆಸಿ, ಸೋಸಿ, ನಂತರ ೧:೧೦ರ ಪ್ರಮಾಣದಲ್ಲಿ ನೀರನ್ನು ಬೆರೆಸಿ ಬೆಳೆಗಳಿಗೆ ಸಿಂಪಡಿಸುವುದು. ಇದರಿಂದ ಎಲ್ಲಾ ರೀತಿಯ ರೋಗ ಹಾಗೂ ಕೀಟಗಳ ಹಾವಳಿಯನ್ನು ಯಶಸ್ವಿಯಾಗಿ ತಡೆಯಬಹುದು ಎಂಬುದು ಅವರ ಅನುಭವದ ಹೇಳಿಕೆ.

ಎಕ್ಕ(Calotropis gigantea)ದ ಬಳಕೆ

ಎಕ್ಕದ ಹಾಲನ್ನು (ಅಂಟು) ಸಂಗ್ರಹಿಸಿ ೧:೧೫ರ ಪ್ರಮಾಣದಲ್ಲಿ ನೀರಿನೊಂದಿಗೆ ಬಳಸಿ ಬೆಳೆಗಳಿಗೆ ಸಿಂಪಡಿಸುವುದರಿಂದ ಕಂಬಳಿ ಹುಳುಗಳನ್ನು ಕೇವಲ ಮೂರು ದಿನಗಳಲ್ಲಿ ಪರಿಣಾಮಕಾರಿಯಾಗಿ ಹತೋಟಿ ಮಾಡಬಹುದು. ೮-೧೦ಕ್ಕೆ ಕೆ.ಜಿ. ಎಲೆಗಳನ್ನು ಒಂದು ದಿನದ ಕಾಲದ ನೀರಿನಲ್ಲಿ ನೆನೆಸಿ ಸೋಸಿದ ನಂತರ ಗೆದ್ದಲು ಹತ್ತಿದ (ಭೂಮಿಗೆ) ಮಣ್ಣಿಗೆ ಸುರಿದರೆ ಗೆದ್ದಲು ಮಾಯವಾಗುತ್ತದೆ ಎಂಬುದು ದೇಶೀಯ ಕೃಷಿ ವಾರ್ತಾ ಪತ್ರಿಕೆ, ೨೦೦೨ರಲ್ಲಿ ದಾಖಲಾಗಿರುತ್ತದೆ.

ಮೊಂಡು ಕಳ್ಳಿ(Euphorbia tiruclli)ಯ ಉಪಯೋಗ

ಬೇಲಿ ಗಿಡವಾಗಿ ಯಥೇಚ್ಛವಾಗಿ ಬೆಳೆಯಲ್ಪಡುವ ಇದು ಕೊಳವೆಯಾಕಾರದ (ಕಾಂಡ) ಕವಲುಗಳು ಮತ್ತು ಉದ್ದನೆಯ ಎಲೆಗಳುಳ್ಳ ಗಿಡ. ಒರಟಾದ ತೊಗಟೆ ಹೊಂದಿದ್ದು ಗಾಯ ಮಾಡಿದರೆ ಬಿಳಿ ಹಾಲು ಸುರಿಯುತ್ತದೆ. ಈ ಹಾಲು, ಹೇನು, ಗೆದ್ದಲು, ಕತ್ತರಿಹುಳು (Cutworm) ಮತ್ತು ಕಾಡಿಗೆ ರೋಗಗಳಿಗೆ ಪರಿಣಾಮ ಕಾರಿ ಔಷಧ. ಬಲಿತ ಕಾಂಡಗಳನ್ನು



ಕತ್ತರಿಸಿಕೊಂಡು, ಅವನ್ನು ಚೆನ್ನಾಗಿ ಜಜ್ಜಿ ಪೇಸ್ಟಿನ ರೂಪಕ್ಕೆ ಬಂದ ನಂತರ ಸುಮಾರು ಹತ್ತು ಲೀಟರ್ ನೀರಿನಲ್ಲಿ ಅದ್ದಿರಿ. ಆಗ ಅದರ ಅರ್ಧ ರಸ ನೀರಿನೊಂದಿಗೆ ಸೇರುತ್ತದೆ. ನಂತರ ದ್ರಾವಣವನ್ನು ಸೋಸಿ ಹೇನು, ಗೆದ್ದಲು ಮತ್ತು ಕಾಡಿಗೆ ರೋಗಗಳಿಗೆ ಸಿಂಪಡಿಸಬಹುದು. ಕತ್ತರಿ ಹುಳುಗಳ ನಿಯಂತ್ರಣಕ್ಕಾಗಿ, ಸುಮಾರು ಹತ್ತು ತೊಟ್ಟು ಹಾಲನ್ನು ಒಂದು ಲೀಟರ್ ನೀರಿನಲ್ಲಿ ಕಲಸಿ ಬಳಸಬೇಕು.

ಗುಗ್ಗೆ ಅಥವಾ ಎಲೆ ಮುದುಡು ರೋಗ

ಬೇವಿನ ಹರಳುಗಳನ್ನು ಚಚ್ಚಿ ಪುಡಿ ಮಾಡಿ ಸಸ್ಯಗಳ ಬುಡಕ್ಕೆ ಹಾಕುವುದರಿಂದ ಈ ರೋಗವನ್ನು ಕಡಿಮೆ ಮಾಡಬಹುದು ಎಂಬುದು ನಾಗಮಂಗಲ ತಾಲ್ಲೂಕಿನ ರೈತ ಚಿಕ್ಕ ವೀರಪ್ಪ ಮತ್ತಿತರರ ಅಭಿಪ್ರಾಯ.

ಅಂಗಮಾರಿ ರೋಗಕ್ಕೆ ದತ್ತೂರ

ಮೂರು ಕೆ.ಜಿ.ಯಷ್ಟು ದತ್ತೂರ (Datura SP.) ಗಿಡದ ಎಲೆಗಳನ್ನು ಪುಡಿ ಮಾಡಿ ೨೦ ಲೀಟರ್ ನೀರಿನಲ್ಲಿ ಕಲಸಿ ಕಾಲುಭಾಗ ಕಷಾಯ ಉಳಿಯುವವರೆಗೂ ಕುದಿಸಿ, ಹೀಗೆ ತಯಾರಾದ ಕಷಾಯವನ್ನು ನಾಲ್ಕು ಬಾರಿ ಸಿಂಪಡಿಸುವುದರಿಂದ (೧೫ ಲೀಟರ್ ನೀರಿನಲ್ಲಿ ೧೫೦ ಮಿ.ಲೀ. ಕಷಾಯ : ಕ್ರಮವಾಗಿ ೪೫, ೫೫, ೬೫ ಮತ್ತು ೭೫ನೇ ದಿನಗಳಲ್ಲಿ) ಅಂಗಮಾರಿ (Blight) ರೋಗವನ್ನು ತಡೆಗಟ್ಟಬಹುದೆನ್ನುವುದು ಗುಜರಾತಿನ ಸಬರಕಾಂತ ಜಿಲ್ಲೆಯ ರೈತ ಶ್ರೀ ಜಯಂತಭಾಯಿ ಧನಂಜಯಭಾಯಿ ಪಟೇಲರು ಕಂಡುಹಿಡಿದಿರುವರ ಅನುಶೋಧನೆ.

ಇಲಿ ನಿಯಂತ್ರಣ

ಗುಜರಾತಿನ 'ಡಾಂಗ್ಸ್' ಜಿಲ್ಲೆಯು ಹೆಚ್ಚು ಅಭಯಾರಣ್ಯದಿಂದ ಕೂಡಿದ ಪ್ರದೇಶ. ಈ ಪ್ರದೇಶದ ಜನರು 'ಲೌಟ್' ಎಂಬ ಗಿಡವೊಂದನ್ನು ಇಲಿಗಳ ನಿಯಂತ್ರಣಕ್ಕೆ ಬಳಸುವುದೊಂದು ವಿಶೇಷ. ಬೇರಿನಿಂದ ಬೆಳೆಯುವ ಇದು ಮಳೆಗಾಲದಲ್ಲಿ ಹೆಚ್ಚಾಗಿ ಅರಣ್ಯ ಪ್ರದೇಶದಲ್ಲಿ ಕಂಡು ಬರುತ್ತದೆ. ನುಣುಪಾದ ಇದರ ರೆಂಬೆ(ಟೊಂಗೆ)ಗಳು ವಿವಿಧ ಬಣ್ಣ ಗಳಿಂದ ಅಲಂಕೃತವಾಗಿದ್ದು ನೋಡಲು ಹಾವಿನಂತೆ ಗೋಚರಿಸುತ್ತವೆ. ಸುಮಾರು ೧.೫ ರಿಂದ ೨.೦ ಅಡಿ ಉದ್ದದ ರೆಂಬೆಗಳನ್ನು ಇಟ್ಟಾಗ ಇಲಿಗಳು ಹಾವೆಂದು ತಿಳಿದು ಹೆದರಿ

ದೂರ ಓಡುತ್ತವೆ. ಈ ರೆಂಬೆಗಳು ಹದಿನೈದು ದಿನಗಳಲ್ಲಿ ಒಣ ಗುತ್ತವೆ. ಆದ್ದರಿಂದ ಈ ರೆಂಬೆ ಗಳನ್ನು ಪ್ರತಿ ವಾರಕ್ಕೊಮ್ಮೆ ಬದಲಾಯಿಸಿ ಇಡುವುದರಿಂದ ಉತ್ತಮ ಇಲಿ ನಿಯಂತ್ರಣ ಸಾಧ್ಯ.



ಕಾಯಿಕೊರಕ ಹುಳದ ಹತೋಟಿ

ನಾಲ್ಕು ಕೆ.ಜಿ. ಲೋಳೆ ಸರ (Aloe vera), ೫೦೦ ಮಿ.ಲೀ. ಬೇವಿನೆಣ್ಣೆ ಮತ್ತು ೫೦೦ ಗ್ರಾಂ ತಂಬಾಕು ಪುಡಿಯನ್ನು ೨೦ ಲೀಟರ್ ನೀರಿನಲ್ಲಿ ಬೆರೆಸಿ ಸುಮಾರು ಕಾಲು ಭಾಗ ಕಷಾಯ ಉಳಿಯುವವರೆಗೂ ಕುದಿಸಿ, ನಂತರ ೫೦ ಗ್ರಾಂ ಅಂಟುವಾಳ (Sapindus emarginatus) ಪುಡಿಯನ್ನು ಅದರೊಂದಿಗೆ ಮಿಶ್ರ ಮಾಡಿ. ಹೀಗೆ ಸಿದ್ಧವಾದ ಕಷಾಯವನ್ನು ತಣ್ಣಗಾದ ನಂತರ ಎರಡು ಬಾರಿ ಸಿಂಪಡಿಸುವುದರಿಂದ (ಪ್ರತಿ ೧೫ ಲೀಟರ್ ನೀರಿಗೆ ೧೪೦ ಮಿ.ಲೀ. ಕಷಾಯ) ಹಲವಾರು ಬೆಳೆಗಳನ್ನು ಬಾಧಿಸುವ ಕಾಯಿಕೊರಕ (Heliothis Sp)ಗಳನ್ನು ಹತೋಟಿಗೆ ತರಬಹುದು ಎಂಬುದು ಗುಜರಾತಿನ ರೈತ ಜಯಂತ ಭಾಯಿ ಪಟೇಲರ ಅನುಭವ.

ಹೀಗೊಂದು ಸ್ವಉದ್ಯೋಗ

ತಮಿಳುನಾಡಿನ, ಈರೋಡ್ ಜಿಲ್ಲೆಯ ಶ್ರೀ ಸೆಲ್ಲಮುತ್ತುರವರು ಮೂಲತಃ ಬೆಳೆಗಳಿಗೆ ಔಷಧಿ ಸಿಂಪಡಿಸುವ ನೌಕರಿ ಮಾಡುತ್ತಿದ್ದರು. ಇದರಿಂದ ಬರುವ ಕೂಲಿ ಹಣದಲ್ಲಿ ಜೀವನ ಸಾಗಿಸುತ್ತಿದ್ದರು. ಪ್ರತಿದಿನ ರಾಸಾಯನಿಕ ಔಷಧಿಗಳ ಸಿಂಪರಣೆಯಿಂದಾಗಿ ಸೆಲ್ಲಮುತ್ತುಗೆ ತಲೆನೋವು, ವಾಂತಿ ಮತ್ತು ತಲೆ ಸುತ್ತಲು ಪ್ರಾರಂಭವಾಯಿತು. ವೈದ್ಯರ ಬಳಿ ಹೋದಾಗ ಸೆಲ್ಲಮುತ್ತುವಿನ ಹಿನ್ನೆಲೆ ಅರಿತ ವೈದ್ಯರು, ನೀನೇಕೆ ಗಿಡಮೂಲಿಕೆಗಳಿಂದ ಔಷಧಿ ತಯಾರಿಸಿ ಸಿಂಪಡಿಸಬಾರದು? ಇದರಿಂದ ನಿನಗೂ ಪ್ರಕೃತಿಗೂ ಮತ್ತು ಎಲ್ಲರಿಗೂ ಒಳ್ಳೆಯದಾಗುತ್ತದೆ ಎಂದರು. ಅವರ ಸಲಹೆಯಂತೆ ಸೆಲ್ಲಮುತ್ತು ವಿವಿಧ ರೀತಿಯ ಪ್ರಯೋಗ ನಡೆಸಿ ಕೊನೆಗೆ ೩ ಕೆ.ಜಿ. ಲಕ್ಕಿಸೊಪ್ಪು (Vitex negundo), ೩ ಕೆ.ಜಿ. ವಿಷಮಧಾರಿ ಸೊಪ್ಪು (Clerodendron inermi), ೨ ಕೆ.ಜಿ. ಕತ್ತಾಳೆ ಪಟ್ಟೆ (Agave sisalana) ಮತ್ತು ೩ ಕೆ.ಜಿ. ಬೇವಿನ ಬೀಜ ಚೆನ್ನಾಗಿ ರುಬ್ಬಿ, ೧೦೦ ಲೀ. ನೀರಿನಲ್ಲಿ ಬೆರೆಸಿದರು. ಆದರೆ ಯಾರನ್ನು ಕೇಳಿದರೂ ಇದನ್ನು ಅವರ ಬೆಳೆಗೆ ಸಿಂಪಡಿಸಲು ಒಪ್ಪಲಿಲ್ಲ. ಕೊನೆಗೆ ಸೆಲ್ಲಮುತ್ತು ಅವರ ಸಂಬಂಧಿಯೊಬ್ಬರ ಹೊಲಕ್ಕೆ ಅವರ ಅನುಮತಿ ಪಡೆಯದೆ ಸಂಜೆ ವೇಳೆ ಸಿಂಪಡಿಸಿ, ಒಂದು ವಾರದ ನಂತರ ವಿಚಾರ ತಿಳಿಸಿದಾಗ ಅವರು ಆಶ್ಚರ್ಯದಿಂದ ತಮ್ಮ ಹೊಲದಲ್ಲಿ ಒಂದು ವಾರದಿಂದ ಯಾವುದೇ ಕೀಟಗಳ ಹಾವಳಿ ಕಂಡುಬಂದಿಲ್ಲವೆಂದು ಹೇಳಿ, ೩ ಎಕರೆ ಈರುಳ್ಳಿ

ಹೊಲಕ್ಕೆ ಈ ಗಿಡಮೂಲಿಕೆಯನ್ನು ಸಿಂಪಡಿಸಲು ಹೇಳಿ ಹಣ ಕೊಟ್ಟರು. ಹೀಗೆ ಪ್ರಾರಂಭವಾದ ಸೆಲ್ಲಮುತ್ತುರವರ ಸ್ವ-ಉದ್ಯೋಗ ಈಗ ಆ ಪ್ರದೇಶದಲ್ಲಿ ಪ್ರಸಿದ್ಧವಾಗಿದೆ. ದಿನಕ್ಕೆ ರೂ. ೫೦೦ ರಿಂದ ೬೦೦ರಷ್ಟು ಹಣ ಗಳಿಕೆ ಮಾಡುತ್ತಿದ್ದಾರೆ. ಸೆಲ್ಲಮುತ್ತುರವರ ಈ ಸಾಧನೆ ನಮ್ಮ ಹಳ್ಳಿಯ ನಿರುದ್ಯೋಗಿಗಳಿಗೆ ಪ್ರೇರಣೆಯಾಗಬಹುದಲ್ಲವೆ?

ಪಂಚಗವ್ಯ-ಪ್ರಯೋಗದ ಫಲಿತಾಂಶಗಳು

ತಮಿಳುನಾಡಿನ, ಈರೋಡ್ ಜಿಲ್ಲೆಯ ನಟರಾಜರವರು ೫ ಕೆ.ಜಿ. ಸಗಣಿ, ೫ ಲೀಟರ್ ನೀರು, ೨ ಲೀಟರ್ ಹಸುವಿನ ಹಾಲು, ೨ ಲೀಟರ್. ಮೊಸರು, ಒಂದು ಲೀಟರ್ ತುಪ್ಪ ಮತ್ತು ೨ ಲೀಟರ್ ಕಬ್ಬಿನ ರಸವನ್ನು ಒಂದು ಮಣ್ಣಿನ ಮಡಕೆಯಲ್ಲಿ ಹಾಕಿ, ಚೆನ್ನಾಗಿ ಬೆರೆಸಿ ನೆರಳಿನಲ್ಲಿ ಶೇಖರಿಸಿ ಇಡುತ್ತಾರೆ. ಮೂರು ವಾರಗಳ ನಂತರ ೨ ಲೀಟರಿನಷ್ಟು ಈ ಪಂಚಗವ್ಯವನ್ನು ತೆಗೆದು ೧೦೦ ಲೀಟರ್ ನೀರಿನಲ್ಲಿ ಬೆರೆಸಿ ಒಂದು ಎಕರೆ ಹಣ್ಣಿನ ಬೆಳೆಗಳಿಗೆ ಸಿಂಪಡಿಸುತ್ತಾರಂತೆ. ಈ ಪಂಚಗವ್ಯವನ್ನು ಅವರು ೬ ತಿಂಗಳು ಶೇಖರಿಸಿಡುತ್ತಾರಂತೆ.

ಇದೇ ಹಳ್ಳಿಯ ಈಶ್ವರಮೂರ್ತಿ ಎಂಬ ರೈತರು ನಟರಾಜ್‌ರವರಿಂದ ಪಂಚಗವ್ಯ ಪಡೆದು ಭತ್ತಕ್ಕೆ, ನಾಟಿ ಮಾಡಿದ ೨೫ ದಿನಗಳ ನಂತರ ಮತ್ತು ೪೯ ದಿನಗಳ ನಂತರ ಸಿಂಪಡಿಸಿದ್ದರಿಂದ ಭತ್ತದಲ್ಲಿ ಹೆಚ್ಚು ಇಳುವರಿಯನ್ನು ಪಡೆದರಂತೆ. ಈಶ್ವರಮೂರ್ತಿಯವರು ತಮ್ಮ ಮಲ್ಲಿಗೆ ತೋಟಕ್ಕೆ ಈ ಪಂಚಗವ್ಯ ಸಿಂಪಡಿಸಿದ್ದರಿಂದ ಮಲ್ಲಿಗೆ ಬಳ್ಳಿ ನಿರಂತರವಾಗಿ ಹೂ ಬಿಟ್ಟಿತಂತೆ. ನುಗ್ಗೆ ಗಿಡದ ಬುಡಕ್ಕೆ ೨ ಲೀಟರ್ ಪಂಚಗವ್ಯ ಹಾಕಿದ್ದರಿಂದ ಅವರು ಅತಿ ಹೆಚ್ಚು ನುಗ್ಗೆಕಾಯಿ ಪಡೆದರಂತೆ. ಅಂತೆಯೇ ಈ ಪಂಚಗವ್ಯವನ್ನು ಶೇಂಗದ ಬೀಜೋಪಚಾರಕ್ಕೆ, ಅರಿಶಿಣದ ಶೀಘ್ರ ಬೆಳವಣಿಗೆಗೆ ಬಳಸಬಹುದು ಎಂಬುದು ಈಶ್ವರಪ್ಪನವರ ಮತ್ತು ನಟರಾಜ್‌ರವರ ಅನುಭವವಾಗಿದೆ.

ಬೆಳೆಗಳಲ್ಲಿ ಕೀಟ ನಿಯಂತ್ರಣ

ಬೇವು, ಗ್ಲಿರಿಸೀಡಿಯ , ಎಕ್ಕ (Calotropis gigantea), ದತ್ತೂರಿ (Datura metel), ಲಕ್ಕೆ (Vitex negundo), ವಿಶಮದಾರಿ (Clerodendron Inerme) ಮತ್ತು ಬಿಲ್ವಪತ್ರೆ (Aegle marmelos) ಗಿಡಗಳ ಎಲೆಯನ್ನು ತಲಾ ಒಂದು ಕೆ.ಜಿ.ಯಂತೆ ೧೦ ಲೀಟರ್ ಕುದಿಸಿದ ನೀರಿನಲ್ಲಿ ೪೮ ಗಂಟೆ ಕಾಲ ಮುಳುಗಿಸಿ, ನಂತರ ಸೊಪ್ಪು ಹಿಂಡಿ, ಸೋಸಿ ೧:೧೦ರ ದ್ರಾವಣವನ್ನು ತಯಾರಿಸಿ ಬೆಳೆಗಳಿಗೆ ಸಿಂಪಡಿಸುವುದರಿಂದ ಬಹುತೇಕ ಕೀಟಗಳನ್ನು ಹತೋಟಿ ಮಾಡಬಹುದು ಎಂಬುದು ತಿಪಟೂರಿನ ಶಿವನಂಜಯ್ಯನವರ ಯಶಸ್ವಿ ಪ್ರಯೋಗವಾಗಿದೆ.

ಬೂದಿ ಮಹತ್ವ - ತಿಮ್ಮಕ್ಕನ ಅನುಭವ

ಹೂಗಿಡಗಳಿಗೆ ಬಿಳಿಚುಕ್ಕೆ ರೋಗ ಬಂದರೆ, ಬೂದಿಯನ್ನು ನೀರಿನೊಂದಿಗೆ ಬೆರೆಸಿ ಅಥವಾ ಒಣಗಿದ ಬೂದಿಯನ್ನು ಗಿಡಗಳ ಮೇಲೆ ಹಾಕಿದರೆ, ಈ ರೋಗ ಹತೋಟಿಗೆ

ಬರುತ್ತದೆ ಎಂಬುದು ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿ ತಿಮ್ಮಕ್ಕನ ಅನುಭವಾಗಿದೆ.

ಹೂವಿನ ಬೆಳೆಯಲ್ಲಿ ರೋಗ - ಕೀಟ ನಿಯಂತ್ರಣಕ್ಕೆ

ಶಿವನಂಜಯ್ಯನವರು ತೆಂಗಿನ ಎಳನೀರನ್ನು ಸಂಗ್ರಹಿಸಿ ಅದನ್ನು ೧:೧೦ರ ಪ್ರಮಾಣದಲ್ಲಿ ಹೂವಿನ ಗಿಡಗಳಿಗೆ ವಾರಕ್ಕೊಮ್ಮೆಯಂತೆ, ಒಂದು ತಿಂಗಳು ಕಾಲ ಸಿಂಪಡಿಸಿ ತಮ್ಮ ಹತೋಟದಲ್ಲಿ ಬರುವ ಕೀಟ ಮತ್ತು ರೋಗಗಳನ್ನು ನಿಯಂತ್ರಿಸುತ್ತಿದ್ದಾರೆ ಹಾಗೂ ಉತ್ತಮ ದರ್ಜೆಯ ಹೂಗಳನ್ನು ಮತ್ತು ಅಧಿಕ ಇಳುವರಿಯನ್ನು ಪಡೆಯುತ್ತಿದ್ದಾರೆ.

ಕಾಳು ಕೊರೆಯುವ ಹುಳುಗಳ ನಿಯಂತ್ರಣಕ್ಕೆ ಹೊಂಗೆ

ಕಾಳು ಕೊರೆಯುವ ಹುಳು (Heliothis) ಹೆಚ್ಚಿನ ಬೆಳೆಗಳನ್ನು ಕಾಡುವ ಕೀಟ. ಗುಜರಾತಿನ ದಾಹೋದ ಜಿಲ್ಲೆಯ, ಸಾದ್ಧ ಗ್ರಾಮದ ರೈತರಾದ ಕಲ್ಜಿಭಾಯಿ ಮಲ್ಜಿಭಾಯಿ ಡಾಂಗಿ ಇದಕ್ಕೆ ಕಂಡುಕೊಂಡಿರುವ ಔಷಧಿ ಹೊಂಗೆ. ಒಂದು ಕೆ.ಜಿ. ಹೊಂಗೆ ಎಲೆ ಮತ್ತು ತೊಗಟೆಯನ್ನು ೫ ಲೀಟರ್ ನೀರಿನಲ್ಲಿ ಸುಮಾರು ಅರ್ಧ ಗಂಟೆಯಷ್ಟು ಚೆನ್ನಾಗಿ ಕುದಿಸುತ್ತಾರಂತೆ. ಈ ದ್ರಾವಣವನ್ನು ಆರಿಸಿ, ೧೫ ಲೀಟರ್ ನೀರಿನಲ್ಲಿ ಬೆರೆಸಿ ತೆಳುಗೊಳಿಸುತ್ತಾರೆ. ಈ ದ್ರಾವಣದ ಸಿಂಪಡಣೆಯಿಂದ ಕಾಳುಕೊರಕದ ಕಾಟ ನಿಯಂತ್ರಣವಾಗುತ್ತದೆ ಎಂಬುದು ಇವರ ಅನುಭವ.

ಕಂಬಳಿ ಹುಳು ಹತೋಟಿಗೆ ಹುಣಸೆ ಮತ್ತು ನಿಂಬೆ ಹಣ್ಣು

ರೋಮಭರಿತ ಕಂಬಳಿಹುಳು, ಬೆಳೆಗಳ ಎಲೆಗಳನ್ನು ತಿಂದು ಹಾಳು ಮಾಡುತ್ತದೆ. ಈ ಕಂಬಳಿ ಹುಳುವನ್ನು ನಿಯಂತ್ರಿಸುವುದು ಹುಣಿಸೆ ಮತ್ತು ನಿಂಬೆ ಹಣ್ಣಿನಿಂದ ಸಾಧ್ಯ ಎನ್ನುತ್ತಾರೆ ಗುಜರಾತಿನ ಖೇಡಾ ಜಿಲ್ಲೆಯ ಮುನಡಾ ಗ್ರಾಮದ ರೈತರಾದ ಖನಿದಾನ ಮಾವಲ್ಜಿಗದ್ವಿ. ೧೫೦ ಮಿ.ಲಿ. ನಿಂಬೆರಸವನ್ನು ೧೫೦ ಮಿ.ಲಿ. ಹುಣಸೆ ರಸದೊಂದಿಗೆ ಬೆರೆಸಿ, ೧೫ ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಬೆಳೆಗಳ ಮೇಲೆ ಸಿಂಪಡಿಸುತ್ತಾರಂತೆ. ಹೀಗೆ ತಯಾರಿಸಿದ ಮಿಶ್ರಣ ಕಾಲು ಹೆಕ್ಟೇರ್ ಹೊಲಕ್ಕೆ ಸಿಂಪಡಿಸಲು ಸಾಕಾಗುತ್ತದಂತೆ.

ಕೀಟ ಮತ್ತು ರೋಗ ಹತೋಟಿಗೆ ಕ್ಯಾಸುರಿನಾದ ಎಲೆ

ತಮಿಳುನಾಡಿನ ದಿಂಡಿಗಲ್ಲು ಜಿಲ್ಲೆಯಲ್ಲಿ ಕುರಿಂಜಿ ಎಂಬ ಸಾವಯವ ಕೃಷಿ ತೋಟವಿದೆ. ಇವರ ಸಾವಯವ ಕೃಷಿಯಲ್ಲಿ ಕ್ಯಾಸುರನಾ ಎಲೆಯೇ ಸರ್ವರೋಗಗಳಿಗೆ ಔಷಧಿ, ಕ್ಯಾಸುರಿನಾ (Casuanina equisetifolia)ದ ಎಲೆಗಳನ್ನು ಸುಮಾರು ೨೦ ಮಿ.ಲೀ. ನೀರಿನಲ್ಲಿ ಚೆನ್ನಾಗಿ ಕುದಿಸಿ, ತಣಿಸಿ ಅನಂತರ ಬೆಳೆಯ ಮೇಲೆ ಸಿಂಪಡಿಸುತ್ತಾರಂತೆ. ಈ ಎಲೆಯ ಔಷಧಿ ಹೆಚ್ಚಿನ ಬ್ಯಾಕ್ಟೀರಿಯಾ ಹಾಗೂ ಶಿಲೀಂಧ್ರ (Fungus) ರೋಗಗಳನ್ನು ಹತೋಟಿ ಮಾಡುತ್ತದೆಯಂತೆ. ೨೦ ಕೆ.ಜಿ. ಎಲೆಯಿಂದ ತಯಾರಿಸಿದ ದ್ರಾವಣ ಒಂದು ಎಕರೆಗೆ ಸಾಕಾಗುತ್ತದೆಯಂತೆ.

ಗೋಧಿಯ ಬೀಜಕ್ಕೆ ಕತ್ತೆಯ ಮೂತ್ರದ ರಕ್ಷಣೆ

ಗುಜರಾತಿನ ಸಬರಕಾಂತ ಜಿಲ್ಲೆಯ ಚದರಾನಿ ಗ್ರಾಮದ ಧನಭಾಯಿ ಕೀಮಾಭಾಯಿ ಹಾಗೂ ಇನ್ನಿತರ ರೈತರು ಗೋಧಿ ಬಿತ್ತನೆ ಬೀಜವನ್ನು ಬಿತ್ತನೆಗೆ ಮೊದಲು ಕತ್ತೆಯ ಮೂತ್ರದಲ್ಲಿ ನೆನೆಸುತ್ತಾರಂತೆ. ಹೀಗೆ ನೆನೆಸಿ ಬಿತ್ತಿದ ಬೀಜದಿಂದ ಬೆಳೆದ ಬೆಳೆ ಗೆದ್ದಲಿನ ಕಾಟದಿಂದ ಮುಕ್ತವಾಗಿರುತ್ತದಂತೆ.

ಗಿಡಹೇನು (Aphids) ಓಡಿಸಲು ಸಗಣಿ ಮತ್ತು ಬೂದಿ

ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪಾಪರಪಟ್ಟಿ ಊರಿನ ಎನ್. ಪಾಂಡುರಂಗನ್ ರವರ ಪ್ರಕಾರ ೧೦ ಕೆ.ಜಿ. ಸಗಣಿಯನ್ನು ಚೆನ್ನಾಗಿ ಒಣಗಿಸಿ, ಪುಡಿಮಾಡಿ ಬೂದಿಯೊಂದಿಗೆ ಬೆರೆಸಿ ಮುಂಜಾವಿನಲ್ಲಿ ಎಲೆಗಳ ಮೇಲೆ ಉದುರಿಸುವುದರಿಂದ ಗಿಡಹೇನನ್ನು ಓಡಿಸಬಹುದಂತೆ.

ಇದೇ ರೀತಿ ಮುಂಜಾವಿನಲ್ಲಿ ಗಿಡಗಳ ಮೇಲೆ ಬೂದಿ ಉದುರಿಸುವುದರಿಂದ ಗಿಡ ಹೇನು ನಿಯಂತ್ರಣಕ್ಕೆ ಬರುತ್ತದೆ ಎನ್ನುವ ಅನುಭವ ಮಲೆನಾಡಿನ ರೈತ ಮಹಿಳೆಯರದೂ ಕೂಡ.

ಹಕ್ಕಿಗಳ ಕಾಟ ತಪ್ಪಿಸಲು ಹಾವು!

ಇದೇನಪ್ಪಾ, ಹಕ್ಕಿ ಕಾಟ ತಪ್ಪಿಸಿ, ಹಾವಿನ ವಿಷಕ್ಕೆ ಸಿಕ್ಕಿ ಬೀಳುವುದೇ? ಹಾಗಲ್ಲಾ, ಹಾವು ನಿಜವಾದದ್ದಲ್ಲ. ಎಣ್ಣೆ ಬೀಜದ ಕಾಳಿನ ಬಿತ್ತನೆಯ ನಂತರ ಕಾಳುಗಳನ್ನು ಎತ್ತಿ ತಿಂದು ಕಾಟ ಕೊಡುವ ಹಕ್ಕಿಗಳನ್ನು ಓಡಿಸಲು ಅಸ್ಸಾಂನ ಜನರು ಉತ್ತರ ಹುಡುಕಿದ್ದು ಕೆಸುವಿನ ದಂಟಿನಲ್ಲಿ. ಕೆಸುವಿನ ದಂಟುಗಳನ್ನು ಕತ್ತರಿಸಿ ಹೊಲದಲ್ಲಿ ಅಲ್ಲಲ್ಲಿ ಹರಡುತ್ತಾರಂತೆ. ಕಪ್ಪನೆಯ ಈ ದಂಟುಗಳು ಹಾವಿನಂತೆ ಕಂಡು ಹೆದರಿ, ಹಕ್ಕಿಗಳು ಮತ್ತೆ ಅತ್ತ ಕಡೆ ತಿರುಗದೆ ಹಾರಿ ಹೋಗುವುವಂತೆ.

ಗಿಡಕ್ಕೆ ಗಿಡವೇ ಮದ್ದು

ಗಿಡಕ್ಕೆ ರಾಸಾಯನಿಕಗಳೇಕೆ? ಗಿಡಕ್ಕೆ ಗಿಡವೇ ಮದ್ದು ಎಂಬ ಜ್ಞಾನೋದಯವಾಗಿದೆಯಂತೆ ತಮಿಳುನಾಡಿನ ಸೆಲ್ಲಮುತ್ತುವಿಗೆ. ಸೆಲ್ಲಮುತ್ತುವಿನ ಉದ್ಯೋಗವೆಂದರೆ ಗಿಡಗಳಿಗೆ ಔಷಧಿ ಸಿಂಪಡಿಸುವುದು. ಪಡುಕೋಟ್ಟೈಯಲ್ಲಿನ ನೇಚರ್ ಟ್ರಸ್ಟ್ ಸಂಸ್ಥೆಯ ಸಂಪರ್ಕವಿದ್ದ ಡಾ. ನಟರಾಜ್ ತಾವು ತಿಳಿದಿದ್ದ ಒಂದು ಗಿಡಮೂಲಿಕೆಗಳ ಮದ್ದನ್ನು ಸೆಲ್ಲಮುತ್ತುವಿಗೆ ತಿಳಿಸಿ ರಾಸಾಯನಿಕ ಔಷಧಿಗಳ ಬದಲಿಗೆ ಗಿಡಗಳಿಗೆ ಈ ಗಿಡಮೂಲಿಕೆಗಳ ಔಷಧಿಯನ್ನೇ ಸಿಂಪರಿಸುವಂತೆ ಸಲಹೆ ಮಾಡಿದರಂತೆ. ಅವರು ಹೇಳಿದ ಮದ್ದು ಹೀಗಿದೆ:

೩ ಕೆ.ಜಿ. ಲಕ್ಕಿಲಿ ಗಿಡ ಎಲೆ (Vitex negundo), ೩ ಕೆ.ಜಿ. ವಿಷಮಧಾರಿ ಕುಂಡಲಿ ಎಲೆ (Clerodendron inerme), ೨ ಕೆ.ಜಿ. ಲೋಳೆ ಸರ ಎಲೆ (Aloe vera), ೩ ಕೆ.ಜಿ. ಬೇವಿನ ಬೀಜ ಇವೆಲ್ಲವನ್ನೂ ಒಟ್ಟಾಗಿ ಚೆನ್ನಾಗಿ ಪುಡಿ ಮಾಡಿ ೧೦೦ ಲೀಟರ್ ನೀರಿನಲ್ಲಿ

ಬೆರಸಿ ಒಂದು ಎಕರೆಗೆ ಸಿಂಪರಣೆ ಮಾಡಲು ಬಳಸಬಹುದು. ಆದರೆ ಈ ರೀತಿ ಸಿದ್ಧಪಡಿಸಿದ ಮಿಶ್ರಣವನ್ನು ಸಂಗ್ರಹಿಸಿ ಇಡುವಂತಿಲ್ಲ, ಅದೇ ದಿನ ಬಳಸಬೇಕು. ಈ ಗಿಡಮೂಲಿಕೆಗಳ ಔಷಧಿಗೆ ಈರೋಡ್ ಜಿಲ್ಲೆಯಲ್ಲಿ ಒಳ್ಳೆಯ ಬೇಡಿಕೆಯಂತೆ. ಈ ಔಷಧಿ ಸಿದ್ಧಪಡಿಸಿ ಸಿಂಪಡಿಸುವುದರಿಂದ ದಿನವೊಂದಕ್ಕೆ ೫೦೦ ರೂಪಾಯಿ ಸಂಪಾದನೆ ಆಗುತ್ತಿದೆಯಂತೆ.

ಹಕ್ಕಿ ಓಡಿಸಲು ಹಲವಾರು ವಿಧಾನ

ರಾಜಸ್ಥಾನದ ಜನರು ಹಕ್ಕಿ ಓಡಿಸಲು ಅನೇಕ ವಿಧಾನಗಳನ್ನು ಹುಡುಕಿಕೊಂಡಿದ್ದಾರೆ.

೧. ರಾಜಸ್ಥಾನದ ಭಿಲ್ಲ ಜನಾಂಗದ ಜನ ಬೆರ್ಚಪ್ಪನ ಕೈಗೊಂದು ಬಿಲ್ಲು ಬಾಣ ಕೊಡುತ್ತಾರೆ. ಅದೇ ಜನಾಂಗದ ಜನರು ಇನ್ನೊಂದು ಪದ್ಧತಿಯೆಂದರೆ ಎತ್ತರವಾದ ಮರದ ತುದಿಗೆ ಬಾವುಟ ಕಟ್ಟುವುದು. ಇದೂ ಕೂಡ ಹಕ್ಕಿಗಳನ್ನು ಓಡಿಸಿ, ಬೆಳೆ ಸಂರಕ್ಷಿಸಲು ನೆರವಾಗುತ್ತದೆ.

೨. ಅದೇ ರೀತಿ ಹಕ್ಕಿ ಓಡಿಸಲು ರಾಜಸ್ಥಾನದ ಜನರು ಬಳಸುವ ಇನ್ನೊಂದು ವಿಧಾನ ಬಹು ಸರಳ. ಒಣಗಿದ ತೇಗ, ಮುತ್ತುಗದ ಎಲೆಗಳನ್ನು ದಾರದಲ್ಲಿ ಕಟ್ಟಿ ಮಾಲೆ ಮಾಡುತ್ತಾರೆ. ಈ ಮಾಲೆಯ ಮಧ್ಯಕ್ಕೆ ದಾರ ಕಟ್ಟಿ ಹಕ್ಕಿ ಕಾಯಲು ಮಂಚದ ಮೇಲೆ ಕುಳಿತ ವ್ಯಕ್ತಿ ದಾರ ಎಳೆಯುತ್ತಿರುತ್ತಾನೆ. ಒಣಗಿದ ಎಲೆಗಳ ಶಬ್ದಕ್ಕೆ ಹೆದರಿ ಹಕ್ಕಿಗಳು ಹಾರಿ ಹೋಗುತ್ತವೆ. ಕೆಲವೊಮ್ಮೆ ಎಲೆಗಳ ಬದಲು ಗಂಟೆಗಳನ್ನು ಕಟ್ಟುವುದೂ ಉಂಟು.


೩. ಮಣ್ಣಿನ ಮಡಿಕೆಯ ಬಾಯಿಗೆ ರಂಧ್ರವಿರುವ ಕುರಿಯ ಚರ್ಮವನ್ನು ಬಿಗಿಯಾಗಿ ಎಳೆದು ಕಟ್ಟುತ್ತಾರೆ. ರಂಧ್ರದೊಳಗೆ ಹಕ್ಕಿಯ ಪುಕ್ಕದ ತುದಿಯನ್ನು ಚರ್ಮದೊಳಗೆ ಸೇರಿಸಿ, ಒಂದು ತುದಿಯನ್ನು ಗಂಟುಹಾಕಿ ಮೊದಲೇ ಸಿದ್ಧಗೊಳಿಸಿರುತ್ತಾರೆ. ಕಾಲುಗಳ ಮಧ್ಯೆ ಮಡಿಕೆಯನ್ನಿರಿಸಿಕೊಂಡು, ಪುಕ್ಕವನ್ನು ಎಳೆದಾಗ ಹೊರಡುವ ಶಬ್ದಕ್ಕೆ ಹಕ್ಕಿಗಳು ಹಾರಿ ಹೋಗುತ್ತವಂತೆ.

ಗ್ಲಾಡಿಯೋಲಸ್ ಹೂ ತಿನ್ನುವ ಹುಳು ಹತೋಟಿಗೆ

ಮೂರು ಕೆ.ಜಿ. ವಿಷಮಧಾರಿ (Clerodendron inermis) ಗಿಡದ ಎಲೆಯನ್ನು ಸಂಗ್ರಹಿಸಿಟ್ಟುಕೊಳ್ಳಿ. ಚೆನ್ನಾಗಿ ಅರೆಯಿರಿ. ಇದನ್ನು ಹತ್ತು ಲೀಟರ್ ಗಂಜಲದಲ್ಲಿ ಒಂದು ರಾತ್ರಿ ನೆನೆಯಿಡಿ. ಮರುದಿನ ಬೆಳಿಗ್ಗೆ ಚೆನ್ನಾಗಿ ಸೋಸಿರಿ. ತಿಳಿ ದ್ರಾವಣಕ್ಕೆ ೨೦೦ ಲೀ. ನೀರು ಬೆರೆಸಿ ದುರ್ಬಲ ದ್ರಾವಣ ತಯಾರಿಸಿ, ಸಂಜೆಯ ವೇಳೆ ಗ್ಲಾಡಿಯೋಲಸ್ ಹೂ ಬೆಳೆಗೆ ಸಿಂಪಡಿಸಿ, ರಾತ್ರಿಯೊಳಗೆ ಹೂ ತಿನ್ನುವ ಹುಳು ದಿಕ್ಕಾಪಾಲು. ಮೇಲೆ ತಯಾರಿಸಲು ತಿಳಿಸಿದ ದ್ರಾವಣ ಒಂದೆಕ್ರೆಗೆ ಸಾಕು ಎನ್ನುತ್ತಾರೆ ಕರ್ನಾಟಕದ ಸಾವಯವ ಕೃಷಿಋಷಿ ಸೋರಹುಣಸೆ ನಾರಾಯಣ ರೆಡ್ಡಿಯವರು.

ಗೆದ್ದಲು ಹಿಡಿಯುತ್ತಿದೆಯೇ?

ಕಬ್ಬಿನ ತೋಟಕ್ಕೆ ಗೆದ್ದಲಿನ ಕಾಟ ತಪ್ಪಿಸಲು ತೋಟಕ್ಕೆ ನೀರು ಬಿಡುವ ಕಾಲುವೆಯಲ್ಲಿ ಉಪ್ಪನ್ನು ಒಂದು ಬಟ್ಟೆಯಲ್ಲಿ ಗಂಟು ಕಟ್ಟಿ ಇಟ್ಟು ಬಿಡಿ. ನೀರಿ ನೊಂದಿಗೆ ಹರಿದು ಹೋಗುವ



ಉಪ್ಪಿನಂಶ ಗೆದ್ದಲಿನ ಕಾಟವನ್ನು ಕೂಡ ತಡೆಯುತ್ತದೆಯಂತೆ. ಕೋಲುಕಳ್ಳಿ ಅಥವಾ ಮುಂಡುಗಳ್ಳಿ, (Euphorbia tirucalli), ಲಾವಂಚ ಅಥವಾ ಕಸ್‌ಕಸ್ (Vetiveria zizanioides) ಮತ್ತು ಎಕ್ಕದ ಗಿಡಗಳನ್ನು ಅಲ್ಲಲ್ಲಿ ನೆಡುವುದರಿಂದ ಹೊಲ-ಗದ್ದೆಗಳಲ್ಲಿ ಗೆದ್ದಲು ಕಡಿಮೆಯಾಗುತ್ತದೆ ಎನ್ನುವುದು ದಕ್ಷಿಣ ಕರ್ನಾಟಕದ ರೈತರ ಶೋಧನೆ.

ಕಂಬಳಿಹುಳು ಹಾಗೂ ಹಿಲಿಯೋಥಿಸ್‌ಗೆ ಕಡಿವಾಣ!

ಕಂಬಳಿ ಹುಳುವಿನ ಕಾಟ ಒಂದೆರಡು ಬೆಳೆಗಲ್ಲ. ಹಾಗೆಯೇ ಹಿಲಿಯೋಥಿಸ್ ರುಚಿ ನೋಡದ ಬೆಳೆಗಳು ಕೆಲವೇ! ಇವುಗಳನ್ನು ನಿಯಂತ್ರಿಸಲು ಈ ತಂತ್ರ ಬಳಸಬಹುದು. ಒಂದು ಕೆ.ಜಿ. ಬೆಳ್ಳುಳ್ಳಿಗೆ ಇನ್ನೂರು ಮಿ.ಲೀ. ಸೀಮೆಎಣ್ಣೆ ಸೇರಿಸಿ ಚೆನ್ನಾಗಿ ಜಜ್ಜಿ ಒಂದು ರಾತ್ರಿ ಹಾಗೇ ಬಿಡಿ. ಮಾರನೇ ದಿನ ಬೆಳಿಗ್ಗೆ ಎರಡು ಕೆ.ಜಿ. ಹಸಿಮೆಣಸನ್ನು ಚೆನ್ನಾಗಿ ಅರೆದು ಬೆಳ್ಳುಳ್ಳಿ ರಸದೊಂದಿಗೆ ಸೇರಿಸಿ. ಇನ್ನೂರು ಲೀ. ನೀರು ಬೆರೆಸಿ ಒಂದೆಕ್ರೆಗೆ ಸಿಂಪಡಿಸಿ ಈ 'ರುಚಿಕರ' ರಸ ನಿಮ್ಮ ಬೆಳೆಯಲು ಮೇಲೆ ಬಿದ್ದರೆ ನಿಜಕ್ಕೂ ಹುಳುಗಳು ನಿಮ್ಮ ಬೆಳೆಯ ರುಚಿ ನೋಡದು! ಇದೂ ನಾರಾಯಣ ರೆಡ್ಡಿಯವರ ಮತ್ತೊಂದು ಕ್ರಮ.

ಕೀಟ ಹತೋಟಿಗೆ ನೀಲಗಿರಿ ಎಲೆ ಹೊಗ?

ಸಂಜೆಯ ವೇಳೆ ಗಾಳಿ ಬೀಸುವ ದಿಕ್ಕಿನಲ್ಲಿ (ಹೊಗೆ ಬೆಳೆಯ ಮೇಲೆ ಹಾಯುವಂತೆ) ಒಣಗಿದ ನೀಲಗಿರಿ ಎಲೆಗಳನ್ನು ಒಟ್ಟು ಸೇರಿಸಿ ಬೆಂಕಿ ಹಾಕಿದರೆ, ಸುಗಂಧಿತ ಹೊಗೆ ಬೆಳೆಯ ಮೇಲೆ ಕೂತಿರುವ ಹುಳಗಳಿಗೆ ಶಾಕ್ ನೀಡುತ್ತದೆ ಎನ್ನುತ್ತಾರೆ ರೆಡ್ಡಿಯವರು.

ಇಲಿ ನಿಯಂತ್ರಣ

ಗುಜರಾತಿನ ಸೌರಾಷ್ಟ್ರ ಪ್ರಾಂತ್ಯದ ಜನರು ತಮ್ಮದೇ ಇಲಿ ನಿಯಂತ್ರಣ ಕ್ರಮ ಕಂಡುಹುಡುಕಿದ್ದಾರೆ. ಬೋನಿನಲ್ಲಿ ಆಹಾರವನ್ನಿರಿಸಿ ಮೊದಲು ಒಂದು ಇಲಿಯನ್ನು ಹಿಡಿಯುತ್ತಾರೆ. ಹೀಗೆ ಹಿಡಿದ ಇಲಿಗೆ ಅರಿಶಿಣವನ್ನು ನೀರಲ್ಲಿ ಕಲಸಿ ದ್ರಾವಣ ಮಾಡಿ ಸುರಿಯುತ್ತಾರೆ. ಹೀಗೆ ಹಳದಿ ಬಣ್ಣ ಹೊಂದಿದ ಇಲಿಯನ್ನು ಅನಂತರ ಉಗ್ರಾಣಾದಲ್ಲೋ ಅಥವಾ ಜಮೀನಿನಲ್ಲೋ ಬಿಡುತ್ತಾರೆ. ಈ ಹೊಸ ಇಲಿಯನ್ನು ಕಂಡ ಉಳಿದ ಇಲಿಗಳೂ ಅಲ್ಲಿಂದ ಜಾಗ ಖಾಲಿ ಮಾಡುತ್ತವೆ.

ತುಂಗೆ ಹುಲ್ಲು ತಡೆಗಟ್ಟಲು

ತುಂಗೆ ಹುಲ್ಲು (Cyperus rotendus) ಎಂಬ ಕಳೆಯನ್ನು ತಡೆಗಟ್ಟಲು ಆಡಿನ ಗೊಬ್ಬರವನ್ನು ಈ ಹುಲ್ಲಿನ ಸೋಂಕು ಇಲ್ಲದಂತಹ ಹಳ್ಳಿಯಿಂದ ತಂದು ಉಪಯೋಗಿಸ

ಬಹುದು. ಬೇವಿನ ಬೀಜದ ಪುಡಿಯನ್ನು ಕೂಡ ಗೊಬ್ಬರದಂತೆ ಕಿತ್ತಳೆ, ಸೀಬೆ, ಮಾವು ಈ ತೋಟಗಳಲ್ಲಿ ಉಪಯೋಗಿಸುವುದರಿಂದ ತುಂಗೆ ಹುಲ್ಲನ್ನು ತಡೆಗಟ್ಟಬಹುದು. ತಮಿಳುನಾಡಿನ ನೆಲ್ಲೈ ಕಟ್ಟಬೊಮ್ಮನ್ ಜಿಲ್ಲೆಯ ಶ್ರೀ ವೇಲು ಮುದಲಿಯಾರ್ ಅವರು ಈ ಪ್ರಯೋಗವನ್ನು ಮಾಡಿ ಸಫಲತೆಯನ್ನು ಪಡೆದಿದ್ದಾರೆ.

ಗರಕೆಹುಲ್ಲು ತಡೆಗಟ್ಟಲು

ಗರಕೆಹುಲ್ಲು ಅಥವಾ ಕಾಡುಗರಿಕೆ (Cynodon dactylon) ಹುಲ್ಲನ್ನು ಸಾಧಾರಣವಾಗಿ ಕೀಳಲು ಸಾಧ್ಯವಿಲ್ಲ. ಮೆಹಾಸನಾ ಜಿಲ್ಲೆಯ ಕಾತಿ ಹಳ್ಳಿಯ ದೇವಶೀಜೀಭಾಯಿ ಠಾಕೂರ್ ಎಂಬುವವರು ಜೀರಿಗೆ ಗಿಡದ ಸಹಾಯದಿಂದ ಈ ಹುಲ್ಲನ್ನು ತಡೆಗಟ್ಟುವ ವಿಧಾನವನ್ನು ಕಂಡು ಹಿಡಿದಿದ್ದಾರೆ.

ಅವರ ಪ್ರಕಾರ ಬೇಸಿಗೆಯಲ್ಲಿ ಜೀರಿಗೆ ಗಿಡದ ಕಡ್ಡಿಗಳನ್ನು ಹೊಲಗಳಲ್ಲಿ ಹರಡಬೇಕು. ಮಳೆಗಾಲದಲ್ಲಿ ಮಳೆನೀರು ಈ ಕಡ್ಡಿಗಳ ಮೂಲಕವೇ ಇಳಿದು ಮಣ್ಣನ್ನು ಸೇರುತ್ತದೆ. ಹೀಗೆ ಮಣ್ಣನ್ನು ಸೇರಿದ ನೀರು ಗರಿಕೆ ಹುಲ್ಲು ಬೆಳೆಯುವುದನ್ನು ತಡೆಗಟ್ಟುತ್ತದೆ. ಜೀರಿಗೆ ಕಡ್ಡಿಗಳು ಕೊಳೆತು ಮಣ್ಣಾಗಲು ಒಂದು ವರ್ಷ ಕಾಲ ಬೇಕಾಗುತ್ತದೆ.

ಬೆಳೆಗಳಿಗೆ ಬೀಳುವ ಹೇನಿನ ನಾಶಕ್ಕೆ

ಜನವರಿ ತಿಂಗಳಲ್ಲಿ ಹಿಪ್ಪೆ ಹೂ ಬೀಳಲು ಪ್ರಾರಂಭಿಸುತ್ತದೆ. ಈ ಹೂಗಳನ್ನು ಶೇಖರಿಸಿ ನೆರಳಿನಲ್ಲಿ ಒಣಗಿಸಿ ಅದರ ಕಷಾಯವನ್ನು ದ್ವಿದಳ ಧಾನ್ಯದ ಬೆಳೆಗೆ, ನಿಂಬೆ ಗಿಡಕ್ಕೆ, ಕಲ್ಲಂಗಡಿ ಕಾಯಿಗಳ ಮೇಲು ಭಾಗದ ತೊಗಟೆಗೆ ತಗಲುವ ಕೀಟಗಳಿಗೆ ಸಿಂಪಡಿಸಿದರೆ ಸಂಪೂರ್ಣ ಹತೋಟಿಗೆ ಬರುತ್ತದೆ. ಏಪ್ರಿಲ್ ತಿಂಗಳಲ್ಲಿ ದೊರೆಯುವ ಹೊಂಗೆ ಹೂಗಳ ಕಷಾಯವನ್ನು ಬಳಸಬಹುದು.

ಕರಿಬೇವಿನ ಎಲೆಯ ಸುಗಂಧ ಹೆಚ್ಚಿಸಲು


ಸುಮಾರು ೧.೫. ಲೀಟರ್‌ನಷ್ಟು ಮಜ್ಜಿಗೆಯನ್ನು ಕರಿಬೇವಿನ ಗಿಡದ ಕಾಂಡಗಳಿಗೆ ಸುರಿಯಬೇಕು. ಇದನ್ನು ವಾರಕ್ಕೆ ಒಂದು ಬಾರಿ ಮಾಡಿದರೆ ಕರಿಬೇವಿನ ಎಲೆಗಳ ಪರಿಮಳ ಹೆಚ್ಚಾಗುತ್ತದೆ ಎಂದು ಕನ್ಯಾಕುಮಾರಿ ಜಿಲ್ಲೆಯ ಶ್ರೀ ವೇಲು ಮೊದಲಿಯಾರ್ ಹೇಳುತ್ತಾರೆ.

ಕಾಫಿ ಕಾಂಡ ಕೊರೆಯುವ ಕೀಟಕ್ಕೆ

ಕಣಗಲ (Nerium odorum) ಹೂ ಗಿಡದ ಬೇರನ್ನು (೪೦೦ ಗ್ರಾಂ) ಸಣ್ಣ ಪ್ರಮಾಣದಲ್ಲಿ ಕತ್ತರಿಸಿ ೧೫೦೦ ಮಿ.ಲೀ. ನೀರಿನಲ್ಲಿ ನೆನೆಹಾಕಿ (೪೮ ಗಂಟೆಕಾಲ) ಈ ಮಿಶ್ರಣವನ್ನು ೨೦ ಗ್ರಾಂ. ಅರಿಶಿಣದ ಪುಡಿಯೊಂದಿಗೆ ಮಿಶ್ರಣ ಮಾಡಿ ತಯಾರಾದ ಲೇಹವನ್ನು ಕಾಂಡ ಕೊರೆಯುವ ಭಾಗಕ್ಕೆ ಲೇಪಿಸಿದರೆ ಈ ಕೀಟ ಹೊರಬಂದು ಸಾಯುತ್ತದೆ. ಈ ಔಷಧಿ ತಯಾರು ಮಾಡಿದ ನಂತರ ಕೈಯನ್ನು ಚೆನ್ನಾಗಿ ತೊಳೆದುಕೊಳ್ಳಬೇಕು. ಈ ದ್ರಾವಣ ಮಹಾ ವಿಷಕಾರಿ, ಕೀಟನಾಶಕವಾಗಿ ಸಿದ್ಧೌಷಧ ಎನ್ನುತ್ತಾರೆ ಬಿ. ಬಸವರಾಜು ಸಂತೇಶಿವರರವರು.

ಇಲಿ, ಹೆಗ್ಗಣಗಳ ನಾಶ ಮಾಡಲು

೯೦ ಭಾಗ ಎಳ್ಳು, ಕಡಲೆ ಬೀಜ, ಹುಚ್ಚೆಳ್ಳು, ಈ ರೀತಿಯ ಯಾವುದಾದರೊಂದು ಹಿಟ್ಟು+೫ ಭಾಗ ದಪ್ಪ ಕಾಳಿನ ಸಕ್ಕರೆ + ೫ ಭಾಗ ಬಲ್ಬಿನಪುಡಿ ಅಥವಾ ಟ್ಯೂಬ್‌ನ ಪುಡಿಯನ್ನು ಬೆರಸಿ ಇಲಿಗಳ ಬಿಲಗಳ ಹತ್ತಿರ ಇಟ್ಟರೆ ಇವು ತಿಂದು ಒಂದು ವಾರದಲ್ಲಿ ಸಾಯುತ್ತವೆ ಎನ್ನುವುದು ಹಾಸನದ ಕೆಲರೈತರು ನಡೆಸಿದ ಪ್ರಯೋಗ.



ಹಂದಿಗಳು ಬಾರದಂತೆ ತಡೆಯಲು

ಹಳೆಯ ದನದ ಕೊಂಬುಗಳನ್ನು ಆರಿಸಿ ಇಡಬೇಕು. ಈ ಕೊಂಬುಗಳಲ್ಲಿ ಸೀಮೆಎಣ್ಣೆ ತುಂಬಿಸಿ, ಬೆಂಕಿ ಹಚ್ಚಬೇಕು. ಇದರಿಂದ ಬರುವ ವಾಸನೆಗೆ ಹಂದಿಗಳು ಹತ್ತಿರ ಸುಳಿಯುವುದಿಲ್ಲ. ದಾವಣಗೆರೆಯ ಭರಮಪ್ಪನವರ ಗದ್ದೆಯಲ್ಲಿ ಈ ವಿಧಾನವನ್ನು ಅನುಸರಿಸುತ್ತಾರೆ.

ಪಾಮ್‌ರೋಸ್ ಹುಲ್ಲಿನ ಎಣ್ಣೆಯಿಂದ ಕೀಟನಾಶ

ಪಾಮ್‌ರೋಸ್ ಹುಲ್ಲಿನಿಂದ ಭಟ್ಟಿ ಇಳಿಸಿದ ಸುವಾಸನಾಯುಕ್ತ ತೈಲಕ್ಕೆ ವಿದೇಶಿ ಬೇಡಿಕೆ ಹೆಚ್ಚಾಗಿದೆ. ತಮಿಳುನಾಡಿನಲ್ಲಿ ಇದನ್ನು ವ್ಯಾಪಕವಾಗಿ ಬೆಳೆಸಲಾಗುತ್ತಿದೆ. ತೈಲವನ್ನು ಭಟ್ಟಿ ಇಳಿಸಿದ ನಂತರ ಪಾತ್ರೆಯಲ್ಲಿ ಉಳಿದ ಎಣ್ಣೆಯನ್ನು ಮೆಣಸಿನಕಾಯಿ ಮತ್ತು ಹತ್ತಿ ಬೆಳೆಗಳನ್ನು ಬಾಧಿಸುವ ರಸ ಹೀರುವ ಕೀಟಗಳ ವಿರುದ್ಧ ಬಳಸಬಹುದು.



ಬೇರಿನ ಹುಳುಗಳು

ಕಾಸರಕದ ಸೊಪ್ಪನ್ನು (Strychnos nuxvomica) ಸಗಣಿಯ ಜೊತೆ ಬೆರೆಸಿ ತಯಾರಿಸಿದ ಗೊಬ್ಬರವನ್ನು ಏಲಕ್ಕಿ, ನಿಂಬೆ ಸಸಿಗಳಿಗೆ ಹಾಕುವುದರಿಂದ ಬೇರಿಗೆ ತೊಂದರೆ ಕೊಡುವ ಹುಳುಗಳು (Rootgrubs) ನಾಶವಾಗುತ್ತವೆ ಎನ್ನುವುದು ಉತ್ತರ ಕನ್ನಡದ ಟಿ.ಎಸ್. ಹೆಗಡೆ, ಆಶೀಸರ ಇವರ ಅನುಶೋಧನೆ.

ಹೆಗ್ಗಣ ಕಾಟ ತಡೆಯುವುದು

ಮೆಣಸಿನ ಕಾಳನ್ನು ಬಿಡಿಸಿದ ದಂಟನ್ನು ಸುಟ್ಟು ಬಿಲಗಳಿಗೆ ಹೊಗೆ ಹಾಯಿಸುವುದರಿಂದ ಹೆಗ್ಗಣಗಳು ಸಾಯುತ್ತವೆ ಎನ್ನುವುದೂ ಕೆ.ಕೆ. ಹೆಗಡೆ, ಆಶೀಸರ ಇವರ ಶೋಧನೆ.

ಚೆಂಡು ಹೂವು

ಮೆಣಸಿನ ಗಿಡಗಳ ನಡುವೆ ಅಲ್ಲಲ್ಲಿ ಚೆಂಡು ಹೂವು ನೆಟ್ಟರೆ, ಮೆಣಸಿನ ಕೀಟ ಮತ್ತು ರೋಗದ ಬಾಧೆ ಕಡಿಮೆ ಎನ್ನುವುದು ಕೋಲಾರದ ರೈತರ ಅನುಭವ.

ಕರಿಹೇನು ನಿರ್ವಹಣೆ

ಗೇರು ಬೀಜದ ಕಾಯಿಯನ್ನು ಚೆನ್ನಾಗಿ ಪುಡಿ ಮಾಡಿ ಒಣಗಿಸಿ. ಒಂದು ಹಳೇ ತಪ್ಪಲೆ (ಪಾತ್ರೆ)ಯಲ್ಲಿ ಕೆಂಪನೆಯ ಕೆಂಡವನ್ನು ಇಡಿ. ಆ ಕೆಂಪನೆಯ ಕೆಂಡದ ಮೇಲೆ ಗೇರುಬೀಜದ ಪುಡಿಯನ್ನು ಸ್ವಲ್ಪ ಹಾಕಿದರೂ ಸಾಕು. ಆಗಬರುವ ಹೊಗೆಯನ್ನು ಕರಿಹೇನು ಹತ್ತಿರುವ ಗಿಡದ ಮೇಲೆ ಹಾಯಿಸಿದರೆ, ಗಿಡಕ್ಕೆ ಕರಿಹೇನು ಬರದಂತೆ ತಡೆಯಬಹುದು. ಇದನ್ನು ಕಡೂರು ತಾಲ್ಲೂಕಿನ, ದೇವನೂರು ಪಕ್ಕದ ಜೋಳನಹಳ್ಳಿ ಗ್ರಾಮದ ರೈತರೊಬ್ಬರು ಕುಂಬಳ ಜಾತಿಯ ಬಳ್ಳಿಗಳಲ್ಲಿ ಕರಿಹೇನು ನಿರ್ವಹಣೆಗಾಗಿ ಬಳಸುತ್ತಿದ್ದಾರೆ.

ಕಾಸರಕ ಸೆಗಣಿ

ಗೊಬ್ಬರದಿಂದಲೂ ಹುಳದ ಉಪಟಳ ತಗ್ಗಿಸುವ ಪ್ರಯತ್ನ ಉತ್ತರ ಕನ್ನಡದಲ್ಲಿ ಒಂದೆಡೆ ಅನೇಕ ದಿನಗಳಿಂದ ಜಾರಿಯಲ್ಲಿದೆ. ನಿಂಬೆ ಮತ್ತು ಎಲಕ್ಕಿ ಗಿಡಗಳಿಗೆ ಕಾಸರಕ (Strychnos nuxvomica)ವನ್ನು ಸೆಗಣಿಯಲ್ಲಿ ಬೆರಸಿ ಮಾಡಿದ ಗೊಬ್ಬರವನ್ನೇ ಉಣಿಸುವುದು. 'ಕಾಸರಕದ ಔಷಧಿಯ ಗುಣದಿಂದ ಗೊಬ್ಬರದ ಮೌಲ್ಯ ಹೆಚ್ಚುವುದರ ಜೊತೆ ಕಾಂಡ ಕೊರೆಯುವ ಹುಳದ ಬಾಧೆ ಇಲ್ಲವಾಗುತ್ತದೆ' ಎನ್ನುತ್ತಾರೆ ಕೃಷಿ ಪದವೀಧರ ಉತ್ತರ ಕನ್ನಡದ ಹಿತ್ಲಳ್ಳಿಯ ಹೆಗಡೆ. ಸ್ವಾವಲಂಬನೆಯ ಮೂಲಮಂತ್ರವಾಗಿರುವ ಇಂದಿನ ದಿನದ ಸಾವಯವ ಕೃಷಿಗೆ ಇಂತಹ ಪದ್ಧತಿಗಳು ಎಷ್ಟಿದ್ದರೂ ಬೇಕು ತಾನೇ?

ನಬೀ ಸಾಹೇಬರ ಅಸ್ತ್ರಗಳು

ಬಾಗಲಕೋಟೆ ಬಾದಾಮಿ ತಾಲ್ಲೂಕಿನ ಚೊಳಚಗುಡ್ಡದ ನಿವೃತ್ತ ಪ್ರಾಥಮಿಕ ಶಾಲಾ ಶಿಕ್ಷಕರಾದ ನಬೀ ಸಾಹೇಬ ಕೇಸುಸಾ ಮಕಾನದಾರರು ತಮ್ಮ ೨೪ ಎಕರೆ ಕೃಷಿಯಲ್ಲಿ ಸ್ಥಳೀಯವಾಗಿ ದೊರಕುವ ಸಸ್ಯಗಳನ್ನು ಸಂಗ್ರಹಿಸಿ ಕೊಳೆಹಾಕಿ ಹಲವಾರು ಪೀಡೆ ನಾಶಕ ಗಳನ್ನು ತಯಾರಿಸಿದ್ದಾರೆ. ಅವುಗಳೆಂದರೆ :

ಅಗ್ನಿ ಅಸ್ತ್ರ :- ಐದು ಕೆ.ಜಿ. ಬೇವಿನ ಎಲೆ, ಎರಡು ಕೆ.ಜಿ. ಹೊಗೆಸೊಪ್ಪು ಮೂರು ಕೆ.ಜಿ. ಜವಾರಿ ಬೆಳ್ಳುಳ್ಳಿ, ನಾಲ್ಕು ಕೆ.ಜಿ. ಚಿಕ್ಕ ಹಸಿಮೆಣಸಿನಕಾಯಿ, ೨೦ ಲೀಟರ್ ಜವಾರಿ ಆಕಳ ಗಂಜಲ ಇವೆಲ್ಲವನ್ನೂ ಕೂಡಿಸಿ ೨೦ ದಿವಸ ನೆನೆಸಬೇಕು. ನಂತರ ಹಿಂಡಿ ತೆಗೆದು ಮಿಶ್ರಣವನ್ನು ಸಂಗ್ರಹ ಮಾಡಿ ಕೊಟ್ಟುಕೊಂಡು, ೨೦೦ ಲೀಟರ್ ನೀರಿಗೆ ಮಿಶ್ರಣ ಮಾಡಿಸಿ ಸಿಂಪಡಿಸಿದರೆ ಬೆಳೆಗಳಿಗೆ ಬರುವ ಸಸ್ಯ ಹೇನು (Aphids), ಬಿಳಿನೊಣ (white fly) ಮತ್ತು ಜಿಗಿ ಹುಳು (Jassids)ಗಳ ಯಶಸ್ವಿ ನಿಯಂತ್ರಣ ಸಾಧ್ಯವೆನ್ನುತ್ತಾರೆ. ಈ ದ್ರಾವಣ

ಮೂರು ತಿಂಗಳವರೆಗೆ ಸಂಗ್ರಹಿಸಿಡಬಹುದಾಗಿದ್ದು, ಇದರಿಂದ ಪರಿಸರಕ್ಕೆ ಯಾವುದೇ ತೊಂದರೆ ಇರುವುದಿಲ್ಲ ಎನ್ನುತ್ತಾರೆ ಸಾಹೇಬರು.

ಬ್ರಹ್ಮಾಸ್ತ್ರ :- ತಲಾ ಒಂದು ಕೆ.ಜಿ.ಯಷ್ಟು ಹಾಗಲ ಎಲೆ, ಲೆಕ್ಕಿ ಎಲೆ, ಎಕ್ಕ ಎಲೆ, ಬೇವಿನ ಎಲೆ, ಹುಲಗಲಿ ಎಲೆ (ಹೊಂಗೆ), ಸೀತಾಫಲ ಎಲೆ, ನುಗ್ಗಿ ಎಲೆ, ಔಡಲ ಎಲೆ (ಹರಳು), ದಾಳಿಂಬೆ ಎಲೆ, ದತ್ತೂರಿ ಎಲೆ, ಲಾಂಟಾನ ಎಲೆ, ನೀಲಗಿರಿ ಎಲೆ, ಬಿಲ್ವಪತ್ರೆ ಎಲೆ, ಕಲ್ನಾರು, ಪಾರ್ಥೇನಿಯಂ, ಹೊಗೆಸೊಪ್ಪು, ನಾಲ್ಕು ಕೆ.ಜಿ. ಚಿಕ್ಕ ಹಸಿಮೆಣಸಿನಕಾಯಿ, ನಾಲ್ಕು ಕೆ.ಜಿ. ಬೆಳ್ಳುಳ್ಳಿ, ೨೦ ಲೀಟರ್ ಜವಾರಿ ಆಕಳ ಗಂಜಲ, ೧೦ ಕೆ.ಜಿ. ಜವಾರಿ ಆಕಳ ಸಗಣಿ, ಒಂದು ಕೆ.ಜಿ. ಚೊಗಜಿ ಎಲೆ, ಈ ಎಲ್ಲಾ ವಸ್ತುಗಳನ್ನು ೫೦ ಲೀಟರ್ ನೀರಿನಲ್ಲಿ ೨೧ ದಿವಸ ನೆನೆಸಬೇಕಂತೆ. ನಂತರ ಸರಿಯಾಗಿ ತಿರುಗಿಸಿ ಸೋಸಿಕೊಂಡು, ಸಂಗ್ರಹ ಮಾಡಿಕೊಂಡು ಇಡಬೇಕೆನ್ನುತ್ತಾರೆ. ೧೦೦ ಲೀ. ನೀರಿಗೆ ೨ ರಿಂದ ೩ ಲೀಟರ್ ದ್ರಾವಣ ಸೇರಿಸಿ ಸಿಂಪಡಿಸಬೇಕು ಎನ್ನುವ ಸಾಹೇಬರು ಯಾವುದೇ ಕೀಟಗಳಿಗೂ ಇದು ರಾಮಬಾಣವಾಗುತ್ತದೆ ಎನ್ನುತ್ತಾರೆ.

ಬೀಜಾಮೃತ (ಬೀಜ ಸಂಸ್ಕಾರ) : ಐದು ಲೀಟರ್ ಆಕಳ ಗಂಜಲ, ಐದು ಕೆ.ಜಿ. ಸಗಣಿ, ೧೦೦ ಗ್ರಾಂ. ಸುಣ್ಣ ಸಗಣಿಯನ್ನು ತೆಳುವಾದ ಬಟ್ಟೆಯಲ್ಲಿ ಕಟ್ಟಿ ಬಕೆಟ್ ನೀರಿನಲ್ಲಿ ತೇಲಿಬಿಡಬೇಕು. ಸುಣ್ಣವನ್ನು ಒಂದು ಲೀಟರ್ ನೀರಿನಲ್ಲಿ ರಾತ್ರಿ ನೆನೆ ಹಾಕಿಕೊಳ್ಳಬೇಕು. ಮುಂಜಾನೆ ಸಗಣಿ ರಾಡಿಯನ್ನು ಹಿಂಡಿ ತೆಗೆದು ಸುಣ್ಣದ ತಿಳಿ ನೀರನ್ನು ಮತ್ತು ಗಂಜಲ ಎಲ್ಲವನ್ನು ಸೇರಿಸಿ ಇದರಲ್ಲಿ ಬೀಜವನ್ನು ಒಂದು ನಿಮಿಷ ಅದ್ದಿ ತೆಗೆಯಬೇಕು. ಇದರಿಂದ ಬೆಳೆಗಳಿಗೆ ಬೇರಿನಿಂದ ಬರತಕ್ಕ ರೋಗ ಆಗುವುದಿಲ್ಲ. ಮೊಳಕೆ ಸಹ ಚೆನ್ನಾಗಿ ಬರುತ್ತದೆಯಂತೆ.

ನಬೀ ಸಾಹೇಬರು ಈ ಎಲ್ಲಾ ಪ್ರಯೋಗಗಳನ್ನು ತಮ್ಮ ಹೊಲದಲ್ಲಿ ಬಾಳೆ, ಹೂವು, ಹತ್ತಿ, ಗೋವಿನ ಜೋಳ, ಸೂರ್ಯಕಾಂತಿ ಬೆಳೆಗಳ ಮೇಲೆ ಹಲವಾರು ವರ್ಷಗಳಿಂದಲೂ ನಡೆಸಿಕೊಂಡು ಬಂದಿರುವರು. ಇವೆಲ್ಲಕ್ಕೂ ಮೂಲಾಧಾರವಾಗಿ ಜೀವಾಮೃತ ಬಳಸುತ್ತಿರುವರು. ಈ ಪ್ರಯೋಗಗಳ ಫಲವಾಗಿ ೩೫ ಕೆ.ಜಿ. ತೂಕದ ಬಾಳೆಗೊನೆ, ಎಕರೆಗೆ ಹತ್ತು ಟನ್ ಕಾಕಡ, ಮೈಸೂರು ಮಲ್ಲಿಗೆ ಹೂವು ಮತ್ತು ೩೦-೩೫ ಟನ್ ಗೋವಿನ ಜೋಳ ಕಟಾವು ಮಾಡಿರುವರು.

ರೇಷ್ಮೆ ಕೃಷಿಯಲ್ಲಿ ಊಜಿನೊಣದ ನಿಯಂತ್ರಣ

ರೇಷ್ಮೆ ಕೃಷಿಯಲ್ಲಿ ಊಜಿನೊಣದಿಂದ ಬಹಳ ನಷ್ಟ ಅನುಭವಿಸಬೇಕಾಗುತ್ತದೆ. ಈ ಬಗೆಯ ನಷ್ಟವನ್ನು ವಿಚಾರ ಮಾಡಿದಾಗ ಗದಗದ ಎಸ್.ಎಮ್. ಮಂಗಳಿಯವರಿಗೆ ನೈಲಾನ್ ಸೊಳ್ಳೆಪರದೆಯ ಮಚ್ಚರದಾನಿಯ ಕಲ್ಪನೆಯು ಹೊಳೆಯಿತು. ಹುಳು ಸಾಕುವ ಮನೆಯಲ್ಲಿ ಹುಳುಗಳಿರುವ ಸ್ಟಾಂಡುಗಳ ಸುತ್ತಲೂ ಸೊಳ್ಳೆ ಪರದೆ ಹಾಕುವುದು ಸಾಮಾನ್ಯವಾಗಿ ರೇಷ್ಮೆ ಬೆಳೆಗಾರರು ಅನುಸರಿಸುವ ಪದ್ಧತಿ. ಮಂಗಳಿಯವರು ಈ ಪದ್ಧತಿಯನ್ನೇ ಪರಿಷ್ಕರಿಸಿ

ಹೆಚ್ಚು ಪರಿಣಾಮಕಾರಿಯಾಗುವಂತೆ ಪ್ರಯತ್ನಿಸಿದ್ದಾರೆ. ಹುಳುಗಳ ಸ್ಟ್ಯಾಂಡ್‌ನಿಂದ ಕನಿಷ್ಠ ಎರಡು ಅಡಿ ಅಂತರದಲ್ಲಿ ಸೊಳ್ಳೆ ಪರದೆ ಇರಬೇಕು. ಜೊತೆಗೆ ಕೆಳಭಾಗದ ಅಂಚು ಕನಿಷ್ಠ ೧೦ ರಿಂದ ೧೨ ಇಂಚು ನೆಲದ ಮೇಲೆ ಹಾಸಲು ಸಾಧ್ಯವಾಗುವಂತಿರಬೇಕು. ಇದಲ್ಲದೆ, ಈ ಸೊಳ್ಳೆ ಪರದೆಯಿಂದ ಆವೃತವಾದ ಹುಳು ಸಾಕಣೆ ಜಾಗಕ್ಕೆ ಬರುವ ಮೊದಲು ಒಂದು ಹೊರಗಿನ ವಾತಾವರಣದಿಂದ ಪ್ರತ್ಯೇಕಿಸುವ ಕೋಣೆ (Ante Chamber). ಈ Ante Chamberಗೆ ಹೊರಗಿನಿಂದ ಬರಲು ಹಾಗೂ ಒಳಗೆ ಹೋಗಲು ನೆರವಾಗುವ ಎರಡು ಬಾಗಿಲುಗಳು. ಸೊಳ್ಳೆ ಪರದೆಯಲ್ಲೇ ಪ್ಲಾಸ್ಟಿಕ್ ಜಿಪ್ ಹಾಕಿ ಸುಲಭವಾಗಿ ಕಿಂಡಿ ಉಳಿಯದಂತೆ ತೆಗೆಯಲು ಸಾಧ್ಯವಾಗುವ ಬಾಗಿಲುಗಳು. ಈ Ante Chamberನ ಹಾಗೂ ಒಳಭಾಗದ ಸೊಳ್ಳೆಪರದೆಯ ಕೆಳಗಿನ ಅಂಚಿನ ಸುಮಾರು ೧೦-೧೨ ಇಂಚುಗಳ ಭಾಗವನ್ನು ಸಮತಟ್ಟಾದ ನೆಲದ ಮೇಲೆ ಹಾಸಿ. ಅದು ಸುಲಭವಾಗ ಸರಿದಾಡದಂತೆ, ಮೇಲೆ ಏಳದಂತೆ ಹಾಗೂ ಎಲ್ಲಿಯೂ ಕಿಂಡಿ ಉಳಿಯದಂತೆ ಅದರ ಮೇಲೆ ಮರಳು ಸುರಿದು ಭದ್ರಗೊಳಿಸ ಬೇಕು.

ಬೀಜ ಮೊಳಕೆ ಬರಿಸುವುದು

ರಾಗಿಯನ್ನು ಅಗೆ ಅಥವಾ ಮಡಿಯಲ್ಲಿ (Nursery) ಬೆಳೆಸುವಾಗ ಒಣ ಸಗಣಿಯನ್ನು ನೆಲದ ಮೇಲೆ ಹರಡಿ, ಸುಟ್ಟು ನಂತರ ಬರುವ ಮಳೆಯಲ್ಲಿ ಬೀಜವನ್ನು ಬಿತ್ತನೆ ಮಾಡುವುದರಿಂದ ರೋಗರಹಿತ ಬೆಳೆ ತೆಗೆಯಬಹುದು. ಇದು ಉತ್ತರ ಕನ್ನಡದ ಜಪಗೇರಿಯ ಸಿದ್ದಿಗಳ ಪದ್ಧತಿ.

ಪ್ರಾಚೀನ ಭಾರತೀಯ ಬೀಜೋಪಚಾರ ಪದ್ಧತಿಗಳು

ಕೃಷಿಯು ಒಂದು ಕಲೆ ಮಾತ್ರವಲ್ಲ, ಅದರಲ್ಲಿ ವಿಜ್ಞಾನವೂ ಮಹತ್ತರ ಪಾತ್ರ ವಹಿಸುವುದೆಂಬ ಅರಿವು ನಮ್ಮ ಪೂರ್ವಜರಿಗೆ ಚೆನ್ನಾಗಿಯೇ ತಿಳಿದಿತ್ತು. ಇದಕ್ಕೆ ನಮ್ಮ ಪೌರಾಣಿಕ ಗ್ರಂಥಗಳಾದ ವೃಕ್ಷಾಯುರ್ವೇದ, ಉಪವನ ವಿನೋದ, ಕೃಷಿಪರಾಶರಾದಿ ಗ್ರಂಥಗಳು ಸಾಕ್ಷಿಯಾಗುತ್ತವೆ. ಬೇಸಾಯಕ್ಕೆ ಮೊದಲು ಬಿತ್ತನೆ ಬೀಜದ ಸಿದ್ಧತೆ, ಬೀಜವು ತ್ವರಿತವಾಗಿ ಮೊಳಕೆಯೊಡೆಯಲು ಮಾರ್ಗೋಪಾಯಗಳು, ಹಣ್ಣು ಅಥವಾ ಕಾಯಿಯ ಇಳುವರಿ ಗಾತ್ರವನ್ನು ಹೆಚ್ಚಿಸುವ ತಂತ್ರಗಳು ಇತ್ಯಾದಿಗಳ ಬಗ್ಗೆ ಈ ಗ್ರಂಥಗಳಲ್ಲಿ ಅಲ್ಲಲ್ಲಿ ಉಲ್ಲೇಖವಿದೆ. ಅವುಗಳಲ್ಲಿ ಪ್ರಸ್ತುತ ದೃಷ್ಟಿಯಲ್ಲಿ ಅಳವಡಿಸಿಕೊಳ್ಳಬಹುದಾದ ಕೆಲವು ಸುಲಭ ವಿಧಾನಗಳನ್ನು ಆಯ್ದು ಈ ಕೆಳಗೆ ಕೊಡಲಾಗಿದೆ.

ತ್ವರಿತವಾಗಿ ಮೊಳಕೆಯೊಡಲು ಬೀಜೋಪಚಾರ

೧. ಹುಣಸೆಯ ಬೀಜವನ್ನು ಅಕ್ಕಿ, ಉದ್ದು ಮತ್ತು ಸಾಸಿವೆಯ ಹಿಟ್ಟು ಹಾಗೂ ಗೋಧಿಯ ತುಣುಕುಗಳೊಂದಿಗೆ ಚೆನ್ನಾಗಿ ಮಿಶ್ರ ಮಾಡಿ ಅವುಗಳೊಂದಿಗೆ ಕೊಳೆತ ಹಳೆಯ

ಮಾಂಸವನ್ನು ಕಲಸಬೇಕು. ಈ ರೀತಿಯಾಗಿ ಸಿದ್ಧಪಡಿಸಿದ ಹುಣಸೆಯ ಬೀಜದ ಮೇಲೆ ಅರಿಶಿಣದ (ಧೂಪ) ಹೊಗೆಯನ್ನು ಹಲವು ಬಾರಿ ಹಾಯಿಸಿದರೆ ಬೀಜವು ತ್ವರಿತಗತಿಯಲ್ಲಿ ಮೊಳಕೆಯೊಡೆಯುವುದು.

೨. ಬಿತ್ತನೆಗೆ ಮೊದಲು ಯಾವುದೇ ಬೀಜಕ್ಕೆ ಅಂಕೋಲ ತೈಲವನ್ನು ಲೇಪಿಸಿದರೆ ಅದು ತ್ವರಿತವಾಗಿ ಮೊಳಕೆಯೊಡೆಯುವುದು.

೩. ಯಾವುದೇ ಬೀಜವನ್ನು ಎಮ್ಮೆಯ ಗಂಜಳ(ಮೂತ್ರ)ದಲ್ಲಿ ಒಂದು ವಾರದ ತನಕ ನೆನೆಯಿಸಿ ಬಿತ್ತಿದರೆ ಅದು ಶಕ್ತಿಭರಿತವಾಗಿ ಬೇಗನೆ ಮೊಳಕೆಯೊಡೆಯುವುದು.

೪. ಬೀಜದ ಸುಪ್ತಾವಸ್ಥೆಯನ್ನು ತೆಗೆಯಲು ಇನ್ನೊಂದು ವಿಧಾನವು ಈ ರೀತಿ ಇದೆ. ಇಲ್ಲಿ ಬೀಜವನ್ನು ೧೦ ದಿನಗಳ ಕಾಲ ಹಾಲಿನಲ್ಲಿ ನೆನೆಸಿಡಬೇಕು. ದಿನವೂ ಆ ಬೀಜವನ್ನು ತುಪ್ಪ ಸವರಿದ ಕೈಗಳಿಂದ ಎತ್ತಿಟ್ಟು ಹಾಲನ್ನು ಬದಲಾಯಿಸಬೇಕು. ಇದಾದ ಮೇಲೆ ಅವುಗಳಿಗೆ ಸಗಣಿಯನ್ನು ಲೇಪಿಸಿ ಜಿಂಕೆ ಮತ್ತು ಗಂಡು ಹಂದಿಯ ಮಾಂಸದ ಧೂಪವನ್ನು ಹಾಕಬೇಕು. ಈ ರೀತಿಯಾಗಿ ಸಿದ್ಧಪಡಿಸಿದ ಬೀಜವನ್ನು ಸಾಸುವೆಯನ್ನು ಪ್ರಯೋಗಿಸಿದ ಮಣ್ಣಿನಲ್ಲಿ ಬಿತ್ತನೆ ಮಾಡಿ ಅದಕ್ಕೆ ನೀರು ಮತ್ತು ಹಾಲನ್ನು ಸಿಂಪಡಿಸಿದರೆ ಬೀಜವು ಬೇಗನೆ ಮೊಳಕೆಯೊಡೆಯುವುದು.

ಇಳುವರಿಯನ್ನು ಹೆಚ್ಚಿಸಲು

ಮರದಲ್ಲೇ ಒಣಗಿರತಕ್ಕಂತಹ ನುಗ್ಗೆ ಕಾಯಿಯ ಬೀಜವನ್ನು ಹಾಗಲಕಾಯಿಯ ಬೀಜದೊಂದಿಗೆ ಚೆನ್ನಾಗಿ ಮಿಶ್ರ ಮಾಡಿ ಅದನ್ನು ಸ್ವಲ್ಪ ದಿನಗಳ ತನಕ ಭದ್ರವಾಗಿ ಜೋಡಿಸಿಡಬೇಕು. ಈ ರೀತಿಯಾಗಿ ಶೇಖರಿಸಿದ ನುಗ್ಗೆ ಬೀಜವನ್ನು ಬಿತ್ತನೆ ಮಾಡಿದರೆ ಅದರಿಂದ ಹೆಚ್ಚಿನ ಇಳುವರಿ ಬರುವುದು.

ಹಣ್ಣು/ಕಾಯಿಯ ಗಾತ್ರವನ್ನು ಹೆಚ್ಚಿಸಲು ಒಂದು ಸರಳ ವಿಧಾನ

ಬದನೆಕಾಯಿಯ ಬೀಜಕ್ಕೆ ಜೇನು ಮತ್ತು ತುಪ್ಪವನ್ನು ಲೇಪಿಸಿ ತದನಂತರ ಅದಕ್ಕೆ ದಪ್ಪನೆಯ ಸಗಣಿಯಿಂದ ಹೊರಲೇಪನವನ್ನು ಮಾಡಬೇಕು. ಈ ತೆರನಾಗಿ ಉಪಚರಿಸಿದ ಬೀಜವನ್ನು ಬಿತ್ತಿದರೆ ಅದರಿಂದ ಕುಂಬಳಕಾಯಿಯ ಗಾತ್ರದ ಬದನೆಕಾಯಿಗಳನ್ನು ಪಡೆಯಬಹುದು. ಇವುಗಳನ್ನು ಕೆ. ಉಮೇಶ, ಬೀಜಶಾಸ್ತ್ರ ಪಿಎಚ್.ಡಿ. ವಿದ್ಯಾರ್ಥಿ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ಸಂಗ್ರಹಿಸುತ್ತಾರೆ.


ಬೀಜ ಮತ್ತು ಧಾನ್ಯಗಳ ಸಂಗ್ರಹಣೆ - ಹಲವು ಸಾಂಪ್ರದಾಯಿಕ ಪದ್ಧತಿಗಳು

ಕೃಷಿಯಲ್ಲಿ ಧಾನ್ಯಗಳ ಸಂಗ್ರಹಣೆ ಬಹುಮುಖ್ಯವಾದ ಕೆಲಸ. ಇದನ್ನು ಮುಂದಿನ ಬೆಳೆಗೆ ಬೀಜವಾಗಿ ಉಪಯೋಗಿಸಬಹುದು ಅಥವಾ ದವಸಧಾನ್ಯವಾಗಿ ಉಪಯೋಗಿಸ ಬಹುದು. ಆದ್ದರಿಂದ ಇವುಗಳನ್ನು ಕೀಟಗಳಿಂದ ವಿಮುಕ್ತಗೊಳಿಸು ವುದು ಮತ್ತು ರೋಗಗಳಿಂದ ದೂರ ವಿರಿಸುವುದು ಅಗತ್ಯದ ಕೆಲಸ ವಾಗಿದೆ. ಈ ರೀತಿಯ ಕೆಲವು

ಸಾಂಪ್ರದಾಯಿಕ ಕ್ರಮಗಳು ಇನ್ನೂ ಹಳ್ಳಿಗಳ ಮನೆಗಳಲ್ಲಿ ಮುಂದು ವರಿದು ಬಂದಿದೆ. ಇಂತಹ ಕೆಲಸ ಸಂಗ್ರಹಣಾ ಪದ್ಧತಿಗಳು ಹೀಗಿವೆ.

ತೊಗರಿಯನ್ನು ಹುಳದಿಂದ ಮುಕ್ತಗೊಳಿಸಲು ೧೫-೨೦ ದಿನಗಳಿಗೊಮ್ಮೆ ಬಿಸಿಲಿಗೆ ಹಾಕಿ ಒಣಗಿಸುವುದರಿಂದ ಈ ಹುಳಗಳು ಸತ್ತು ಹೋಗುವವು.

ತೊಗರಿ, ಅವರೆ, ಹೆಸರು, ಉದ್ದು ಮುಂತಾದ ಕಾಳುಗಳಿಗೆ ಕೆಮ್ಮಣ್ಣು ನೀರಿನಲ್ಲಿ ಕಲಸಿ ಧಾನ್ಯದ ಮೇಲೆ ಚಿಮುಕಿಸಿ ಪೂರ್ಣ ಈ ಮಣ್ಣಿನ ದ್ರಾವಣದಲ್ಲಿ ತೇಯುವಂತೆ ಮಾಡಿ, ಬಿಸಿಲಲ್ಲಿ ಒಣಗಿಸಿ, ಚೀಲದಲ್ಲಿ ಹಾಕಿ ಕಟ್ಟಿ ಇಡುವುದರಿಂದ ಕೀಟಬಾಧೆ ತಪ್ಪಿಸಬಹುದು.



ಅರಿಶಿಣಪುಡಿ ಮತ್ತು ಹರಳೆಣ್ಣೆ (Castoroil)ಯಲ್ಲಿ ತೋಯಿಸಿ (೧ ಕೆ.ಜಿ. ಧಾನ್ಯಕ್ಕೆ ೫೦ ಗ್ರಾಂ. ಹರಳೆಣ್ಣೆ ೨೫ ಗ್ರಾಂ. ಅರಿಶಿಣಪುಡಿ) ಸ್ವಲ್ಪ ಒಣಗಿದ ನಂತರ ಶೇಖರಿಸು ವುದರಿಂದ ಹುಳದ ಬಾಧೆ ಇರುವುದಿಲ್ಲ.

ಧಾನ್ಯ ಶೇಖರಿಸುವಾಗ ಒಣಮೆಣಸಿನ ಕಾಯಿಯನ್ನು ತುಂಡು ತುಂಡಾಗಿ ಕತ್ತರಿಸಿ, ಅದರೊಂದಿಗೆ ಉಪ್ಪು ಸೇರಿಸಿ (ಪ್ರಮಾಣ ೧ ಕೆ.ಜಿ. ಧಾನ್ಯಕ್ಕೆ ೧೦೦ ಗ್ರಾಂ. ಒಣಮೆಣಸು+ ೧೦೦ ಗ್ರಾಂ ಉಪ್ಪು) ಚೀಲದಲ್ಲಿ ಬಿಗಿಯಾಗಿ ಕಟ್ಟಿ ಇಡುವುದರಿಂದ ಕ್ರಿಮಿ ಕೀಟಗಳ ಹಾವಳಿ ತಪ್ಪಿಸಬಹುದು.

ಚಪ್ಪರದ ಅವರೆ, ಹಿರೇಕಾಯಿ, ಸೋರೆಕಾಯಿಯನ್ನು ಹಾಗೇ ಸಿಪ್ಪೆ ತೆಗೆಯದೆ ಒಣಗಿದ ಕಾಯಿಗಳನ್ನು ಶೇಖರಿಸುವುದರಿಂದ ಕಾಳುಕೊರಕ ಹುಳುವಿನ ಬಾಧೆ ತಪ್ಪಿಸಬಹುದು. ಎಳ್ಳನ್ನು ಹರಳಿನೊಂದಿಗೆ ಬೆರೆಸಿ ಸಂಗ್ರಹಿಸುವುದರಿಂದ ಕೀಟ ಹಾವಳಿ ತಪ್ಪಿಸಬಹುದು.

ತೆಂಗಿನಕಾಯಿಗಳನ್ನು ಗಾಳಿಯಾಡುವ ಪ್ರದೇಶದಲ್ಲಿ ೫ ರಿಂದ ೬ ಅಡಿ ಎತ್ತರದಲ್ಲಿ ಮೇಲೆ ಬಿದಿರುಕಟ್ಟಿಗೆ/ಅಡಿಕೆ ದಬ್ಬೆಯಿಂದ ಅಟ್ಟ ಹಾಕಿ ಗಾಳಿ ಸರಾಗವಾಗಿ ಕೆಳಗೆ ಮತ್ತು ಮೇಲೆ ಓಡಾಡಲು ಅವಕಾಶ ಮಾಡಿ ಕಾಯಿ ಸಂಗ್ರಹಿಸುವುದರಿಂದ ತೆಂಗಿನಕಾಯಿ ಕೆಡುವುದಿಲ್ಲ. ಉತ್ತಮ ಕೊಬ್ಬರಿ ದೊರೆಯುತ್ತದೆ.

ಜೋಳಕ್ಕೆ ಉಪ್ಪು, ಬೇವಿನ ಸೊಪ್ಪು ಮತ್ತು ಬೆಳ್ಳುಳ್ಳಿಯನ್ನು ಹಾಕಿ ಸಂಗ್ರಹಿಸುವುದರಿಂದ ಹುಳುವಿನ ಬಾಧೆ ಕಡಿಮೆಯಾಗುವುದು ಮತ್ತು ಹುಳಗಳನ್ನು ದೂರವಿಡಬಹುದು.

ದ್ವಿದಳ ಧಾನ್ಯಗಳಿಗೆ ಬೆಳ್ಳುಳ್ಳಿ, ಅರಿಶಿಣಪುಡಿ, ಮರಳು ಹಾಕಿ ಧಾನ್ಯ ಸಂಗ್ರಹಿಸುವುದರಿಂದ ಕೀಟಬಾಧೆ ತಪ್ಪಿಸಬಹುದು.


ಭತ್ತಕ್ಕೆ ಸವಳು (Saline Soil) ಹಾಕಿ ಚೀಲದಲ್ಲಿ ಶೇಖರಿಸುವುದರಿಂದ ಹುಳುವಿನ ಹಾವಳಿಯಿಂದ ಮುಕ್ತವಾಗಿರುವುದು.

ಹಿಂದೆ ಹಗೆವು ಮತ್ತು ಕಣಜಗಳನ್ನು ಕಟ್ಟಿಸಿ ಅಥವಾ ವಾಡೇವು(ಮಣ್ಣಿನಿಂದ ತಯಾರಿಸಿದ ದೊಡ್ಡ ಮಡಿಕೆಗಳು)ಗಳ ಬಳಕೆಯಿಂದ ವರ್ಷಾನುಗಟ್ಟಲೆ ಹೆಚ್ಚು ಧಾನ್ಯ ಕಾಳುಗಳನ್ನು ಸಂಗ್ರಹಿಸುತ್ತಿದ್ದರು. ಈ ರೀತಿಯಲ್ಲಿ ಸಂಗ್ರಹಿಸಿದ ಧಾನ್ಯಗಳು ಕೀಟಗಳ ಹಾವಳಿಗೆ ದೊರಕದೆ, ಶುದ್ಧವಾಗಿ ಇರುತ್ತಿದ್ದವು. ಈ ರೀತಿ ಹಿಂದೆ ಸಂಗ್ರಹಿಸಿದ ಧಾನ್ಯದ ಉದಾಹರಣೆಯೊಂದು ಇಲ್ಲಿದೆ.

ಚಳ್ಳಕೆರೆ ತಾಲ್ಲೂಕಿನ ಹೆಗ್ಗೆರೆಯಲ್ಲಿ ಶಾಲೆ ಕಟ್ಟಿಸಲು ೧೯೬೨ರಲ್ಲಿ ಪಾಯ ಹಾಕುವಾಗ ಅಲ್ಲಿ ಹಗೇವುಗಳು ದೊರಕಿದವಂತೆ! ೪-೬ ಹಗೇವುಗಳು ಸಾಲಾಗಿ ಇದ್ದವು. ಅವುಗಳಲ್ಲಿ ೧ ಹಗೇವಿನಲ್ಲಿ ಸುಮಾರು ೨೦-೩೦ ಚೀಲ ಸಜ್ಜೆ ಸಿಕ್ಕು ಅವು ಸ್ವಚ್ಛವಾಗಿ, ಹಾಳಾಗದೆ ಇದ್ದವೆಂದೂ ಈ ಕಾಳನ್ನು ಹಳ್ಳಿಯ ಪ್ರತಿಯೊಂದು ಮನೆಯವರು ಹಂಚಿಕೊಂಡರೆಂದೂ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಬೆಳಗೇರಿ ಕೃಷ್ಣಶಾಸ್ತ್ರಿ ಹೇಳುವರು. ಈ ಹಗೇವಿಗೆ ಗಾರೆ (ಸುಣ್ಣ ಮತ್ತು ಮರಳಿನಿಂದ) ಹಾಕಿದ್ದರೆಂದು ಹೇಳುವರು. ಇವೆಲ್ಲವನ್ನು ಮಾಡಿರುವವರು ನಾಗರತ್ನ ಬಿ.ಕೆ., ಜಿ.ಕೆ.ವಿ.ಕೆ, ಬೆಂಗಳೂರು ಇವರು.

ಹಳ್ಳಿಗಾಡಿನಲ್ಲಿ ಬಿತ್ತನೆ ಬೀಜ ಸಂರಕ್ಷಿಸುವ ವಿಧಾನಗಳು

ಒಂದು ಹೊಸ ಮಡಿಕೆಯನ್ನು ಕಂಬಾರರ ಮನೆಯಿಂದ ತಂದು ಇದಕ್ಕೆ ಹಸುವಿನ ಗಂಜಲವನ್ನು ಒಳಗೆ ಮತ್ತು ಹೊರಗೆ ಬಳಿಯಬೇಕು. ಮೊದಲ ದಿನ ನೆರಳಿನಲ್ಲಿ ೨ನೇ ದಿನ ಬಿಸಿಲಿನಲ್ಲಿ ಒಣಗಿಸಿ ಇದಕ್ಕೆ ಬಿತ್ತನೆ ಬೀಜಗಳನ್ನು ತುಂಬಬೇಕು. ಅವರೆ, ಅಲಸಂದೆ, ತೊಗರಿ ಈ ಬೀಜಗಳ ಜೊತೆಯಲ್ಲಿ ಒಣಮೆಣಸಿನ ಕಾಯಿ ಪುಡಿಮಾಡಿ ಬೆರೆಸಬೇಕು. ಹೀಗೆ ಮಾಡುವುದರಿಂದ ೧ ರಿಂದ ೨ ವರ್ಷ ಹುಳುಗಳಿಂದ ರಕ್ಷಿಸಬಹುದು. ಮಡಿಕೆಯ ಮಂಡಲವನ್ನು ಮಾತ್ರ ಸಗಣಿಯಿಂದ ಮೆತ್ತಬೇಕು.




ಒಂದು ಹೊಸ ಮಡಿಕೆಯನ್ನು ತೆಗೆದು ಕೊಂಡು ಇದಕ್ಕೆ ಬಿತ್ತನೆ ಬೀಜ ಮತ್ತು ಮರಳು ಸಮಪ್ರಮಾಣವಾಗಿ ತುಂಬಿ ಮುಚ್ಚಳವನ್ನು ಸಗಣಿಯಿಂದ ಮೆತ್ತ ಬೇಕು. ನಮಗೆ ಬೇಕಾಗುವಾಗ ಈ ಮುಚ್ಚಳವನ್ನು ತೆಗೆದು ದೊಡ್ಡ ಜರಡಿ ಯಲ್ಲಿ ಹಾಕಿ ತಿರುವಿದಾಗ ಮರಳು ಕೆಳಕ್ಕೆ ಬಿದ್ದು ಅವರೆ ತೊಗರಿ ಮೇಲೆ ಉಳಿಯು ತ್ತದೆ. ಹೀಗೆ ಬೇರೆ ಮಾಡಿ ಉಪಯೋಗಿಸ ಬಹುದು. ೧ ರಿಂದ ೨ ವರ್ಷಗಳ ಕಾಲ ಸಂರಕ್ಷಿಸಬಹುದು.

ಒಂದು ಮಡಿಕೆಗೆ ಅವರೆ ಕಾಳನ್ನು ತುಂಬಲು ೧೦೦ ಗ್ರಾಂ. ಹರಳಿನ ಎಣ್ಣೆಯನ್ನು ತೆಗೆದುಕೊಂಡು ಅವರೇ ಕಾಳಿಗೆ ಸವರಿ ಸ್ವಲ್ಪ ಹೊತ್ತು ಆರಿಸಿ ನಂತರ ಮಡಿಕೆಗೆ ತುಂಬಬೇಕು. ಮುಚ್ಚಳವನ್ನು ಸಗಣಿಯಿಂದ ಮೆತ್ತಿದರೆ ೧ ರಿಂದ ೨ ವರ್ಷ ಹುಳುವಿನಿಂದ ಸಂರಕ್ಷಿಸ ಬಹುದು.

ಸಾಂಪ್ರದಾಯಿಕ ನೇಗಿಲು ಪೂಜೆಯಿಂದ ತಿಳಿದುಬರುವ ಆಧುನಿಕ ಜರ್ಮಿನೇಷನ್ ಪರೀಕ್ಷೆ

ತಮಿಳುನಾಡಿನ ಡಂಕಣೆ ಕೋಡೆಯ ತಾಲ್ಲೂಕಿನ ಸಾವಿರ ಭತ್ತ ಎಂಬ ಊರಿನಲ್ಲಿ ಯುಗಾದಿಯ ದಿನ ಮಾಡುವ ಈ ನೇಗಿಲು ಪೂಜೆ ನಮ್ಮ ಸಂಪ್ರದಾಯದ ಪ್ರತೀಕವಾಗಿದ್ದು ಆಧುನಿಕ ಮತ್ತು ವೈಜ್ಞಾನಿಕ ವಿವರಣೆಯನ್ನು ಹೊಂದಿದೆ. ಇಲ್ಲಿನ ರೈತರು ಯುಗಾದಿಯ ದಿನ ಎರಡು ಹೊಸ ನೇಗಿಲನ್ನು ತಂದು ಅಡಿಕೆ ಪಟ್ಟಿಯಿಂದ ಒಂದು ಸಣ್ಣ ಜೊಪ್ಪೆ ಮಾಡಿ ಅದಕ್ಕೆ ಸಗಣಿ ಮತ್ತು ಗೊಬ್ಬರವನ್ನು ಹಾಕಿ ಅದಕ್ಕೆ ಪೂಜೆಯನ್ನು ಸಲ್ಲಿಸಿ ೫ ವಿಧದ ಧಾನ್ಯಗಳು ಅಥವಾ ೯ ವಿವಿಧ ಧಾನ್ಯಗಳನ್ನು ಆ ಜೊಪ್ಪೆಯಲ್ಲಿ ಮೊಳಕೆಗೆ ಬಿತ್ತುತ್ತಾರೆ. ಇಲ್ಲಿ ರಾಗಿ, ಭತ್ತ, ಹುರುಳಿ, ಸಾಸಿವೆ. ಅವರೆ, ಅಲಸಂದೆ, ಹುಚ್ಚೆಳ್ಳು, ಬಿಳಿ ಜೋಳವನ್ನು ಬಳಸಬಹುದಾಗಿದೆ. ಹೀಗೆ ಮೊಳಕೆಗೆ ಹಾಕಿದ ನಂತರ ೯ ದಿನಗಳು ಅದಕ್ಕೆ ನೀರು ಹಾಕಿ ೯ನೇ ದಿನ ಆ ಧಾನ್ಯಗಳಲ್ಲಿ ಯಾವುದೇ ಒಳ್ಳೆಯ ಮೊಳಕೆ ಬಂದು ಫಲವತ್ತಾಗಿ ಬೆಳೆದಿರು ತ್ತದೆಯೋ ಆ ಬೆಳೆಗಳು ಈ ವರ್ಷ ಚೆನ್ನಾಗಿ ಆಗುತ್ತದೆ ಎಂಬ ನಂಬಿಕೆ ಮತ್ತು ಅನುಭವವನ್ನು ಈ ಊರಿನ ರೈತರು ಹೊಂದಿದ್ದಾರೆ.



ಈ ಪೂಜೆ ಯುಗಾದಿ ದಿನ ಮಾಡುವ ಉದ್ದೇಶ ಯುಗಾದಿ ಕಳೆದ ನಂತರ ಮಳೆಗಾಲ ಪ್ರಾರಂಭವಾಗಲಿದ್ದು ರಜೆ ಕಾಲದ ರೈತರನ್ನು ಎಚ್ಚರಿಸಿ ತಮ್ಮ ಸಾಂಪ್ರದಾಯಿಕ ಒಕ್ಕಲುತನಕ್ಕೆ ಸಿದ್ಧತೆ ನಡೆಸುವ ಸಂಕೇತವೂ ಆಗಿದೆ.

ಗುಬಸಿ ಮುಳ್ಳಿನಿಂದ ಮೂಷಿಕಗಳಿಗೆ ತಡೆ

ಗುಬಸಿ ಮುಳ್ಳು (Barleria buxifolia) ಅಥವಾ ಗಂಡು ಕೊಟ್ಟೇ ಮುಳ್ಳಿನ ಗಿಡವನ್ನು ಕನಕಪುರದ ಸುತ್ತಮುತ್ತಲಿನ ರೈತರ ಹೊಲದಲ್ಲಿ ಅಥವಾ ಧಾನ್ಯ ಶೇಖರಿಸುವ ಸ್ಥಳದಲ್ಲಿ ಇಲಿಗಳ ನಿಯಂತ್ರಣಕ್ಕೆ ಬಳಸುತ್ತಾರೆ. ಟೊಂಕದೆತ್ತರದ ಈ ಗಿಡದ ಮೈತುಂಬ ಸಣ್ಣ ಸಣ್ಣ ಮುಳ್ಳುಗಳಿದ್ದು ಧಾನ್ಯ ತಿನ್ನಲು ಬರುವ ಮೂಷಿಕಗಳ ಮೂತಿಗೆ ಚುಚ್ಚಿ ಅವುಗಳನ್ನು

ಬರದಂತೆ ಮಾಡುತ್ತವೆ. ಧಾನ್ಯ ಸಂಗ್ರಹಿಸಿಡುವ ಸ್ಥಳಗಳಲ್ಲಿ ಅಥವಾ ಇಲಿಗಳ ಬಿಲಗಳ ಬಾಯಿಯಲ್ಲಿಟ್ಟರಂತೂ ಇದರ ಪರಿಣಾಮ ಅದ್ಭುತ.

'ಮೂಡೆ' - ಕಾಳು ಸಂಗ್ರಹಣೆಯ ಪರಂಪರಾಗತ ವಿಧಾನ

ರೈತರು ಬೆಳೆದ ದವಸ ಧಾನ್ಯಗಳಿಗೆ ಕ್ರಿಮಿ-ಕೀಟಗಳ ಹಾವಳಿ ಹೆಚ್ಚು. ಅದರಲ್ಲಿಯೂ ಕಾಳುಗಳಿಗೆ ವಿಪರೀತ. ಇವುಗಳಿಂದ ರಕ್ಷಿಸಲು ರೈತರು ತಮ್ಮದೇ ಆದ ಹಲವಾರು ವಿಧಾನಗಳನ್ನು ಹಿಂದಿನಿಂದ ಬಳಸುತ್ತಿದ್ದಾರೆ. ಅವುಗಳಲ್ಲಿ ಮೂಡೆಕಟ್ಟುವ ವಿಧಾನವೂ ಒಂದಾಗಿದ್ದು; ರಾಗಿ ಬೆಳೆಯುವ ಬಹುತೇಕ ಎಲ್ಲಾ ಕಡೆ ಇದು ಸಾಮಾನ್ಯ. ತುಂಬಾ ಸುರಕ್ಷಿತ ಮತ್ತು ಕಡಿಮೆ ಖರ್ಚಿನದೂ ಸಹ.

ಮೂಡೆಯನ್ನು ಭತ್ತದ ಹುಲ್ಲು, ಅರ್ಕ(Kodomilet)ದ ಹುಲ್ಲು, ಕಾಡು ಹಂದಿ ಹುಲ್ಲು, ಬಿದಿರು, ಜೊಂಡು ಮುಂತಾದವುಗಳಿಂದ ರೈತರೇ ನಿರ್ಮಿಸಿಕೊಳ್ಳುತ್ತಾರೆ. ಮೂಡೆ ಕಟ್ಟುವುದು ಎಲ್ಲರಿಗೂ ಬರುವುದಿಲ್ಲ. ಕೇವಲ ಅನುಭವ ಇರುವವರು ಮಾತ್ರ ಕಟ್ಟಲು ಸಾಧ್ಯ. ಅದನ್ನು ಕಟ್ಟುವ ವಿಧಾನ ಹೀಗಿದೆ.

ನಾಲ್ಕೈದು ಅಡಿ ಉದ್ದದ ಮೂರು ಕಟ್ಟುಗಳನ್ನು ಒಂದು ಅಡಿ ಅಂತರದಲ್ಲಿ ಹಾಸಿ ಮೇಲೆ ಒಂದು ಇಂಚು ದಪ್ಪ ನೆನೆಸಿದ ಹುಲ್ಲನ್ನು ಹರಡಿ ಮಧ್ಯೆ ಬಿದಿರಿನ ಸುಂಟವನ್ನು ಇಟ್ಟು ಹುಲ್ಲಿನ ಸಮೇತ ಹಾಸಿಗೆ ಸುತ್ತಿದಂತೆ ಸುತ್ತುತ್ತಾರೆ.

(ಸುಂಟ = ಬಿದಿರಿನಲ್ಲಿ ಹೆಣೆದ ಎರಡೂ ಕಡೆ ಬಾಯಿಯಿರುವ ಒಂದು ಅಡಿ ವ್ಯಾಸದ ಎರಡು, ಎರಡೂವರೆ ಅಡಿ ಉದ್ದದ ಕೊಳವೆ)

ಸುತ್ತಿದ ನಂತರ ಒಂದು ಬಿದಿರಿನ ಬುಟ್ಟಿಯನ್ನು ಬೋರಲು ಹಾಕಿ ಅದರ ಮೇಲೆ ನಿಲ್ಲಿಸಿ; ಮೇಲಿನ ಹುಲ್ಲನ್ನು ಕೊಳವೆಯ ಒಳಕ್ಕೆ ಮಡಚಿ ಅದರ ಮೇಲೆ ನೆನೆಸಿದ ಜೊಂಡನ್ನು ಬುಡಕಟ್ಟಿ ನಿಲ್ಲಿಸಿ ಸಮಾನಾಗಿ ಸುತ್ತಲೂ ಹರಡುತ್ತಾರೆ. ನಂತರ ಅದನ್ನು ತಲೆಕೆಳಗು ಮಾಡಿ ನೆಲದ ಮೇಲೆ ನಿಲ್ಲಿಸಿ ತಳಕ್ಕೆ ರಾಗಿ ಹೊಟ್ಟನ್ನು ಸುರಿದು ತಾವು ಹಾಕುವ ಕಾಳಿಗೆ ಮೆಣಸಿನಕಾಯಿ, ಉಪ್ಪು ನೀರು ಬೆರೆಸಿ ಮೂಟೆಗೆ ಹುಯ್ಯುತ್ತಾ ಒನಕೆಯಿಂದ ಒಳಗೆ ಎಲ್ಲಾ ಕಡೆ ಸರಿಯಾಗಿ ಕಾಲು ಹರಡುವಂತೆ ಕುಟ್ಟುತ್ತಾ ಒಳಗಿನ ಸುಂಟನ್ನು ಮೂಡೆ ತುಂಬಿದಂತೆ ನಿಧಾನವಾಗಿ ಹೊರಗೆ ಎಳೆಯುತ್ತಾರೆ. ಮೇಲ್ಭಾಗದಲ್ಲಿ ಮತ್ತೆ ರಾಗಿ ಹೊಟ್ಟು ಸುರಿದು ಹುಲ್ಲು ಜೊಂಡಿನಿಂದಲೇ ಬಿಗಿಯಾಗಿ ಬಾಯಿ ಕಟ್ಟುತ್ತಾರೆ.

ಈಗ ಮೂಡೆಯನ್ನು ಮಲಗಿಸಿ ಕಟ್ಟುಗಳನ್ನು ಬಿಗಿ ಮಾಡಲು ಅದು ಕಣಿ ಕಣಿ ಸದ್ದು ಬರುವವರೆಗೂ ಕಟ್ಟಿಗೆ ತುಂಡಿನಿಂದ ಕುಟ್ಟಿ ಮನೆಯೊಳಗೆ ಸೂಕ್ಷ್ಮ ಜಾಗದಲ್ಲಿಡುತ್ತಾರೆ. ಒಂದು ಮೂಡೆಗೆ ಒಂದೇ ಜಾತಿಯ ಕಾಳನ್ನಾದರೂ ಹಾಕಬಹುದು ಅಥವಾ ಪದರ-ಪದರವಾಗಿ ಎರಡು ಮೂರು ಜಾತಿ ಕಾಳು ಬೇಕಾದರೂ ಹಾಕಬಹುದು. ೧ ರಿಂದ ೨ ವರ್ಷ ಕಾಲ ಮೂಡೆಯಲ್ಲಿನ ಕಾಳು ಸುರಕ್ಷಿತ ಎಂಬುದು ರೈತರ ಅಭಿಪ್ರಾಯ. ಇತ್ತೀಚೆಗೆ ಬಹು ಬೆಳೆ ಪದ್ಧತಿ ನಶಿಸುತ್ತಿರುವುದರಿಂದ ಕಾಳು ಬೆಳೆಯುವುದೂ ಕಡಿಮೆ; ಮೂಡೆ ಕಟ್ಟುವುದೂ ಕಡಿಮೆ. ಈ ಉಪಾಯವನ್ನು ಮಾಡಿರುವವರು ಪ್ರಸನ್ನಯ್ಯ, ಸಿದ್ಧಪ್ಪನದೊಡ್ಡಿ ಇವರು.

■■

ನಮ್ಮದು ಕೃಷಿಕರ ನಾಡು. ಜಾಗತೀಕರಣದ ಪ್ರಭಾವದಿಂದಾಗಿ ಕೃಷಿ ಕ್ಷೇತ್ರದಲ್ಲಿ ಅನೇಕ ಸ್ಥಿತ್ಯಂತರಗಳು ಘಟಿಸಿವೆ. ನಿರಂತರವಾಗಿ ಆಗುತ್ತಿರುವ ಬದಲಾವಣೆಗಳು ಕೃಷಿ ಕ್ಷೇತ್ರವನ್ನೂ ಬಿಟ್ಟಿಲ್ಲ. ಆದರೆ ಸಾಂಪ್ರದಾಯಿಕ ಕೃಷಿ ಪದ್ಧತಿ ಅನುಸರಿಸುವುದು ಹೋಗಲಿ ಅದರ ಬಗ್ಗೆ ಮಾತನಾಡಲು ಕೂಡ ಪುರುಸೊತ್ತಿಲ್ಲದ ಈ ಸಂದಿಗ್ಧತೆಯಲ್ಲಿ ದೇಶೀಯ ಕೃಷಿ ಬಗ್ಗೆ ಆಲೋಚಿಸುವಂತೆ ಪ್ರೇರೇಪಿಸುವ ಸಂಗತಿಗಳು ಸಹ ನಮ್ಮ ನಡುವೆಯೇ ಜರುಗುತ್ತಿವೆ. ಕಾರಣ ದೇಶೀ ಕೃಷಿ ಯಾವತ್ತೂ ಪ್ರಯೋಜನಕಾರಿ ಮತ್ತು ಉಪಯುಕ್ತ ಎಂಬ ಭಾವನೆ ಎಲ್ಲೋ ಒಂದು ಕಡೆ ನಮ್ಮ ಮನಸ್ಸಿನಲ್ಲಿ ಬೇರೂರಿದೆ. ಅದು ನೂರಕ್ಕೆ ನೂರರಷ್ಟು ಸತ್ಯ. ಕೃಷಿ ಕ್ಷೇತ್ರದಲ್ಲಿ ಆಗುತ್ತಿರುವ ಎಲ್ಲ ಬದಲಾವಣೆಗಳನ್ನು ಎಚ್ಚರದ ಕಣ್ಣಿನಿಂದ ನೋಡುವಂತೆ ಪ್ರೇರೇಪಿಸುವ ಕೆಲಸಗಳು ಜೊತೆಗೇ ಸಾಗಿವೆ. ಇಂದಿನ ಕಾರ್ಪೋರೇಟ್ ಜಗತ್ತು ಸೃಷ್ಟಿಸಿದ ಎಲ್ಲ ಬಗೆಯ ತೊಡಕುಗಳನ್ನು ನಿವಾರಿಸಿಕೊಳ್ಳುವಂತೆ ಕೃಷಿ ಕ್ಷೇತ್ರವನ್ನು ಕಸಿಗೊಳಿಸಬೇಕಾದ ಅಗತ್ಯತೆ ಇದೆ. ಅದರ ಒಂದು ಭಾಗವಾಗಿ ಕೃಷಿ ವಿಜ್ಞಾನಿ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಅವರು ಸಂಪಾದಿಸಿದ 'ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು' ಒಂದು ಸ್ವಾಗತಾರ್ಹ ಕೃತಿ. ಇಂತಹ ಮಹತ್ವದ ಕೃತಿಯನ್ನು ಸಂಪಾದಿಸಿಕೊಟ್ಟ ಡಾ. ಕಮ್ಮರಡಿ ಅವರಿಗೆ ಕೃತಜ್ಞತೆಗಳು ಸಲ್ಲಬೇಕು.

■ ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ISBN 978-93-83149-01-8
9 789383 149018

₹ ೧೦೦/-

Printed at : Raja Printes, Ph.: 2234066